ಮಂಗಳವಾರ, ಮೇ 19, 2026| ₹ 7.00
prajavani.net prajavani
www.prajavani.net

ಗುಟುಕು...
ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿಯ ಬಳಿ ಕಂಚುಕುಟಿಗವು ತನ್ನ ಮರಿಗೆ ಗುಟುಕು ನೀಡಿತು

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರತಿಭಟನೆ
11ನೇ ಪಂಚೆನ್ ಲಾಮಾರನ್ನು ಚೀನಾ ಸರ್ಕಾರ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ಟಿಬೆಟಿಯನ್ ಪ್ರಾದೇಶಿಕ ಯುವ ಕಾಂಗ್ರೆಸ್ ಮತ್ತು ಬೈಲಕುಪ್ಪೆ, ಹುಣಸೂರು, ಕೊಳ್ಳೆಗಾಲದ ಟಿಬೆಟಿಯನ್ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಕರ್ನಾಟಕ ಸರ್ಕಾರ

ಗ್ಯಾರಂಟಿ ಹಬ್ಬ
4ನೇ ವರ್ಷಕ್ಕೆ ಪಾದಾರ್ಪಣೆ

ಕರ್ನಾಟಕ ಸರ್ಕಾರ ಕಂದಾಯ ಇಲಾಖೆ

ಸಮರ್ಪಣೆ ಸಂಕಲ್ಪ

ಮೂರು ವರ್ಷದ ಸಾಧನೆಯ ಸಮರ್ಪಣೆ, ಮತ್ತಷ್ಟು ಜನಪರ ಸೇವೆಯ ಪ್ರತಿಜ್ಞೆ

ಭೂ ಗ್ಯಾರಂಟಿ

152492

ಕುಟುಂಬಗಳಿಗೆ ಹಕ್ಕುಪತ್ರ/ದಾಖಲೆ/ಆದೇಶಪತ್ರ ಸಮರ್ಪಣೆ

ಮೇ 19, ಮಂಗಳವಾರ
ಬೆಳಗ್ಗೆ 11:00 ಗಂಟೆಗೆ

ಸರ್ಕಾರಿ ಪದವಿಪೂರ್ವ
ಕಾಲೇಜು ಮೈದಾನ, ತುಮಕೂರು

ಕಂದಾಯ ಇಲಾಖೆಯ ಮೂರು ವರ್ಷದ ಸಾರ್ಥಕ ಸೇವೆ

ರಾಜ್ಯದ ಸಾಧನೆಗಳು	ತುಮಕೂರು ಜಿಲ್ಲೆಯ 1,52,492 ಫಲಾನುಭವಿಗಳಿಗೆ
— ಇ-ಪೌತಿ ಅಭಿಯಾನ — 14.39 ಲಕ್ಷ ಪೌತಿಖಾತೆ ಸಾಧನೆ	ಇ-ಪೌತಿ - 1,06,000
— ದರ್ಖಾಸ್ತು ಪೋಡಿ — 2.5 ಲಕ್ಷ ಮಂಜೂರಿದಾರರಿಗೆ ಪೋಡಿ ಪ್ರಗತಿ	ಕಂದಾಯ ಗ್ರಾಮ ಹಕ್ಕುಪತ್ರ - 20,666
	ದರ್ಖಾಸ್ತು ಪೋಡಿ ಮತ್ತು ಪೋಡಿ ಮುಕ್ತ ಅಭಿಯಾನ - 25,826

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರನ್ನು ಮಾನ್ಯ ಗೃಹ ಸಚಿವರು, ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರುಗಳಾದ ಡಾ. ಜಿ. ಪರಮೇಶ್ವರ್ ಅವರು ಸಮಾವೇಶಕ್ಕೆ ಆಹ್ವಾನಿಸುತ್ತಿರುವುದು

ಕಂದಾಯ ಸೇವೆಗಳು ಈಗ
ಸರಳ. ಸುಲಭ. ಸುಲಲಿತ.

ಮಾನ್ಯ ಕಂದಾಯ ಸಚಿವರಾದ ಶ್ರೀ ಕೃಷ್ಣಬೈರೇಗೌಡ ಅವರಿಂದ
ಜನ ಸೇವೆಯ ಸಮರ್ಪಣೆ

ಭಾರತದ ಸಾರ್ವಭೌಮತ್ವ, ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು.

www.revenuecommissionerate.karnataka.gov.in

‘ಮುಖ್ಯಮಂತ್ರಿ ಸ್ಥಾನ: ಯಾರದ್ದೇ ಆಸ್ತಿಯಲ್ಲ’

ತುಮಕೂರು: ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡುವ ಕುರಿತು ಕೇರಳಂನಲ್ಲಿ ಹೈಕಮಾಂಡ್ ನಿರ್ಧರಿಸಬಹುದು’ ಎಂದು ಶಾಸಕ ಕೆ.ಎನ್. ರಾಜಣ್ಣ ಸೋಮವಾರ ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೇರಳಂನಲ್ಲಿ ಹೈಕಮಾಂಡ್ ನಾಯಕರ ಜತೆಗೆ ಸಿದ್ದರಾಮಯ್ಯ ಚರ್ಚಿಸಬಹುದು’ ಎಂದರು.

‘ಸಿದ್ದರಾಮಯ್ಯ ಸಿ.ಎಂ ಸ್ಥಾನ ಬಿಟ್ಟುಕೊಡದೇ ಇರಲು ಅದು ಅವರ ಮನೆ ಆಸ್ತಿಯಲ್ಲ. ಜನರು ಕೊಟ್ಟಿರುವ ಭಿಕ್ಷೆ. ಈ ಸ್ಥಾನ ಯಾರದೇ ಆಸ್ತಿಯಲ್ಲ’ ಎಂದು ಹೇಳಿದರು.

ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಬದಲಿಸಿದರೆ ಜಿ.ಪರಮೇಶ್ವರ ಅವರಿಗೆ ಅವಕಾಶ ನೀಡಬೇಕು. 2013ರಲ್ಲಿ ಪರಮೇಶ್ವರ ಶಾಸಕರಾಗಿ ಆಯ್ಕೆ ಆಗಿದ್ದರೆ ಮುಖ್ಯಮಂತ್ರಿ ಸ್ಥಾನವನ್ನು ಸಿದ್ದರಾಮಯ್ಯ ಅವರಿಗೆ ಬಿಟ್ಟುಕೊಡುತ್ತಿದ್ದರೇ ಎಂದು ರಾಜಣ್ಣ ಪ್ರಶ್ನಿಸಿದರು.

ಶೀಘ್ರ ತೆರೆ–ಸಚಿವ

ಬೆಳಗಾವಿ: ‘ಸಿದ್ದರಾಮಯ್ಯ ಅವರನ್ನು ಬದಲಿಸಿದರೆ ಜಿ.ಪರಮೇಶ್ವರ ಅವರಿಗೆ ಅವಕಾಶ ನೀಡಬೇಕು ಎಂಬ ಕೆ.ಎನ್. ರಾಜಣ್ಣ ಅವರ ಹೇಳಿಕೆಗೆ ಹೈಕಮಾಂಡ್ ಶೀಘ್ರ ತೆರೆ ಎಳೆಯಲಿದೆ’ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

‘ರಾಜಣ್ಣ ಅವರಿಗೆ ದೆಹಲಿಯಿಂದ ಬೇಗ ಕರೆ ಬರಲಿದೆ. ಈ ಎಲ್ಲ ವಿಚಾರಗಳು ಅಲ್ಲಿ ಚರ್ಚೆಯಾಗಿ, ಶೀಘ್ರದಲ್ಲೇ ತೆರೆ ಬೀಳಲಿದೆ’ ಎಂದು ಸೋಮವಾರ ಇಲ್ಲಿ ತಿಳಿಸಿದರು.

ಕಾಂಗ್ರೆಸ್ ನಿರ್ನಾಮಕ್ಕೆ ಸಮಾವೇಶ: ಎಚ್‌ಡಿಕೆ

ಬೆಂಗಳೂರು: ‘ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ನಿರ್ನಾಮ ಮಾಡಲು ತುಮಕೂರಿನಲ್ಲಿ ಸಮಾವೇಶ ಹಮ್ಮಿಕೊಂಡಿದ್ದಾರೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮೂರು ವರ್ಷ ಸತತವಾಗಿ ಕುರ್ಚಿ ಕಾಳಗ ನಡೆಸಿದ್ದಾರೆ. ಯಾವ ಪುರುಷಾರ್ಥಕ್ಕೆ ಸಮಾವೇಶ ಮಾಡುತ್ತಿದ್ದಾರೆ? ಎರಡು ವರ್ಷಗಳಲ್ಲಿ 713 ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದಾರೆ. ರಾಜಕೀಯ ಲಾಭ ಮಾಡಿಕೊಳ್ಳಲು ಜಾರಿಗೆ ತಂದಿರುವ ಪಂಚ ಗ್ಯಾರಂಟಿಗಳಿಗೆ ಸುರಿಯುತ್ತಿರುವ ಹಣ ಹೊಂದಿಸಲು ಜನರ ಮೇಲೆ ಭಾರಿ ತೆರಿಗೆ ವಿಧಿಸಿದ್ದಾರೆ. ಬೆಲೆ ಏರಿಕೆ ಮಾಡಿದ್ದಾರೆ. ಕೆಟ್ಟ ಆಡಳಿತದ ಪರಿಣಾಮ ಜನರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ಕುರಿತು ಕಾಂಗ್ರೆಸ್ ನಾಯಕರು ಆತ್ಮಾವಲೋಕನ ಮಾಡಿಕೊಳ್ಳಬೇಕು’ ಎಂದರು.

ಸರ್ಕಾರದ ‘ಸಾಧನಾ ಸಮಾವೇಶ’ ಇಂದು

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಮೇ 20ಕ್ಕೆ 3 ವರ್ಷ

ಪ್ರಜಾವಾಣಿ ವಾರ್ತೆ

ತುಮಕೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮೂರು ವರ್ಷಗಳ ಸಾಧನಾ ಸಮಾವೇಶಕ್ಕೆ ನಗರದ ಜೂನಿಯರ್ ಕಾಲೇಜು ಮೈದಾನ ಸಜ್ಜುಗೊಂಡಿದೆ.

ಸರ್ಕಾರ ಅಧಿಕಾರಕ್ಕೆ ಬಂದು ಮೇ 20ಕ್ಕೆ ಮೂರು ವರ್ಷ ತುಂಬುತ್ತಿದ್ದು ಒಂದು ದಿನ ಮುಂಚಿತವಾಗಿ ಮೇ 19ರಂದು ‘ಸಾಧನೆಯ ಸೇವೆಗಳ ಸಮರ್ಪಣೆ’ ಹೆಸರಿನಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಮೂರು ವರ್ಷಗಳಲ್ಲಿ ಆಗಿರುವ ಅಭಿವೃದ್ಧಿ ಕೆಲಸಗಳನ್ನು ಜನತೆಗೆ ಸಮರ್ಪಣೆ ಮಾಡಲಾಗುತ್ತದೆ. ಅದಕ್ಕಾಗಿ ಸಮಾವೇಶಕ್ಕೆ ‘ಸಮರ್ಪಣೆ’ ಎಂದು ಹೆಸರಿಡಲಾಗಿದೆ.

ಜಿಲ್ಲೆ ಹಾಗೂ ವಿವಿಧ ಜಿಲ್ಲೆಗಳಿಂದ ಸುಮಾರು ಎರಡು ಲಕ್ಷ ಜನರನ್ನು ಕರೆ ತರುವ ಪ್ರಯತ್ನ ನಡೆದಿದೆ. ಇದಕ್ಕಾಗಿ 2,500ಕ್ಕೂ ಹೆಚ್ಚು ಬಸ್‌ಗಳನ್ನು ಬಳಸಲಾಗುತ್ತಿದೆ. ವಿವಿಧ ಯೋಜನೆಗಳಲ್ಲಿ ಜಿಲ್ಲೆಯ 1.52 ಲಕ್ಷ ಫಲಾನುಭವಿಗಳಿಗೆ ಸವಲತ್ತು, ಹಕ್ಕುಪತ್ರ ವಿತರಿಸಲಾಗುತ್ತದೆ. ಬರುವ ಜನರಿಗಾಗಿ ಊಟ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು, ಶಾಸಕರು ಭಾಗವಹಿಸಲಿದ್ದಾರೆ. ಎಲ್ಲ ರೀತಿಯಲ್ಲೂ ಸಿದ್ಧತೆ ಮಾಡಿಕೊಳ್ಳಲಾಗಿದೆ. ನಗರ ಹಾಗೂ ನಗರ ಸಂಪರ್ಕಿಸುವ ಹೆದ್ದಾರಿ, ಪ್ರಮುಖ ರಸ್ತೆಗಳು, ವೃತ್ತಗಳಲ್ಲಿ ಕಾಂಗ್ರೆಸ್ ನಾಯಕರ ಕಟೌಟ್, ಬ್ಯಾನರ್ ರಾರಾಜಿಸುತ್ತಿವೆ.

ಮುಖ್ಯಾಂಶಗಳು

- 1.52 ಲಕ್ಷ ಫಲಾನುಭವಿಗಳಿಗೆ ಸವಲತ್ತು, ಹಕ್ಕುಪತ್ರ ವಿತರಣೆ
- 2,500ಕ್ಕೂ ಹೆಚ್ಚು ಬಸ್‌ಗಳ ಬಳಕೆ
- ಕಾರ್ಯಕ್ರಮಕ್ಕೆ ಬರುವವರಿಗೆ ಕುಡಿಯುವ ನೀರು, ಊಟದ ವ್ಯವಸ್ಥೆ

ತುಮಕೂರು ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಸಮಾವೇಶದ ಸಿದ್ಧತೆ

ಕಂದಾಯ ಇಲಾಖೆ ಸಾಧನೆ ಪ್ರತಿಬಿಂಬ

ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಸೋಮವಾರ ಸಾಧನಾ ಸಮಾವೇಶ ಕಾರ್ಯಕ್ರಮ ನಡೆಯಲಿರುವ ಕಾಲೇಜು ಮೈದಾನದಲ್ಲಿ ಪೂರ್ವ ಸಿದ್ಧತೆ ಪರಿಶೀಲಿಸಿದರು.

ಪ್ರಮುಖವಾಗಿ ಜಿಲ್ಲೆಯಲ್ಲಿ ಕಂದಾಯ ಇಲಾಖೆಯಲ್ಲಿ ಆಗಿರುವ ಸಾಧನೆ ಪ್ರತಿಬಿಂಬಿಸಲಾಗುತ್ತದೆ ಎಂದು ಸಮಾವೇಶದ ಬಗ್ಗೆ ಅವರು ಮಾಹಿತಿ ನೀಡಿದರು.

ಇ-ಪೌತಿ ಖಾತೆ ಆಂದೋಲನದಲ್ಲಿ 1.06 ಲಕ್ಷ, ದರಖಾಸ್ತು ಪೋಡಿ 24,256, ಕಂದಾಯ ಗ್ರಾಮ ಹಕ್ಕುಪತ್ರ 20,666, ಪೋಡಿ ಮುಕ್ತ ಅಭಿಯಾನ 1,570 ಸೇರಿದಂತೆ ಒಟ್ಟು 1.52 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ, ಆದೇಶಪತ್ರ ವಿತರಣೆ ಮಾಡಲಾಗುತ್ತದೆ. 600 ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ನೇಮಕ ಆದೇಶಪತ್ರ ನೀಡಲಾಗುತ್ತಿದೆ ಎಂದರು.

ಸುದ್ದಿ 2 ನಿಮಿಷ

‘ಬಿಜೆಪಿಯವರು ಸೈಕಲ್ ತುಳಿಯಲು ಕಾರಣ ಯಾರು?’

ಕಲಬುರಗಿ: ‘ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಬಿಜೆಪಿ ಸಚಿವರು, ನಾಯಕರು ಮೆಟ್ರೊ ರೈಲು, ಸೈಕಲ್ ಹಾಗೂ ಸಾರ್ವಜನಿಕ ಸಾರಿಗೆ ಬಳಸುತ್ತಿದ್ದಾರೆ. ಈ ಸ್ಥಿತಿಗೆ ಕಾರಣರ್ಯಾರು?’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಜಿಲ್ಲೆಯ ಕಾಳಗಿ ತಾಲ್ಲೂಕಿನ ಮಾಡಬೂಳ ಗ್ರಾಮದ ಬಳಿ ನಿರ್ಮಾಣವಾಗಿರುವ ನೂತನ ಮೃಗಾಲಯ ಉದ್ಘಾಟನೆಯ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಬಿಜೆಪಿಯವರು ಸಾರ್ವಜನಿಕ ಸಾರಿಗೆ ಬಳಸಿ, ರೀಲ್ಸ್ ಮಾಡಿದಾಕ್ಷಣ ಪೆಟ್ರೋಲ್, ಡೀಸೆಲ್ ದರ ಏರಿಕೆಯಿಂದ ಜನರಿಗೆ ಆಗುತ್ತಿರುವ ತೊಂದರೆ ನೀಗುತ್ತದೆಯೇ?’ ಎಂದು ಸಚಿವರು ಪ್ರಶ್ನಿಸಿದರು.

‘ದೇಶವು ಕಷ್ಟದ ಸ್ಥಿತಿಯಲ್ಲಿದ್ದಾಗ ಮೋದಿ ವಿದೇಶಕ್ಕೆ ಹೋಗುತ್ತಾರೆ. ಆರ್ಥಿಕ ಸ್ಥಿತಿಗತಿ, ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಗೆ ಕಾರಣಗಳನ್ನು ಸಂಸತ್ತಿನಲ್ಲೇ ಹೇಳಬೇಕಿತ್ತು. ಅದಕ್ಕಾಗಿ ನೆದರ್‌ಲ್ಯಾಂಡ್ಸ್‌ಗೆ ಯಾಕೆ ಹೋಗಬೇಕಿತ್ತು?’ ಎಂದು ಪ್ರಿಯಾಂಕ್ ಟೀಕಿಸಿದರು.



‘ತನ್ನ ವೈಫಲ್ಯ ಮುಚ್ಚಿಕೊಳ್ಳಲು ಮೋದಿ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆ ಮಾಡಿದೆ. ಚಿನ್ನ ಖರೀದಿ ಮಾಡಬೇಡಿ ಎಂದು ಜನರಿಗೆ ಕರೆ ಕೊಡುವ ಮೋದಿ ನೀಟ್ ಅಕ್ರಮ ಬಗ್ಗೆ ಯಾಕೆ ಮಾತನಾಡುವುದಿಲ್ಲ’ ಸಚಿವ ಈಶ್ವರ ಖಂಡ್ರೆ ಪ್ರಶ್ನಿಸಿದರು.

ಮತಾಂತರಗೊಂಡಿದ್ದ ಮಗಳಿಂದ ಸಚಿವೆಗೆ ಮನವಿ: ಬಿಜೆಪಿ

ಉಡುಪಿ: ‘ಉಡುಪಿಯಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಹಿಂದೂ ಧರ್ಮದ ವೃದ್ಧೆಯ ಪರ ಮನವಿ ಸಲ್ಲಿಸಿದ್ದು ಮುಸ್ಲಿಂ ಮಹಿಳೆ ಅಲ್ಲ. ಆಕೆ, ಆ ವೃದ್ಧೆಯ ಮಗಳು, ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿದ್ದಾಳೆ. ಇದನ್ನು ಅರಿಯದೇ, ಇದು ನಮ್ಮ ಭಾರತ. ಉಡುಪಿ ಜಿಲ್ಲಾ ಬಿಜೆಪಿಯವರು ಇದರಿಂದ ಕಲಿಯಬೇಕು ಎಂದು ಹೇಳಿಕೆ ನೀಡಿದ್ದ ಸಚಿವೆ ಕ್ಷಮೆ ಕೇಳಬೇಕು’ ಎಂದು ಬಿಜೆಪಿಯವರು ಆಗ್ರಹಿಸಿದ್ದಾರೆ.

35 ವರ್ಷಗಳ ಹಿಂದೆ ಸರ್ಕಾರದಿಂದ ನಿವೇಶನ ಮಂಜೂರು ಆಗಿದ್ದರೂ ಅರಣ್ಯ ಇಲಾಖೆಯ ಅಡ್ಡಿಯಿಂದಾಗಿ ಮನೆ ಕಟ್ಟಲಾಗದೆ ಸಂಕಷ್ಟಕ್ಕೆ ಸಿಲುಕಿದ್ದ ಹಿಂದೂ ಮಹಿಳೆಯೊಬ್ಬರ ಪರವಾಗಿ ಮುಸ್ಲಿಂ ಮಹಿಳೆಯರು ಸಚಿವೆ ಬಳಿ ನೆರವು ಯಾಚಿಸಿದ್ದರ ಬಗ್ಗೆ ಅವರು ಈ ಹೇಳಿಕೆ ನೀಡಿದ್ದಾರೆ.

‘ತಾಯಿಯನ್ನೇ ನೆರೆಮನೆಯವರು ಎಂದು ಹೇಳುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವೆಗೆ ತಪ್ಪು ಮಾಹಿತಿ ನೀಡಿರುವುದು ಅಕ್ಷಮ್ಯ. ಈ ಕುರಿತು ಉನ್ನತಮಟ್ಟದ ತನಿಖೆಯ ಅಗತ್ಯವಿದೆ. ಸ್ವಂತ ತಾಯಿಯನ್ನೇ ನೆರೆಮನೆಯವರು ಎಂದು ಹೇಳುವ ಹಿಜಾಬ್‌ಧಾರಿ ಮಹಿಳೆಯರ ಮನಃಸ್ಥಿತಿಯನ್ನು ಜಿಲ್ಲೆಯ ಪ್ರಜ್ಞಾವಂತ ಸಮಾಜ ಗಂಭೀರವಾಗಿ ಪರಿಗಣಿಸಬೇಕಿದೆ’ ಎಂದು ಶಾಸಕ ಯಶ್‌ಪಾಲ್ ಸುವರ್ಣ ಹೇಳಿದ್ದಾರೆ.

‘ಜಿಲ್ಲೆಗೆ ಅತಿಥಿಯಾಗಿ ಬರುವ ಉಸ್ತುವಾರಿ ಸಚಿವೆ, ಬಿಜೆಪಿ ಜನಪ್ರತಿನಿಧಿಗಳನ್ನು ಕಾಮಾಲೆ ಕಣ್ಣಿನಿಂದ ನೋಡುತ್ತಾರೆ ಹಾಗೂ ಕೋಮುವಾದಿಗಳು ಎಂಬಂತೆ ಬಿಂಬಿಸಲು ಹೊರಟಿದ್ದಾರೆ ಎಂಬುದಕ್ಕೆ ಈ ಪ್ರಕರಣ ಸಾಕ್ಷಿ. ಘಟನೆಯನ್ನು ಗಮನಿಸಿದರೆ ಮುಂದಿನ ದಿನಗಳಲ್ಲಿ ಸರ್ಕಾರಿ ಕಚೇರಿಗಳಲ್ಲಿ ಬುರ್ಖಾ ಹಾಗೂ ಹಿಜಾಬ್ ಧರಿಸುವ ವ್ಯಕ್ತಿಗಳ ಬಗ್ಗೆ ವಿಶೇಷ ನಿಗಾ ವಹಿಸುವ ಸನ್ನಿವೇಶ ನಿರ್ಮಾಣವಾಗಲಿದೆ’ ಎಂದು ಅವರು ಹೇಳಿದ್ದಾರೆ.

‘ರೈತರ ಸಮಾಧಿ ಮೇಲೆ ಸಮಾವೇಶ’

ರಾಜ್ಯ ಸರ್ಕಾರದ ವಿರುದ್ಧ ಆರ್. ಅಶೋಕ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ರೈತರು ಬೆಳೆ ಹಾನಿಯಿಂದ ಸಂಕಷ್ಟಕ್ಕೆ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ವೇಳೆ ಕಾಂಗ್ರೆಸ್ ಸರ್ಕಾರ ಸಾಧನಾ ಸಮಾವೇಶ ನಡೆಸುತ್ತಿರುವುದು ರೈತರ ಸಮಾಧಿ ಮೇಲೆ ರಾಜಕೀಯ ಮಾಡುವಂತಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.



ಆರ್. ಅಶೋಕ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳು ಈಗ ರೈತರಿಗೆ ‘ಆತ್ಮಹತ್ಯೆ ಗ್ಯಾರಂಟಿ’, ‘ಬೆಳೆ ಪರಿಹಾರ ಸಿಗದ ಗ್ಯಾರಂಟಿ’, ‘ನೀರಿಲ್ಲದ ಗ್ಯಾರಂಟಿ’ ಮತ್ತು ‘ಮೂರು ಫೇಸ್ ವಿದ್ಯುತ್ ಸಿಗದ ಗ್ಯಾರಂಟಿ’ಗಳಾಗಿ ಪರಿಣಮಿಸಿವೆ’ ಎಂದು ವ್ಯಂಗ್ಯವಾಡಿದರು.

ಇತ್ತೀಚಿನ ಮಳೆಯಿಂದಾಗಿ ಹಾವೇರಿ ಜಿಲ್ಲೆಯಲ್ಲಿ 1,235 ಹೆಕ್ಟೇರ್, ಕೋಲಾರದಲ್ಲಿ 832 ಹೆಕ್ಟೇರ್, ಬೆಳಗಾವಿಯಲ್ಲಿ 324 ಹೆಕ್ಟೇರ್, ಕೊಪ್ಪಳದಲ್ಲಿ 100 ಹೆಕ್ಟೇರ್ ಸೇರಿ ಕಲಬುರಗಿ, ಚಿತ್ರದುರ್ಗ, ಬಾಗಲಕೋಟೆ, ದಾವಣಗೆರೆ, ಯಾದಗಿರಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಭಾರಿ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದೆ. ಒಬ್ಬ ಅಧಿಕಾರಿಯೂ ಭೇಟಿ ನೀಡಿ ರೈತರಿಗೆ ಸಾಂತ್ವನ ಹೇಳಿಲ್ಲ. ಪರಿಹಾರ ಪ್ರಕ್ರಿಯೆಯನ್ನೂ ಆರಂಭಿಸಿಲ್ಲ ಎಂದು ದೂರಿದರು.

‘ಪ್ರಕೃತಿ ವಿಕೋಪ ಪರಿಹಾರಕ್ಕಾಗಿ ₹5,000 ಕೋಟಿ ಮೀಸಲಿಡುತ್ತೇವೆ ಎಂದು ಹೇಳಿದ್ದ ಕಾಂಗ್ರೆಸ್ ಸರ್ಕಾರ ಒಂದು ನಯಾಪೈಸೆ ಇಟ್ಟಿಲ್ಲ. ಬಳ್ಳಾರಿಯಲ್ಲಿ ನಡೆದ ಸಮಾವೇಶಕ್ಕೆ ₹20 ಕೋಟಿ ಖರ್ಚು ಮಾಡಲಾಗಿದೆ. ಈಗ ತುಮಕೂರು ಸಮಾವೇಶಕ್ಕೆ ಜಿಲ್ಲಾಡಳಿತದಿಂದ ₹12 ಕೋಟಿ ಕೇಳಲಾಗಿದೆ. ಕಾಂಗ್ರೆಸ್ ಸಮಾವೇಶಕ್ಕೆ ತೆರಿಗೆದಾರರ ಹಣ ದುರುಪಯೋಗವಾಗುತ್ತಿದೆ’ ಎಂದು ಟೀಕಿಸಿದರು.

ಗರಿಷ್ಠ ಸಾಲ ಮಾಡಿದ ದಾಖಲೆ

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದಲ್ಲಿ ಅತಿ ಹೆಚ್ಚು ಸಾಲ ಮಾಡುವ ಮೂಲಕ ದಾಖಲೆ ಬರೆದಿದ್ದಾರೆ. ಸಾಧನೆ ಸಮಾವೇಶದ ಬದಲು ‘ಸಾಲದ ದಾಖಲೆ ಸಮಾವೇಶ’ ಮಾಡಿದರೆ ಹೆಚ್ಚು ಅರ್ಥಪೂರ್ಣವಾಗಿರುತ್ತದೆ

ಬಸವರಾಜ ಬೊಮ್ಮಾಯಿ, ಸಂಸದ

ಹಗರಣಗಳೇ ಸರ್ಕಾರದ ಸಾಧನೆ

ಕಾಂಗ್ರೆಸ್ ಆಡಳಿತದ ಮೂರು ವರ್ಷ ಕರ್ನಾಟಕದ ಪಾಲಿಗೆ ಕರಾಳ ಯುಗ. ಸುಳ್ಳು ಭರವಸೆ, ಸಾಲದ ಸುಳಿ ಮತ್ತು ಹಗರಣಗಳೇ ಸಿದ್ದರಾಮಯ್ಯ ಸರ್ಕಾರದ ಸಾಧನೆ. 2026–27 ರ ಆಯವ್ಯಯದ ಅನ್ವಯ ರಾಜ್ಯ ಒಟ್ಟು ಸಾಲ ₹7.26 ಲಕ್ಷ ಕೋಟಿಗೂ ಅಧಿಕವಾಗಿದೆ.

ಎನ್.ರವಿಕುಮಾರ್ ವಿಧಾನ ಪರಿಷತ್ ವಿರೋಧಪಕ್ಷದ ಮುಖ್ಯ ಸಚೇತಕ

ಹಿರಿಯೂರು ಕೇಂದ್ರಕ್ಕಷ್ಟೇ ಮರುಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಕೇಂದ್ರದಲ್ಲಿ ನಡೆದಿದ್ದ ಬಿ.ಎಸ್‌ಸಿ ಕೃಷಿ ಕೋರ್ಸ್ ಪ್ರವೇಶಕ್ಕೆ ಮರು ಪ್ರಾಯೋಗಿಕ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಕೇಂದ್ರದ 74 ವಿದ್ಯಾರ್ಥಿಗಳು 200ಕ್ಕೆ 200 ಅಂಕ ಗಳಿಸಿದ್ದರು. ಅಕ್ರಮದ ಆರೋಪಗಳು ಎದುರಾಗಿದ್ದವು. ಈ ಕುರಿತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು.

‘ಪರೀಕ್ಷೆಯಲ್ಲಿ ಪ್ರಾದೇಶಿಕ ಮಾದರಿಗಳನ್ನು ಸರಳವಾಗಿ ನೀಡಿದ್ದರಿಂದ ವಿದ್ಯಾರ್ಥಿಗಳು ಪೂರ್ಣ ಅಂಕ ಗಳಿಸಿರಬಹುದು. ಸಮಿತಿಯು ಸಿಸಿಟಿವಿ ದೃಶ್ಯಾವಳಿಗಳನ್ನೂ ಪರಿಶೀಲಿಸಿದೆ ಎಂಬ ಅಂಶವನ್ನು ಪರಿಗಣಿಸಿ, ಹಿರಿಯೂರು ಕೇಂದ್ರಕ್ಕಷ್ಟೇ ಮರುಪರೀಕ್ಷೆ ನಡೆಸಲು ಸರ್ಕಾರ ನಿರ್ಧರಿಸಿದೆ’ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದ್ದಾರೆ.

ಸಿಇಟಿ ಬರೆದ ವಿದ್ಯಾರ್ಥಿಗಳಿಗೆ ಕೃಷಿಕ ಕೋಟಾದಡಿ ಪ್ರವೇಶ ನೀಡಲು ಈ ಪರೀಕ್ಷೆ ನಡೆಸಲಾಗಿತ್ತು. ರಾಜ್ಯದ 17 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು.

ಆರೋಪಕ್ಕೆ ಕೆಇಎ ಸ್ಪಷ್ಟನೆ

‘ಕೃಷಿ ವಿಜ್ಞಾನ ಕೋರ್ಸ್‌ಗಳ ಪ್ರವೇಶಕ್ಕೆ ಪ್ರಾಯೋಗಿಕ ಪರೀಕ್ಷೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿಲ್ಲ’ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

‘ಪ್ರಾಯೋಗಿಕ ಪರೀಕ್ಷೆಯನ್ನು ಕೆಇಎ ನಡೆಸಿದ್ದು, ಅದರಲ್ಲೂ ಅಕ್ರಮ ನಡೆದಿದೆ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದ್ದರು.

ಇದಕ್ಕೆ ಸ್ಪಷ್ಟನೆ ನೀಡಿರುವ ಪ್ರಸನ್ನ ಅವರು, ‘ಪರೀಕ್ಷೆಯ ಕುರಿತಂತೆ ಯಾವುದೇ ದೂರು ದುಮ್ಮಾನಗಳು ಇದ್ದರೆ, ಈ ಪರೀಕ್ಷೆಯ ನೋಡಲ್ ಸಂಸ್ಥೆಯಾದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವನ್ನು ಸಂಪರ್ಕಿಸಬಹುದು’ ಎಂದಿದ್ದಾರೆ.

ಚಿಟಿಕೆ ಸುದ್ದಿ

ಮಂಗಳೂರಿನಲ್ಲಿ ಸಂಚಾರಿ ಹೈಕೋರ್ಟ್ ಪೀಠ: ಸಿ.ಎಂ ಪತ್ರ

ಬೆಂಗಳೂರು: ‘ಕರಾವಳಿ ಭಾಗದ ಜನರಿಗೆ ತ್ವರಿತ ನ್ಯಾಯದಾನ ಕಲ್ಪಿಸಲು ಹಾಗೂ ಸರ್ವರಿಗೂ ನ್ಯಾಯದ ಲಭ್ಯತೆ ಖಚಿತಪಡಿಸಲು ರಾಜ್ಯ ಸರ್ಕಾರ ಬದ್ಧವಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಸಂಚಾರಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡಬೇಕು’ ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

ಈ ಬಗ್ಗೆ ತಮ್ಮ ಎಕ್ಸ್’ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಮುಖ್ಯಮಂತ್ರಿ, ‘ಮಂಗಳೂರಿನಲ್ಲಿ ಸಂಚಾರಿ ಹೈಕೋರ್ಟ್ ಪೀಠ ಸ್ಥಾಪನೆಯಿಂದ ನ್ಯಾಯದಾನದ ವಿಕೇಂದ್ರೀಕರಣ, ಸಕಾಲಿಕ ಹಾಗೂ ಕೈಗೆಟುಕುವ ನ್ಯಾಯದ ಸಾಂವಿಧಾನಿಕ ಭರವಸೆಯನ್ನು ಬಲಪಡಿಸಿದಂತಾಗಲಿದೆ’ ಎಂದಿದ್ದಾರೆ.

‘ಜೊತೆಗೆ, ಪ್ರಧಾನ ಪೀಠದ ಮೇಲಿನ ಬಾಕಿ ಪ್ರಕರಣಗಳ ಒತ್ತಡವು ಗಣನೀಯವಾಗಿ ತಗ್ಗಲಿದೆ. ಮಂಗಳೂರಿನ ಹಳೆಯ ಜಿಲ್ಲಾಧಿಕಾರಿ ಕಚೇರಿಯ ಸುಮಾರು 50 ಸಾವಿರ ಚದರ ಅಡಿ ವಿಸ್ತೀರ್ಣದ ಭೂಮಿ ಲಭ್ಯವಿದೆ. ಪೀಠವು ಸುಗಮವಾಗಿ ಕಾರ್ಯನಿರ್ವಹಿಸಲು ನಾಗರಿಕ, ಆಡಳಿತಾತ್ಮಕ ಮತ್ತು ಲಾಜಿಸ್ಟಿಕ್ ಮೂಲಸೌಕರ್ಯ ಒದಗಿಸಲು ಸರ್ಕಾರ ಸಿದ್ಧವಿದೆ’ ಎಂದೂ ತಮ್ಮ ಪತ್ರದ ಮೂಲಕ ಅವರು ನ್ಯಾಯಮೂರ್ತಿಯವರ ಗಮನಕ್ಕೆ ತಂದಿದ್ದಾರೆ.

ಜೂನ್ 1ರಿಂದ ಕೇಸರಿ ಶಾಲು ವಿತರಣೆ: ಮುತಾಲಿಕ್

ಹುಬ್ಬಳ್ಳಿ: ‘ಶಾಲಾ, ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಸರ್ಕಾರ ಅನುಮತಿ ನೀಡಿದ್ದಕ್ಕೆ ಪರ್ಯಾಯವಾಗಿ ಶ್ರೀರಾಮ ಸೇನೆಯು ರಾಜ್ಯದಾದ್ಯಂತ ವಿದ್ಯಾರ್ಥಿಗಳಿಗೆ ಜೂನ್ 1ರಿಂದ ಕೇಸರಿ ಶಾಲು ವಿತರಿಸಲಿದೆ’ ಎಂದು ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಇಲ್ಲಿ ಹೇಳಿದರು.

ಪ್ರಮೋದ್ ಮುತಾಲಿಕ್

‘ಹಿಜಾಬ್ ವಿಷಯ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದೆ. ಆದರೂ ಸರ್ಕಾರ ಹಿಜಾಬ್ ಧರಿಸಲು ಅನುಮತಿ ನೀಡಿದ್ದು, ವಿದ್ಯಾರ್ಥಿಗಳ ನಡುವೆ ವಿಷ ಬೀಜ ಬಿತ್ತಲು ಹೊರಟಿದೆ’ ಎಂದು ಸೋಮವಾರ ಅವರು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ದೀಪಿಕಾ ರೆಡ್ಡಿ ಸೇರಿದಂತೆ 15 ಪದಾಧಿಕಾರಿಗಳಿಗೆ ಯುವ ಕಾಂಗ್ರೆಸ್‌ನಿಂದ ಕೊಕ್

ಕೈಕೈ ಮಿಲಾಯಿಸಿದ ಯುವ ‘ಕೈ’ ನಾಯಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದಾಧಿಕಾರಿಗಳನ್ನು ಜವಾಬ್ದಾರಿಗಳಿಂದ ತಾತ್ಕಾಲಿಕವಾಗಿ ಮುಕ್ತಗೊಳಿಸಿದ ವಿಚಾರಕ್ಕೆ ಯುವ ಕಾಂಗ್ರೆಸ್‌ನ ರಾಜ್ಯ ಉಪಾಧ್ಯಕ್ಷೆ ದೀಪಿಕಾ ರೆಡ್ಡಿ ಬೆಂಬಲಿಗರು ಮತ್ತು ಯುವ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್. ಮಂಜುನಾಥ ಗೌಡ ಬೆಂಬಲಿಗರ ನಡುವೆ ಗಲಾಟೆ ನಡೆದಿದೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಇದೇ 21ರಂದು ನಡೆಸಲು ಉದ್ದೇಶಿಸಿದ್ದ ಪ್ರತಿಭಟನೆಯ ತಯಾರಿ ಕುರಿತು ಚರ್ಚಿಸಲು ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ಪೂರ್ವಭಾವಿ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಈ ಇಬ್ಬರು ಬೆಂಬಲಿಗರ ನಡುವೆ ತೀವ್ರ ವಾಗ್ವಾದ, ತಳ್ಳಾಟ-ನೂಕಾಟ ನಡೆದು ಕೈಕೈ ಮಿಲಾಯಿಸುವ ಹಂತ ತಲುಪಿತು.

ಯುವ ಕಾಂಗ್ರೆಸ್ ಪದಾಧಿಕಾರಿ ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದ್ದ ಪದಾಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ನೋಟಿಸ್ ನೀಡದೆ ಕೆಲವು ಪದಾಧಿಕಾರಿಗಳನ್ನು ಹುದ್ದೆಯಿಂದ ಬಿಡುಗಡೆ ಮಾಡಿದ್ದು ಏಕೆ ಎಂದು ದೀಪಿಕಾ ರೆಡ್ಡಿ ಬೆಂಬಲಿಗರು ಪ್ರಶ್ನಿಸಿದರು. ಅಲ್ಲದೆ, ಮಂಜುನಾಥ ಗೌಡ ಮತ್ತು ರಾಷ್ಟ್ರೀಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಿಗಂ ಭಂಡಾರಿ ಅವರಿಗೆ ಕಾರ್ಯಕರ್ತರು ಘೇರಾವ್ ಹಾಕಿದರು.

‘ಅಶಿಸ್ತು ತೋರಿದವರ ವಿರುದ್ಧ ಕಠಿಣ ಕ್ರಮ’

‘ಯುವ ಕಾಂಗ್ರೆಸ್‌ನ ಕೆಲವು ಪದಾಧಿಕಾರಿಗಳ ಜವಾಬ್ದಾರಿಯನ್ನು ರಾಷ್ಟ್ರೀಯ ಸಮಿತಿ ತಡೆಹಿಡಿದಿದೆ. ಅದನ್ನು ಹೊರತುಪಡಿಸಿ ಬೇರೇನೂ ಆಗಿಲ್ಲ. ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಯಾರೂ ಗಲಾಟೆ ಮಾಡಿಲ್ಲ. ಸಭೆಯಲ್ಲಿ ಚರ್ಚಿಸಲು ನಿರ್ಧರಿಸಿದ್ದ ವಿಷಯವನ್ನು ಹೊರತುಪಡಿಸಿದ ವಿಚಾರಗಳನ್ನು ಪ್ರತ್ಯೇಕವಾಗಿ ಮಾತನಾಡಲು ತೀರ್ಮಾನಿಸಲಾಗಿತ್ತು. ಆದರೆ, ಈ ಮಾಹಿತಿ ಗೊತ್ತಿಲ್ಲದ ಕೆಲವರು ಗಟ್ಟಿ ಧ್ವನಿಯಲ್ಲಿ ಮಾತನಾಡಿದ್ದಾರೆ ಅಷ್ಟೆ. ಸಭೆಯಲ್ಲಿ ಅಶಿಸ್ತು ತೋರಿದವರ ವಿರುದ್ಧ ಕಠಿಣ ಶಿಸ್ತು ಕ್ರಮ ಕೈಗೊಳ್ಳಲಾಗುವುದು’ ಎಂದು ಮಂಜುನಾಥ ಗೌಡ ಎಚ್ಚರಿಕೆ ನೀಡಿದರು.

‘ಪಕ್ಷಕ್ಕೆ ಸಂಘಟನೆ, ಚಳವಳಿ ಮುಖ್ಯ. ನನಗೆ ಸ್ವಂತದ್ದು ಏನೂ ಇಲ್ಲ. ನಾನು ಸಂಘಟನೆ ಮಾಡಿಲ್ಲವೆಂದಾದರೆ ಇನ್ನೊಬ್ಬರು ಮಾಡುತ್ತಾರೆ. ಇಲ್ಲಿ ದ್ವೇಷ ರಾಜಕಾರಣ ಏನೂ ಇಲ್ಲ. ಈ ಹಿಂದೆ ಯುವ ಕಾಂಗ್ರೆಸ್‌ನ ನಾಲ್ವರು ಜಿಲ್ಲಾ ಅಧ್ಯಕ್ಷರಿಗೆ ಅವರ ಜವಾಬ್ದಾರಿಯನ್ನೂ ತಡೆಹಿಡಿದು ನೋಟಿಸ್ ನೀಡಿದ್ದೆವು. ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರಿಂದ ಅವರನ್ನು ಮತ್ತೆ ಸೇರಿಸಿಕೊಂಡಿದ್ದೇವೆ’ ಎಂದರು.

‘ನಾಯಕಿಯರ ವಿರುದ್ಧ ಸೇಡಿನ ರಾಜಕೀಯ’

‘ಮಂಜುನಾಥ್ ಗೌಡ ನೇತೃತ್ವದ ಯುವ ಕಾಂಗ್ರೆಸ್ ಘಟಕವು ಮಹಿಳೆಯರಿಗೆ ಅಸುರಕ್ಷಿತ ವಾತಾವರಣ ನಿರ್ಮಿಸಿದ್ದು, ನಾಯಕಿಯರನ್ನು ಗುರಿ ಮಾಡಿ ಸೇಡಿನ ರಾಜಕೀಯ ಮಾಡುತ್ತಿದೆ’ ಎಂದು ದೀಪಿಕಾ ರೆಡ್ಡಿ ಆರೋಪಿಸಿದರು.

‘ಯುವ ಕಾಂಗ್ರೆಸ್ ಪದಾಧಿಕಾರಿಗಳ ಆಯ್ಕೆ ನಡೆದ ಚುನಾವಣೆಯಲ್ಲಿ ನಾನು 2.95 ಲಕ್ಷ ಮತಗಳನ್ನು ಪಡೆದಿದ್ದೇನೆ. ದೇಶದಲ್ಲೇ ಅತಿ ಹೆಚ್ಚು ಮತ ಪಡೆದ ಮಹಿಳಾ ಅಭ್ಯರ್ಥಿಗಳಲ್ಲಿ ನಾನೂ ಒಬ್ಬಳು. ಪುರುಷ ಪ್ರಾಬಲ್ಯದ ರಾಜಕೀಯದಲ್ಲಿ ಅವರ ವಿರುದ್ಧ ಹೋರಾಟ ನಡೆಸಿದ್ದೇನೆ. ಚುನಾವಣೆಯ ಬಳಿಕವೂ ಪಕ್ಷ ಸಂಘಟನೆಗಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದೇನೆ. ಮಂಜುನಾಥ್ ಅವರು ಅಭದ್ರತೆ ಮತ್ತು ಅಸೂಯೆಯಿಂದ ನಡೆದುಕೊಳ್ಳುತ್ತಿದ್ದಾರೆ ’ ಎಂದರು.

ಏನಿದು ವಿವಾದ?: ರಾಜ್ಯ ಯುವ ಕಾಂಗ್ರೆಸ್‌ನ 15 ಪದಾಧಿಕಾರಿಗಳನ್ನು ಇತ್ತೀಚೆಗೆ ಜವಾಬ್ದಾರಿಯಿಂದ ತಾತ್ಕಾಲಿಕವಾಗಿ ಮುಕ್ತಗೊಳಿಸಲಾಗಿತ್ತು. ಇದಕ್ಕೆ ಪಕ್ಷ ಚಟುವಟಿಕೆಯಲ್ಲಿ ನಿಷ್ಕ್ರಿಯತೆಯ ಕಾರಣ ನೀಡಲಾಗಿತ್ತು. ರಾಜ್ಯ ಉಪಾಧ್ಯಕ್ಷೆ ದೀಪಿಕಾ ರೆಡ್ಡಿ ಹಾಗೂ ಎಂಟು ಪ್ರಧಾನ ಕಾರ್ಯದರ್ಶಿಗಳು ಇದರಲ್ಲಿ ಒಳಗೊಂಡಿದ್ದಾರೆ. ಸಂಘಟನಾ ಚಟುವಟಿಕೆಯಲ್ಲಿ ಗೈರಾಗಿ, ಕರ್ತವ್ಯ ಲೋಪ ಎಸಗಿದ ಕಾರಣ ರಾಷ್ಟ್ರೀಯ ನಾಯಕತ್ವ ಈ ಶಿಸ್ತು ಕ್ರಮ ಕೈಗೊಂಡಿದೆ.

ಯಾರಿಗೆಲ್ಲಾ ಕೊಕ್?: ದೀಪಿಕಾ ರೆಡ್ಡಿ, ಸಿ.ಎಸ್. ಫ್ರಾನ್ಸಿಸ್ ಬೆನಿಟೊ, ಸುಮನ್ ಸೋಮಶೇಖರ್, ಬಿಂದು ಗೌಡ, ಕೆ. ಲಕ್ಷ್ಮಿ, ವಾಣಿ ಕಾಂಬ್ಳೆ, ಅಫ್ನಾನ ಖಾನಂ, ಎಸ್. ದಕ್ಷಿಣಮೂರ್ತಿ (ಎಲ್ಲರೂ ರಾಜ್ಯ ಪ್ರಧಾನ ಕಾರ್ಯದರ್ಶಿಗಳು) ಮೊಹಮ್ಮದ್ ಆಸಿಫ್ ಹುಸೇನ್, ಎಸ್. ಆರ್.ಎಸ್. ಚಂದ್ ಬಾಷಾ, ಎಸ್. ನವೀನ್ ಕುಮಾರ್, ಜಿ.ಸಿ. ಗೋವರ್ಧನ್, ಸೈಯದ್ ಹುಸೇನ್ ಖಾದ್ರಿ, ಪವನ್ ಸಾಲಿಯಾನ್, ಬಿ.ಎಂ. ಅಬ್ದುಲ್ ರವೂಫ್ (ರಾಜ್ಯ ಕಾರ್ಯದರ್ಶಿಗಳು).

ವಾಗ್ದಂಡನೆ: ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮನೆಯಲ್ಲಿ ಹಣ ದೊರೆತ ಪ್ರಕರಣದಲ್ಲಿ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ವಿರುದ್ಧದ ವಾಗ್ದಂಡನೆ ನೋಟಿಸ್‌ಗೆ ಸಂಬಂಧಿಸಿದಂತೆ ರಚಿಸಲಾಗಿದ್ದ ನ್ಯಾಯಮೂರ್ತಿಗಳ ವಿಚಾರಣಾ ಸಮಿತಿ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ವರದಿ ಸಲ್ಲಿಸಿದೆ.

ವಿರೋಧ ಪಕ್ಷಗಳ 146 ಸಂಸದರ ಸಹಿ ಇದ್ದ ನೋಟಿಸ್ ಸಲ್ಲಿಸಿದ್ದ ನಂತರ ವರ್ಮಾ ಅವರ ಮೇಲಿದ್ದ ಆರೋಪಗಳ ತನಿಖೆ ನಡೆಸಲು ಮೂವರು ಸದಸ್ಯರ ವಿಚಾರಣಾ ಸಮಿತಿ ರಚಿಸಲಾಗಿತ್ತು.

ಸಲ್ಲಿಕೆಯಾದ ಈ ವರದಿಯನ್ನು ಸಂಸತ್ತಿನ ಎರಡೂ ಸದನಗಳ ಮುಂದೆ ಮಂಡಿಸಲಾಗುವುದು ಎಂದು ಲೋಕಸಭಾ ಸಚಿವಾಲಯ ತಿಳಿಸಿದೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್ ನೇತೃತ್ವದ ಸಮಿತಿಯಲ್ಲಿ ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ್ ಮತ್ತು ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲ ಬಿ.ವಿ. ಆಚಾರ್ಯ ಅವರು ಇದ್ದರು.

ನ್ಯಾಯಮೂರ್ತಿ ಯಶವಂತ ವರ್ಮಾ ಅವರ ಮೇಲಿನ ಆರೋಪಗಳ ಕುರಿತು ತನಿಖೆ ನಡೆಸಿರುವ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ ನೇತೃತ್ವದ ‘ನ್ಯಾಯಮೂರ್ತಿಗಳ ವಿಚಾರಣಾ ಸಮಿತಿ’ ಸೋಮವಾರ ಸಂಸತ್ ಭವನದಲ್ಲಿ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ವರದಿ ಸಲ್ಲಿಸಿತು. ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ್, ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲ ಬಿ.ವಿ.ಆಚಾರ್ಯ, ಸಮಿತಿಯ ಕಾರ್ಯದರ್ಶಿ ಗಣಪತಿ ಭಟ್ ಇದ್ದಾರೆ

ಎಸ್‌ಐಆರ್: ರಾಜಕೀಯ ಪಕ್ಷಗಳ ಜತೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಜೂನ್ 20ರಿಂದ ಆರಂಭವಾಗಲಿದ್ದು, ಚುನಾವಣಾ ಆಯೋಗ ಸೋಮವಾರ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜತೆ ಚರ್ಚೆ ನಡೆಸಿತು.

‘ಮೊದಲ ಹಂತದಲ್ಲಿ 2002ರ ಪಟ್ಟಿಯಲ್ಲಿರುವ ಮತದಾರರ ವಿಳಾಸಕ್ಕೆ ಬಿಎಲ್‌ಒಗಳು ಗಣತಿ ನಮೂನೆಗಳನ್ನು (ಎನ್ಯುಮರೇಷನ್ ಅರ್ಜಿ) ತಲುಪಿಸಲಿದ್ದಾರೆ. ಪ್ರತಿ ಮತದಾರರಿಗಾಗಿ ಎರಡು ಗಣತಿ ನಮೂನೆಗಳನ್ನು ನೀಡಲಾಗುವುದು. ಮತದಾರರು ಎರಡೂ ನಮೂನೆಗಳನ್ನು ಭರ್ತಿ ಮಾಡಿ, ಒಂದನ್ನು ಬಿಎಲ್‌ಒಗಳಿಗೆ ನೀಡಬೇಕು ಮತ್ತು ಇನ್ನೊಂದನ್ನು ತಮ್ಮ ಬಳಿಯೇ ಇರಿಸಿಕೊಳ್ಳಬೇಕು. ಮತದಾರರ ಪಟ್ಟಿಯಲ್ಲಿ ಹೆಸರು ಬಿಟ್ಟುಹೋದರೆ, ಈ ಅರ್ಜಿಯ ಆಧಾರದಲ್ಲೇ ಮೇಲ್ಮನವಿ ಸಲ್ಲಿಸಬಹುದು. ಆ ವಿಳಾಸದಲ್ಲಿ ಮತದಾರರು ಇಲ್ಲದಿದ್ದರೆ ಹೊಸ ವಿಳಾಸಕ್ಕೆ ನೀಡುವುದಿಲ್ಲ. ಕರಡು ಪಟ್ಟಿ ಬಿಡುಗಡೆ ನಂತರ ಹೊಸ ವಿಳಾಸ ನಮೂದಿಸಲು ಅವಕಾಶ ಇರುತ್ತದೆ’ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಹೇಳಿದರು.

ಪೊಲೀಸರಿಗೆ ‘ಸಿಡಬ್ಲ್ಯುಸಿ’ ವರದಿ ಸಲ್ಲಿಕೆ

ಹರಿಹರ ಪಂಚಮಸಾಲಿ ಗುರುಪೀಠದ ಸ್ವಾಮೀಜಿ ಪ್ರಕರಣ

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ): ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಪದಚ್ಯುತ ಪೀಠಾಧ್ಯಕ್ಷ ವಚನಾನಂದ ಸ್ವಾಮೀಜಿ ವಸತಿ ನಿಲಯದ ಮಕ್ಕಳನ್ನು ದುರ್ಬಳಕೆ ಮಾಡಿಕೊಂಡು ದೌರ್ಜನ್ಯ ನಡೆಸಿದ ಆರೋಪಕ್ಕೆ ಸಂಬಂಧಿಸಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ (ಸಿಡಬ್ಲ್ಯುಸಿ) ಪೊಲೀಸರಿಗೆ ವರದಿ ನೀಡಿದೆ.

ವಚನಾನಂದ ಸ್ವಾಮೀಜಿ

ಮೂವರು ಸಂತ್ರಸ್ತ ಬಾಲಕರ ಸಮಾಲೋಚನೆ ನಡೆಸಿದ ಸಮಿತಿಯು ಮೇ 16ರಂದು ಗ್ರಾಮಾಂತರ ಪೊಲೀಸ್ ಠಾಣೆಗೆ ವರದಿ ಸಲ್ಲಿಸಿದೆ. ಎರಡು ಪುಟಗಳ ಈ ವರದಿಯಲ್ಲಿ ಕಾನೂನು ಕ್ರಮಕ್ಕೆ ಶಿಫಾರಸು ಮಾಡಲಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

‘ಮಠದಲ್ಲಿದ್ದ ಮಕ್ಕಳ ಮೇಲೆ ಸ್ವಾಮೀಜಿ ದೌರ್ಜನ್ಯ ನಡೆಸಿದ್ದಾರೆ’ ಎಂದು ಆರೋಪಿಸಿ ಸಂತ್ರಸ್ತ ಬಾಲಕರ ಪಾಲಕರು ಸಮಿತಿಗೆ ದೂರು ನೀಡಿದ್ದರು. ಏ. 17ರಂದು ಮಠಕ್ಕೆ ಸಮಿತಿ ಅಧ್ಯಕ್ಷೆ ಮಂಜುಳಾ ಮಹೇಶ್ ನೇತೃತ್ವದ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು. ವಚನಾನಂದ ಸ್ವಾಮೀಜಿಯ ಹೇಳಿಕೆಯನ್ನೂ ದಾಖಲಿಸಿಕೊಂಡಿತ್ತು.

ಲೈಂಗಿಕ ದೌರ್ಜನ್ಯ ಆರೋಪ ಸಂಬಂಧ ಮೇ 8ರಂದು ದಾಖಲಾದ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮಾಂತರ ಠಾಣೆಯ ಪೊಲೀಸರು ಈಗಾಗಲೇ ತನಿಖೆ ನಡೆಸುತ್ತಿದ್ದಾರೆ.

4 ಗಂಟೆ ಸ್ವಾಮೀಜಿ ವಿಚಾರಣೆ

ವಚನಾನಂದ ಸ್ವಾಮೀಜಿ ಸೋಮವಾರ 2ನೇ ಬಾರಿಗೆ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಗೆ ಹಾಜರಾಗಿ 4 ಗಂಟೆ ವಿಚಾರಣೆ ಎದುರಿಸಿದರು.

ಭಕ್ತರ ಕಾರಿನಲ್ಲಿ ಠಾಣೆಗೆ ಬಂದ ಸ್ವಾಮೀಜಿಯನ್ನು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2.15ವರೆಗೆ ತನಿಖಾಧಿಕಾರಿ ಸುರೇಶ್ ಸಗರಿ ವಿಚಾರಣೆ ನಡೆಸಿದರು.

‘ನೋಟಿಸ್ ನೀಡಿದ್ದರಿಂದ 2ನೇ ಬಾರಿಗೆ ವಿಚಾರಣೆಗೆ ಹಾಜರಾಗಿದ್ದೇನೆ. ತನಿಖಾ ಪ್ರಕ್ರಿಯೆಯಲ್ಲಿ ಸಂಪೂರ್ಣ ಸಹಕಾರ ನೀಡುತ್ತೇನೆ’ ಎಂದು ಠಾಣೆಯಿಂದ ಹೊರಬಂದ ಬಳಿಕ ಸ್ವಾಮೀಜಿ ಸುದ್ದಿಗಾರರಿಗೆ ತಿಳಿಸಿದರು.

ಮೇ 14ರಂದು 5 ಗಂಟೆ ವಿಚಾರಣೆ, ವೈದ್ಯಕೀಯ ಪರೀಕ್ಷೆ ನಡೆಸಲಾಗಿತ್ತು.

> ಸಂತ್ರಸ್ತ ಬಾಲಕರಲ್ಲಿ ಇಬ್ಬರ ಹೇಳಿಕೆಯನ್ನು ತನಿಖಾಧಿಕಾರಿ ದಾಖಲಿಸಿದ್ದಾರೆ. ಇನ್ನೂ ಕೆಲವರ ಹೇಳಿಕೆ ಪಡೆಯುವ ಪ್ರಕ್ರಿಯೆ ನಡೆಯುತ್ತಿದೆ
>
> **ಡಾ.ಎಚ್.ಟಿ.ಶೇಖರ್,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಸಿ.ಸಿ.ಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಸಂಗ್ರಹಕ್ಕೂ ಡಿಜಿಪಿ ಸೂಚನೆ

‘ಕಸ್ಟೊಡಿಯಲ್ ಡೆತ್’: ಎಫ್‌ಐಆರ್ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪರಾಧ ಪ್ರಕರಣಗಳಲ್ಲಿ ಬಂಧನಕ್ಕೆ ಒಳಗಾಗಿ ಪೊಲೀಸ್ ವಶದಲ್ಲಿರುವ ಆರೋಪಿ ಮೇಲೆ ದೌರ್ಜನ್ಯ ನಡೆದರೆ, ತಕ್ಷಣವೇ ಸ್ಥಳೀಯ ಠಾಣಾಧಿಕಾರಿ ಕಡ್ಡಾಯವಾಗಿ ಎಫ್‌ಐಆರ್ ದಾಖಲಿಸಬೇಕು’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ ಆದೇಶ ಹೊರಡಿಸಿದ್ದಾರೆ.

ಆರೋಪಿಗಳ ಮೇಲೆ ನಡೆಯುವ ದೌರ್ಜನ್ಯ, ‘ಕಸ್ಟೊಡಿಯಲ್ ಡೆತ್’ ಪ್ರಕರಣಗಳಿಗೆ ಕಡಿವಾಣ ಹಾಕಲು ಕಠಿಣ ನಿಯಮ ಜಾರಿಗೊಳಿಸಲಾಗಿದೆ.

ಪ್ರಕರಣದ ತನಿಖಾ ಅವಧಿಯಲ್ಲಿ ಸ್ಥಳೀಯ ಪೊಲೀಸರಿಂದ ನಡೆಯಬಹುದಾದ ತನಿಖಾ ವೈಫಲ್ಯ ಹಾಗೂ ಸಾಕ್ಷ್ಯ ನಾಶದ ಯತ್ನಗಳನ್ನು ತಡೆಯುವ ಉದ್ದೇಶದಿಂದ ಪೊಲೀಸ್ ಇಲಾಖೆ ಹೊಸ ಮಾರ್ಗಸೂಚಿ ಹೊರಡಿಸಿದೆ.

ದೌರ್ಜನ್ಯ ಹಾಗೂ ‘ಕಸ್ಟೊಡಿಯಲ್ ಡೆತ್’ ಪ್ರಕರಣಗಳು ನಡೆದರೆ ಠಾಣೆಯಲ್ಲಿರುವ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಯನ್ನು ಠಾಣಾಧಿಕಾರಿ ಸಂಗ್ರಹಿಸಬೇಕು. ಅಲ್ಲದೇ ಪ್ರಕರಣದ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ತಕ್ಷಣವೇ ಸಲ್ಲಿಸಬೇಕು’ ಎಂದೂ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

‘ಕಸ್ಟೊಡಿಯಲ್ ಡೆತ್’ ಪ್ರಕರಣಗಳಲ್ಲಿ ಸ್ಥಳೀಯ ತನಿಖಾ ಅಧಿಕಾರಿಗಳು ತನಿಖೆಯ ವೇಳೆ ಲೋಪ ಎಸಗುತ್ತಿದ್ದಾರೆ. ಎಫ್‌ಐಆರ್ ದಾಖಲು, ಸ್ಥಳ ಮಹಜರು ಸೇರಿದಂತೆ ಪ್ರಮುಖ ಸಾಕ್ಷ್ಯಾಧಾರಗಳ ಕಲೆ ಹಾಕುವಲ್ಲಿಯೂ ತನಿಖಾಧಿಕಾರಿ ವಿಳಂಬ ಮಾಡುತ್ತಿದ್ದಾರೆ ಎಂಬ ಆರೋಪವಿದೆ. ಇದರಿಂದ ಸಿಐಡಿ ತನಿಖೆಗೂ ಅಡ್ಡಿ ಆಗುತ್ತಿದೆ. ಇದಕ್ಕೆ ಕಡಿವಾಣ ಹಾಕಲು ಹೊಸ ಆದೇಶ ಹೊರಡಿಸಲಾಗಿದೆ’ ಎಂದು ಪೊಲೀಸ್ ಇಲಾಖೆಯ ಮೂಲಗಳು ತಿಳಿಸಿವೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ(ಬಿಎನ್‌ಎಸ್‌ಎಸ್) ಅಡಿಯಲ್ಲಿ ಕಟ್ಟುನಿಟ್ಟಿನ ಮಾರ್ಗಸೂಚಿ ಸಿದ್ಧಪಡಿಸಲಾಗಿದೆ. ನಿಯಮ ಉಲ್ಲಂಘಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಡಿಜಿಪಿ ಎಚ್ಚರಿಕೆ ನೀಡಿದ್ದಾರೆ.

> ಪ್ರಕರಣಗಳ ತನಿಖೆ ವೇಳೆ ಯಾವುದೇ ಹಂತದಲ್ಲಿ ನಿಯಮ ಉಲ್ಲಂಘನೆ ಆದರೆ, ಸಂಬಂಧಪಟ್ಟ ಅಧಿಕಾರಿಯನ್ನೇ ನೇರ ಹೊಣೆ ಮಾಡಲಾಗುವುದು –
>
> **ಎಂ.ಎ. ಸಲೀಂ,** ರಾಜ್ಯ ಪೊಲೀಸ್ ಮಹಾನಿರ್ದೇಶಕ

ಮಾರ್ಗಸೂಚಿ

- ಸಂತ್ರಸ್ತರ ಹೇಳಿಕೆಗಳು ಮತ್ತು ಶವಪರೀಕ್ಷೆಯ ಪ್ರಕ್ರಿಯೆಯನ್ನು ಕಡ್ಡಾಯವಾಗಿ ಆಡಿಯೊ ಹಾಗೂ ವಿಡಿಯೊ ರೆಕಾರ್ಡ್ ಮಾಡಿಕೊಳ್ಳಬೇಕು
- ಪ್ರಕರಣ ಸಿಐಡಿ ತನಿಖೆಗೆ ವರ್ಗಾವಣೆಯಾದ ಬಳಿಕ ತನಿಖಾಧಿಕಾರಿಗಳು ಹಳೆಯ ಡೈರಿಗಳನ್ನು ಪರಿಶೀಲಿಸಬೇಕು. ಖುದ್ದಾಗಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಹಜರು ಪ್ರಕ್ರಿಯೆಯನ್ನು ಸರಿಯಾಗಿ ನಡೆಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು
- ಆರೋಪಿತ ಅಧಿಕಾರಿ ಹಾಗೂ ಸಿಬ್ಬಂದಿಯ ವಿರುದ್ಧ ದೋಷಾರೋಪಪಟ್ಟಿ ಸಲ್ಲಿಸುವ ಮುನ್ನ ಸೂಕ್ತ ಪ್ರಾಧಿಕಾರದಿಂದ ಪ್ರಾಸಿಕ್ಯೂಷನ್‌ಗೆ ಅನುಮತಿ ಪಡೆಯಬೇಕು
- ಹಿಂಸಾಚಾರ ಹಾಗೂ ‘ಕಸ್ಟೊಡಿಯಲ್ ಡೆತ್’ ಪ್ರಕರಣಗಳ ತನಿಖೆಯ ವೇಳೆ ಸ್ಥಳೀಯ ಪೊಲೀಸರು ಯಾವುದೇ ರೀತಿಯ ಪ್ರಭಾವ ಬೀರದಂತೆ ಮತ್ತು ಸಾಕ್ಷ್ಯಗಳನ್ನು ನಾಶಪಡಿಸದಂತೆ ತಡೆಯಲು ಇಡೀ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಬೇಕು

prajavani.net prajavani | ಮಂಗಳವಾರ, ಮೇ 19, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 138 | ಪುಟ 12 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಮಿಂಚಿದ ಕಮಿನ್ಸ್

ಸನ್‌ರೈಸರ್ಸ್ ಹೈದರಾಬಾದ್ ತಂಡದ ವೇಗಿ ಪ್ಯಾಟ್ ಕಮಿನ್ಸ್ ಅವರು ಚೆನ್ನೈನಲ್ಲಿ ಸೋಮವಾರ ನಡೆದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಮೂರು ವಿಕೆಟ್ ಗಳಿಸಿದರು

ಸೆನ್ಸೆಕ್ಸ್ 75,315 | ನಿಫ್ಟಿ 23,649 | $/₹ 96.20 | ಚಿನ್ನ (Std. 10g) ₹1,60,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,86,300 (ಬೆಂಗಳೂರು)

ಸಾಕಾನೆಗಳ ಕಾಳಗ: ಪ್ರವಾಸಿ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕುಶಾಲನಗರದ ದುಬಾರೆ ಶಿಬಿರದಲ್ಲಿ ಸೋಮವಾರ ಸಾಕಾನೆಗಳಾದ 'ಕಂಜನ್' ಮತ್ತು 'ಮಾರ್ತಾಂಡ' ನಡುವಿನ ಕಾದಾಟದಲ್ಲಿ ಸಿಲುಕಿದ ಪ್ರವಾಸಿ ಮಹಿಳೆ, ತಮಿಳುನಾಡಿನ ಜೋಯ್ಸಿ (33) ಮೃತಪಟ್ಟಿದ್ದಾರೆ. ಅವರ ಪತಿ ಜೋಯಲ್, ಒಂದು ವರ್ಷದ ಮಗು ಕೂದಲೆಳೆಯ ಅಂತರದಿಂದ ಪಾರಾಗಿದ್ದಾರೆ. 'ಮಾರ್ತಾಂಡ' ತೀವ್ರವಾಗಿ ಗಾಯಗೊಂಡಿದೆ.

'ಮಾರ್ತಾಂಡ' ಆನೆಗೆ ಸ್ನಾನ ಮಾಡಿಸುವಾಗ 'ಕಂಜನ್' ದಾಳಿ ನಡೆಸಿದೆ. ಇದರಿಂದ 'ಮಾರ್ತಾಂಡ' ಆನೆ ಜೋಯ್ಸಿ ಮೇಲೆ ಬಿದ್ದಿದ್ದು, ಅವರು ನೀರಿನಲ್ಲಿ ಸಿಲುಕಿಕೊಂಡಿದ್ದರು. ಈ ವೇಳೆ ಮಗುವನ್ನು ಹಿಡಿದುಕೊಂಡು ಪತಿ ಜೋಯಲ್ ಪಾರಾದರು. ಜೋಯ್ಸಿ ಅವರನ್ನು ಎಳೆಯಲು ಜೋಯಲ್ ಯತ್ನಿಸಿದರಾದರೂ ಅಷ್ಟು ಹೊತ್ತಿಗಾಗಲೇ ಆನೆಯು ಮೇಲೆಯೇ ಬಿದ್ದು ಒದ್ದಾಡುತ್ತಿತ್ತು. ನಂತರ ಅವರು ಪತ್ನಿಯನ್ನು ಆನೆಯ ಕೆಳಗಿನಿಂದ ಹೊರಕ್ಕೆ ಎಳೆದರು.

ಘಟನೆಯನ್ನು ದೂರದಿಂದ ನೋಡುತ್ತಿದ್ದ ರ‍್ಯಾಫ್ಟಿಂಗ್ ತಂಡದ ಪ್ರತಾಪ್, ನಿಶ್ಚಿತ್, ನಿತನ್, ಪುರುಷೋತ್ತಮ್, ರೋಹಿತ್ ಅವರು ಸ್ಥಳಕ್ಕೆ ಧಾವಿಸಿ ಮಹಿಳೆಯನ್ನು ಬೋಟ್ ಮೂಲಕ ದಡಕ್ಕೆ ತರುವಲ್ಲಿ ಸಹಕರಿಸಿದರು. ಆಂಬುಲೆನ್ಸ್, ಅರಣ್ಯ ಇಲಾಖೆ ವಾಹನಕ್ಕೆ ಕಾಯದೇ, ಖಾಸಗಿ ವಾಹನದಲ್ಲಿ ಕುಶಾಲನಗರದ ಖಾಸಗಿ ಆಸ್ಪತ್ರೆಗೆ ಕರೆತರುವ ಮಾರ್ಗದಲ್ಲಿ ಮಹಿಳೆ ಮೃತಪಟ್ಟಿದ್ದರು.

ಪ್ರವಾಸಿ ಸಾವು ಇದೇ ಮೊದಲು: 'ಸಾಕಾನೆಗಳ ನಡುವೆ ಜಗಳ, ಕಾದಾಟ ಆಗಿಂದಾಗ್ಗೆ ನಡೆಯುತ್ತಿರುತ್ತದೆ. ಮಾವುತರು, ಆನೆಗಳಿಗೆ ಪೆಟ್ಟಾಗುವುದು ಉಂಟು. ಆದರೆ, ಪ್ರವಾಸಿಗರು ಮೃತಪಟ್ಟಿರುವುದು ಇದೇ ಪ್ರಥಮ. ಮಾರ್ತಾಂಡ ಸ್ಥಿತಿ ಸಹ ಗಂಭೀರವಾಗಿದೆ' ಎಂದು ಡಿಸಿಎಫ್ ಅಭಿಷೇಕ್ 'ಪ್ರಜಾವಾಣಿ'ಗೆ ತಿಳಿಸಿದರು.

ಆನೆಗಳ ಸ್ನಾನ ವೀಕ್ಷಿಸಲು 100 ಅಡಿ ಅಂತರ: ಈಶ್ವರ ಖಂಡ್ರೆ

ಘಟನೆಯ ನಂತರ ಎಚ್ಚೆತ್ತಿರುವ ಅರಣ್ಯ ಖಾತೆ ಸಚಿವ ಈಶ್ವರ ಬಿ. ಖಂಡ್ರೆ ಅವರು, ಇನ್ನು ಮುಂದೆ ಸಾಕಾನೆಗಳ ಸ್ನಾನ ವೀಕ್ಷಿಸಲು 100 ಅಡಿ ಅಂತರ ಕಾಯ್ದುಕೊಳ್ಳುವಂತೆ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ರಚಿಸಲು ಆದೇಶಿಸಿದ್ದಾರೆ.

ಯಾವುದೇ ಕಾರಣಕ್ಕೂ ಆನೆಗಳ ಬಳಿ ಹೋಗಿ ಸೆಲ್ಫಿ, ಫೋಟೋ ತೆಗೆಸಿಕೊಳ್ಳಲು, ಮೈತೊಳೆಯಲು ಅವಕಾಶ ನೀಡದಂತೆ ಮತ್ತು ಬಾಳೆಹಣ್ಣು, ಬೆಲ್ಲ, ಕಬ್ಬು ಇತ್ಯಾದಿ ಯಾವುದೇ ಆಹಾರವನ್ನು ಪ್ರವಾಸಿಗರ ಕೈಯಿಂದ ತಿನ್ನಿಸದಂತೆ ಆದೇಶ ಹೊರಡಿಸಲೂ ಸೂಚಿಸಿದ್ದಾರೆ.

'ಘಟನೆ ನಡೆದ ಕೆಲವೇ ನಿಮಿಷಗಳಲ್ಲಿ 'ಕಂಜನ್' ಆನೆಯನ್ನು ನಿಯಂತ್ರಣಕ್ಕೆ ತರುವಲ್ಲಿ ಮಾವುತ ಸಫಲರಾಗಿದ್ದಾರೆ. ಮುನ್ನೆಚ್ಚರಿಕೆಯಾಗಿ ಮೇ 19ರಂದು ದುಬಾರೆ ಸಾಕಾನೆ ಶಿಬಿರಕ್ಕೆ ಪ್ರವಾಸಿಗರಿಗೆ ಪ್ರವೇಶವಿರುವುದಿಲ್ಲ' ಎಂದರು.

ತುರ್ತು ಚಿಕಿತ್ಸಾ ವಾಹನ ಇರಲಿಲ್ಲ: ಸುದ್ದಿಗಾರರೊಂದಿಗೆ ಮಾತನಾಡಿದ ಜೋಯಲ್, 'ಸ್ಥಳದಲ್ಲಿ ತುರ್ತು ಚಿಕಿತ್ಸಾ ವಾಹನ ಇರಲಿಲ್ಲ. ಸಿಬ್ಬಂದಿ ಇದ್ದರೂ ರಕ್ಷಿಸಲು ಸಾಧ್ಯವಾಗಲಿಲ್ಲ. ಕನಿಷ್ಠ ಪ್ರಥಮ ಚಿಕಿತ್ಸೆ ನೀಡುವ ವ್ಯವಸ್ಥೆಯೂ ಅಲ್ಲಿರಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ನಾನು, ಪತ್ನಿ, ಮಗು ಚೆನ್ನೈನ ಪಲ್ಲಾವರಂನಿಂದ ಮೈಸೂರಿಗೆ ಬಂದು ಅಲ್ಲಿಂದ ದುಬಾರೆಗೆ ಬಂದಿದ್ದೆವು. ಆನೆಗಳ ಸ್ನಾನ ವೀಕ್ಷಣೆಗೆ ತಲಾ ₹ 300 ನೀಡಿ ಟಿಕೆಟ್ ಖರೀದಿಸಿದ್ದು, ಸ್ಥಳದ ಪಕ್ಕ ಫೋಟೊ ತೆಗೆಯುತ್ತಿದ್ದೆವು' ಎಂದರು.

▶ 8

'ಕಂಜನ್' ಆನೆಯು 'ಮಾರ್ತಾಂಡ' ಆನೆಯ ಮೇಲೆ ದಾಳಿ ನಡೆಸಿದ ಕ್ಷಣ

ಮುಂಗಾರು: ರಸಗೊಬ್ಬರ ಅಭಾವ

ಯುದ್ಧದ ಪರಿಣಾಮದಿಂದ ಬೇಡಿಕೆಗೆ ತಕ್ಕಂತೆ ಪೂರೈಸದ ಕೇಂದ್ರ: ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುದ್ಧದ ಪರಿಣಾಮ ರಸಗೊಬ್ಬರ ಉತ್ಪಾದನೆಗೆ ಬೇಕಾದ ಕಚ್ಚಾ ವಸ್ತುಗಳು ಮತ್ತು ರಸಗೊಬ್ಬರ ಆಮದಿನಲ್ಲಿ ಅಸ್ಥಿರತೆ ಉಂಟಾಗಿದೆ. ಈ ಸಾಲಿನ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ.

ಬೆಂಗಳೂರು ಪ್ರೆಸ್‌ಕ್ಲಬ್ ಸೋಮವಾರ ಹಮ್ಮಿಕೊಂಡಿದ್ದ ಮಾಧ್ಯಮ ಸಂವಾದದಲ್ಲಿ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಈ ಮಾಹಿತಿ ನೀಡಿದರು.

'ಕರ್ನಾಟಕದ ಬೇಡಿಕೆಗೆ ಅನುಗುಣವಾಗಿ ಕೇಂದ್ರ ಸರ್ಕಾರವು ಯೂರಿಯಾ ಮತ್ತು ಡಿಎಪಿ ರಸಗೊಬ್ಬರ ಸರಬರಾಜು ಮಾಡಿಲ್ಲ. ಕಡಿಮೆ ಪ್ರಮಾಣದಲ್ಲಿ ರಸಗೊಬ್ಬರ ಬಳಸುವಂತೆ ಕೇಂದ್ರ ಸೂಚನೆ ನೀಡಿದೆ. ಹೀಗಾಗಿ ರಸಗೊಬ್ಬರ ಕೊರತೆಯಾಗಲಿದೆ' ಎಂದೂ ಹೇಳಿದರು.

ಏಪ್ರಿಲ್ ತಿಂಗಳಿನಿಂದ ಈವರೆಗೆ 8.57 ಲಕ್ಷ ಟನ್ ರಸಗೊಬ್ಬರಕ್ಕೆ ಬೇಡಿಕೆ ಇದ್ದು, 4.31 ಲಕ್ಷ ಟನ್ ಸರಬರಾಜು ಮಾಡಲಾಗಿದೆ ಎಂದೂ ಅವರು ತಿಳಿಸಿದರು.

ರೈತರ ಅನುಕೂಲಕ್ಕಾಗಿ ಕೃತಕ ಬುದ್ಧಿಮತ್ತೆ (ಎ.ಐ) ಬಳಸಿ ಹೊಸ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ಸಹಾಯವಾಣಿ ನಂಬರ್‌ಗೆ ಕರೆ ಮಾಡಿದರೆ ಮಾರುಕಟ್ಟೆ ಪರಿಸ್ಥಿತಿ, ಕೃಷಿ ಉತ್ಪನ್ನಗಳ ದರ ಸೇರಿದಂತೆ ಎಲ್ಲ ವಿವರಗಳ ಎಸ್‌ಎಂಎಸ್ ಸಂದೇಶ ಮತ್ತು ಧ್ವನಿ ಸಂದೇಶ ಒದಗಿಸಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜೂನ್ ಮೊದಲ ವಾರ ಇದಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

ಕೃಷಿ ಇಲಾಖೆಯಲ್ಲಿ ಮೂರು ವರ್ಷದಲ್ಲಿ ಜಾರಿಗೆ ತಂದಿರುವ ಕಾರ್ಯಕ್ರಮಗಳು, ಹೊಸ ಯೋಜನೆಗಳ ಬಗ್ಗೆ ಅಂಕಿ ಅಂಶ ಸಮೇತ ಮಾಹಿತಿ ನೀಡಿದರು.

▶ 8

ಮುಂಗಾರು ಹಂಗಾಮಿಗೆ ಬೇಕಾಗಿರುವ ರಸಗೊಬ್ಬರ ವಿವರ (ಲಕ್ಷ ಟನ್‌ಗಳಲ್ಲಿ)

ರಸಗೊಬ್ಬರ	ಅವಶ್ಯಕತೆ	ಸಲ್ಲಿಸಲಾದ ಬೇಡಿಕೆ	ಕೇಂದ್ರ ಹಂಚಿಕೆ
ಡಿಎಪಿ	4.15	4.15	4.00
ಎಂಒಪಿ	2.12	1.50	2.12
ಕಾಂಪ್ಲೆಕ್ಸ್	11.88	11.88	11.88
ಯೂರಿಯಾ	12.79	11.50	11.10
ಎಸ್‌ಎಸ್‌ಪಿ	0.95	0.95	0.95
ಒಟ್ಟು	31.89	29.98	30.05

ಮುಂಗಾರು ಹಂಗಾಮಿನ ಏಪ್ರಿಲ್, ಮೇ 30ಗಳ ರಸಗೊಬ್ಬರದ ಬೇಡಿಕೆ, ಕೇಂದ್ರದ ಹಂಚಿಕೆ ಮತ್ತು ಪೂರೈಕೆ ವಿವರ (ಟನ್‌ಗಳಲ್ಲಿ)

ರಸಗೊಬ್ಬರ	ಬೇಡಿಕೆ	ಕೇಂದ್ರದ ಹಂಚಿಕೆ	ಸರಬರಾಜು	ಕೊರತೆ
ಡಿಎಪಿ	1,60,775	1,61,500	43,679	1,17,096
ಎಂಒಪಿ	68,476	68,300	28,294	40,182
ಎನ್‌ಪಿಕೆಎಸ್	3,63,401	3,83,210	1,94,025	1,69,376
ಯೂರಿಯಾ	2,36,197	2,36,600	1,56,840	7,9357
ಎಸ್‌ಎಸ್‌ಪಿ	28,325	25,275	9,129	19,196
ಒಟ್ಟು	8,57,174	8,74,885	4,31,967	4,25,207

₹70,000 ಕೋಟಿ ಸಬ್ಸಿಡಿ ಹೆಚ್ಚಳ?

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದ ಬಿಕ್ಕಟ್ಟಿನಿಂದ ಯೂರಿಯಾ ಮತ್ತು ಇತರೆ ರಸಗೊಬ್ಬರಗಳ ಆಮದು ವೆಚ್ಚ ಹೆಚ್ಚಳವಾಗಿದ್ದು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಸಗೊಬ್ಬರಗಳ ಸಬ್ಸಿಡಿ ಮೊತ್ತ ₹70 ಸಾವಿರ ಕೋಟಿಯಷ್ಟು ಹೆಚ್ಚಳ ಆಗಬಹುದು ಎಂದು ಕೇಂದ್ರ ರಸಗೊಬ್ಬರಗಳ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಅಪರ್ಣಾ ಎಸ್. ಶರ್ಮಾ ತಿಳಿಸಿದ್ದಾರೆ.

2026–27ರ ಆರ್ಥಿಕ ವರ್ಷಕ್ಕೆ ಕೇಂದ್ರ ಸರ್ಕಾರವು ರಸಗೊಬ್ಬರದ ಸಬ್ಸಿಡಿಗೆ ₹1.71 ಲಕ್ಷ ಕೋಟಿ ಹಂಚಿಕೆ ಮಾಡಿದೆ. ಆದರೆ, ಇದು ₹2.41 ಲಕ್ಷ ಕೋಟಿಗೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಅಪರ್ಣಾ ಅವರು ಸೋಮವಾರ ಹೇಳಿದ್ದಾರೆ.

▶ 8

ಆಡಳಿತ ವರ್ಗದ ಮನವಿಗೆ ಒಪ್ಪದ ಜಂಟಿ ಕ್ರಿಯಾ ಸಮಿತಿ

ಸಾರಿಗೆ ಮುಷ್ಕರ ಸಂಭವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಸಂಘಟನೆಗಳು ಹಾಗೂ ಆಡಳಿತ ವರ್ಗಗಳ ಪ್ರತಿನಿಧಿಗಳ ನಡುವೆ ರಾಜೀ ಸಂಧಾನ ನಡೆಸಲು ಕಾರ್ಮಿಕ ಆಯುಕ್ತರು ಕರೆದಿದ್ದ ಸಭೆ ವಿಫಲವಾಗಿದ್ದು, ಮೇ 20ರಿಂದ ಸರ್ಕಾರಿ ಬಸ್‌ಗಳ ಸಂಚಾರ ವ್ಯತ್ಯಯವಾಗುವ ಸಂಭವ ಇದೆ.

ಸಂಧಾನ ವಿಫಲ

ಕಾರ್ಮಿಕ ಆಯುಕ್ತರು ಸೋಮವಾರ ಹಲವು ಸುತ್ತಿನ ಮಾತುಕತೆ ನಡೆಸಿದರು. ಬೇಡಿಕೆ ಈಡೇರದೇ ಇದ್ದರೆ ಬಸ್ ಮುಷ್ಕರ ನಡೆಸುವುದಾಗಿ ಸಂಘಟನೆಗಳು ಪಟ್ಟು ಹಿಡಿದಿವೆ. ಮೇ 25ರಂದು ಮತ್ತೊಂದು ಸುತ್ತಿನ ಮಾತುಕತೆ ನಡೆಯಲಿದೆ.

ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘದ ನಡುವೆ 'ಕೈಗಾರಿಕಾ ವಿವಾದ' ಉದ್ಭವಿಸಿರುವುದರಿಂದ ಕಾರ್ಮಿಕ ಇಲಾಖೆ ಮಧ್ಯಪ್ರವೇಶಿಸಿ ರಾಜೀ ಸಂಧಾನ ಸಭೆ ಕರೆದಿತ್ತು. ಕಾರ್ಮಿಕ ಆಯುಕ್ತ (ಪ್ರಭಾರ) ವೈ.ಕೆ. ದಿನೇಶ್ ಕುಮಾರ್ ಸಂಧಾನ ಸಭೆ ನಡೆಸಿದರು.

2024ರಿಂದ ವೇತನ ಪರಿಷ್ಕರಣೆ ನಡೆಸುವ ಬದಲು 2025ರಿಂದ ಪರಿಷ್ಕರಣೆ ಮಾಡಲಾಗಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ. ಅಲ್ಲದೇ ಮೂಲ ವೇತನವನ್ನು ಶೇ 25ರಷ್ಟು ಹೆಚ್ಚಳ ಮಾಡಬೇಕು ಎಂದು ಬಹಳ ಸಮಯದಿಂದ ಕೇಳಿಕೊಂಡು ಬರಲಾಗಿತ್ತು. ಈ ಬಗ್ಗೆ ಮಾತುಕತೆಗಳು ನಡೆಯುತ್ತಿದ್ದವು. ಅದರ ಮಧ್ಯೆ ಏಕಾಏಕಿ ಶೇ 12.5 ಪರಿಷ್ಕರಣೆ ಮಾಡಲಾಗಿದ್ದು, ಇದುವೇ ಅಂತಿಮ ಎಂದು ಸರ್ಕಾರ ಹೇಳಿರುವುದರಿಂದ ನೌಕರರಿಗೆ ಅನ್ಯಾಯವಾಗಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾಸಮಿತಿಯ ಮುಖಂಡರು ವಾದಿಸಿದರು.

'ಸಮಸ್ಯೆಗಳನ್ನು ಆಲಿಸಲಾಗುವುದು. ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ನಡೆಯುತ್ತಿರುವುದರಿಂದ ಮುಷ್ಕರವನ್ನು ಕೈಬಿಡಿ' ಎಂದು ಆಯುಕ್ತರು ಮನವಿ ಮಾಡಿದರು.

▶ 8

ಎಸ್ಮಾ ಜಾರಿ: ಅಕ್ರಂ ಪಾಷ ಎಚ್ಚರಿಕೆ

'ಸಾರಿಗೆ ನಿಗಮಗಳು ಅಗತ್ಯ ಸೇವಾ ನಿರ್ವಹಣಾ ಕಾಯ್ದೆ–2013 (ಎಸ್ಮಾ) ಅಡಿಯಲ್ಲಿ ಇರುವ ಸಾರ್ವಜನಿಕ ಉಪಯುಕ್ತ ಸೇವಾ ಸಂಸ್ಥೆಗಳಾಗಿರುವುದರಿಂದ ನೌಕರರು ಮುಷ್ಕರದಲ್ಲಿ ಪಾಲ್ಗೊಳ್ಳುವಂತಿಲ್ಲ. ಹಾಗಿದ್ದೂ ಪಾಲ್ಗೊಂಡರೆ ಶಿಸ್ತುಕ್ರಮ ಮತ್ತು ವೇತನ ಕಡಿತಗೊಳಿಸಲಾಗುವುದು' ಎಂದು ಎಚ್ಚರಿಸಿರುವ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಎಸ್ಮಾ ಜಾರಿ ಮಾಡಿದ್ದಾರೆ.

'ಎಸ್ಮಾ ಜಾರಿ ಇದ್ದಾಗ ಯಾವುದೇ ಸಂಘ ಸಂಸ್ಥೆಗಳು, ವ್ಯಕ್ತಿಗಳು ಮುಷ್ಕರಕ್ಕೆ ಪ್ರಚೋದನೆ ನೀಡುವಂತಿಲ್ಲ. ಜಂಟಿ ಕ್ರಿಯಾ ಸಮಿತಿಯವರು ಆಡಳಿತ ಮಂಡಳಿಗೆ ನೀಡಿರುವ ಮುಷ್ಕರದ ನೋಟಿಸ್ ಕುರಿತ ವಿವಾದವು ಕಾರ್ಮಿಕ ಆಯುಕ್ತರ ಮುಂದೆ ರಾಜೀ ಸಂಧಾನದ ಹಂತದಲ್ಲಿದೆ. ನೌಕರರು ಮುಷ್ಕರದಲ್ಲಿ ಪಾಲ್ಗೊಳ್ಳದೇ ದೈನಂದಿನ ಕರ್ತವ್ಯಕ್ಕೆ ಹಾಜರಾಗಬೇಕು' ಎಂದು ತಿಳಿಸಿದ್ದಾರೆ.

ಉದ್ಯಮಿ ಅದಾನಿ ಪ್ರಕರಣ ಇತ್ಯರ್ಥ

ನವದೆಹಲಿ/ನ್ಯೂಯಾರ್ಕ್ (ಪಿಟಿಐ): ಉದ್ಯಮಿ ಗೌತಮ್ ಅದಾನಿ ವಿರುದ್ಧದ ಎಲ್ಲ ಕ್ರಿಮಿನಲ್ ಆರೋಪಗಳನ್ನು ಅಮೆರಿಕದ ನ್ಯಾಯಾಂಗ ಇಲಾಖೆಯು ಶಾಶ್ವತವಾಗಿ ಕೈಬಿಟ್ಟಿದೆ.

ಇದರಿಂದಾಗಿ ಅದಾನಿ ಸಮೂಹದ ವಿರುದ್ಧ ಅಮೆರಿಕದಲ್ಲಿ ನಡೆಯುತ್ತಿದ್ದ ಹಲವು ತನಿಖೆಗಳು ಕಳೆದ ಎರಡು ದಿನಗಳಲ್ಲಿ ಅಂತ್ಯ ಕಂಡಂತೆ ಆಗಿದೆ.

ವಿವರ ▶ 8

ಚಿನಕುರುಳಿ ಪ್ರಕಾಶ್ ಶೆಟ್ಟಿ

ಕೇರಳಂ: ಸ್ತ್ರೀಗಳ್‌ಗೆ ಉಚಿತ ಯಾನ

ಪ್ರಜಾವಾಣಿ ವಾರ್ತೆ/ಪಿಟಿಐ

ತಿರುವನಂತಪುರ (ಪಿಟಿಐ): ಕೇರಳಂ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಬಸ್‌ಗಳಲ್ಲಿ ಜೂನ್ 15ರಿಂದ ಮಹಿಳೆಯರಿಗೆ (ಸ್ತ್ರೀಗಳ್) ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಲಾಗುವುದು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರಿಗೆ ಗೌರವಧನ ಹೆಚ್ಚಳ ಮಾಡಲಾಗುವುದು ಮತ್ತು ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಇಲಾಖೆ ರಚಿಸಲಾಗುವುದು ಎಂದು ಕೇರಳಂನ ನೂತನ ಮುಖ್ಯಮಂತ್ರಿ ವಿ.ಡಿ.ಸತೀಶನ್ ಘೋಷಿಸಿದರು.

ಈ ಮೂಲಕ ಕೇರಳಂನ ನೂತನ ಸರ್ಕಾರವು, ವಿಧಾನಸಭಾ ಚುನಾವಣೆ ವೇಳೆ ನೀಡಿದ್ದ ಭರವಸೆಗಳ ಜಾರಿಗೆ ಮುಂದಾಗಿದೆ.

ಮುಖ್ಯಮಂತ್ರಿಯಾಗಿ ಸೋಮವಾರ ಅಧಿಕಾರ ಸ್ವೀಕರಿಸದ ಬೆನ್ನಲ್ಲೇ ಮೊದಲ ಸಚಿವ ಸಂಪುಟ ಸಭೆ ನಡೆಸಿದ ಸತೀಶನ್ ಅವರು, ಸಂಪುಟ ತೆಗೆದುಕೊಂಡ ನಿರ್ಧಾರಗಳನ್ನು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಯೋಜನೆ ಕುರಿತು ವಿವರವಾದ ಮಾರ್ಗಸೂಚಿಯನ್ನು ಶೀಘ್ರದಲ್ಲಿಯೇ ಹೊರಡಿಸಲಾಗುವುದು ಎಂದ ಅವರು, ದೇಶದಲ್ಲಿಯೇ ಮೊದಲ ಬಾರಿಗೆ ವೃದ್ಧರಿಗಾಗಿ ಪ್ರತ್ಯೇಕ ಇಲಾಖೆ ರಚಿಸುವ ನಿರ್ಧಾರವನ್ನು ಸಂಪುಟ ತೆಗೆದುಕೊಂಡಿದೆ ಎಂದರು.

ಜಪಾನ್ ಮಾದರಿಯಲ್ಲಿ ಹಿರಿಯ ನಾಗರಿಕರಿಗೆ ಬೆಂಬಲ ನೀಡುವುದರ ಜತೆಗೆ ಆರೈಕೆ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ವೃದ್ಧರ ಜೀವನ ಗುಣಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಕೇರಳ ಮಾದರಿಯಾಗಲಿದೆ ಎಂದು ಹೇಳಿದರು.

ಗೌರವಧನ ಹೆಚ್ಚಳ: ಆಶಾ ಕಾರ್ಯಕರ್ತರ ಪ್ರತಿಭಟನೆಗಳ ಸಂದರ್ಭದಲ್ಲಿ ನೀಡಿದ್ದ ಭರವಸೆ ಈಡೇರಿಸುವತ್ತ ಗಮನ ನೀಡಲಾಗಿದ್ದು, ಅವರ ಗೌರವಧನವನ್ನು ತಿಂಗಳಿಗೆ ₹3,000 ಹೆಚ್ಚಿಸಲು ಸಂಪುಟ ಒಪ್ಪಿಗೆ ನೀಡಿದೆ. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಶಾಲಾ ಅಡುಗೆ ಸಿಬ್ಬಂದಿ, ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಆಯಾಗಳಿಗೆ ತಿಂಗಳಿಗೆ ತಲಾ ₹ 1,000 ವೇತನ ಹೆಚ್ಚಳಕ್ಕೆ ಅನುಮೋದನೆ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಬಂಗಾಳದಲ್ಲೂ ಬಸ್ ಪ್ರಯಾಣ ಉಚಿತ ಇಮಾಮ್, ಅರ್ಚಕರ 'ಧನ'ಕ್ಕೆ ಕೊಕ್

ಕೋಲ್ಕತ್ತ (ಪಿಟಿಐ): ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಪಶ್ಚಿಮ ಬಂಗಾಳ ಸರ್ಕಾರವು, ಸೋಮವಾರ ನಡೆದ ಮೊದಲ ಸಂಪುಟ ಸಭೆಯಲ್ಲಿ ಇಮಾಮ್‌ಗಳು ಹಾಗೂ ಅರ್ಚಕರಿಗೆ ನೀಡುತ್ತಿದ್ದ ಗೌರವಧನ ಸ್ಥಗಿತಗೊಳಿಸುವುದೂ ಸೇರಿದಂತೆ ಹಲವು ಮಹತ್ವದ ನಿರ್ಧಾರಗಳನ್ನು ಕೈಗೊಂಡಿದೆ.

ಧರ್ಮಾಧಾರಿತ ಗುಂಪುಗಳಿಗೆ ನೀಡುತ್ತಿದ್ದ ನೆರವು ಯೋಜನೆಯನ್ನು ಜೂನ್‌ನಿಂದ ಕೈಬಿಡಲು ಸರ್ಕಾರ ನಿರ್ಧರಿಸಿದೆ. ಇದರಿಂದ ಇಮಾಮ್‌ಗಳು, ಅರ್ಚಕರಿಗೆ ಸಿಗುತ್ತಿದ್ದ ಗೌರವಧನ ಸ್ಥಗಿತಗೊಳ್ಳಲಿದೆ. ಮಮತಾ ಬ್ಯಾನರ್ಜಿ ನೇತೃತ್ವದ ಈ ಹಿಂದಿನ ಸರ್ಕಾರ, ನೋಂದಾಯಿತ ಮಸೀದಿಗಳ ಇಮಾಮ್‌ಗಳಿಗೆ ತಿಂಗಳಿಗೆ ₹3,000 ಮತ್ತು ಪುರೋಹಿತರಿಗೆ ತಿಂಗಳಿಗೆ ₹2,000 ಗೌರವಧನ ನೀಡುತ್ತಿತ್ತು.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಸಚಿವೆ ಅಗ್ನಿಮಿತ್ರ ಪೌಲ್ ಅವರು, ಮಹಿಳೆಯರಿಗೆ ಜೂನ್ 1ರಿಂದ ಪ್ರತಿ ತಿಂಗಳು ₹3,000 ನೆರವು ನೀಡುವ 'ಅನ್ನಪೂರ್ಣ' ಯೋಜನೆ ಜಾರಿಗೆ ಹಾಗೂ ಮಹಿಳೆಯರು ರಾಜ್ಯದ ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಸಂಪುಟ ಅನುಮೋದನೆ ನೀಡಿದೆ' ಎಂದು ತಿಳಿಸಿದರು.

▶ 4

ಆರ್ಥಿಕ ಭಯೋತ್ಪಾದನೆ ಪ್ರಕರಣದ ಆರೋಪಿಗೆ ಜಾಮೀನು ನೀಡಿದ 'ಸುಪ್ರೀಂ'

ಯುಎಪಿಎ: ಜಾಮೀನು ನಿರಾಕರಣೆ ಬೇಡ

ನವದೆಹಲಿ(ಪಿಟಿಐ): 'ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಜಾಮೀನು ನಿರಾಕರಿಸಬಹುದು' ಎಂಬ ಅಂಶ ಕಾನೂನುಬಾಹಿರ ಚಟುವಟಿಕೆ ನಿಯಂತ್ರಣ ಕಾಯ್ದೆಯಡಿ (ಯುಎಪಿಎ) ದಾಖಲಾದ ಪ್ರಕರಣಗಳಿಗೂ ಅನ್ವಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಜಮ್ಮು–ಕಾಶ್ಮೀರದಲ್ಲಿ ಮಾದಕವಸ್ತು ಪೂರೈಕೆ ಮತ್ತು ಭಯೋತ್ಪಾದನೆಗೆ ಹಣಕಾಸು ನೆರವು ನೀಡುತ್ತಿರುವ ಗಡಿಯಾಚೆಗಿನ ಜಾಲದಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿರುವ ಹಂದ್ವಾಡದ ನಿವಾಸಿ ಸೈಯದ್ ಇಫ್ತಿಕರ್ ಅಂದ್ರಾಬಿಯ ಜಾಮೀನು ಅರ್ಜಿಯ ವಿಚಾರಣೆ ಕಾಲಕ್ಕೆ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಅಂದ್ರಾಬಿಗೆ ಜಾಮೀನು ಮಂಜೂರನ್ನೂ ಮಾಡಿದೆ.

ಆರೋಪಿಯು ತನ್ನ ಪಾಸ್‌ಪೋರ್ಟ್ ಅನ್ನು ಪೊಲೀಸರಿಗೆ ಒಪ್ಪಿಸುವಂತೆ ಮತ್ತು 15 ದಿನಗಳಿಗೊಮ್ಮೆ ಸ್ಥಳೀಯ ಠಾಣೆಗೆ ಹಾಜರಾಗುವಂತೆ ನ್ಯಾಯಮೂರ್ತಿಗಳಾದ ಬಿ.ವಿ ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರ ಪೀಠವು ಆದೇಶಿಸಿದೆ.

'ಯುಎಪಿಎಯಲ್ಲಿನ 43ಡಿ(5) ಸೆಕ್ಷನ್ ಅನಿರ್ದಿಷ್ಟಾವಧಿ ಜೈಲುಶಿಕ್ಷೆಯನ್ನು ಸಮರ್ಥಿಸುವುದಿಲ್ಲ ಮತ್ತು ಅದು ಸಂವಿಧಾನದ 21 ಮತ್ತು 22ನೇ ವಿಧಿಯ ಅಡಿ ಕಾರ್ಯನಿರ್ವಹಿಸಬೇಕು. ಈ ಸೆಕ್ಷನ್‌ಗಳು ಕಠಿಣ ಜಾಮೀನು ಷರತ್ತುಗಳನ್ನು ವಿವರಿಸುತ್ತವೆ' ಎಂದು ನ್ಯಾಯಪೀಠ ಹೇಳಿದೆ.

'ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಜಾಮೀನು ನಿರಾಕರಿಸಬಹುದು' ಎಂಬುದು 21, 22ನೇ ವಿಧಿಗೆ ಸಂಬಂಧಿಸಿದ ಸಾಂವಿಧಾನಿಕ ತತ್ವವಾಗಿದೆ' ಎಂದು ಹೇಳಿದೆ.

ಯುಎಪಿಎ ಮತ್ತು ಐಪಿಸಿ ಅಡಿ 2020ರಲ್ಲಿ ಈ ಸಂಬಂಧ ದಾಖಲಾಗಿರುವ ಪ್ರಕರಣದ ತನಿಖೆಯನ್ನು ಎನ್‌ಐಎ ನಡೆಸುತ್ತಿದೆ.

ಭಯೋತ್ಪಾದಕರ ಜೊತೆ ಸಂಪರ್ಕದಲ್ಲಿ ಇದ್ದುದು ಮೊಬೈಲ್ ಫೋನ್ ದಾಖಲೆಗಳ ಪರಿಶೀಲನೆಯಲ್ಲಿ ಪತ್ತೆಯಾಗಿದೆ ಎಂಬ ಕಾರಣಕ್ಕೆ ತನ್ನ ಜಾಮೀನು ಅರ್ಜಿಯನ್ನು ವಜಾಗೊಳಿಸಿದ್ದ ಜಮ್ಮು–ಕಾಶ್ಮೀರದ ಮತ್ತು ಲಡಾಖ್ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಅಂದ್ರಾಬಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಯುಎಪಿಎ ಪ್ರಕರಣದಲ್ಲಿ ಜಾಮೀನು ನೀಡುವ ಕುರಿತು ಕೆ.ಎ ನಜೀಬ್ ಪ್ರಕರಣಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ 2021ರಲ್ಲಿ ಮಹತ್ವದ ತೀರ್ಪು ನೀಡಿತ್ತು. ಇದನ್ನು ವಿಚಾರಣಾ ನ್ಯಾಯಾಲಯಗಳು, ಹೈಕೋರ್ಟ್ ಮತ್ತು ತನ್ನದೇ ಪೀಠಗಳು ತಳ್ಳಿಹಾಕುವಂತಿಲ್ಲ ಎಂದು ಹೇಳಿತ್ತು.

ಉಮರ್ ಖಾಲಿದ್ ಜಾಮೀನು ನಿರಾಕರಣೆಗೆ ಅಸಮಾಧಾನ

'ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಜಾಮೀನು ನಿರಾಕರಿಸಬಹುದು' ಎಂಬುದು ಕೇವಲ ಶಾಸನಬದ್ಧ ಘೋಷಣೆಯಲ್ಲ ಎಂದು ಹೇಳಿದ ಸುಪ್ರೀಂ ಕೋರ್ಟ್‌ನ ನ್ಯಾಯಪೀಠ, ದೆಹಲಿ ಗಲಭೆ ಪ್ರಕರಣ ದಲ್ಲಿ ಹೋರಾಟಗಾರರಾದ ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್‌ಗೆ ಜಾಮೀನು ನೀಡಲು ನಿರಾಕರಿಸಿರುವ ಮತ್ತೊಂದು ಪೀಠದ ತೀರ್ಪನ್ನು ಪ್ರಶ್ನಿಸಿತು.

'ಕೆ.ಎ ನಜೀಬ್ ಪ್ರಕರಣದ ತೀರ್ಪಿನ ಪಾಲನೆ ಸರಿಯಾಗಿ ಆಗಿಲ್ಲ' ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿತು. ಖಾಲಿದ್ ಮತ್ತು ಶರ್ಜೀಲ್‌ಗೆ ಜಾಮೀನು ನೀಡಲು ಜನವರಿ 5ರಂದು ನಿರಾಕರಿಸಿದ್ದ ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಎನ್.ವಿ ಅಂಜಾರಿಯ ಅವರ ಪೀಠವು, 'ಆರೋಪಿಗಳು ಒಂದು ವರ್ಷದ ಬಳಿಕವಷ್ಟೆ ಜಾಮೀನಿಗೆ ಅರ್ಜಿ ಸಲ್ಲಿಸಬಹುದು' ಎಂದು ಹೇಳಿತ್ತು. ಈ ಆದೇಶದ ಹಲವು ಅಂಶಗಳನ್ನು ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಟೀಕಿಸಿದರು.

ಸೂರ್ಯೋದಯ: 5:54 ಸೂರ್ಯಾಸ್ತ : 6:38 ಚಂದ್ರೋದಯ: ಬೆ. 7:01 ಚಂದ್ರಾಸ್ತ: ರಾ. 8:31 | ಸೋಮವಾರದ ಉಷ್ಣಾಂಶ : ಗರಿಷ್ಠ 34° ಕನಿಷ್ಠ 22°

ಮಂಗಳವಾರ ● ಮೇ 19, 2026

ಮಂಗಳವಾರದ ಉಷ್ಣಾಂಶ 33° ಗರಿಷ್ಠ 22° ಕನಿಷ್ಠ | ಬುಧವಾರ 34° : 22° | ಗುರುವಾರ 35° : 22° | ಶುಕ್ರವಾರ 35° : 22°

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು–ಮಿಂಚು ಸಹಿತ ಮಳೆಯಾಗುವ ಸಾಧ್ಯತೆ

ಸಾರಿಗೆ ನೌಕರರ ಮುಷ್ಕರ: ಪಿಐಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಸಂಸ್ಥೆಗಳ ಜಂಟಿ ಕ್ರಿಯಾ ಸಮಿತಿ ಕರೆ ಕೊಟ್ಟಿರುವ ಮುಷ್ಕರವನ್ನು ಆಕ್ಷೇಪಿಸಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.

ಮನೆ ಕೆಲಸಗಾರ್ತಿ ಸಿ.ವೀರಾವತಿ ಹಾಗೂ ಕಟ್ಟಡ ಕಾರ್ಮಿಕ ಎಚ್.ವಿ. ಶ್ರೀಧರ ಸಲ್ಲಿಸಿರುವ ಈ ಅರ್ಜಿ ಮಂಗಳವಾರ ರಜಾಕಾಲದ ವಿಭಾಗೀಯ ನ್ಯಾಯಪೀಠದಲ್ಲಿ ವಿಚಾರಣೆಗೆ ನಿಗದಿಯಾಗಿದೆ.

'ಕೂಡಲೇ ಮುಷ್ಕರ ಹಿಂಪಡೆಯಲು ಸಮಿತಿಗೆ ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಆಕ್ಷೇಪ: 'ಉದ್ದೇಶಿತ ಮುಷ್ಕರದ ಅವಧಿಯಲ್ಲಿ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗಳು ನಡೆಯಲಿವೆ. ಸಾರ್ವಜನಿಕ ಬಸ್‌ಗಳನ್ನೇ ಅವಲಂಬಿಸಿರುವ ವಿದ್ಯಾರ್ಥಿಗಳಿಗೆ ಮುಷ್ಕರದಿಂದ ಗಂಭೀರ ಸಮಸ್ಯೆ ಎದುರಾಗಲಿದೆ. ದಿನಗೂಲಿ ಕಾರ್ಮಿಕರು, ರೋಗಿಗಳು, ವಯಸ್ಸಾದವರು ಮತ್ತು ಆರ್ಥಿಕವಾಗಿ ದುರ್ಬಲರೂ ಸಾರ್ವಜನಿಕ ಬಸ್ ಸೇವೆಯನ್ನೇ ಅವಲಂಬಿಸಿದ್ದು, ಅವರಿಗೂ ತೊಂದರೆ ಉಂಟಾಗಲಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಮನೆ ಕೊಡಿಸುವ ನೆಪದಲ್ಲಿ ವಂಚನೆ

ಭೋಗ್ಯಕ್ಕೆ ಮನೆ ನೀಡುವುದಾಗಿ ಹಣ ಪಡೆದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಪನಿ ಕಡೆಯಿಂದಲೇ ಭೋಗ್ಯಕ್ಕೆ ಮನೆಯನ್ನು ಕೊಡಿಸುವುದಾಗಿ ನಂಬಿಸಿ ಹಲವರಿಂದ ಕೋಟ್ಯಂತರ ರೂಪಾಯಿ ಹೂಡಿಕೆ ಮಾಡಿಸಿಕೊಂಡು ವಂಚಿಸಿರುವ ಪ್ರಕರಣವೊಂದು ಇಂದಿರಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪತ್ತೆ ಆಗಿದೆ.

'ಜೋನ್ಸ್ ಅಸೆಟ್ ಮ್ಯಾನೇಜ್‌ಮೆಂಟ್' ಹೆಸರಿನ ಮಧ್ಯವರ್ತಿ ಕಂಪನಿಯ ಮಾಲೀಕ ಸ್ಟೀಫನ್ ಆರ್ಥರ್ ಜೋನ್ಸ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಸೆಕ್ಷನ್ 316((2), 318(4) ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ.

ಹೆಣ್ಣೂರು ಮುಖ್ಯರಸ್ತೆಯ ನಿವಾಸಿ ಡಿ. ಕ್ಲಿಫರ್ಡ್ ರಾಯನ್ ದೂರು ನೀಡಿದ್ದಾರೆ. ಕ್ಲಿಫರ್ಡ್ ಅಲ್ಲದೆ ಆರ್.ಮಂಗಳಾ, ಎ.ರವಿಕುಮಾರ್, ಎಸ್. ಪ್ರಕಾಶ್ ಸೇರಿದಂತೆ ಸುಮಾರು 300 ಜನರಿಂದ ಹಣ ಪಡೆದು ಸ್ಟೀಫನ್ ಜೋನ್ಸ್ ವಂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಯನ್ ಅವರು 2025ರಲ್ಲಿ ಬಾಡಿಗೆಗೆ ಮನೆ ಹುಡುಕಾಟ ನಡೆಸುತ್ತಿದ್ದರು. ಆ ಸಂದರ್ಭದಲ್ಲಿ ಜಾನ್ಸ್ ಅಸೆಟ್ ಮ್ಯಾನೇಜ್‌ಮೆಂಟ್‌ನ ಅಬ್ದುಲ್ ಹಾಗೂ ವ್ಯವಸ್ಥಾಪಕ ಸವಿತಾ ಪರಿಚಯವಾಗಿತ್ತು. ಕಂಪನಿ ಕಡೆಯಿಂದಲೇ ಭೋಗ್ಯಕ್ಕೆ ಮನೆ ಕೊಡಿಸುವುದಾಗಿ ನಂಬಿಸಿದ್ದರು. ಎಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿದ್ದ ಜೋನ್ಸ್ ಪ್ರಾಪರ್ಟಿ ಮ್ಯಾನೇಜ್‌ಮೆಂಟ್‌ನ ಬ್ಯಾಂಕ್ ಖಾತೆಗೆ ವಿವಿಧ ಹಂತದಲ್ಲಿ ಆನ್‌ಲೈನ್ ಮೂಲಕ ₹21 ಲಕ್ಷವನ್ನು ವರ್ಗಾವಣೆ ಮಾಡಿದ್ದರು. 2025ರ ಆಗಸ್ಟ್ 12ರಂದು ಜೋನ್ಸ್ ಪ್ರಾಪರ್ಟಿ ಕಂಪನಿಯು ಮನೆಯ ಅಸಲಿ ಮಾಲೀಕರಾದ ರಾಜು ಬೆನೆಡಿಕ್ಟ್‌ಗೆ ಬಾಡಿಗೆ ಹಣ ನೀಡುವುದಾಗಿ ಒಪ್ಪಂದ ಮಾಡಿಕೊಂಡಿತ್ತು. ಅದಾದ ಮೇಲೆ ರಾಯನ್ ಕುಟುಂಬವು ಬಾಡಿಗೆ ಮನೆಗೆ ತೆರಳಿ ವಾಸವಿತ್ತು. 2026ರ ಮೇ 1ರಂದು ರಾಜು ಬೆನೆಡಿಕ್ಟ್ ಅವರು ರಾಯನ್‌ಗೆ ಕರೆ ಮಾಡಿ ಕಳೆದ ಆರು ತಿಂಗಳಿಂದ ಜೋನ್ಸ್ ಪ್ರಾಪರ್ಟಿ ಕಡೆಯಿಂದ ಬಾಡಿಗೆ ಪಾವತಿ ಆಗಿಲ್ಲ. ತಕ್ಷಣವೇ ಮನೆ ಖಾಲಿ ಮಾಡುವಂತೆ ಸೂಚಿಸಿದ್ದರು ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಆತಂಕಗೊಂಡಿದ್ದ ಬಾಡಿಗೆದಾರ ರಾಯನ್ ಅವರು ಕಂಪನಿಯ ಮಾಲೀಕರನ್ನು ವಿಚಾರಿಸಲು ಕಚೇರಿ ಬಳಿಗೆ ತೆರಳಿದ್ದರು. ಅಲ್ಲಿ ಯಾರೂ ಇರಲಿಲ್ಲ. ಕರೆಯನ್ನೂ ಸ್ವೀಕರಿಸಿರಲಿಲ್ಲ. ಬಳಿಕ ಠಾಣೆಗೆ ದೂರು ನೀಡಿದ್ದರು ಎಂದು ಮೂಲಗಳು ಹೇಳಿವೆ.

ತಲೆಮರೆಸಿಕೊಂಡಿರುವ ಆರೋಪಿ: ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ. ಆರೋಪಿ ತಲೆಮರೆಸಿಕೊಂಡಿದ್ದಾರೆ.

ಬಡ್ಡಿ ನೀಡುವುದಾಗಿ ಭರವಸೆ

ಕಂಪನಿಗೆ ₹37 ಲಕ್ಷ ನೀಡಿದ್ದ ಮನೆಯ ಮಾಲೀಕರಿಗೆ ಕಂಪನಿ ಬಾಡಿಗೆ ಪಾವತಿ ಮಾಡಿರಲಿಲ್ಲ. ವಿಚಾರಿಸಲು ಕಂಪನಿಯ ಬಳಿಗೆ ಹೋಗಿದ್ದೆ. ಆಗ ಹಣ ನೀಡಲು ನಿರಾಕರಿಸಿದ್ದ ಕಂಪನಿಯವರು, ತಿಂಗಳಿಗೆ ಶೇ 4ರಷ್ಟು ಬಡ್ಡಿ ನೀಡುವುದಾಗಿ ಹೇಳಿದ್ದರು. ಕಂಪನಿ ಮಾತು ನಂಬಿ ಹೂಡಿಕೆ ಮಾಡಿದ್ದೆ, ಎರಡು ತಿಂಗಳು ಬಾಡಿಗೆ ಪಾವತಿಸಿ ಬಳಿಕ ವಂಚಿಸಿತ್ತು

ಗಾಯತ್ರಿ, ವಂಚನೆಗೆ ಒಳಗಾದವರು

ಪ್ರಕರಣ ಸಿಐಡಿಗೆ ವರ್ಗ

ಸ್ಟೀಫನ್ ಜೋನ್ಸ್ ವಿರುದ್ಧ 2021ರಲ್ಲಿ ಚಂದ್ರಲೇಔಟ್ ಪೊಲೀಸ್ ಠಾಣೆಯಲ್ಲಿಯೂ ಎಫ್‌ಐಆರ್ ದಾಖಲಾಗಿತ್ತು. ಚಂದ್ರಾಲೇಔಟ್ ನಿವಾಸಿ ಸತೀಶ್ ಎಂಬುವರಿಗೆ ಲಕ್ಷಾಂತರ ರೂಪಾಯಿ ವಂಚಿಸಿದ್ದರು. ಜೋನ್ಸ್ ಪ್ರಾಪರ್ಟಿ ಮ್ಯಾನೇಜ್‌ಮೆಂಟ್ ಕಂಪನಿಯು ಸುಮಾರು ₹200 ಕೋಟಿಗೂ ಅಧಿಕ ವಂಚನೆ ಮಾಡಿದೆ ಎಂಬ ಆರೋಪ ಇದೆ. ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿದೆ.

ವಂಚನೆ ಹೇಗೆ?

ನಗರದಲ್ಲಿ ವಾಸಿಸಲು ಭೋಗ್ಯಕ್ಕೆ ಮನೆಗಳ ಕೊರತೆ ಇರುವುದನ್ನು ಬಂಡವಾಳ ಮಾಡಿಕೊಂಡಿದ್ದ ಕಂಪನಿ, 'ಭೋಗ್ಯಕ್ಕೆ ಹಣವನ್ನು ತಮ್ಮಲ್ಲಿ ಹೂಡಿಕೆ ಮಾಡಿದರೆ, ಮನೆ ಹುಡುಕಿ ತಿಂಗಳ ಬಾಡಿಗೆಯನ್ನು ತಾವೇ ಪಾವತಿ ಮಾಡುವುದಾಗಿ' ನಂಬಿಸುತ್ತಿತ್ತು. ಸಾಕಷ್ಟು ಜನ ಭೋಗ್ಯಕ್ಕೆ ನೀಡುವ ಹಣವನ್ನು ಕಂಪನಿಯಲ್ಲಿ ಹೂಡಿಕೆ ಮಾಡುತ್ತಿದ್ದರು.

ಪ್ರತಿಯೊಬ್ಬರಿಂದ ₹10ರಿಂದ ₹75 ಲಕ್ಷದವರೆಗೂ ಈ ಕಂಪನಿ ಹಣ ಪಡೆದಿತ್ತು. ಆರಂಭದಲ್ಲಿ ಕೆಲವು ತಿಂಗಳುಗಳ ಕಾಲ ಬಾಡಿಗೆ ಪಾವತಿಸುತ್ತಿದ್ದ ಕಂಪನಿ ನಂತರ ಬಾಡಿಗೆ ಪಾವತಿಸದೆ ವಂಚಿಸುತ್ತಿತ್ತು.

ಇದೇ ರೀತಿಯ ವಂಚನೆ ಪ್ರಕರಣದಲ್ಲಿ ಸ್ಟೀಫನ್ ಆರ್ಥರ್ ಜೋನ್ಸ್ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ಕೆಲವು ತಿಂಗಳ ಹಿಂದೆ ಆರೋಪಿ ಜಾಮೀನು ಪಡೆದು ಜೈಲಿನಿಂದ ಬಿಡುಗಡೆ ಆಗಿದ್ದರು. ಬಿಡುಗಡೆಯಾದ ಮೇಲೂ ಅದೇ ರೀತಿಯ ವಂಚನೆ ನಡೆಸಿದ್ದಾರೆ.

ಅಧಿಕಾರಿಗೆ ಬೆದರಿಕೆ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಸ್ಟಮ್ಸ್ ಅಧಿಕಾರಿಗೆ ಬೆದರಿಕೆ ಹಾಕಿರುವ ಆರೋಪದಡಿ ಕೃಪಲಾನಿ ವಿರುದ್ಧ ಹಲಸೂರು ಪೊಲೀಸ್ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಈ ಹಿಂದೆ ಕಳ್ಳ ಸಾಗಣೆ ಪ್ರಕರಣದಲ್ಲಿ ಕೃಪಲಾನಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಇದೀಗ ಮತ್ತೊಂದು ಪ್ರಕರಣ ದಾಖಲಾಗಿದೆ.

ಮಂಗಳೂರಿನಲ್ಲಿ ಕಸ್ಟಮ್ಸ್ ಅಧಿಕಾರಿ ಆಗಿರುವ ಆಂಥೋನಿ ದೂರು ದಾಖಲಿಸಿದ್ದಾರೆ. ಈ ಹಿಂದೆ ಕಳ್ಳ ಸಾಗಣೆ ಪ್ರಕರಣದಲ್ಲಿ ಕೃಪಲಾನಿ ಸಿಲುಕಿಕೊಂಡಿದ್ದರು. ಈ ಸಂಬಂಧ ಕೃಪಲಾನಿಗೆ ಅಧಿಕಾರಿ ಆಂಥೋನಿ ₹8.50 ಲಕ್ಷ ದಂಡ ವಿಧಿಸಿದ್ದರು.

ದಂಡ ವಿಧಿಸಿದ್ದ ಅಧಿಕಾರಿ ವಿರುದ್ಧ ಸೇಡು ತೀರಿಸಿಕೊಳ್ಳಲು ಕರೆ ಮಾಡಿ ಬೆದರಿಕೆ ಹಾಕಿರುವ ಆರೋಪ ಇದೆ ಎಂದು ಪೊಲೀಸರು ಹೇಳಿದರು.

ಹೆಂಡತಿ ಮಕ್ಕಳನ್ನು ಬಿಡುವುದಿಲ್ಲ: 'ಆರೋಪಿ ಕರೆ ಮಾಡಿ ಎಂಟು ಜಿ.ಬಿಯ ಪೆನ್‌ಡ್ರೈವ್ ಕಳುಹಿಸಿದ್ದಾನೆ. ಅದನ್ನು ಲ್ಯಾಪ್‌ಟಾಪ್‌ನಲ್ಲಿ ಹಾಕಿ ಕೇಳಿಸಿಕೊಂಡಾಗ, ಬೆದರಿಕೆ ಹಾಕಿರುವುದು ಗೊತ್ತಾಯಿತು. ನನ್ನ ಕುಟುಂಬವನ್ನು ಜೀವಂತವಾಗಿ ಬಿಡುವುದಿಲ್ಲ. ಹೆಂಡತಿ ಮಕ್ಕಳನ್ನೂ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದಾನೆ. ನಾನು ಮಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು, ಕುಟುಂಬಸ್ಥರು ಬೆಂಗಳೂರಿನಲ್ಲಿ ವಾಸವಿದ್ದಾರೆ. ಕೃಪಲಾನಿಯಿಂದ ಭಯವಿದ್ದು, ಆತನ ವಿರುದ್ಧ ಕ್ರಮ ತೆಗೆದುಕೊಳ್ಳಿ' ಎಂದು ದೂರಿನಲ್ಲಿ ಆಂಥೋನಿ ಕೋರಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂ. ಮು.ಇಂ(ವಿ)/ಪ್ರ(ಕಾ)ವಬೆ/ಅಇಂ(ಕ)/ಸ.ಕಾ.ನಿ.ಇಂ–3/ಕ–306(2)/ಜಿಬಿಆರ್/2026–27/1491–92 ದಿನಾಂಕ : 15.05.2026

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿ **ವಿಚಾರಣೆ ಸಂಖ್ಯೆ : ಕವಿಪ್ರನಿನಿ/ಮು.ಇಂ(ವಿ)/ಪ್ರ(ಕಾ)ವ/ಬೆಂ.ವ/ಪಿ.ಟಿ.ಕೆ–20 (ಕರೆ–3)** ರಲ್ಲಿ ದೊಡ್ಡಬಳ್ಳಾಪುರ, ಕಾರ್ಯಾಚರಣೆ ವಿಭಾಗದ **66/11ಕೆವಿ ನಲ್ಲಿಮರದಹಳ್ಳಿ** ಉಪಕೇಂದ್ರದಲ್ಲಿ 11ಕೆವಿ ಫೀಡರನ್ನು ವಿಭಜಿಸಲು 3 ಸಂಖ್ಯೆಯ 11ಕೆವಿ MCVCB ಸ್ವಿಚ್‌ಗೇರ್ ಫೀಡರ್ ಪ್ಯಾನಲ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ಭಾಗಶಃ ಗುತ್ತಿಗೆ ಆಧಾರದ ಮೇಲೆ (Partial Turnkey basis) ಎಲ್ಲಾ ಸರಿ ಹೊಂದುವ ಸಾಮಗ್ರಿಗಳ/ ಉಪಕರಣಗಳ ಸರಬರಾಜು (11ಕೆ.ವಿ ಸ್ವಿಚ್‌ಗೇರ್ ಫೀಡರ್ ಪ್ಯಾನಲ್‌ಗಳನ್ನು ಹೊರತುಪಡಿಸಿ), ಪರೀಕ್ಷೆ, ನಿರ್ಮಾಣ ಕಾರ್ಯ (ಸಿವಿಲ್ ಕಾಮಗಾರಿಗಳನ್ನು ಒಳಗೊಂಡಂತೆ) ಮತ್ತು ಕಾರ್ಯಾರಂಭಗೊಳಿಸಲು ಬಿಡ್ ಅನ್ನು ಆಹ್ವಾನಿಸಲಾಗಿದೆ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರವೇ ಸ್ವೀಕರಿಸಲಾಗುತ್ತದೆ. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿನ ವಿಷಯದ ವಿಚಾರಣೆಯ ಕುರಿತು ವಿವರವಾದ ಅಧಿಸೂಚನೆಯನ್ನು ದಿನಾಂಕ: **25.05.2026** ರಂದು ಅಥವಾ ನಂತರ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಇನ್ನಿತರ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್),
ಪ್ರಸರಣ (ಕಾರ್ಯಾಚರಣೆ) ವಲಯ, ಕ.ವಿ.ಪ್ರ.ನಿ.ನಿ.
ಆನಂದರಾವ್ ವೃತ್ತ, ಬೆಂಗಳೂರು–09

ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಗಣೇಶ್ ಸೈಕಲ್ ಮಾರ್ಟ್ ಹತ್ತಿರ, ಗೌರಿಬಿದನೂರು, Email:cdpogbd@gmail.com, ದೂ:08155–284168

ಸಂ:ಶಿಅಯೋ:ಗೌರಿಬಿ:ಅಂ.ಕಾ.ಸ.ನೆ.ಪ್ರ:2026–27 ದಿನಾಂಕ:15.05.2026

ಪ್ರಕಟಣೆ

ಗೌರಿಬಿದನೂರು ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 03 ಅಂಗನವಾಡಿ ಕಾರ್ಯಕರ್ತೆ ಹುದ್ದೆ ಹಾಗೂ 28 ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಗೌರವಧನದ ಆಧಾರದ ಮೇಲೆ ಸ್ಥಳೀಯ ಅರ್ಹ ಮಹಿಳಾ ಅಭ್ಯರ್ಥಿಗಳು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಅಭ್ಯರ್ಥಿಗಳಿಂದ ಆಫ್–ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸ್ಥಳೀಯ ಮಹಿಳಾ ಅಭ್ಯರ್ಥಿಗಳು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಅಭ್ಯರ್ಥಿಗಳು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಗೌರಿಬಿದನೂರು, ಇವರಿಂದ ಉಚಿತವಾಗಿ ಅರ್ಜಿ ನಮೂನೆ ಪಡೆದು ಭರ್ತಿ ಮಾಡಿದ ಅರ್ಜಿ ನಮೂನೆ ಮತ್ತು ಅಗತ್ಯ ದಾಖಲಾತಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ನೇಮಕಾತಿ ಅರ್ಜಿಗಳ ಬಾಕ್ಸ್‌ನಲ್ಲಿ ಅರ್ಜಿಗಳನ್ನು **ದಿನಾಂಕ: 15.05.2026 ರಿಂದ ದಿನಾಂಕ: 20.06.2026ರ ಸಂಜೆ: 5:30 ರೊಳಗೆ ಸಲ್ಲಿಸಬಹುದಾಗಿದೆ.** ಖಾಲಿ ಹುದ್ದೆಗಳ ವಿವರ, ವಿದ್ಯಾರ್ಹತೆ, ವಯೋಮಿತಿ ಮೀಸಲಾತಿ ಇತ್ಯಾಧಿ ಹೆಚ್ಚಿನ ವಿವರಗಳನ್ನು ಸಂಬಂಧಪಟ್ಟ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗಣೇಶ್ ಸೈಕಲ್ ಮಾರ್ಟ್ ಹತ್ತಿರ, ಗೌರಿಬಿದನೂರು ಇಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿ, ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಅರ್ಜಿಗಳ ಪರಿಶೀಲನಾ ಸಮಿತಿ, ಗೌರಿಬಿದನೂರು ತಾಲ್ಲೂಕು

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:66/ಕೆಎಸ್‌ಎಂಸಿಎ/2026–27

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಸಂ:ಕರಾಸಾ/ಚಿಬವಿ/ಸಂ/ವಾ/324/2026–27 ದಿನಾಂಕ:16.05.2026

ಇ–ಟೆಂಡರ್ ಪ್ರಕಟಣೆ

ಚಿಕ್ಕಬಳ್ಳಾಪುರ ವಿಭಾಗದ ವ್ಯಾಪ್ತಿಯ ಚಿಕ್ಕಬಳ್ಳಾಪುರ, ಚಿಂತಾಮಣಿ ಘಟಕ, ಶಿಡ್ಲಘಟ್ಟ ಮುಖ್ಯ, ಶಿಡ್ಲಘಟ್ಟ ಮಿನಿ, ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು ಹಾಗೂ ದೊಡ್ಡಬಳ್ಳಾಪುರ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ & ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ ಹಾಗೂ ಜಾಹೀರಾತು ಹೋರ್ಡಿಂಗ್ಸ್ ಪ್ಯಾಕೇಜ್‌ಗಳಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿನಾಂಕ: 18.05.2026 ರಿಂದ ಇ–ಟೆಂಡರ್ ಪ್ರಕಟಣೆಯ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ದಿನಾಂಕ: **09.06.2026 ರ 17:00 ಗಂಟೆಗೆ** ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿರುತ್ತದೆ ಮತ್ತು ಇ–ಟೆಂಡರ್ ಡಿಡಿ (ಅರ್ಜಿ ಶುಲ್ಕ/ ಇ.ಎಂ.ಡಿ ಮೂಲ ಡಿ.ಡಿ) / ದಾಖಲಾತಿಗಳನ್ನು **ದಿನಾಂಕ: 10.06.2026 ಮತ್ತು 11.06.2026 ರಂದು ಸಮಯ 10.00 ರಿಂದ ಸಮಯ 17.00 ಗಂಟೆಯವರೆಗಿನ** ಅವಧಿಯಲ್ಲಿ ಈ ಕಛೇರಿಯಲ್ಲಿ ಸ್ವೀಕರಿಸಲಾಗುವುದು. **ದಿನಾಂಕ: 12.06.2026 ರಂದು ಬೆಳಗ್ಗೆ 10.01 ಗಂಟೆಗೆ** ಇ–ಟೆಂಡರ್‌ನ ತಾಂತ್ರಿಕ ಬಿಡ್ ಹಾಗೂ **ದಿನಾಂಕ: 13.06.2026 ರಂದು ಬೆಳಗ್ಗೆ 10.01 ಗಂಟೆಗೆ** ಇ–ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನವಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ನಿಗಮ, ಚಿಕ್ಕಬಳ್ಳಾಪುರ ವಿಭಾಗ ರವರ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ವಿಭಾಗೀಯ ಸಂಚಲನಾಧಿಕಾರಿ ಮೊಬೈಲ್ ಸಂ.7760990352.

–ಸಹಿ– ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ, ಚಿಕ್ಕಬಳ್ಳಾಪುರ ವಿಭಾಗ,
ಚಿಕ್ಕಬಳ್ಳಾಪುರ

ವಾಸಾಸಂಇ/ವಾಪ್ರ/ಜಿಎ/723/2026–27

ಹೃದಯ, ಬೆನ್ನುಮೂಳೆಯ ಶಸ್ತ್ರಚಿಕಿತ್ಸೆ ಉಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಟ್ಟಿನಿಂದಲೇ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ರಾಜ್ಯದಲ್ಲಿನ 50 ಮಕ್ಕಳಿಗೆ ಉಚಿತವಾಗಿ ಹೃದಯ, ಬೆನ್ನುಮೂಳೆ ಶಸ್ತ್ರಚಿಕಿತ್ಸೆ ನಡೆಸಲು ಕಾವೇರಿ ಗ್ರೂಪ್ ಆಫ್ ಹಾಸ್ಪಿಟಲ್ಸ್ ಮುಂದಾಗಿದೆ.

ಆಸ್ಪತ್ರೆಯು 'ಸಂಕಲ್ಪ 2.0: ಪುಟ್ಟ ಜೀವಕ್ಕೆ ಆಸರೆ' ಯೋಜನೆಯಡಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳ ಆರೋಗ್ಯ ರಕ್ಷಣೆ ನೀಡಲಿದೆ.

ನಗರದ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾಗಿದ್ದ 'ಕಾವೇರಿ ಮೆದುಳು ಹಾಗೂ ಹೃದಯ ಸಮ್ಮೇಳನ 2026' ಉದ್ಘಾಟನಾ ಸಮಾರಂಭದಲ್ಲಿ ಯೋಜನೆಗೆ ಚಾಲನೆ ನೀಡಲಾಯಿತು.

ಹೃದಯ ಕಾಯಿಲೆ ಇರುವ 25 ಮಕ್ಕಳಿಗೆ ಉಚಿತ ಕಾರ್ಡಿಯಾಕ್ ಶಸ್ತ್ರಚಿಕಿತ್ಸೆ ಮತ್ತು ಬೆನ್ನುಮೂಳೆಯ ಸಮಸ್ಯೆ ಇರುವ 25 ಮಕ್ಕಳಿಗೆ ಉಚಿತ ಶಸ್ತ್ರಚಿಕಿತ್ಸೆ ಮಾಡಲಾಗುವುದು. ಶಸ್ತ್ರಚಿಕಿತ್ಸೆ, ಅರಿವಳಿಕೆ, ಇಂಪ್ಲಾಂಟ್‌ಗಳು, ಆಸ್ಪತ್ರೆಯ ದಾಖಲಾತಿ ಮತ್ತು ಶಸ್ತ್ರಚಿಕಿತ್ಸೆಯ ನಂತರದ ಆರೈಕೆ ವೆಚ್ಚವನ್ನು ಕಾವೇರಿ ಆಸ್ಪತ್ರೆ ಸಿಎಸ್‌ಆರ್ ನಿಧಿಯಡಿ ಭರಿಸಲಿದೆ ಎಂದು ಕಾವೇರಿ ಆಸ್ಪತ್ರೆ ಬೆಂಗಳೂರು ಮತ್ತು ಹೊಸೂರು ವಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಸ್.ವಿಜಯ ಭಾಸ್ಕರನ್ ತಿಳಿಸಿದ್ದಾರೆ.

ಮಾಹಿತಿ, ನೋಂದಣಿಗೆ 89255 09186 (ಹೃದಯ), 94499 50028 (ಬೆನ್ನುಮೂಳೆ) ಕರೆ ಮಾಡಬಹುದು.

'ಪತ್ನಿ, ಪುತ್ರನ ಭೇಟಿಗೆ ಅವಕಾಶ ನೀಡಿ'

ಪ್ರಜಾವಾಣಿ ವಾರ್ತೆ

ದರ್ಶನ್

ಬೆಂಗಳೂರು: ಪತ್ನಿ ಹಾಗೂ ಪುತ್ರನ ಭೇಟಿಗೆ ಅವಕಾಶ ಕಲ್ಪಿಸುವಂತೆ ಕೋರಿ ಪರಪ್ಪನ ಅಗ್ರಹಾರ ಜೈಲಿನ ಮುಖ್ಯ ಅಧೀಕ್ಷಕ ಅಂಶುಕುಮಾರ್ ಅವರಿಗೆ ನಟ ದರ್ಶನ್ ಮನವಿ ಮಾಡಿದ್ದಾರೆ. ಮತ್ತೊಂದೆಡೆ ಪತ್ನಿ ವಿಜಯಲಕ್ಷ್ಮಿ ಸಹ ಕಾರಾಗೃಹದ ಮುಖ್ಯಸ್ಥ ಅಲೋಕ್ ಕುಮಾರ್ ಅವರಿಗೆ ಪತ್ರ ಬರೆದು ಪತಿಯ ಭೇಟಿಗೆ ಅವಕಾಶ ನೀಡುವಂತೆ ಕೋರಿದ್ದಾರೆ.

ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಅವರು ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

'ಮೇ 19ರಂದು ವಿವಾಹ ವಾರ್ಷಿಕೋತ್ಸವವಿದ್ದು, ಪತ್ನಿ ಮತ್ತು ಪುತ್ರನ ಭೇಟಿಗೆ ಅವಕಾಶ ನೀಡಬೇಕು. ಕುಟುಂಬಸ್ಥರು ಭೇಟಿಗೆ ಬಂದರೂ ಸರಿಯಾಗಿ ಮಾತನಾಡಲು ಆಗುತ್ತಿಲ್ಲ. ಗ್ರಿಲ್ ಅಡ್ಡ ಬರುತ್ತಿದೆ. ಆದ್ದರಿಂದ ಈ ಬಾರಿ ಕೊಠಡಿ ಒಳಗೆ ಮಾತುಕತೆ ಮತ್ತು ಭೇಟಿಗೆ ಅವಕಾಶ ಮಾಡಿಕೊಡಿ' ಎಂದು ದರ್ಶನ್ ಮನವಿ ಮಾಡಿದ್ದಾರೆ.

ದರ್ಶನ್ ಅವರನ್ನು ಮದುವೆಯಾಗಿ ಮೇ 19ಕ್ಕೆ 23 ವರ್ಷ ತುಂಬಲಿದೆ. ಹೀಗಾಗಿ ಅವರನ್ನು ಹತ್ತಿರದಿಂದ ಭೇಟಿ ಮಾಡಲು ಅವಕಾಶ ನೀಡಬೇಕು. ಅವರು ಮಾನಸಿಕವಾಗಿ ಕುಗ್ಗಿದ್ದು, ಆತ್ಮಸ್ಥೈರ್ಯ ತುಂಬಬೇಕಿದೆ. ಜೈಲಿನ ಕೈಪಿಡಿ ಅನ್ವಯ ಅವಕಾಶ ಮಾಡಿಕೊಡಿ ಎಂದು ವಿಜಯಲಕ್ಷ್ಮಿ ಅವರು ಅಲೋಕ್ ಕುಮಾರ್‌ಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ವಿಜಯಲಕ್ಷ್ಮಿ ಅವರು ಪತಿಯ ಭೇಟಿಗೆ ಅವಕಾಶ ನೀಡುವಂತೆ ಕೋರಿ ಪತ್ರ ಬರೆದಿದ್ದಾರೆ. ಈ ಮನವಿಯನ್ನು ಜೈಲಿನ ಮುಖ್ಯ ಅಧೀಕ್ಷಕ ಅಂಶುಕುಮಾರ್‌ಗೆ ಕಳುಹಿಸಲಾಗಿದೆ. ಅವರೇ ನಿರ್ಧಾರ ಮಾಡುತ್ತಾರೆ ಎಂದು ಅಲೋಕ್ ಕುಮಾರ್ ತಿಳಿಸಿದ್ದಾರೆ.

ಸಾಮಾನ್ಯ ಭೇಟಿ ವೇಳೆ ಕೈದಿಗಳ ಹಾಗೂ ಕುಟುಂಬದವರ ನಡುವೆ ಗಾಜಿನ ಗೋಡೆ ಇರುತ್ತದೆ. ಇಂಟರ್ ಕಾಮ್ ಮೂಲಕ ಮಾತನಾಡಬೇಕು. ಆದರೆ, ವಿಶೇಷ ಸಂದರ್ಭದಲ್ಲಿ ಆ ಗೋಡೆ ಇಲ್ಲದೇ ಮುಖಾಮುಖಿಯಾಗಿ ಭೇಟಿ ಮಾಡಿಸುತ್ತೇವೆ ಎಂದು ಹೇಳಿದರು.

ಕಾರ್ಯದರ್ಶಿಗಳು ಹಾಗೂ ಖಜಾಂಚಿಗಳ ಕಛೇರಿ
ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ

ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, 'ಶಿಕ್ಷಕರ ಸದನ'
ಕೆ. ಜಿ. ರಸ್ತೆ, ಬೆಂಗಳೂರು–560002.

ಸಂ.: ಶಿ.ಕ.ನಿ./ಲೆ.ಶಾ./ಎ.ಟಿ.ಎಂ./158/2024-25 ದಿನಾಂಕ: 11.05.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರಿನ ಕೆ.ಜಿ.ರಸ್ತೆ, ಕಾವೇರಿ ಭವನದ ಎದುರು. ಇರುವ ಶಿಕ್ಷಕರ ಸದನ ಕಟ್ಟಡದ ಆವರಣದ **ನೆಲಮಹಡಿಯಲ್ಲಿ 113.44 ಚ.ಅಡಿಗಳ ಜಾಗವನ್ನು ಎ.ಟಿ.ಎಂ.ಗೆಂದು** ನಿಗಧಿಪಡಿಸಲಾಗಿದ್ದು, **ಸದರಿ ಜಾಗವನ್ನು ಬಾಡಿಗೆಗೆ ನೀಡುವ ಸಂಬಂಧ** ಆಸಕ್ತ ಬ್ಯಾಂಕ್‌ಗಳಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬ್ಯಾಂಕ್‌ಗಳು **KPP Portal** ವಿಳಾಸ: **https://kppp.karnataka.gov.in** ಮುಖಾಂತರ **ದಿನಾಂಕ: 18.05.2026 ರಿಂದ 03.06.2026 ರ** ಅವಧಿಯೊಳಗೆ ಟೆಂಡರ್ ಸಲ್ಲಿಸತಕ್ಕದ್ದು. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 03.06.2026 ಸಂಜೆ 5.30 ಗಂಟೆ** ಆಗಿರುತ್ತದೆ.

ಸಹಿ/– ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು
ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ

DIPR/CP/720/SA/2026-27

ಸುಲಿಗೆ: ಬಾಲಕರೂ ಸೇರಿ ಐವರ ಸೆರೆ

ಪ್ರಜಾವಾಣಿ ವಾರ್ತೆ

ಸುಹಾಸ್

ಮಿಥುನ್

ಸ್ಟೀಫನ್ ರಾಜ್

ಬೆಂಗಳೂರು: ದ್ವಿಚಕ್ರ ವಾಹನ ಸವಾರರನ್ನು ಅಡ್ಡಗಟ್ಟಿ ಹಲ್ಲೆ ನಡೆಸಿ, ಹಣ ಹಾಗೂ ಮೊಬೈಲ್ ಸುಲಿಗೆ ಮಾಡುತ್ತಿದ್ದ ಇಬ್ಬರು ಬಾಲಕರೂ ಸೇರಿ ಐವರನ್ನು ರಾಮಮೂರ್ತಿನಗರ ಹಾಗೂ ಬಾಣಸವಾಡಿ ಠಾಣೆಗಳ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಬಾಣಸವಾಡಿ ಉಪ ವಿಭಾಗದ ರಾಮಮೂರ್ತಿನಗರ ಹಾಗೂ ಬಾಣಸವಾಡಿ ಠಾಣೆಯ ಪೊಲೀಸರು ಎರಡು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಂಡಿದೆ.

ಮಿಥುನ್, ಸುಹಾಸ್ ಹಾಗೂ ಸ್ಟೀಫನ್ ರಾಜ್‌ನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಬಾಲಕರನ್ನು ಬಾಲಮಂದಿರಕ್ಕೆ ಒಪ್ಪಿಸಲಾಗಿದೆ.

ಮೇ 17ರ ರಾತ್ರಿ ಕೆಲವೇ ಗಂಟೆಗಳ ಅಂತರದಲ್ಲಿ ಆರೋಪಿತರು ಇಬ್ಬರು ದ್ವಿಚಕ್ರ ವಾಹನ ಸವಾರರ ಮೇಲೆ ಹಲ್ಲೆ ಮಾಡಿ ಸುಲಿಗೆ ಮಾಡಿದ್ದರು.

ರಾತ್ರಿ 12.15ರ ಸುಮಾರಿಗೆ ಬರ್ಖಾತ್ ಅವರು ಔಷಧ ತರಲು ಮೆಡಿಕಲ್ ಶಾಪ್‌ಗೆ ಬೈಕ್‌ನಲ್ಲಿ ಹೋಗುವಾಗ ಅಡ್ಡಗಟ್ಟಿದ ಆರೋಪಿಗಳು, ಹಲ್ಲೆ ಮಾಡಿದ್ದರು. ಪ್ರತಿರೋಧ ವ್ಯಕ್ತಪಡಿಸಿದರೂ ಹಲ್ಲೆ ಮುಂದುವರೆಸಿದ್ದರು. ಈ ವೇಳೆ ಬರ್ಖಾತ್ ಬಳಿಯಿದ್ದ ₹600 ಕಸಿದು ಪರಾರಿ ಆಗಿದ್ದರು. ಈ ಸಂಬಂಧ ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದಾದ ಕೆಲವೇ ಗಂಟೆಗಳಲ್ಲಿ ರಾಮಮೂರ್ತಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಸವಾರನ ಮೇಲೆ ಹಲ್ಲೆ ಮಾಡಿದ್ದರು.

ಬಂಜಾರ ಲೇಔಟ್ ನಿವಾಸಿ ಧೀರಜ್ ಹೊಸಕೋಟೆ ಬಿರಿಯಾನಿ ತಿನ್ನಲು ಬೈಕ್‌ನಲ್ಲಿ ಹೋಗುತ್ತಿದ್ದರು. ಮಾರ್ಗಮಧ್ಯೆ ಆರೋಪಿಗಳು ಅಡ್ಡಗಟ್ಟಿ ಡ್ರಾಪ್ ನೀಡುವಂತೆ ಕೇಳಿದ್ದರು. ಆಗ ಧೀರಜ್ ನಿರಾಕರಿಸಿದ್ದರು. ಧೀರಜ್ ವಾಪಸ್ ಬರುವಾಗ ಅಡ್ಡಗಟ್ಟಿ ಹಲ್ಲೆ ನಡೆಸಿದ್ದರು ಎಂದು ಪೊಲೀಸರು ಹೇಳಿದರು.

ಬಂಧಿತ ಆರೋಪಿಗಳ ಪೈಕಿ ಮೂವರು ಬಾಣಸವಾಡಿ ಸುತ್ತಮುತ್ತಲಿನ ನಿವಾಸಿಗಳಾಗಿದ್ದು, ಡೆಲಿವರಿ ಬಾಯ್‌ಗಳಾಗಿ ಕೆಲಸ ಮಾಡುತ್ತಿದ್ದರು. ಹಣಕ್ಕಾಗಿ ಈ ಕೃತ್ಯ ಎಸಗಿದ್ದಾರೆ. ಆರೋಪಿ ಮಿಥುನ್ ವಿರುದ್ಧ ಈ ಹಿಂದೆ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಶಸ್ತ್ರಾಸ್ತ್ರ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿತ್ತು ಎಂದು ಪೊಲೀಸರು ಹೇಳಿದರು.

ADMISSION CORNER



ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

CHANGE OF NAME
I, **Vinod Kumar Viswanathan,** R/at # 1114, Blk2, Wing B, Suncity Gloria, Doddakanelli, Sarjapura Road, Bengaluru - 560035, have changed my minor son's name from **Prem** to **PREM VINOD VISWANATHAN** vide affidavit dated 07.05.2026 before notary A.R. Muneer Ahmed, Bengaluru. Henceforth he shall be called as **PREM VINOD VISWANATHAN** only.

I, DHRUV MAHALE S/o Prashant Mahale aged 18 years, residing at No. S8, 2nd Floor, Royal Embassy Apartment, Gangamma Garden, Malagala Main Road, Nagarbhavi, 2nd Stage, Bangalore- 560091 have changed my name from Dhruv Prashant Mahale to Dhruv Mahale vide Affidavit dated 16-05-2026 sworn before Notary Smt. M.K. Devaki, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDERS ESSENTIAL

Water Proofing

LEAKAGE...
LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427, ಫ್ಯಾಕ್ಸ್: 08156–295427
ಇಮೇಲ್ - eemidcbpura@gmail.com

ಮರು ಟೆಂಡರ್ ಅಧಿಸೂಚನೆ

ಸಂಖ್ಯೆ : ಕಾಸಬ/ತಾಂಶಾ/ತಾಂಸ/ ಮರು ಟೆಂಡರ್/1258/2026–27 ದಿನಾಂಕ : 15/05/2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 13/2025–26 ದಿನಾಂಕ : 06/11/2025 ರಲ್ಲಿ ಆಹ್ವಾನಿಸಲಾಗಿದ್ದ 4702 ಪ್ರಧಾನ ಕಾಮಗಾರಿಗಳು ಅಣೆಕಟ್ಟು ಮತ್ತು ಪಿಕಪ್ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಈ ಕೆಳಕಂಡ ಕಾಮಗಾರಿಗಳಿಗೆ ತಾಂತ್ರಿಕ ಕಾರಣಗಳಿಂದ ಮರು ಟೆಂಡರ್ ಕರೆಯಲಾಗಿರುತ್ತದೆ ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ವಿವರಗಳು ಈ ಕೆಳಕಂಡಂತೆ ಇರುತ್ತವೆ.

1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ : 15/05/2026 ಸಂಜೆ 04:30 ಗಂಟೆಯಿಂದ
2) ಕಾಮಗಾರಿಯ ಪ್ರೀ ಬಿಡ್ ಸಭೆಯ ದಿನಾಂಕ : 21/05/2026 ಬೆಳಿಗ್ಗೆ 11:30 ಗಂಟೆಗೆ
ಸ್ಥಳ : ಕಾರ್ಯಪಾಲಕ ಇಂಜಿನಿಯರ್ ರವರ ಕಚೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಿಮ್ಮಾಲಕಕುಂಟೆ ರೆಡ್ಡಿ ವುಡ್‌ವರ್ಕ್ ಮೇಲ್ಭಾಗ, ಎಂ.ಜಿ ರಸ್ತೆ, ಚಿಕ್ಕಬಳ್ಳಾಪುರ – 562101.
3) ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 25/05/2026 ಸಂಜೆ 04:30 ಗಂಟೆಯವರೆಗೆ.
4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : 27/06/2026 ಬೆಳಿಗ್ಗೆ 11:00 ಗಂಟೆಯ ನಂತರ.

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗುವ ಕಾಲಾವಧಿ ಮಳೆಗಾಲವೂ ಸೇರಿ	ಗುತ್ತಿಗೆದಾರರ ದರ್ಜೆ
1	Reconstruction / Restoration Of Existing Check Dams across kushavathi halla near Kotagal Village, Upparahallli Village, Byarasandra Village and Gudisalahalli Village In Chintamani Taluk, Chikkaballapura District.	990.00	ಕೆಪಿಪಿ–ಪೋರ್ಟಲ್ ನಲ್ಲಿದ್ದಂತೆ	11 ತಿಂಗಳು	01 ನೇ ದರ್ಜೆ ಮೇಲ್ಪಟ್ಟು
2	Reconstruction/Restoration of Existing Checkdams Across kushavathi halla near Digava Gollahalli Village, Vegalahalli Village, Bhoopanahalli, Seetharamapura Village and Nallaghuttahalli Village in Chinthamani Taluk, Chikkaballapur District.	960.00	ಕೆಪಿಪಿ–ಪೋರ್ಟಲ್ ನಲ್ಲಿದ್ದಂತೆ	11 ತಿಂಗಳು	01 ನೇ ದರ್ಜೆ ಮೇಲ್ಪಟ್ಟು
3	Construction Of Check Dams across kushavathi halla near Upparahalli Village, Byarasandra Village, Nallaguttahalli Village and Yasagalahalli Village Chinthamani Taluk, Chikkaballapur District.	990.00	ಕೆಪಿಪಿ–ಪೋರ್ಟಲ್ ನಲ್ಲಿದ್ದಂತೆ	11 ತಿಂಗಳು	01 ನೇ ದರ್ಜೆ ಮೇಲ್ಪಟ್ಟು

ಸದರಿ ಪ್ರಕಟಣೆಯ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 08156–295427 ಇ–ಮೇಲ್ ವಿಳಾಸ : eemidcbpura@gmail.com ಮತ್ತು ಕೆಪಿಪಿ–ಪೋರ್ಟಲ್ www.kppp.karnataka.gov.in ನ್ನು ಸಂಪರ್ಕಿಸಬಹುದಾಗಿರುತ್ತದೆ. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–
ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಅಪ್ಪಾಜಿ ಕ್ಯಾಂಟೀನ್: ₹1ಕ್ಕೆ ಮುದ್ದೆ ಊಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರ ಜನ್ಮದಿನಕ್ಕಾಗಿ, ಇಲ್ಲಿನ ಹನುಮಂತ ನಗರದಲ್ಲಿರುವ 'ನಮ್ಮ ದೇವೇಗೌಡ ಅಪ್ಪಾಜಿ ಕ್ಯಾಂಟೀನ್'ನಲ್ಲಿ ₹1ಕ್ಕೆ ಮುದ್ದೆ ಊಟ ವಿತರಿಸಲಾಯಿತು.

ವಿಧಾನ ಪರಿಷತ್ತಿನ ಸದಸ್ಯರೂ ಆಗಿರುವ ಟಿ.ಎ. ಶರವಣ, 'ಅಪ್ಪಾಜಿ ಕ್ಯಾಂಟೀನ್' ನಡೆಸುತ್ತಿದ್ದಾರೆ.

ಮುದ್ದೆ ಊಟದ ಜತೆಗೇ ₹1ಕ್ಕೆ ಉಪಾಹಾರದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಸಾವಿರಾರು ಜನರು ಸರದಿಯಲ್ಲಿ ನಿಂತು ಊಟ, ಉಪಾಹಾರ ಸವಿದರು. ಬಿಗ್‌ಬಾಸ್ ವಿಜೇತ ಗಿಲ್ಲಿ ನಟ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

'ಹಸಿದವರಿಗೆ ಮೊದಲು ಅನ್ನ ನೀಡಬೇಕು ಎಂಬ ದೇವೇಗೌಡರ ಆಶಯದಂತೆ 9 ವರ್ಷಗಳಿಂದ ಈ ಕ್ಯಾಂಟೀನ್ ನಡೆಸಿಕೊಂಡು ಬರುತ್ತಿದ್ದೇನೆ. ಅತಿ ಕಡಿಮೆ ಬೆಲೆಯಲ್ಲಿ ಊಟ, ಉಪಾಹಾರ ಒದಗಿಸಲಾಗುತ್ತಿದೆ. ಕೋವಿಡ್ ಸಮಯದಲ್ಲಿ ಈ ಕ್ಯಾಂಟೀನ್ ಲಕ್ಷಾಂತರ ಜನರ ಹಸಿವು ನೀಗಿಸಿತ್ತು' ಎಂದು ಶರವಣ ಹೇಳಿದರು.

ಇದೇ ದಿನ ಪೌರ ಕಾರ್ಮಿಕರು ಮತ್ತು ಆಟೊರಿಕ್ಷಾ ಚಾಲಕರಿಗೆ ಉಚಿತವಾಗಿ ಬಟ್ಟೆಗಳನ್ನು ವಿತರಿಸಲಾಯಿತು.

'ಅಪ್ಪಾಜಿ ಕ್ಯಾಂಟೀನ್'ನಲ್ಲಿ ಟಿ.ಎ.ಶರವಣ ಅವರು ಜನರಿಗೆ ₹1ಕ್ಕೆ ರಾಗಿ ಮುದ್ದೆ ಊಟ ವಿತರಿಸಿದರು

'ಎಸ್‌ಐಆರ್: 'ಕೈ'ಯಿಂದ ಜಾಗೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಂದರ್ಭದಲ್ಲಿ ಪಶ್ಚಿಮ ಬಂಗಾಳದಲ್ಲಿ ಆಗಿರುವ ಗೊಂದಲಗಳು ಕರ್ನಾಟಕದಲ್ಲಿ ಆಗದಂತೆ ಎಚ್ಚರಿಕೆ ವಹಿಸಲು ಜಾಗೃತಿ ಮೂಡಿಸುವ ಕೆಲಸವನ್ನು ಪಕ್ಷ ಮಾಡಲಿದೆ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಶ್ಚಿಮ ಬಂಗಾಳದಲ್ಲಿ ಆಗಿರುವ ಪರಿಸ್ಥಿತಿ, ರಾಜ್ಯದಲ್ಲಿ ಆಗದಂತೆ ಪಕ್ಷದ ವಕ್ತಾರರಿಗೆ, ಕಾರ್ಯಕರ್ತರಿಗೆ ಅರಿವು ಮೂಡಿಸುತ್ತೇವೆ. ಎಲ್ಲ ಕಡೆ ಸಭೆಗಳನ್ನು ಆಯೋಜಿಸಿ, ಯಾವ ರೀತಿ ಎಚ್ಚರಿಕೆ ವಹಿಸಬೇಕೆಂದು ತಿಳಿಸುತ್ತೇವೆ' ಎಂದರು.

ಪ್ರಧಾನಿ ಕ್ಷಮೆ ಯಾಚಿಸಬೇಕು: 'ನಿರಂತರ ಯುದ್ಧಗಳು ಮತ್ತು ಜಾಗತಿಕ ಅಸ್ಥಿರತೆಯು ಭಾರತವನ್ನು ಮತ್ತೆ ಬಡತನಕ್ಕೆ ತಳ್ಳಬಹುದೆಂದು ಪ್ರಧಾನಿ ನರೇಂದ್ರ ಮೋದಿ ಯಾವ ಅರ್ಥದಲ್ಲಿ ಹೇಳಿದ್ದಾರೆಂದು ಸ್ಪಷ್ಟನೆ ನೀಡಬೇಕು ಹಾಗೂ ಈ ದೇಶದ ಜನರ ಕ್ಷಮೆ ಯಾಚಿಸಬೇಕು' ಎಂದು ಸುರೇಶ್ ಆಗ್ರಹಿಸಿದರು.

'ಮೋದಿಯವರು ದೇಶದ ಚುಕ್ಕಾಣಿ ಹಿಡಿದು 12 ವರ್ಷವಾಗಿದೆ. ಈ ಹಿಂದಿನ ಆಡಳಿತಕ್ಕೆ ಹೋಲಿಸಿದಾಗ, ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಬೆಲೆ ಏರಿಕೆಯಿಂದ ಇಲ್ಲಿಯವರೆಗೆ ಹೆಚ್ಚುವರಿಯಾಗಿ ಸುಮಾರು ₹45 ಲಕ್ಷ ಕೋಟಿ ಸಂಗ್ರಹವಾಗಿದೆ' ಎಂದರು.

'ರಾಹುಲ್ ಗಾಂಧಿ ವಿದೇಶದಲ್ಲಿ ಮಾತನಾಡಿದಾಗ ದೇಶದ್ರೋಹಿ ಎನ್ನುತ್ತಾರೆ. ಸ್ವತಃ ಪ್ರಧಾನಿಯವರೇ ವಿದೇಶಿ ನೆಲದಲ್ಲಿ ನಿಂತು ಬಡತನ ಎದುರಾಗಿದೆ ಎಂದು ಮಾತನಾಡಿದ್ದಾರೆ ಎಂದಾಗ, ಯಾವ ದೃಷ್ಟಿಕೋನದಲ್ಲಿ ಅವರು ಹೇಳಿದ್ದಾರೆಂದು ಸ್ಪಷ್ಟನೆ ನೀಡಬೇಕು' ಎಂದರು.

'ಒಂದು ದೇಶ ಒಂದು ಚುನಾವಣೆ' ಜಾರಿಗೆ ಪಕ್ಷ ವಿರೋಧ ವ್ಯಕ್ತಪಡಿಸಿರುವ ಬಗ್ಗೆ ಕೇಳಿದಾಗ, 'ವಿವಿಧ ರಾಜ್ಯಗಳಲ್ಲಿ ವಿವಿಧ ಸಮಯಕ್ಕೆ ಚುನಾವಣೆಗಳು ನಡೆಯುತ್ತವೆ. ಒಂದು ದೇಶ ಒಂದು ಚುನಾವಣೆ ಎಂದು ಹೇಳುವುದು ಸುಲಭ. ಆದರೆ, ಪ್ರಜಾಪ್ರಭುತ್ವದಲ್ಲಿ ಆಯ್ಕೆಯಾದ ಸರ್ಕಾರಗಳು ಏನು ಮಾಡಬೇಕು ಎನ್ನುವುದಕ್ಕೆ ಸ್ಪಷ್ಟೀಕರಣ ಕೊಟ್ಟರೆ, ಇದು ಒಂದು ಹಂತಕ್ಕೆ ಬರುತ್ತದೆ' ಎಂದು ಹೇಳಿದರು.

ಚಿಟಿಕೆ ಸುದ್ದಿ

ಕಂಪ್ಯೂಟರ್ ಕೌಶಲ ತರಬೇತಿ

ಬೆಂಗಳೂರು: ಉದಯಭಾನು ಕಲಾಸಂಘವು ಕಂಪ್ಯೂಟರ್ ಕೌಶಲ ತರಬೇತಿಗೆ ಅರ್ಜಿ ಆಹ್ವಾನಿಸಿದೆ. 30 ವರ್ಷದೊಳಗಿನ ವಿದ್ಯಾರ್ಥಿಗಳು, ಯುವಜನರು ಹಾಗೂ ಎಸ್‌ಎಸ್‌ಎಲ್‌ಸಿ ಅಥವಾ ಪದವಿ ಪೂರ್ವ ವ್ಯಾಸಂಗ ಪೂರ್ಣಗೊಳಿಸಿ ಸ್ವಯಂ ಉದ್ಯೋಗ ತರಬೇತಿಗಾಗಿ ಎದುರು ನೋಡುತ್ತಿರುವ ಆಸಕ್ತರು ಈ ತರಬೇತಿ ಪ್ರವೇಶ ಪಡೆಯಬಹುದು. ಜೂನ್ 1ರಿಂದ ತರಬೇತಿ ಆರಂಭವಾಗಲಿದೆ.

ಮೂರು ತಿಂಗಳ ತರಬೇತಿಯಲ್ಲಿ ಕಂಪ್ಯೂಟರ್ ಪರಿಚಯ, ಮೈಕ್ರೊಸಾಫ್ಟ್ ವಿಂಡೋಸ್, ಆಪರೇಟಿಂಗ್ ಸಿಸ್ಟಮ್, ಎಂಎಸ್ ಆಫೀಸ್, ಎಂಎಸ್ ವರ್ಡ್ಸ್, ಎಂಎಸ್ ಎಕ್ಸೆಲ್, ಟ್ಯಾಲಿ ಪ್ರೈಮ್, ಜಿಎಸ್‌ಟಿ ವಿಷಯಗಳ ಬಗ್ಗೆ ತರಬೇತಿ ನೀಡಲಾಗುತ್ತದೆ ಎಂದು ಕಲಾಸಂಘದ ಸಂಸ್ಥಾಪಕ ಎಂ.ನರಸಿಂಹ ತಿಳಿಸಿದ್ದಾರೆ.

ವಿಳಾಸ: ಉದಯಭಾನು ಕಲಾಸಂಘ, ಗವಿಪುರ ಸಾಲು ಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ ಬೆಂಗಳೂರು–560 004, ಮಾಹಿತಿಗೆ: 080–2660 9343, 2660 1831 ಸಂಪರ್ಕಿಸಬಹುದು.

‘ಭ್ರಷ್ಟಾಚಾರ ಆರೋಪ ಮುಕ್ತಿಗೆ ಸಬೂಬು ಸಲ್ಲ’

ಬೆಂಗಳೂರು: ‘ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವವರು ಸರ್ಕಾರಿ ಸೇವಕರಲ್ಲ. ಖಾಸಗಿ ವ್ಯಕ್ತಿಗಳು. ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿಲ್ಲ ಹಾಗೂ ಲಂಚದ ಹಣ ವಶಕ್ಕೆ ಪಡೆದುಕೊಂಡಿಲ್ಲ... ಎಂಬೆಲ್ಲಾ ಕಾರಣಗಳಿಗಾಗಿ ಭ್ರಷ್ಟಾಚಾರ ಪ್ರಕರಣದ ತನಿಖೆ ರದ್ದುಪಡಿಸಲು ಆಗುವುದಿಲ್ಲ’ ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

‘ನನ್ನ ವಿರುದ್ಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಭ್ರಷ್ಟಾಚಾರ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಬಸವೇಶ್ವರ ನಗರದ ಕೆ.ಎಸ್. ಗಂಗಾಧರಯ್ಯ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಈ ಪ್ರಕರಣದಲ್ಲಿ ಅರ್ಜಿದಾರರು ದಿ ಟ್ರಾನ್ಸ್ ಪೋರ್ಟ್ ಎಂಬ ಕಂಪನಿ ನಡೆಸುತ್ತಿದ್ದಾರೆ. ಸರ್ಕಾರಿ ನೌಕರನಿಗೆ ಹಣ ತಲುಪಿಸುವ ಜವಾಬ್ದಾರಿಯನ್ನು ಮತ್ತೊಬ್ಬರಿಗೆ ವಹಿಸಿಕೊಟ್ಟಿದ್ದಾರೆ. ಈ ಮೂಲಕ ಭ್ರಷ್ಟಾಚಾರದ ಜಾಲವಾಗಿ ಕಾರ್ಯ ನಿರ್ವಹಿಸಿದ್ದಾರೆ’ ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣ: ಅಧಿಕಾರಿಗಳಿಗೆ ನೀಡಬೇಕಾದ ಲಂಚದ ಹಣವನ್ನು ಸಂಗ್ರಹಿಸಿ ಮತ್ತೊಬ್ಬರಿಗೆ ತಲುಪಿಸುವಂತೆ ನಿರ್ದೇಶನ ನೀಡಿದ್ದ ಆರೋಪವನ್ನು ಅರ್ಜಿದಾರರು ಎದುರಿಸುತ್ತಿದ್ದಾರೆ.

ಇಂದಿನಿಂದ ಕಾರ್ಯಾಗಾರ

ಬೆಂಗಳೂರು: ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ ಇದೇ 19 ಮತ್ತು 20ರಂದು ಡಿಜಿಟಲ್ ಸಮಾಜದ ಯುಗದಲ್ಲಿ ಸಮಾಜಶಾಸ್ತ್ರ ಎಂಬ ಎರಡು ದಿನಗಳ ರಾಜ್ಯಮಟ್ಟದ ಕಾರ್ಯಾಗಾರವನ್ನು ಆಯೋಜಿಸಿದೆ.

ಈ ಕಾರ್ಯಾಗಾರದಲ್ಲಿ ಡಿಜಿಟಲ್ ತಂತ್ರಜ್ಞಾನಗಳು ಸಮಾಜ, ಸಂಸ್ಕೃತಿ, ಸಂವಹನ, ಶಿಕ್ಷಣ, ಆಡಳಿತ ಹಾಗೂ ಮಾನವ ಸಂಬಂಧಗಳ ಮೇಲೆ ಉಂಟುಮಾಡುತ್ತಿರುವ ಪರಿಣಾಮಗಳ ಬಗ್ಗೆ ಚರ್ಚಿಸಲಾಗುತ್ತದೆ.

19ರಂದು ಬೆಳಿಗ್ಗೆ 10ಕ್ಕೆ ಜ್ಞಾನಜ್ಯೋತಿ ಸಭಾಂಗಣದ ಸೆಮಿನಾರ್ ಹಾಲ್‌ನಲ್ಲಿ ನಡೆಯುವ ಕಾರ್ಯಾಗಾರವನ್ನು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಉದ್ಘಾಟಿಸಲಿದ್ದಾರೆ. ವಿಶ್ವವಿದ್ಯಾಲಯದ ಕುಲಪತಿ ಬಿ. ರಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಲಾ ವಿಭಾಗದ ಡೀನ್ ಸೋಮಶೇಖರ್ ಸಿ. ಮುಖ್ಯ ಭಾಷಣ ಮಾಡಲಿದ್ದು, ಸುಧಾ ಖೋಕಾಟೆ ಕೃಷ್ಣಮೂರ್ತಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕಾರು ಉರುಳಿ ತಾಯಿ ಮಗಳು ಸಾವು

ಕುಣಿಗಲ್: ತಾಲ್ಲೂಕಿನಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 75ರ ಲಾಳಪುರದ ಬಳಿ ಸೋಮವಾರ ಮಧ್ಯಾಹ್ನ ಚಾಲಕನ ನಿಯಂತ್ರಣ ತಪ್ಪಿ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಉರುಳಿಬಿದ್ದ ಪರಿಣಾಮ ತಾಯಿ ಮಗಳು ಸ್ಥಳದಲ್ಲಿ ಮೃತಪಟ್ಟಿದ್ದಾರೆ. ಇಬ್ಬರು ಗಾಯಗೊಂಡಿದ್ದಾರೆ.

ಮೃತರನ್ನು ಬೆಂಗಳೂರಿನ ಜಯಮಾಲಾ (59) ಮಗಳು ರಾಜೇಶ್ವರಿ (42) ಎಂದು ಗುರುತಿಸಲಾಗಿದೆ. ರಾಯಚೂರಿನ ಇವರು ಹಲವು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲಸಿದ್ದರು.

ರಾಜೇಶ್ವರಿ ಅವರ ಮಗ ಪ್ರೀತಮ್‌ನನ್ನು ಶಾಲೆಗೆ ಸೇರಿಸುವ ಸಲುವಾಗಿ ಬೆಂಗಳೂರಿನಿಂದ ತುಮಕೂರಿಗೆ ರೈಲಿನಲ್ಲಿ ಬಂದು ಸಂಬಂಧಿ ಮಹಾವೀರ ಅವರೊಂದಿಗೆ ಕಾರಿನಲ್ಲಿ ಶ್ರವಣ ಬೆಳಗೊಳಕ್ಕೆ ಹೋಗುವಾಗ ಅಪಘಾತ ಸಂಭವಿಸಿದೆ. ಮಹಾವೀರ ಮತ್ತು ಪ್ರೀತಮ್ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಗರದ ಹಲವೆಡೆ ಮಳೆ ಅಬ್ಬರ

ಹಲವು ರಸ್ತೆಗಳಲ್ಲಿ ಸಂಚಾರ ದಟ್ಟಣೆ ಮುಂದಿನ 3 ದಿನ ಹೆಚ್ಚಿನ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಭಾಗಗಳಲ್ಲಿ ಸೋಮವಾರ ಸಂಜೆ ಗುಡುಗು–ಮಿಂಚಿನಿಂದ ಕೂಡಿದ ಮಳೆ ಸುರಿಯಿತು. ತಂಪನೆಯ ವಾತಾವರಣ ಸೃಷ್ಟಿಸಿತು.

ಭಾನುವಾರ ತಡರಾತ್ರಿ ನಗರದ ಹಲವು ಭಾಗಗಳಲ್ಲಿ ತುಂತುರು ಮಳೆಯಾಗಿತ್ತು. ಸೋಮವಾರ ಮಧ್ಯಾಹ್ನದ ನಂತರ ಮೋಡ ಕವಿಯಿತು. ಸಂಜೆ 4ರ ನಂತರ ಹಲವೆಡೆ ಮಳೆ ಸುರಿಯಿತು. ನಗರದಲ್ಲಿ ಉಷ್ಣಾಂಶ 23 ಡಿಗ್ರಿ ಸೆಲ್ಸಿಯಸ್‌ಗೆ ಕುಸಿಯಿತು.

ಬ್ಯಾಟರಾಯನಪುರ, ಬಾಣಸವಾಡಿ, ಮನೋರಾಯನಪಾಳ್ಯ, ಪುಲಕೇಶಿನಗರ, ವಿ. ನಾಗೇನಹಳ್ಳಿ, ಕಮ್ಮನಹಳ್ಳಿ, ಹೊರಮಾವು, ರಾಜಮಹಲ್ ಗುಟ್ಟಹಳ್ಳಿ, ನಾಗಪುರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಅತಿಹೆಚ್ಚು ಮಳೆಯಾಯಿತು. ಸೋಮವಾರ ತಡರಾತ್ರಿಯವರೆಗೂ ಹಲವು ಪ್ರದೇಶಗಳಲ್ಲಿ ತುಂತುರು ಮಳೆಯಾಯಿತು. ಮುಂದಿನ ಮೂರು ದಿನ ನಗರದಲ್ಲಿ ಹೆಚ್ಚಿನ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮಳೆ ನೀರು ಸರಾಗವಾಗಿ ಹರಿಯದೆ ರಸ್ತೆಯಲ್ಲಿ ನಿಂತಿದ್ದರಿಂದ ಹಲವು ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಕೊಡಿಗೇಹಳ್ಳಿ, ಮಹಾಲಕ್ಷ್ಮಿ ಲೇಔಟ್ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಮರ ಬಿದ್ದಿದ್ದರಿಂದ ರಸ್ತೆಗಳಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ಮಳೆ ನೀರು ತುಂಬಿದ್ದರಿಂದ ಹೊರ ವರ್ತುಲ ರಸ್ತೆಯಲ್ಲಿ ವಾಹನ ಸಂಚಾರ ನಿಧಾನಗತಿಯಲ್ಲಿತ್ತು. ಮಾಲ್ ಆಫ್ ಏಷಿಯಾದ ಹಿಂಭಾಗದ ಗೇಟ್ ಬಳಿ ನೀರು ನಿಂತಿದ್ದರಿಂದ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.

ಕಾರ್ತಿಕ್ ನಗರದಲ್ಲಿ ಮಳೆ ನೀರು ನಿಂತಿದ್ದರಿಂದ ಮಹದೇವಪುರ ಕಡೆಗೆ ಸಂಚಾರ ನಿಧಾನಗತಿಯಲ್ಲಿತ್ತು. ನಾಗವಾರ ಜಂಕ್ಷನ್, ಯಲಹಂಕ ಸರ್ವಿಸ್ ರಸ್ತೆ, ಜಿಆರ್‌ಟಿ ಜಂಕ್ಷನ್‌ನಿಂದ ಹೊಸಕೋಟೆ, ವಡ್ಡರಹಳ್ಳಿಯಿಂದ ಗೆದ್ದಲಹಳ್ಳಿ, ಕಾವೇರಿ ಜಂಕ್ಷನ್‌ನಿಂದ ಪ್ಯಾಲೇಸ್ ಅಡ್ಡರಸ್ತೆ, ಜಯಮಹಲ್ ರಸ್ತೆ, ಕಲ್ಯಾಣನಗರದಿಂದ ಉತ್ತಮ ಸಾಗರ ಜಂಕ್ಷನ್, ಹೆಣ್ಣೂರು ಕ್ರಾಸ್‌ನಿಂದ ವಡ್ಡರಪಾಳ್ಯ- ಗೆದ್ದಲಹಳ್ಳಿ, ಕ್ರಿಸ್ಟಲ್ ಪ್ಯಾಲೇಸ್‌ನಿಂದ ನಂದಗೋಕುಲ ರಸ್ತೆ, ವೀರಣ್ಣಪಾಳ್ಯ ಹೊರವರ್ತುಲ ರಸ್ತೆಯಿಂದ ಕೆಐಬಿ ಜಂಕ್ಷನ್‌ಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು.

ಶಿವಗಂಗೆ ರಸ್ತೆಯಲ್ಲಿ ನೀರು

ದಾಬಸ್ ಪೇಟೆ: ಇಲ್ಲಿನ ಶಿವಗಂಗೆ ಸಂಪರ್ಕಿಸುವ ರಸ್ತೆಯಲ್ಲಿ ಮಳೆ ನೀರು ನಿಂತು ವಾಹನ ಸವಾರರು ಪರದಾಡಿದರು. ಸೋಮವಾರ ಸಂಜೆ 5ರ ವೇಳೆಗೆ ಸುರಿದ ಮಳೆಯಿಂದ ನೀರು ಹರಿಯಲು ಚರಂಡಿ ವ್ಯವಸ್ಥೆ ಇಲ್ಲದೆ, ವೀರಸಾಗರ ಕಡೆ ಹೋಗುವ, ಮಯೂರ ಬೇಕರಿ ಎದುರಿಗಿನ ತಗ್ಗು ಪ್ರದೇಶದಲ್ಲಿ ನೀರು ನಿಂತುಕೊಂಡಿದ್ದರಿಂದ ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ತೊಂದರೆಯಾಯಿತು.

ಕನ್ನಿಂಗ್‌ಹ್ಯಾಂ ರಸ್ತೆಯಲ್ಲಿ ತುಂಬಿದ್ದ ಮಳೆ ನೀರಿನಲ್ಲೇ ವಾಹನಗಳು ಸಾಗಿದವು
ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಸದಾ ಸನ್ನದ್ಧರಾಗಿರಲು ಸೂಚನೆ

ಜಿಬಿಎ ವ್ಯಾಪ್ತಿಯಲ್ಲಿ ‘ವಿಪತ್ತು ನಿರ್ವಹಣೆಗಾಗಿ’ ಸದಾ ಸನ್ನದ್ಧರಾಗಿರಲು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಬನ್ನೇರುಘಟ್ಟ ರಸ್ತೆ ಹಾಗೂ ಜಯನಗರದ ಶಾಲಿನಿ ಮೈದಾನದಲ್ಲಿ ಏರ್ಪಡಿಸಿದ್ದ ಉಪಕರಣ, ಸಿಬ್ಬಂದಿ ಸನ್ನದ್ಧತಾ ಪರೇಡ್ ಸ್ಥಳಗಳಿಗೆ ಸೋಮವಾರ ಭೇಟಿ ನೀಡಿ ಅವರು ಪರಿಶೀಲನೆ ನಡೆಸಿದರು.

ಮಳೆಗಾಲ ಪ್ರಾರಂಭವಾಗುವುದಕ್ಕೂ ಮುಂಚಿತವಾಗಿ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿರುವುದನ್ನು ಖಾತರಿಪಡಿಸಿಕೊಳ್ಳಬೇಕು. ಎಲ್ಲಿಯೂ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಆಯಾ ನಗರ ಪಾಲಿಕೆಗಳಲ್ಲಿರುವ ಶಾಶ್ವತ ನಿಯಂತ್ರಣ ಕೊಠಡಿಗಳು ಹಾಗೂ ಉಪ ವಿಭಾಗಾವಾರು ಸ್ಥಾಪಿಸುವ ತಾತ್ಕಾಲಿಕ ನಿಯಂತ್ರಣ ಕೊಠಡಿಗಳು ನಾಗರಿಕರ ದೂರುಗಳಿಗೆ ತ್ವರಿತವಾಗಿ ಸ್ಪಂದಿಸುವ ಕಾರ್ಯ ಮಾಡಬೇಕು ಎಂದು ನಿರ್ದೇಶನ ನೀಡಿದರು.

ಮಳೆಯಿಂದ ರಕ್ಷಣೆ ಪಡೆಯಲು ಜನರು ವಿಧಾನಸೌಧದ ಮೆಟ್ರೊ ನಿಲ್ದಾಣದ ಕಡೆಗೆ ಓಡಿದರು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಅತಿಹೆಚ್ಚು ಮಳೆ ಎಲ್ಲೆಲ್ಲಿ? (ಸೆಂ.ಮೀ.ನಲ್ಲಿ)

ಬ್ಯಾಟರಾಯನಪುರ	6.55
ಪೂರ್ವ ಬಾಣಸವಾಡಿ	6.1
ಪೂರ್ವ ಮನೋರಾಯನಪಾಳ್ಯ	5.5
ವಿ.ನಾಗೇನಹಳ್ಳಿ	4.6
ಪುಲಕೇಶಿನಗರ	4.6
ಕಮ್ಮನಹಳ್ಳಿ	4.25
ಹೊರಮಾವು	4.0
ರಾಜಮಹಲ್ ಗುಟ್ಟಹಳ್ಳಿ	3.85
ನಾಗಪುರ	3.7
ಕೊಡಿಗೇಹಳ್ಳಿ	3.45
ಜಕ್ಕೂರು	3.35
ರಾಮಮೂರ್ತಿ ನಗರ	3.35
ಬಸವನಪುರ	3.3
ಬಸವೇಶ್ವರನಗರ	3.25
ನಂದಿನಿ ಲೇಔಟ್	3.15
ಜಕ್ಕೂರು	3.05
ಸಂಪಂಗಿರಾಮನಗರ	3.0
ಹೇರೋಹಳ್ಳಿ	2.95
ರಾಜಾಜಿನಗರ	2.7
ಚೌಡೇಶ್ವರಿ	2.7
ಕೆ.ಆರ್.ಪುರ	2.6
ಪೀಣ್ಯ ಕೈಗಾರಿಕಾ ಪ್ರದೇಶ	2.45
ಯಲಹಂಕ	2.45
ಕಾಟನ್‌ಪೇಟೆ	2.0
ದೊಡ್ಡನೆಕ್ಕುಂದಿ	1.5
ದಯಾನಂದನಗರ	1.2
ಶೆಟ್ಟಹಳ್ಳಿ	1.2
ದೊಡ್ಡಬಿದಿರಕಲ್ಲು	1.1
ಎಚ್.ಗೊಲ್ಲಹಳ್ಳಿ	1.1
ಎಚ್‌ಎಎಲ್ ವಿಮಾನ ನಿಲ್ದಾಣ	1.1
ಚಾಮರಾಜಪೇಟೆ	1.05
ವಿದ್ಯಾರಣ್ಯಪುರ	1.05

ಬಿಡದಿ ಟೌನ್‌ಶಿಪ್ ಯೋಜನೆ ಕೈಬಿಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡದಿ ಟೌನ್‌ಶಿಪ್ ಯೋಜನೆಗೆ ಸರ್ಕಾರ ನೀಡಿರುವ ಅನುಮೋದನೆಯನ್ನು ವಾಪಸ್ ಪಡೆದು, ಭೂ ಸ್ವಾಧೀನ ಪ್ರಕ್ರಿಯೆ ರದ್ದುಗೊಳಿಸಬೇಕು ಎಂದು ‘ಸಂಯುಕ್ತ ಹೋರಾಟ–ಕರ್ನಾಟಕ’ ಸಮಿತಿ ಆಗ್ರಹಿಸಿದೆ.

‘ಫಲವತ್ತಾದ, ಸಮೃದ್ಧ ನೀರಾವರಿ ಕೃಷಿ ಭೂಮಿಯನ್ನು ನಾಶ ಮಾಡಿ ನಿರ್ಮಿಸಲು ಉದ್ದೇಶಿಸಿರುವ ಬಿಡದಿ ಟೌನ್‌ಶಿಪ್ ಯೋಜನೆ, ರೈತ ವಿರೋಧಿ ಹಾಗೂ ಪರಿಸರ ವ್ಯವಸ್ಥೆಗೆ ವಿನಾಶಕಾರಿಯಾಗಿದೆ. ಇಂತಹ ಪರಿಸರ ವಿನಾಶದ ಯೋಜನೆಗೆ ನೀಡಿರುವ ಅನುಮೋದನೆಯನ್ನು ಸರ್ಕಾರ ವಾಪಸ್ ಪಡೆಯಬೇಕು’ ಎಂದು ಸಮಿತಿಯ ಸದಸ್ಯ ಬಡಗಲಪುರ ನಾಗೇಂದ್ರ ಅವರು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಒತ್ತಾಯಿಸಿದರು.

‘ರಾಮನಗರ ಜಿಲ್ಲೆ ಬಿಡದಿ ಹೋಬಳಿ ಬೈರಮಂಗಲ ಹಾಗೂ ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಮಾರು 25 ಗ್ರಾಮಗಳ ಅಂದಾಜು 9,640 ಎಕರೆ ಕೃಷಿ ಭೂಮಿ ವರ್ಷ ಪೂರ್ತಿ ತೆಂಗು, ಅಡಿಕೆ, ಬಾಳೆ, ಮಾವು ಸೇರಿ ವಿವಿಧ ರೀತಿಯ ತೋಟಗಾರಿಕೆ ಬೆಳೆಗಳು, ರೇಷ್ಮೆ, ಜೋಳ, ರಾಗಿ, ವಿವಿಧ ರೀತಿಯ ಹಣ್ಣು, ತರಕಾರಿಗಳನ್ನು ಬೆಳೆಯುತ್ತಿರುವ ಸಮೃದ್ಧ ಹಸಿರು ಪ್ರದೇಶವಾಗಿದೆ. ಬೆಂಗಳೂರು ಮಹಾನಗರಕ್ಕೆ ಹಾಲು, ಹಣ್ಣು, ತರಕಾರಿ ಮುಂತಾದ ದಿನನಿತ್ಯದ ಅಗತ್ಯಗಳನ್ನು ಪೂರೈಸುವ ಅಮೂಲ್ಯ ಆಹಾರದ ಕಣಜವಾಗಿದೆ. ಇಂತಹ ಸುಸ್ಥಿರ ಬದುಕಿನ ಮೇಲೆ ಪರಿಣಾಮ ಬೀರುವ ಅನ್ಯಾಯದ ಭೂ ಸ್ವಾಧೀನವನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ’ ಎಂದರು.

‘ಒಂದೂವರೆ ವರ್ಷದಿಂದ ವಿವಿಧ ಮಾದರಿಯಲ್ಲಿ ರೈತರು ತಮ್ಮ ಬಲವಾದ ವಿರೋಧವನ್ನು ದಾಖಲಿಸಿದ್ದರೂ, 428 ದಿನದಿಂದ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದರೂ ರೈತರ ಜೊತೆ ಸಮಾಲೋಚನೆ ನಡೆಸದೆ, ಸಚಿವ ಸಂಪುಟದಲ್ಲಿ ಯೋಜನೆಗೆ ಅನುಮೋದನೆ ನೀಡಿರುವುದು ರೈತರ ಹಕ್ಕುಗಳ ಉಲ್ಲಂಘನೆ ಹಾಗೂ ಸರ್ವಾಧಿಕಾರಿ ಕ್ರಮ’ ಎಂದು ದೂರಿದರು.

‘3,500ಕ್ಕೂ ಹೆಚ್ಚು ಸಣ್ಣ ಮತ್ತು ಅತಿಸಣ್ಣ ರೈತರು ಈ ಭಾಗದಲ್ಲಿದ್ದಾರೆ. ಸ್ವತಃ ರಿಯಲ್ ಎಸ್ಟೇಟ್ ಉದ್ದಿಮೆ ನಡೆಸುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರೈತರ ಬಲವಾದ ವಿರೋಧವನ್ನು ಕಡೆಗಣಿಸಿ ಈ ಯೋಜನೆ ಪರವಾಗಿ, ಸರ್ಕಾರ ಹಾಗೂ ಅಧಿಕಾರಿಗಳ ಮೇಲೆ ಪ್ರಭಾವ, ಒತ್ತಡಹಾಕಿ ಆಡಳಿತ ಯಂತ್ರದ ದುರ್ಬಳಕೆ ಮಾಡಿಕೊಂಡಿದ್ದಾರೆ’ ಎಂದು ದೂರಿದರು.

‘ಬೈರಮಂಗಲ ಹಾಗೂ ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರ ಹೋರಾಟಕ್ಕೆ ಸಂಯುಕ್ತ ಹೋರಾಟ– ಕರ್ನಾಟಕ ಸಮಿತಿ ಬೆಂಬಲ ನೀಡಲಿದೆ’ ಎಂದು ಸದಸ್ಯರಾದ ಟಿ. ಯಶವಂತ, ಸಿದ್ದನಗೌಡ ಪಾಟೀಲ, ಪಿ.ಪಿ ಅಪ್ಪಣ್ಣ, ನೂರ್ ಶ್ರೀಧರ್, ಎಚ್.ಪಿ. ಶಿವಪ್ರಕಾಶ್ ಹೇಳಿದರು.

ರಾಜ್ಯಮಟ್ಟದ ಕಾರ್ಯಾಗಾರ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಸೌಹಾರ್ದ ಕರ್ನಾಟಕ ಜಂಟಿಯಾಗಿ ಮೇ 30, 31ರಂದು ಜನಮುಖಿ ಸಾಹಿತ್ಯ ಕುರಿತು 200 ಯುವ ಬರಹಗಾರರಿಗೆ ರಾಜ್ಯಮಟ್ಟದ ಕಾರ್ಯಾಗಾರ ಆಯೋಜಿಸಿದೆ.

ಕಬ್ಬನ್ ಉದ್ಯಾನದಲ್ಲಿರುವ ಸಚಿವಾಲಯದ ಕ್ಲಬ್‌ನ ಚನ್ನಬಸಪ್ಪ ಸಭಾಂಗಣದಲ್ಲಿ ನಡೆಯುವ ಕಾರ್ಯಾಗಾರದಲ್ಲಿ ಸಾಹಿತಿಗಳು ವಿಚಾರ ಮಂಡಿಸಿ, ಯುವ ಬರಹಗಾರರೊಂದಿಗೆ ಸಂವಾದ ನಡೆಸಲಿದ್ದಾರೆ. ಭಾಗವಹಿಸುವವರಿಗೆ ಊಟ, ವಸತಿ ವ್ಯವಸ್ಥೆ ಇರಲಿದೆ.

ಆಸಕ್ತರು ₹100 ಶುಲ್ಕ ಪಾವತಿಸಿ ಮೇ 25ರೊಳಗೆ ನೋಂದಣಿ ಮಾಡಿಸಬಹುದು. ಮಾಹಿತಿಗೆ 9449505789, 9632329955 ಸಂಪರ್ಕಿಸುವಂತೆ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ತಿಳಿಸಿದ್ದಾರೆ.

500 ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಬದುಕು ರೂಪಿಸಲು ಪೋಷಕರು ಶ್ರಮಿಸುತ್ತಾರೆ. ಇದನ್ನು ಮನಗಂಡು ಪೋಷಕರ ಮನೋಭಿಲಾಶೆಯಂತೆ ಮಕ್ಕಳು ಉತ್ತಮ ಬದುಕು ರೂಪಿಸಿಕೊಳ್ಳಬೇಕು ಎಂದು ಬೆಂಗಳೂರು ಸಹಕಾರ ಹಾಲು ಒಕ್ಕೂಟದ (ಬಮೂಲ್) ಅಧ್ಯಕ್ಷ ಡಿ.ಕೆ. ಸುರೇಶ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬೆಂಗಳೂರು ಸಹಕಾರ ಹಾಲು ಒಕ್ಕೂಟ, ಬಮೂಲ್ ಕಲ್ಯಾಣ ಟ್ರಸ್ಟ್ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರು ಮತ್ತು ಸಿಬ್ಬಂದಿಯ ಸುಮಾರು 500 ಮಕ್ಕಳಿಗೆ ಪ್ರತಿಭಾ ಪುರಸ್ಕಾರದ ಚೆಕ್ ವಿತರಿಸಿ ಮಾತನಾಡಿದರು.

‘ಮಕ್ಕಳು ಇತ್ತೀಚಿನ ದಿನಗಳಲ್ಲಿ ಮೊಬೈಲ್ ಗೀಳಿಗೆ ಒಳಗಾಗಿದ್ದು, ಸಮಯ ವ್ಯರ್ಥ ಮಾಡುತ್ತಿದ್ದಾರೆ. ಪೋಷಕರು ಯಾರ ಹಿತಕ್ಕಾಗಿ ಕಷ್ಟ ಪಡುತ್ತಿದ್ದಾರೆ ಎಂಬುದನ್ನು ಮಕ್ಕಳು ಅರ್ಥ ಮಾಡಿಕೊಳ್ಳಬೇಕು’ ಎಂದರು.

‘ಲೋಕಸಭಾ ಚುನಾವಣೆಯಲ್ಲಿ ಸೋತ ಕಾರಣಕ್ಕಾಗಿ ಬಮೂಲ್ ಅಧ್ಯಕ್ಷನಾಗಿಲ್ಲ. ಬದುಕಿನಲ್ಲಿ ಸೋಲು–ಗೆಲುವು ಇರುತ್ತದೆ. ಗೆಲುವಿಗಿಂತ ಸೋಲಿನಿಂದಲೇ ಹೆಚ್ಚು ಪಾಠ ಕಲಿಯುವುದಿದೆ. ನಷ್ಟದಲ್ಲಿದ್ದ ಬಮೂಲ್ ಸಂಸ್ಥೆಯನ್ನು ಎಲ್ಲಾ ನಿರ್ದೇಶಕರ ಸಲಹೆ, ಸಹಕಾರದೊಂದಿಗೆ ಲಾಭದಲ್ಲಿ ನಡೆಯುವಂತೆ ಮಾಡಿದ್ದೇವೆ’ ಎಂದರು.

ಬೆಂಗಳೂರು ಸಹಕಾರ ಹಾಲು ಒಕ್ಕೂಟ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರು ಮತ್ತು ಸಿಬ್ಬಂದಿಯ ಸುಮಾರು 500 ಮಕ್ಕಳಿಗೆ ಪ್ರತಿಭಾ ಪುರಸ್ಕಾರದ ಚೆಕ್ ವಿತರಿಸಲಾಯಿತು

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, ‘ಹೈನುಗಾರಿಕೆ ಅತ್ಯಂತ ಸವಾಲಿನ ಕೆಲಸವಾಗಿ ಪರಿಣಮಿಸಿದೆ. ಒಬ್ಬ ಕೃಷಿಕನಾಗಿ ಹತ್ತಾರು ಹಸುಗಳನ್ನು ಸಾಕುತ್ತಿದ್ದೇನೆ’ ಎಂದರು.

ಬಮೂಲ್ ನಿರ್ದೇಶಕ ಸತೀಶ್ ಕಡತನಮಲೆ ಮಾತನಾಡಿ, ರೈತರಿಗೆ ಹಸು ಖರೀದಿಗೆ, ಶೆಡ್ ನಿರ್ಮಾಣಕ್ಕೆ ಸಾಲ, ಆರ್ಥಿಕ ನೆರವು ನೀಡಿದ್ದೇವೆ ಎಂದರು.

ಸಹಕಾರ ಕ್ಷೇತ್ರದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ಎಂಟು ಜನ ಗಣ್ಯರನ್ನು ಸನ್ಮಾನಿಸಲಾಯಿತು.

ಬೆಂಗಳೂರು ಸಹಕಾರ ಹಾಲು ಒಕ್ಕೂಟದ ಉಪಾಧ್ಯಕ್ಷ ಡಾ.ರಾಜಣ್ಣ, ನಿರ್ದೇಶಕರಾದ ಬಿ.ಸಿ.ಆನಂದ್ ಕುಮಾರ್, ಆರ್.ಕೆ.ರಮೇಶ್, ಎಚ್.ಎನ್. ಅಶೋಕ್, ಎಸ್.ಲಿಂಗೇಶ್ ಕುಮಾರ್, ಎಚ್.ಎಸ್. ಹರೀಶ್ ಕುಮಾರ್, ಬೈರೇಗೌಡ, ಬಿ.ವಿ. ಸತೀಶ್ ಗೌಡ, ಎಸ್.ಪಿ. ಮುನಿರಾಜು, ರಾಜಾನುಕುಂಟೆ ಶಿಬಿರ ಕಚೇರಿಯ ಉಪ ವ್ಯವಸ್ಥಾಪಕ ಪ್ರಸನ್ನ ವಿ.ಪಿ. ಇದ್ದರು.

ಒಂದು ರಾಷ್ಟ್ರ–ಒಂದು ಚುನಾವಣೆ: ಶಿಫಾರಸಿಗೆ ಸಂಸದೀಯ ಸಮಿತಿ ಚಿಂತನೆ

‘ಸರ್ಕಾರ ಬಿದ್ದರೆ ಮಧ್ಯಂತರ ಚುನಾವಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಂದು ರಾಷ್ಟ್ರ–ಒಂದು ಚುನಾವಣೆ’ ಅನುಷ್ಠಾನಗೊಂಡ ನಂತರ ಯಾವುದೇ ರಾಜ್ಯದಲ್ಲಿ ಸರ್ಕಾರ ಅವಧಿಗೆ ಮೊದಲೇ ಪತನವಾಗಿ, ಇತರೆ ಪಕ್ಷಗಳು ಹೊಸ ಸರ್ಕಾರ ರಚಿಸಲು ವಿಫಲವಾದರೆ ರಾಷ್ಟ್ರಪತಿ ಆಳ್ವಿಕೆ ಬದಲು ಉಳಿದ ಮಧ್ಯಂತರ ಅವಧಿಗೆ ಮಾತ್ರ ಚುನಾವಣೆ ನಡೆಸುವ ಚಿಂತನೆ ನಡೆದಿದೆ.

‘ಒಂದು ರಾಷ್ಟ್ರ ಒಂದು ಚುನಾವಣೆ’ ಕುರಿತ ಜಂಟಿ ಸಂಸದೀಯ ಸಮಿತಿಯು ಕರ್ನಾಟಕದಲ್ಲಿ ಮೂರು ದಿನ, ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಸಾರ್ವಜನಿಕರ ಜತೆ ಸಂವಾದ ನಡೆಸಿತು. ಅಂತಿಮ ದಿನವಾದ ಸೋಮವಾರ ಪದ್ಮ ಪ್ರಶಸ್ತಿ ಪುರಸ್ಕೃತರು, ಮಾಧ್ಯಮ ಪ್ರತಿನಿಧಿಗಳ ಅಭಿಪ್ರಾಯ ಸಂಗ್ರಹಿಸಿದ ನಂತರ ಸಮಿತಿ ಅಧ್ಯಕ್ಷ ಪಿ.ಪಿ.ಚೌಧರಿ ಈ ಕುರಿತು ಮಾಹಿತಿ ನೀಡಿದರು.

‘ಈಗ ಇರುವ ನಿಯಮದಂತೆ ಅವಧಿಗೂ ಮೊದಲು ಯಾವುದೇ ರಾಜ್ಯದ ಸರ್ಕಾರ ಪತನವಾದರೆ ವಿರೋಧ ಪಕ್ಷಗಳು ಸರ್ಕಾರ ರಚನೆಯ ಹಕ್ಕು ಮಂಡಿಸಬಹುದು. ಸಾಧ್ಯವಾಗದಿದ್ದರೆ ರಾಷ್ಟ್ರಪತಿ ಆಡಳಿತ ಜಾರಿಗೆ ತಂದು ನಂತರ ಆರು ತಿಂಗಳ ಒಳಗೆ ಹೊಸದಾಗಿ ಚುನಾವಣೆ ನಡೆಸಲಾಗುತ್ತದೆ. ಬಹುಮತ ಪಡೆದ ಪಕ್ಷ ಐದು ವರ್ಷ ಆಡಳಿತ ನಡೆಸುತ್ತದೆ. ಈ ವ್ಯವಸ್ಥೆಯಿಂದಾಗಿ, ಪ್ರತಿ ವರ್ಷ ಕನಿಷ್ಠ ಐದು ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿದೆ. ಒಂದು ರಾಷ್ಟ್ರ–ಒಂದು ಚುನಾವಣೆ ಜಾರಿಯಾದರೆ ಉಳಿದ ಮಧ್ಯಂತರ ಅವಧಿಗಷ್ಟೇ ಚುನಾಚಣೆ ನಡೆಸುವ ಕುರಿತು ಪ್ರಸ್ತಾವ ಇದೆ. ಒಮ್ಮತ ಮೂಡಿಬಂದರೆ ವರದಿಯಲ್ಲಿ ಈ ಅಂಶವೂ ಸೇರಿದಂತೆ ಹಲವು ಸಾಧ್ಯತೆಗಳನ್ನು ಸಮಿತಿ ಶಿಫಾರಸು ಮಾಡಲಿದೆ’ ಎಂದರು.

‘ಒಂದು ರಾಷ್ಟ್ರ ಒಂದು ಚುನಾವಣೆಯು ಪ್ರಾದೇಶಿಕ ಪಕ್ಷಗಳ ಅಸ್ತಿತ್ವಕ್ಕೆ ಪೆಟ್ಟು ಕೊಡಲಿದೆ ಎಂಬ ಜೆಡಿಎಸ್ ಪಕ್ಷದ ಆತಂಕ ಅನಗತ್ಯ. ಮತದಾರರು ಪ್ರಬುದ್ಧರಿದ್ದಾರೆ. ಲೋಕಸಭೆಗೆ ಯಾರನ್ನು ಆಯ್ಕೆ ಮಾಡಬೇಕು, ವಿಧಾನಸಭೆಗೆ ಯಾರನ್ನು ಆಯ್ಕೆ ಮಾಡಬೇಕು. ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸುವ ಪ್ರತಿನಿಧಿ ಯಾರು ಎಂಬ ಬಗ್ಗೆ ಸ್ಪಷ್ಟತೆ ಇದೆ. ಹಾಗಾಗಿ, ಪ್ರಾದೇಶಿಕ ಪಕ್ಷಗಳಿಗೆ ತೊಂದರೆಯಾಗದು’ ಎಂದು ಹೇಳಿದರು.

‘ದೇಶದಲ್ಲಿ ಪ್ರತಿ ವರ್ಷ ಐದಾರು ರಾಜ್ಯಗಳ ವಿಧಾನಸಭೆಗಳಿಗೆ ಸಾರ್ವತ್ರಿಕ ಚುನಾವಣೆ ನಡೆಯುತ್ತವೆ. ಅದಕ್ಕಾಗುವ ಖರ್ಚು-ವೆಚ್ಚ, ಸಮಯ ಸೇರಿದಂತೆ ಹಲವು ರೀತಿಯಲ್ಲಿ ಪರಿಣಾಮ ಬೀರುತ್ತಿದೆ. ಒಂದೇ ಚುನಾವಣೆಯಿಂದ ದೇಶಕ್ಕೆ ಹಲವು ಅನುಕೂಲಗಳಿವೆ. ಲೋಕಸಭೆ ಮತ್ತು ಎಲ್ಲ ರಾಜ್ಯಗಳ ವಿಧಾನಸಭೆಗೆ ಚುನಾವಣೆ ನಡೆಸಲು ಆಗುತ್ತಿರುವ ಒಟ್ಟು ವೆಚ್ಚದಲ್ಲಿ, ಸುಮಾರು ₹7.50 ಲಕ್ಷ ಕೋಟಿಯಷ್ಟು ಉಳಿತಾಯ ಮಾಡಬಹುದು’ ಎಂದರು.

‘ಒಂದು ಚುನಾವಣೆಯು ಒಂದು ರಾಷ್ಟ್ರ– ಒಂದು ಪಕ್ಷ ಎಂಬ ಭವಿಷ್ಯದ ಕಾರ್ಯಸೂಚಿಯ ಭಾಗವೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 1950ರಿಂದ 1967ರ ಅವಧಿಯಲ್ಲಿ ನಾಲ್ಕು ಬಾರಿ ಇಡೀ ದೇಶದಲ್ಲಿ ಒಟ್ಟಿಗೇ ಚುನಾವಣೆಗಳು ನಡೆದವು. ಆಗ ಸಮಸ್ಯೆ ಇರಲಿಲ್ಲವೇ?’ ಎಂದು ಮರು ಪ್ರಶ್ನಿಸಿದರು.

‘ಒಳ್ಳೆಯ ಆಲೋಚನೆ; ಜಾರಿಯೇ ಸವಾಲು’

ಒಂದು ದೇಶ–ಒಂದು ಚುನಾವಣೆ ಒಳ್ಳೆಯ ಆಲೋಚನೆ, ಪ್ರಗತಿಪರ ಚಿಂತನೆ. ಆದರೆ, ಭಾರತದಂತಹ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದರ ಜಾರಿಯೇ ಸವಾಲು ಎಂದು ಹಲವು ಪ್ರಮುಖರು ಸಮಿತಿಯ ಮುಂದೆ ಅಭಿಪ್ರಾಯ ಮಂಡಿಸಿದರು.

ಮೂರು ದಿನಗಳಲ್ಲಿ ಸಮಿತಿಯು ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪೊಲೀಸ್ ಇಲಾಖೆ ಮುಖ್ಯಸ್ಥರೂ ಸೇರಿ ವಿವಿಧ ಇಲಾಖೆ ಅಧಿಕಾರಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿತು. ಎಚ್‌ಎಎಲ್, ಬಿಇಎಲ್, ಬಿಇಎಂಎಲ್, ಬಿಎಚ್‌ಇಎಲ್, ಕೆಐಒಸಿಎಲ್, ಕೆಪಿಸಿಎಲ್ ಪ್ರತಿನಿಧಿಗಳಿಂದಲೂ ಅಭಿಪ್ರಾಯಗಳನ್ನು ಸಂಗ್ರಹಿಸಿತು. ಒಂದೇ ಬಾರಿಗೆ ದೇಶದಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಆಗುವ ಸಾಧಕ-ಬಾಧಕಗಳ ಬಗ್ಗೆ ಚರ್ಚೆ ನಡೆಸಿತು.

‘ಮಾಧ್ಯಮದಲ್ಲಿ ಮಹಿಳೆಯರಿಗೆ ಇನ್ನಷ್ಟು ಅವಕಾಶ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ಮಹಿಳೆಯರು, ತಳ ಸಮುದಾಯ ಹಾಗೂ ಅಲ್ಪಸಂಖ್ಯಾತರಿಗೆ ಅತ್ಯಲ್ಪ ಪ್ರಾತಿನಿಧ್ಯ ಇದೆ. ಸಮಾಜದ ಸಮಗ್ರ ಜನಾಭಿಪ್ರಾಯ, ಅಭಿವ್ಯಕ್ತಿಯ ದೃಷ್ಟಿಯಿಂದ ಈ ಪ್ರಮಾಣವನ್ನು ಹೆಚ್ಚಿಸುವ ಅಗತ್ಯವಿದೆ ಎಂದು ಪತ್ರಕರ್ತ ಡಿ.ಉಮಾಪತಿ ಪ್ರತಿಪಾದಿಸಿದ್ದಾರೆ.

ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂವಹನ ವಿಭಾಗಗಳ ಸಹಯೋಗದಲ್ಲಿ ಬದುಕು ಸೆಂಟರ್ ಫಾರ್ ಲೈವ್ಲಿಹುಡ್ ಸಂಸ್ಥೆ ಆಯೋಜಿಸಿದ್ದ ‘ಮಾಧ್ಯಮ ಮಂಥನ’ ಸಂವಾದದಲ್ಲಿ ಅವರು ಮಾತನಾಡಿದರು.

ನ್ಯೂಸ್ ಲಾಂಡ್ರಿ ಸಮೀಕ್ಷಾ ತಂಡ ನಡೆಸಿದ ಅಧ್ಯಯನ ವರದಿ ಉಲ್ಲೇಖಿಸಿ ಮಾತನಾಡಿದ ಅವರು, ಒಟ್ಟಾರೆ ಶೇಕಡ 87ರಷ್ಟು ಪ್ರಮುಖ ಹುದ್ದೆಗಳು ಪುರುಷರ ಪಾಲಾಗಿವೆ ಹಾಗೂ ನಾಯಕತ್ವ ಸ್ಥಾನಗಳಲ್ಲಿ ಒಬಿಸಿ ಮತ್ತು ಅಲ್ಪಸಂಖ್ಯಾತರ ಪ್ರಾತಿನಿಧ್ಯ ಕೇವಲ ಶೇಕಡ 12 ರಷ್ಟಿದ್ದು, ಪರಿಶಿಷ್ಟರ ಪ್ರಮಾಣ ಬಹುತೇಕ ಶೂನ್ಯವಾಗಿದೆ ಎಂದು ವಿವರಿಸಿದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಮುದ್ರಣ ಮಾಧ್ಯಮ ಸಂಕುಚಿತಗೊಳ್ಳುತ್ತಿದ್ದು, ಡಿಜಿಟಲ್ ವೇದಿಕೆಗಳಲ್ಲಿ ಹೊಸ ಅವಕಾಶಗಳು ತೆರೆದುಕೊಂಡಿವೆ.

ಹಾಗಾಗಿ ಪತ್ರಿಕೋದ್ಯಮ ವಿದ್ಯಾರ್ಥಿಗಳು ಭಾಷಾ ಪರಿಣತಿ ಮತ್ತು ತಂತ್ರಜ್ಞಾನ ಕೌಶಲ ಬೆಳೆಸಿಕೊಳ್ಳುವ ಅಗತ್ಯವಿದೆ ಎಂದು ಸಲಹೆ ನೀಡಿದರು.

ಪತ್ರಕರ್ತೆ ಮಂಜುಶ್ರೀ ಕಡಕೋಳ ಮಾತನಾಡಿ, ಮಾಧ್ಯಮ ರಂಗ ಪ್ರವೇಶಿಸಲು ಕಠಿಣ ಪರಿಶ್ರಮ ಮತ್ತು ದೃಢ ಸಂಕಲ್ಪದ ಅಗತ್ಯವಿದೆ. ದೇವದಾಸಿಯರ ಸಮಸ್ಯೆಗಳ ಕುರಿತ ತಮ್ಮ ವರದಿಗಳಿಂದ ಉತ್ತಮ ಸಾಮಾಜಿಕ ಪರಿಣಾಮ ಬೀರಲು ಸಾಧ್ಯವಾಯಿತು ಎಂದು ತಿಳಿಸಿದರು.

ಸಂವಾದ ಕಾರ್ಯಕ್ರಮಕ್ಕೆ ಕುಲಸಚಿವ ಎ. ನವೀನ್ ಜೋಸೆಫ್ ಚಾಲನೆ ನೀಡಿದರು. ಕುಲಪತಿ ಪ್ರೊ. ರಮೇಶ್.ಬಿ ಅಧ್ಯಕ್ಷತೆ ವಹಿಸಿದ್ದರು.

24ಕ್ಕೆ ನಿತಿನ್ ನವೀನ್ ಸಭೆ

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಇದೇ 24 ಕ್ಕೆ ಬೆಂಗಳೂರಿಗೆ ಬರಲಿದ್ದು, ಇಡೀ ದಿನ ಸರಣಿ ಸಭೆಗಳನ್ನು ನಡೆಸುವ ಮೂಲಕ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಪಕ್ಷವನ್ನು ಸಜ್ಜುಗೊಳಿಸುವ ಕಾರ್ಯಕ್ಕೆ ಒತ್ತು ನೀಡಲಿದ್ದಾರೆ.

ಅಧ್ಯಕ್ಷ ಹುದ್ದೆಯ ಚುಕ್ಕಾಣಿ ಹಿಡಿದ ಬಳಿಕ ಇದೇ ಮೊದಲ ಬಾರಿಗೆ ರಾಜ್ಯಕ್ಕೆ ಭೇಟಿ ನೀಡಲಿರುವ ನಿತಿನ್ ನವೀನ್ ಅವರು ರಾಜ್ಯ ಪದಾಧಿಕಾರಿಗಳು ಮತ್ತು ಪ್ರಮುಖರ ಸಮಿತಿ ಸಭೆಗಳಲ್ಲಿ ವಿಶೇಷವಾಗಿ 2028 ರ ವಿಧಾನಸಭೆ ಚುನಾವಣೆ ಸಿದ್ಧತೆ ನಡೆಸುವ ಕುರಿತೂ ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅದೇ ದಿನ ಅವರು ಪ್ರಶಿಕ್ಷಣ ವರ್ಗದ ಸಭೆ ಮತ್ತು ಎಸ್‌ಐಆರ್ ಕುರಿತ ಸಭೆಯನ್ನೂ ನಡೆಸಲಿದ್ದಾರೆ.

ಕಾಣೆಯಾಗಿದ್ದಾರೆ

ಪುಷ್ಪ
55 ವರ್ಷ ವಯಸ್ಸಿನ, ಕನ್ನಡ ಬಲ್ಲವರಾದ ಇವರು ಜಕ್ಕೂರಿನಿಂದ ಕಾಣೆಯಾಗಿದ್ದಾರೆ.
ಇವರು ಕಂಡಲ್ಲಿ ಕರೆ ಮಾಡಿ :
9900846632
9880572397

ನಗರದಲ್ಲಿ ಇಂದು

2025–26ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್, ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಚಟುವಟಿಕೆಗಳ ಸಮಾರೋಪ ಸಮಾರಂಭ: ಅತಿಥಿಗಳು: ಹಿ.ಚಿ. ಬೋರಲಿಂಗಯ್ಯ, ಗಿರೀಶ್ ಎಚ್.ಎನ್., ಉಪಸ್ಥಿತಿ: ಕೆ.ಆರ್. ನಿರ್ಮಲ್ ಕುಮಾರ್, ಬಿ.ಸಿ. ಶಿವಲಿಂಗೇಗೌಡ, ಎನ್.ಎಸ್. ವಿಜಯ, ಬಿ.ಎಲ್. ನಂದಿನಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿಇಎಸ್ ಕಾಲೇಜು, ನಾಲ್ಕನೇ ಬಡಾವಣೆ, ಜಯನಗರ, ಬೆಳಿಗ್ಗೆ 10

ಕರ್ನಾಟಕದ ಮೊದಲ ಎಂಆರ್–ಲಿನಾಕ್ ಫಾರ್ ನೆಕ್ಸ್ಟ್ ಜನರೇಷನ್ ಕ್ಯಾನ್ಸರ್ ಕೇರ್‌ನ ಉದ್ಘಾಟನೆ: ಸುದೀಪ್, ಉಪಸ್ಥಿತಿ: ಡಾ.ಬಿ.ಎಸ್. ಅಜಯ್ ಕುಮಾರ್, ಡಾ. ಮನೀಶ್ ಎಂ., ಮನೀಶ ಕುಮಾರ್, ಸಚೀನ್ ಎಸ್.ಇ., ಆಯೋಜನೆ ಮತ್ತು ಸ್ಥಳ: ಎಚ್‌ಸಿಜಿ ಕ್ಯಾನ್ಸರ್ ಹಾಸ್ಪಿಟಲ್ ಹೆಬ್ಬಾಳ, ಬೆಳಿಗ್ಗೆ 11

ಸುದೀಪ್

ಪರ್ವತವಾಣಿ ಎರಡು ಸಾಮಾಜಿಕ ನಾಟಕಗಳ ಉತ್ಸವ, ಕರೋಕೆ ಗಾಯನ: ಉದ್ಘಾಟನೆ: ದೊಡ್ಡಮನೆ ವೆಂಕಟೇಶ್, ಅಧ್ಯಕ್ಷತೆ: ಅಶೋಕ್, ಅತಿಥಿಗಳು: ಎಸ್. ತಿಮ್ಮಯ್ಯ, ಪ್ರಕಾಶ್, ಹನುಮಂತರಾಜು, ನಿಶಾ ಗಂಗಾಧರ್, ಕೆ.ಎಸ್. ಶ್ಯಾಮಲಾ, ಜಯಂತಿ, ‘ಕಂಬಳಿ ಸೇವೆ’, ‘ಹಗ್ಗದ ಕೊನೆ’ ನಾಟಕಗಳ ಪ್ರದರ್ಶನ, ಆಯೋಜನೆ: ದೃಶ್ಯರಂಗ ಕಲಾ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

‘ಅಧಿಕ ಮಾಸ ಮಹಾತ್ಮೆ’ ಧಾರ್ಮಿಕ ಪ್ರವಚನ: ಕಂಬಾಲೂರು ಶ್ರೀವತ್ಸಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, 11ನೇ ಅಡ್ಡರಸ್ತೆ, ತ್ಯಾಗರಾಜನಗರ, ಸಂಜೆ 6

‘ರಂಗ ವೈವಿಧ್ಯ’ ವಿಭಿನ್ನ ನಾಟಕಗಳ ಉತ್ಸವ: ‘ಜ್ಞಾತಪರ್ವ’ ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ಕಾರ್ತಿಕ್ ಭಟ್, ಪುನೀತ್, ಸಾಹಿತ್ಯ, ಸಂಗೀತ: ಹರಿಪ್ರಸಾದ್, ನಿರ್ವಹಣೆ: ಬಿ.ಎಂ. ದಿಲೀಪ್, ತಂಡ: ದಕ್ಷತರಂಗ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

‘ನಕ್ಷತ್ರ ಯಾತ್ರಿಕರು’ ನಾಟಕ ಪ್ರದರ್ಶನ: ನಿರ್ದೇಶನ: ಪ್ರಸನ್ನ ಜಿ.ವಿ., ಆಯೋಜನೆ: ಆಯಾಮ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕೋಗಿಲು ನಿವಾಸಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವೇ ನೀಡಿದ ಭರವಸೆಯಂತೆ ಕೋಗಿಲು ಪ್ರದೇಶದಲ್ಲಿ ನೆಲೆ ಕಳೆದುಕೊಂಡವರಿಗೆ ಸೂರು ಒದಗಿಸಬೇಕು ಎಂದು ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಕೋಗಿಲು ಲೇಔಟ್ ಸ್ಲಂ ನಿವಾಸಿಗಳ ಹೋರಾಟ ಸಮಿತಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಮಳೆಯನ್ನೂ ಲೆಕ್ಕಿಸದೇ ಮಹಿಳೆಯರು, ಮಕ್ಕಳು ಭಾಗಿಯಾದರು.

‘ಮನೆ ತೆರವುಗೊಳಿಸಿದ ಎಂಟು ದಿನಗಳ ನಂತರ ಶಾಸಕರು, ಸಚಿವರು, ಮುಖ್ಯಮಂತ್ರಿ ಅವರು ಪುನರ್ವಸತಿಯ ಭರವಸೆ ನೀಡಿದ್ದರು. ರಾಜೀವ್ ಗಾಂಧಿ ವಸತಿ ನಿಗಮದವರು ಸಮೀಕ್ಷೆ ನಡೆಸಿ ವರದಿ ಸಲ್ಲಿಸಿದ್ದರು. ಕೆಲವರಿಗೆ ಹಕ್ಕು ಪತ್ರ ನೀಡಿದ್ದರೂ, ಹೆಚ್ಚಿನ ಮಂದಿ ಇನ್ನೂ ಬೀದಿಯಲ್ಲೇ ಬದುಕುತ್ತಿದ್ದೇವೆ. ಬಿಸಿಲು, ಮಳೆ, ಅನಾರೋಗ್ಯ ನಡುವೆ ಬದುಕು ಸಾಗಿದೆ. ಸಂವಿಧಾನದ ಆಶಯದಂತೆ ಸೂರನ್ನು ಒದಗಿಸಿ ನ್ಯಾಯ ಕಲ್ಪಿಸಬೇಕು’ ಎಂದು ಆಗ್ರಹಿಸಿದರು.

‘ಪರಿಶಿಷ್ಟ ಜಾತಿ, ಅಲ್ಪಸಂಖ್ಯಾತ, ಹಿಂದುಳಿದ ಪಂಗಡ ಹಾಗೂ ಅಸಂಘಟಿತ ಕಾರ್ಮಿಕರಾದ ನಮಗೆ ಅಗತ್ಯ ದಾಖಲೆ ಪಡೆಯಲು ತೊಡಕುಂಟಾಗಿದೆ. ಜಾತಿ, ಆದಾಯ ಪ್ರಮಾಣ ಪತ್ರ, ವಾಸ ಧೃಡೀಕರಣ ಪತ್ರ, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಕೇಳುತ್ತಿದ್ದು, ಮನೆ ಧ್ವಂಸವಾದಾಗ ಹಲವರು ದಾಖಲೆ ಕಳೆದುಕೊಂಡಿದ್ದಾರೆ. ಮನೆ ನೀಡಲು ಇರುವ ಅಗತ್ಯವಾದ ದಾಖಲೆಗಳನ್ನು ಒದಗಿಸಲು ಸರ್ಕಾರ ವಿಶೇಷ ಶಿಬಿರ ಆಯೋಜಿಸಬೇಕು. ದಾಖಲೆ ನೆಪವೊಡ್ಡಿ ಯಾರೊಬ್ಬರಿಗೂ ಪುನರ್ವಸತಿ ಕೈತಪ್ಪದಂತೆ ನೋಡಿಕೊಳ್ಳಬೇಕು’ ಎಂದು ಆಗ್ರಹಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ, ಭಾರತ

ಸಂ: ವಿ.ತಾ.ವಿ./ಬೆ/ಸ್ಥಾ.ಇ./2026–27/ಏ.ಎಸ್.ಟಿ.ಸಂ. 24/720 ದಿನಾಂಕ: 18–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ದ್ವಿ-ಲಕೋಟೆ ಪದ್ಧತಿ (ಕೆಪಿಪಿ ಪೋರ್ಟಲ್ ಮೂಲಕ)

ಕುಲಸಚಿವರು, ವಿಟಿಯು, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಯಂತೆ ಕೆ.ಡಬ್ಲ್ಯೂ-4 ಪ್ರಕಾರ ಕೆಪಿಪಿ ಪೋರ್ಟಲ್ ಮೂಲಕ ಟೆಂಡರನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: ವಿಟಿಯುವಿನ "ಜ್ಞಾನ ಸಂಗಮ", ಬೆಳಗಾವಿ ಆವರಣದಲ್ಲಿರುವ ಪಿ.ಜಿ ಕಟ್ಟಡದ ಎರಡನೇ ಮಹಡಿ ನಿರ್ಮಾಣ ಕಾಮಗಾರಿಯ ಮೊತ್ತ ರೂ.4,05,47,202/– (ತೆರಿಗೆ ರಹಿತ). ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ: 18–05–2026 ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

ವಾಸಾಸಂಇ/ಬೆಳಗಾವಿ/270/2026–27

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಗದಗ
ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ
ತಾಲೂಕಾ ಆಸ್ಪತ್ರೆ, ಮುಂಡರಗಿ

e-mail : talukahospitalmundaragi@gmail.com

ಕ್ರ.ಸಂ: ತಾ.ಆ.ಮು/ಸಿ.ಆರ್/ಹೊ.ಗು/ಟೆಂಡರ್/2026–27 ದಿನಾಂಕ: 16–05–2026

ಟೆಂಡರ್ ಪ್ರಕಟಣೆ

2026–27 ನೇ ಸಾಲಿಗಾಗಿ ತಾಲೂಕಾ ಆಸ್ಪತ್ರೆ ಮುಂಡರಗಿ ಇಲ್ಲಿಗೆ ಅವಶ್ಯವಾಗಿ ಬೇಕಾಗಿರುವ ಗ್ರೂಪ್ "ಡಿ" ಮತ್ತು ನಾನ್ ಕ್ಲಿನಿಕಲ್ ವೃಂದದ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಕುರಿತು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹಾಗೂ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26/05/2026 ರಂದು ಸಮಯ : 04:30 PM ಗಂಟೆಯವರೆಗೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/ ಮೂಲಕ Tender Ref. No–DHFWS/2026-27/SE2235 ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ.

ಸಹಿ/– ಆಡಳಿತ ವೈದ್ಯಾಧಿಕಾರಿಗಳು,
ತಾಲೂಕ ಸಾರ್ವಜನಿಕ ಆಸ್ಪತ್ರೆ,
ಮುಂಡರಗಿ

DIPR/Gadag/68/Deshpandepublicity/2026-27

ಶಾಲಾ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು 560001
ದೂರವಾಣಿ: 080-22213129

ಸಂ:ಶಾಶಿಇ/2026–27/ಇಂಡ್0663/2ನೇ ಕರೆ ದಿನಾಂಕ:18.05.2026

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ನಿರ್ದೇಶಕರು(ಮೈನಾರಿಟಿ), ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು–01, ಇವರು ಕೆ.ಟಿ.ಪಿ.ಪಿ. ಕಾಯ್ದೆ 1999ರ ಅನ್ವಯ ತಯಾರಕರು / ಡೀಲರ್ / ಪೂರೈಕೆದಾರ ಸಂಸ್ಥೆಗಳಿಂದ 2026–27ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ ಉರ್ದು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಪಾದರಕ್ಷೆಗಳನ್ನು ಪೂರೈಸಲು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರ್ ಆಹ್ವಾನಿಸಿದೆ.

ಈ ಟೆಂಡರ್‌ನಲ್ಲಿ ನೋಂದಾಯಿತ ಸಂಸ್ಥೆಗಳು ಭಾಗವಹಿಸಬಹುದಾಗಿದ್ದು, ವಿವರಗಳನ್ನು e-portal https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಂಡು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ : 26.05.2026 ರ ಸಂಜೆ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡುವುದು.

ಸಹಿ/–
ನಿರ್ದೇಶಕರು(ಮೈನಾರಿಟಿ)
ಆಯುಕ್ತರ ಕಛೇರಿ

ವಾಸಾಸಂಇ/ವಾಪ್ರ/ಜಿಎ/722/2026–27

ಕರ್ನಾಟಕ ಸರ್ಕಾರ

ಮೂಲಸೌಲಭ್ಯ ಅಭಿವೃದ್ಧಿ, ಬಂದರು–ಒಳನಾಡು ಜಲಸಾರಿಗೆ ಇಲಾಖೆ, ಪ್ರಾಂತೀಯ ಕಾರ್ಯನಿರ್ವಹಣಾಧಿಕಾರಿ
ಕರ್ನಾಟಕ ಜಲಸಾರಿಗೆ ಮಂಡಳಿ, ಬೆಂಗಳೂರು

ಕ್ರ.ಸಂ.ಒ.ಜಸಾ ಬೆ.ಪ್ರಿ ಸಿಆರ್–25 2025 ದಿನಾಂಕ: 18.05.2026

ಬಹಿರಂಗ ಹರಾಜು / ಟೆಂಡರ್ ಪ್ರಕಟಣೆ 4ನೇ ಕರೆ

ವಿಷಯ: ಉಡುಪಿ ಕಡವು ಸೇವೆಯ ಹೊನ್ನಾವರ ವಲಯದ ಉಡುಪಿ ಜಿಲ್ಲೆಯ ಹಂಗಾರಕಟ್ಟ ಕೋಡಿಬೆಂಗ್ರೆ ಕಡವು ಸೇವೆಯಲ್ಲಿರುವ ಮಿನಿ ಎಲ್.ಸಿ.ಟಿ., ಕಾವೇರಿ ಬಾರ್ಜನ್ನು ಬಹಿರಂಗ ಹರಾಜು ಕಂ. ಟೆಂಡರ್ 4ನೇ ಕರೆಯನ್ನು ಪ್ರಾರಂಭಗೊಳಿಸಿ ಒಳ್ಳೆಯದ ಹಾಗೂ Decorate ಮಾಡಿ ಕಡವು ಸೇವೆಯನ್ನು ನಡೆಸಲು ಕುರಿತು.

ಕರ್ನಾಟಕ ಜಲಸಾರಿಗೆ ಮಂಡಳಿಯ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಕಡವು ವಲಯ ವ್ಯಾಪ್ತಿಯ ಉಡುಪಿ ಜಿಲ್ಲೆಯ ಹಂಗಾರಕಟ್ಟ ಕೋಡಿಬೆಂಗ್ರೆ ಕಡವಿನಲ್ಲಿ ಕಡವು ಸೇವೆಯನ್ನು ಸಾರ್ವಜನಿಕರ ಸಾರಿಗೆ ಮಂಡಳಿಯಿಂದ ಒದಗಿಸಲಾದ ಮಿನಿ ಎಲ್.ಸಿ.ಟಿ. ಎಮ್.ವಿ. ಕಾವೇರಿ ನಾವೆಯನ್ನು 03 ವರ್ಷಗಳ ಅವಧಿಗೆ ಚಾಲನೆ ಮತ್ತು ನಿರ್ವಹಣೆಯೊಂದಿಗೆ ಪ್ರಯಾಣಿಕರಿಗೆ / ಪ್ರವಾಸಿಗರಿಗೆ ಹಾಗೂ ಸರಕುಗಳನ್ನು ಹಲ್ಲ ಆಧಾರದ ಕಡವು ಸೇವೆಗಳನ್ನು ನಡೆಸಲು ಬಹಿರಂಗ ಹರಾಜು ಕಂ Manual Tender ಟೆಂಡರ್ ಪ್ರಕಟಣೆ ಹೊರಡಿಸಲಾಗಿರುತ್ತದೆ.

ಬಹಿರಂಗ ಹರಾಜು ಕಂಟೆಂಡರನ್ನು ದಿನಾಂಕ: 03.06.2026 ರಂದು ಉಪ ಕಡವು ನಿರೀಕ್ಷಕರ ಕಛೇರಿ, ಹೊನ್ನಾವರದಲ್ಲಿ ಕೈಗೊಳ್ಳಲಾಗುವುದು, ಸದರಿ ಬಹಿರಂಗ ಹರಾಜು ಕಂಟೆಂಡರ ನಲ್ಲಿ ಭಾಗವಹಿಸಲು ಆಸಕ್ತ ಹೊಂದಿರುವ ಸಂಘ / ಸಂಸ್ಥೆಯವರು / ಖಾಸಗಿ ಸಂಸ್ಥೆ / ವ್ಯಕ್ತಿಗಳು (ಸಾರ್ವಜನಿಕರು) ರೂ 500–00 ಗಳನ್ನು ನಗದು ಇಲ್ಲವೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ಜಲಸಾರಿಗೆ ಮಂಡಳಿ ಇವರ ಹೆಸರಲ್ಲಿ Demand Draft ಸಂ ದಿನಾಂಕ: 25.05.2026 ರೊಳಗೆ ನೀಡಿ (ಸರಕಾರಿ ರಜಾ ದಿನಗಳ ಹೊರತುಪಡಿಸಿ) ನೊಂದಾಯಿಸಿಕೊಳ್ಳತಕ್ಕದ್ದು.

ಈ ಮೇಲಿನ ಟೆಂಡರಿಗೆ ಸಂಬಂಧಿಸಿದಂತೆ, ಸವಿವರವಾದ ಮಾಹಿತಿ / ಷರತ್ತುಗಳನ್ನು, ಉಪ ಕಡವು ನಿರೀಕ್ಷಕರು, ಹೊನ್ನಾವರ ವಲಯ, ಹೊನ್ನಾವರ ಇವರ ಕಛೇರಿಯ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/–
ಪ್ರಾಂತೀಯ ಕಾರ್ಯನಿರ್ವಹಣಾಧಿಕಾರಿಗಳು,
ಒಳನಾಡು ಜಲಸಾರಿಗೆ,
ಕರ್ನಾಟಕ ಜಲಸಾರಿಗೆ ಮಂಡಳಿ, ಬೆಂಗಳೂರು

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಕೇಂದ್ರ ವಲಯದವರ ಕಛೇರಿ ವಾಣಿಜ್ಯ ತೆರಿಗೆ ಭವನ,

ರಾಘವೇಂದ್ರ ಕಾಲೋನಿ, 1ನೇ ಹಂತ, ಬಳ್ಳಾರಿ.
E-mail ID:- jcctenf.bly@ctd.ka.gov.in

ಸಂಖ್ಯೆ:ವಾತೆಸ(ಜಾರಿ)–1/ಬ/ಹ./ಬಳ್ಳಾರಿ/2026–27 ದಿನಾಂಕ:16.05.2026

ಪೆಟ್ ಬಾಟಲ್ ಹರಾಜು ಪ್ರಕಟಣೆ

ಸದರಿ ಸರಕನ್ನು ಸರ್ಕಾರದ ಪರವಾಗಿ ... 17490 ಕೆ.ಜಿ PET BOTTLE SCRAP ಸರಕಿನ ವಿವರ ಈ ಕೆಳಕಂಡಂತೆ

Sl.No	Particulars	Quantity
1	Pet Bottle Natural	9,390.00 Kgs
2	Pet Bottle Green	750.00 Kgs
3	Pet Bottle Ring	7,350.00 Kgs
	Total	17,490.00 Kgs

ಸದರಿ ಸರಕನ್ನು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ 2017ರ ಅಧಿನಿಯಮ 130ರ ಅಡಿಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯು ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಸರಕನ್ನು 'ಹೇಗೆ ಇದೆಯೋ ಹಾಗೆಯೇ' ದಿ:26.05.2026 ರಂದು ಬೆಳಿಗ್ಗೆ 11–00 ರಿಂದ ಮಧ್ಯಾಹ್ನ 4–00 ಗಂಟೆಯವರೆಗೆ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ರವರ ಕಛೇರಿ ವಾಣಿಜ್ಯ ತೆರಿಗೆ ಭವನ, ರಾಘವೇಂದ್ರ ಕಾಲೋನಿ, 1ನೇ ಹಂತ, ಬಳ್ಳಾರಿ ಇಲ್ಲಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಇಲಾಖೆಯು ನಿರ್ಧರಿಸಿದ್ದು, ಆಸಕ್ತ ಬಿಡ್‌ದಾರರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಬಿಡ್ಡನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.

ಷರತ್ತುಗಳು:

1) ಮುಟ್ಟುಗೋಲು ಹಾಕಿಕೊಂಡಿರುವ PET BOTTEL SCRAP, ವಾಣಿಜ್ಯ ತೆರಿಗೆ ಭವನ, ರಾಘವೇಂದ್ರ ಕಾಲೋನಿ, 2ನೇ ಹಂತ, ಬಳ್ಳಾರಿ ಇಲ್ಲಿ ದಾಸ್ತಾನು ಮಾಡಲಾಗಿದ್ದು, ಆಸಕ್ತಿಯುಳ್ಳ ಖರೀದಿದಾರರು ದಿ: 21.05.2026 ರಂದು ಸಮಯ ಬೆಳಿಗ್ಗೆ 11–00 ರಿಂದ ಮಧ್ಯಾಹ್ನ 4–00 ಗಂಟೆಯವರೆಗೆ ಸದರಿ ಸರಕುಗಳನ್ನು ಪರಿಶೀಲಿಸಬಹುದು.

2) ಆಸಕ್ತಿಯುಳ್ಳ ಖರೀದಿದಾರರು ತಮ್ಮ ಬಿಡ್ಡನ್ನು ಸೀಲು ಮಾಡಿದ ಲಕೋಟೆಯೊಂದಿಗೆ ದಿ: 22–05–2026 ರೊಳಗಾಗಿ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಜಾರಿ)–1 ಬಳ್ಳಾರಿ ರವರ ಕಛೇರಿಗೆ ನೋಂದಣಿ ಅಂಚೆ ಮೂಲಕ ಅಥವಾ ವೈಯಕ್ತಿಕವಾಗಿ ತಲುಪಿಸಬೇಕು.

3) ಆಸಕ್ತಿಯುಳ್ಳ ಖರೀದಿದಾರರು ರೂ. 50,000–00 (ಐವತ್ತು ಸಾವಿರ ರೂಪಾಯಿಗಳು) ಮೌಲ್ಯದ ಇಎಂಡಿ ಮೊತ್ತವನ್ನು "ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಜಾರಿ)–1, ಬಳ್ಳಾರಿ ರವರ ಹೆಸರಿನಲ್ಲಿ ಡಿಡಿ ಅಥವಾ ಪೇ ಆರ್ಡರ್ ಮೂಲಕ ಪಡೆದು ಸೀಲು ಮಾಡಿದ ಬಿಡ್ಡು ಲಕೋಟೆಯ ಜೊತೆಗೆ ದಿ: 22–05–2019ರೊಳಗೆ ತಲುಪಿಸಬೇಕು.

4) ಬಿಡ್ಡನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಜಾರಿ)–1, ಬಳ್ಳಾರಿ ರವರು ಹೊಂದಿರುತ್ತಾರೆ.

5) ಯಶಸ್ವಿಯಾದ ಬಿಡ್ಡುದಾರರು ಬಿಡ್ ಹಣವನ್ನು 7 ದಿನಗಳೊಳಗಾಗಿ ತಾತ್ಕಾಲಿಕ ನೋಂದಣಿ ಪಡೆದು ಇ–ಪಾವತಿ ಮುಖಾಂತರ ಜಿ.ಎಸ್.ಟಿ ಲೆಕ್ಕ ಶೀರ್ಷಿಕೆಗೆ ಪಾವತಿಸಬೇಕು ಮತ್ತು ಸದರ ಖರೀದಿಯನ್ನು ಅನಿಂದಾದ ಮುಖಾಂತರ ಖರೀದಿಯಿಂದ ಪರಿಗಣಿಸಬೇಕು. ನಿಗದಿತ 7 ದಿನಗಳೊಳಗಾಗಿ ಪೂರ್ತಿ ಬಿಡ್ ಹಣವನ್ನು ಪಾವತಿ ಮಾಡದ ಪಕ್ಷದಲ್ಲಿ ಇಎಂಡಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

6) ಖರೀದಿ ಬಿಡ್ ಮೊತ್ತವನ್ನು ಪಾವತಿಸಿದ ನಂತರದಲ್ಲೇ ಸರಕನ್ನು 'ಹೇಗೆ ಇದೆಯೋ ಹಾಗೆಯೇ' ಹಸ್ತಾಂತರಿಸಲಾಗುವುದು.

ಸಹಿ/– ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಜಾರಿ)–1, ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/150

ಭಾರಿ ಮಳೆಯಿಂದಾಗಿ ಬೆಳಗಾವಿ ಜಿಲ್ಲೆ ಬೈಲಹೊಂಗಲ–ಮುನವಳ್ಳಿ ನಡುವಿನ ಹೊಸೂರ ಸೇತುವೆ ಜಲಾವೃತಗೊಂಡಿತ್ತು

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಚಿಕ್ಕಮಗಳೂರು– 577101

(Autonomous Medical Institution, Government of Karnataka)
Phone: 08262–295347 E-Mail:directorcims2020@gmail.com

ಸಂಖ್ಯೆ: ಸಿಮ್ಸ್/ಸರಬ/ಟೆಂಡರ್/ಪತ್ರಿಕಾ ಪ್ರಕಟಣೆ/01/2026–27. ದಿನಾಂಕ: 14.05.2026

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ)

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾಸ್ಪತ್ರೆಯ ಒಬಿಜಿ ವಿಭಾಗಕ್ಕೆ ಅವಶ್ಯವಿರುವ Fetal Heart monitors ಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ /ನೋಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ /ಅರ್ಹ ಉದ್ದಿಮೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.40.00 ಲಕ್ಷಗಳು ಟೆಂಡರ್‌ನ ಇ.ಎಂ.ಡಿ ಮೊತ್ತ, ಇ–ಟೆಂಡರ್ ಅರ್ಜಿ ಸಲ್ಲಿಸುವ ಪ್ರಾರಂಭ ಮತ್ತು ಅಂತಿಮ ದಿನಾಂಕ ಮತ್ತಿತರೆ ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್ ಸೈಟ್ ವೀಕ್ಷಿಸಬಹುದು.

ಸಹಿ/– ನಿರ್ದೇಶಕರು,
ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು

ಕರ್ನಾಟಕ ಅರಣ್ಯ ಇಲಾಖೆ

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಜಮಖಂಡಿ ಪ್ರಾದೇಶಿಕ ಉಪ ವಿಭಾಗ, ಜಮಖಂಡಿ.
ದೂರವಾಣಿ : 73489 62827, ಇ–ಮೇಲ್ : acftjkd@gmail.com

ಸಂಖ್ಯೆ : ಸ.ಅ.ಸಂ./ಜೆ.ಕೆ.ಡಿ./ಇ–ಟೆಂಡರ್/2026–27/64
ದಿನಾಂಕ : 18–05–2026

ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, **2026–27 ನೇ ಸಾಲಿಗೆ ಮುಧೋಳ ವಲಯದ ಹಲಗಲಿ ಅ.ಸ.ನಂ. 505 ರಲ್ಲಿ 338.27 ಹೆಕ್ಟೇರ್‌ನಲ್ಲಿ 1ನೇ ವರ್ಷದ ನೆಡುತೋಪು ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲು** ನೊಂದಾಯಿತ ಅರ್ಹ ಅರಣ್ಯ ಗುತ್ತಿಗೆದಾರರಿಂದ ಟೆಂಡರ್ ಅಹ್ವಾನಿಸಿದೆ.

ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ : https://kppp.karnataka.gov.in ನಲ್ಲಿ ಪ್ರಕಟಿಸಿದಂತೆ, ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 02–06–2026 ರಂದು ಮಧ್ಯಾಹ್ನ 12.00 ಘಂಟೆಗೆ ಇರುತ್ತದೆ. ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ರಜೆ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಜಮಖಂಡಿ ಉಪ ವಿಭಾಗ, ಜಮಖಂಡಿ.

ಡಿಐಪಿಆರ್/ಬಾಗಲಕೋಟೆ/52/ಮಣಿಪಾಲ್/26–27

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಶಿವಾಜಿನಗರ ವಿಭಾಗ,
ತಿಮ್ಮಯ್ಯ ರಸ್ತೆ, ಕ್ವೀನ್ ರಸ್ತೆ, ಬೆಂಗಳೂರು

ಟೆಂಡರ್ ನಂ. ಕಾಅ/ಶಿನ/ಇ–ಪ್ರೊಕ್ಯೂರ್/10/2026–27 ದಿನಾಂಕ : 18.05.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ದ್ವಿಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರವರು (ಶಿವಾಜಿನಗರ ವಿಭಾಗ) ಬೆಂಗಳೂರು ಕೇಂದ್ರ ನಗರ ಪಾಲಿಕೆ, ಬೆಂಗಳೂರು ರವರು ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ ರೈಲ್ವೆಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	Construction of stepped gabion seater near waste weir, boating area, lake observation decks and walkway improvement in Ulsoor Lake (CALL-III) Drufiorment. **Amount Put to Tender (Without GST) : Rs. 786.90 Lakhs, EMD : Rs. 11,80,000.00**
2.	Park area development, construction of seating plaza, civic center and other finishing works in Ulsoor Lake (Call-III). **Amount Put to Tender (Without GST) : Rs. 787.20 Lakhs, EMD : Rs. 11,80,000.00**

ಟೆಂಡರ್‌ನ ಕಾರ್ಯಸೂಚಿ: (1) ಬಿಡ್ ಪೂರ್ವ ಸಭೆಯು ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ : **27.05.2026 ರಂದು ಮಧ್ಯಾಹ್ನ 15.00 ಗಂಟೆಗೆ**, ಮುಖ್ಯ ಅಭಿಯಂತರರು ವಲಯ–2, ಬೆಂಗಳೂರು ನಗರ ಕೇಂದ್ರ ಪಾಲಿಕೆ, ಅನುಬಂಧ–3, 4ನೇ ಮಹಡಿ, ಜಿಬಿಎ ಕಚೇರಿ ಕಾಂಪೌಂಡ್, ಎನ್ ಆರ್ ಚೌಕ, ಬೆಂಗಳೂರು (2) ಭರ್ತಿ ಮಾಡಿದ ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **06.06.2026 ರಿಂದ ಸಂಜೆ 16.00 ರವರೆಗೆ.** (3) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **08.06.2026 ರಂದು ಬೆಳಿಗ್ಗೆ 11.00 ಗಂಟೆಯೊಳಗೆ** (4) ಹಣಕಾಸು ಬಿಡ್ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯ ನಂತರ ಟೆಂಡರ್‌ಗಳನ್ನು ತೆರೆಯಲಾಗುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬೆಂ.ಕೇಂ.ನ.ಪಾ

ಪುರಸಭೆ ಕಾರ್ಯಾಲಯ, ಅಣ್ಣಿಗೇರಿ

ಗದಗ–ನವಲಗುಂದ ರಸ್ತೆ, ಅಣ್ಣಿಗೇರಿ–582201
ಜಿ: ಧಾರವಾಡ ಸಹಾಯವಾಣಿ: 08380–222740
Website :www.annigeritown.mrc.gov.in

ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

ಕ್ರಸಂ:ಪುಸಅ/Office Building/ಟೆಂಡರ್/ವಹಿ/2026–27 ದಿನಾಂಕ: 18–05–2026

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ)

ಅಣ್ಣಿಗೇರಿ ಪುರಸಭೆಯ ಸನ್ 2025–26 ನೇ ಸಾಲಿನ ಎಸ್.ಎಫ್.ಸಿ ಅನುದಾನದಡಿ Grants for infrastructure of upgraded ULBs and New ULBs form GPS ಅನುದಾನದಡಿ **ರೂ. 615.25 ಲಕ್ಷಗಳ** ಪುರಸಭೆ ನೂತನ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಇಂಡೆಟ್ ನಂ.**DMA/2026-27/BD/WORK_INDENT58252** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ಪ್ರಕಾರ ಆಕ್ಟ್ 2000ರ ನಿಯಮದಂತೆ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತಯುಳ್ಳ ಅಧಿಕೃತ ಗುತ್ತಿಗೆದಾರರು ವೆಬ್‌ಸೈಟ ವಿಳಾಸ: **http://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದು.

(1) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಮುಖಾಂತರ ಟೆಂಡರ್ ಚಾಲ್ತಿಗೆ ಬರುವ **ದಿನಾಂಕ: 18–05–2026**
(2) ಕರ್ನಾಟಕಪಬ್ಲಿಕ್ ಪ್ರೊಕ್ಯೂರಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 19–06–2026**
(3) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ: **as per kppp portal**
(4) ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೆ ವಿವರಗಳನ್ನು ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸೂಚನೆ : ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗುತ್ತದೆ.

ಸಹಿ/– ಅಧ್ಯಕ್ಷರು, ಪುರಸಭೆ ಅಣ್ಣಿಗೇರಿ

ಸಹಿ/– ಮುಖ್ಯಾಧಿಕಾರಿ ಪುರಸಭೆ ಅಣ್ಣಿಗೇರಿ

ವಾ.ಸಾ.ಇ./ಧಾರವಾಡ/193/2026–27/ದೇಶಪಾಂಡೆಪಬ್ಲಿಸಿಟಿ

ಕಿತ್ತೂರು ಕರ್ನಾಟಕ; ಭಾರಿ ಮಳೆ

ಬಿರುಗಾಳಿಗೆ ಧರೆಗುರುಳಿದ ಮರಗಳು, ವಾಹನಗಳು ಜಖಂ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ಗದಗ ಸೇರಿ ಕಿತ್ತೂರು ಕರ್ನಾಟಕದ ವಿವಿಧೆಡೆ ಸೋಮವಾರ ಬಿರುಸಿನ ಮಳೆ ಸುರಿಯಿತು.

ಹುಬ್ಬಳ್ಳಿ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಗಾಳಿ, ಸಿಡಿಲು ಸಹಿತ ಮಳೆ ಸುರಿದಿದ್ದರಿಂದ 70ಕ್ಕೂ ಹೆಚ್ಚು ಮರಗಳು ಧರೆಗುರುಳಿದ್ದು, 20ಕ್ಕೂ ಹೆಚ್ಚು ಕಾರು, ದ್ವಿಚಕ್ರ ವಾಹನಗಳು ಜಖಂಗೊಂಡಿವೆ.

ಧಾರವಾಡ ಜಿಲ್ಲೆ ಅಂಬೋಳಿ ಗ್ರಾಮದಲ್ಲಿ ಮನೆಯ ಚಾವಣಿಯ ಶೀಟುಗಳು ಹಾರಿ ಹೋಗಿವೆ. ಅಣ್ಣಿಗೇರಿ, ನವಲಗುಂದ, ಕಲಘಟಗಿ, ಉಪ್ಪಿನಬೆಟಗೇರಿ, ಗುಡಗೇರಿಯಲ್ಲಿ ಸಾಧಾರಣ ಮಳೆಯಾಗಿದೆ.

ಬೆಳಗಾವಿ ಜಿಲ್ಲೆ ಬೈಲಹೊಂಗಲ ಸಮೀಪದ ಹೊಸೂರ ಗ್ರಾಮದಲ್ಲಿ ಮುನವಳ್ಳಿ-ಬೈಲಹೊಂಗಲಕ್ಕೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿಯಲ್ಲಿ ಸೇತುವೆ ಕೊಚ್ಚಿ ಹೋಗಿ ಸಂಚಾರ ಸಂಪೂರ್ಣ ಬಂದ್ ಆಗಿದೆ.

ಉತ್ತರ ಕನ್ನಡ ಜಿಲ್ಲೆಯ ಜಿಲ್ಲೆಯ ಹಳಿಯಾಳದಲ್ಲಿ ಬಿರುಸಿನ, ಭಟ್ಕಳ ಸೇರಿದಂತೆ ಕರಾವಳಿ ಪ್ರದೇಶ, ಮುಂಡಗೋಡ ಸೇರಿ ಅರೆಮಲೆನಾಡು ಭಾಗದಲ್ಲಿ ಸಾಧಾರಣ ಮಳೆ ಆಯಿತು.

ಆಳ ಸಮುದ್ರಕ್ಕೆ ತೆರಳಬೇಕಿದ್ದ ಹತ್ತಾರು ದೋಣಿಗಳು ಇಲ್ಲಿನ ಬೈತಕೋಲ ಮೀನುಗಾರಿಕೆ ಬಂದರಿನಲ್ಲಿ ಲಂಗರು ಹಾಕಿವೆ. ಮಲ್ಪೆ, ಗೋವಾ ಸೇರಿದಂತೆ ವಿವಿಧೆಡೆಯ ದೋಣಿಗಳು ಇಲ್ಲಿಯೇ ಆಶ್ರಯ ಪಡೆದಿವೆ.

ಗದಗ ನಗರ ಸೇರಿದಂತೆ ತಾಲ್ಲೂಕಿನ ಸುತ್ತಮುತ್ತ ಬಿರುಗಾಳಿ ಸಹಿತ ಮಳೆ ಸುರಿಯಿತು. ಬಾಗಲಕೋಟೆ, ನವನಗರ, ಜಿಲ್ಲೆಯ ತೇರದಾಳದಲ್ಲಿ ಜೋರು ಗಾಳಿ, ಮಳೆಯಿಂದಾಗಿ ಕೆಲವೆಡೆ ಮರಗಳು ಧರೆಗುರುಳಿದವು.

ಬಿರುಸಿನ ಮಳೆ – ಬೆಳೆಗಳಿಗೆ ಹಾನಿ (ಚಾಮರಾಜನಗರ ವರದಿ) : ಜಿಲ್ಲೆಯ ಹನೂರು, ಗುಂಡ್ಲುಪೇಟೆ, ಯಳಂದೂರು, ಚಾಮರಾಜನಗರ ತಾಲ್ಲೂಕುಗಳಲ್ಲಿ ಸೋಮವಾರ ಬಿರುಸಿನ ಮಳೆಸುರಿಯಿತು.

ಗುಂಡ್ಲುಪೇಟೆ ತಾಲ್ಲೂಕಿನ ಬೀಮನಮಡುವಿನಲ್ಲಿ ರೈತ ಮಹದೇವ ಅವರ ಜಮೀನಿನಲ್ಲಿ ಬೆಳೆದಿದ್ದ ಬೆಳ್ಳುಳ್ಳಿ, ಈರುಳ್ಳಿ, ಅರಿಸಿನ ಬೆಳೆ ಕೊಚ್ಚಿ ಹೋಗಿದೆ. ಹಲವೆಡೆ ಬಾಳೆ ಗಿಡಗಳು, ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ. ಹನೂರು ತಾಲ್ಲೂಕಿನಲ್ಲಿ ಕೆರೆ– ಕಟ್ಟೆಗಳಲ್ಲಿ ಕೊಂಚ ಪ್ರಮಾಣದಲ್ಲಿ ನೀರು ಸಂಗ್ರಹವಾಗಿದೆ.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಕೂಡ್ಲಿಗಿ–583135

ಸಂ.ಪ.ಪಂ.ಕೂ./ಕಾಮಗಾರಿ/ತಾಂತ್ರಿಕ/ಟೆಂಡರ್/ಸಿ.ಆರ್.01/2026–27 ದಿನಾಂಕ:16.05.2026

ಟೆಂಡರ್ ಪ್ರಕಟಣೆ

ಕೂಡ್ಲಿಗಿ ಪಟ್ಟಣ ಪಂಚಾಯಿತಿಯ ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆ ಅಡಿಯಲ್ಲಿ ಜಲಮೂಲಗಳ ಪುನಶ್ಚೇತನ ಅಡಿಯಲ್ಲಿ ಅನುಮೋದನೆಯಾದ ಉಡಸಲಮ್ಮನ ಕುಂಟೆ ಕೆರೆ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಅಂದಾಜು ಮೊತ್ತ ರೂ 206 ಲಕ್ಷಗಳಿಗೆ (DMA/2026-27/MT/WORK_INDENT57631) ಅರ್ಹ ನೋಂದಾಯಿತ ಗುತ್ತಿಗೆದಾರರರಿಂದ ಕೆ.ಡಬ್ಲ್ಯೂ–04 ರ ನಮೂನೆಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿ) ಮೂಲಕ ಟೆಂಡರ್ ನ್ನು ಆಹ್ವಾನಿಸಲಾಗಿದೆ, ಆಸಕ್ತ ಅರ್ಹ ಗುತ್ತಿಗೆದಾರರು ಟೆಂಡರ್ ಸಲ್ಲಿಸಬಹುದಾಗಿದೆ.

ಷರತ್ತುಗಳು: DMA/2026-27/MT/WORK_INDENT57631 ಇಂಡೆಂಟ್ ಕಾಮಗಾರಿಗೆ ದಿನಾಂಕ 27.05.2026 ರಂದು 15.00 ಗಂಟೆಗೆ ಪ್ರಿ ಬಿಡ್ ಮೀಟಿಂಗ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ, ದಿನಾಂಕ 20.06.2026 ರಂದು 16.30 ಗಂಟೆಯೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ ಅಥವಾ ಯಾರೂ ಟೆಂಡರ್ ಸಲ್ಲಿಸದೇ ಇದ್ದಲ್ಲಿ 21.06.2026 ರಂದು 16.30 ಗಂಟೆಯೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ, ಸದರಿ ಟೆಂಡರಗಳ ತಾಂತ್ರಿಕ ಬಿಡ್ಡನ್ನು ದಿನಾಂಕ : 22.06.2026 ರಂದು 17.00 ಗಂಟೆಗೆ ತೆರೆಯಲಾಗುವುದು ಹಾಗೂ ಸದರಿ ಟೆಂಡರಗಳ ಆರ್ಥಿಕ ಬಿಡ್ಡನ್ನು ದಿನಾಂಕ :25.06.2026 ರಂದು 17.00 ಗಂಟೆಗೆ ಅಥವಾ ಮುಂದೆ ತಿಳಿಸುವ ದಿನಾಂಕದಂದು ತೆರೆಯಲಾಗುವುದು, ಸದರಿ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಟೆಂಡರ್ ದಾಖಲಾತಿಗಳಿಗಾಗಿ & ಷರತ್ತುಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿ)ನಲ್ಲಿ ನೋಡಬಹುದಾಗಿರುತ್ತದೆ, https://kppp.karnataka.gov.in/kppp ವೆಬ್ ಸೈಟ್‌ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು & ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ, ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕಿರಿಯ ಅಭಿಯಂತರರನ್ನು ಸಂಪರ್ಕಿಸಬಹುದು.

ಸಹಿ/– ಶ್ರೀ ಹೆಚ್. ದಾದಾಪೀರ್, ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಕೂಡ್ಲಿಗಿ

ಸಹಿ/– ಕುಮಾರಿ ನೇತ್ರಾವತಿ ವಿ.ಕೆ., ಆಡಳಿತಾಧಿಕಾರಿಗಳು, ಪಟ್ಟಣಪಂಚಾಯಿತಿ ಕೂಡ್ಲಿಗಿ

ನಗರಸಭಾ ಕಾರ್ಯಾಲಯ, ಚಿತ್ರದುರ್ಗ–577501

ಸಂ:ನಸಚಿ:ತಾಂತ್ರಿಕ(1)/ಟೆಂಡರ್:ಸಿಆರ್:03:2026–27, ದಿನಾಂಕ:15–05–2026

ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಟೆಂಡರ್ ಹಾಗೂ ಮರು ಟೆಂಡರ್‌ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2026–27ನೇ ಸಾಲಿನ ಎಸ್.ಎಫ್.ಸಿ ಎಸ್.ಸಿ.ಎಸ್.ಪಿ ಅನುದಾನ, 2026–27ನೇ ಸಾಲಿನ ಎಸ್.ಎಫ್.ಸಿ ಟಿ.ಎಸ್.ಪಿ ಅನುದಾನ, 2026–27ನೇ ಸಾಲಿನ ಎಸ್.ಎಫ್.ಸಿ ಶೇಕಡ 5%ರ ಅನುದಾನ 2026–27ನೇ ಸಾಲಿನ ಎಸ್.ಎಫ್.ಸಿ ಅನುದಾನ, 2022–23ನೇ ಸಾಲಿನಿಂದ 2024–25ನೇ ಸಾಲಿನ ವರೆಗೆ ಎಸ್.ಎಫ್.ಸಿ ಬಂಡವಾಳ ಆಸ್ತಿಗಳ ಸೃಜನೆಯಲ್ಲಿ ಉಳಿಕೆ ಅನುದಾನ ರೂ.5.79 ಲಕ್ಷಗಳು 2025–26ನೇ ಸಾಲಿನ ಎಸ್.ಎಫ್.ಸಿ ಎಸ್.ಸಿ.ಎಸ್.ಪಿ ಅನುದಾನದ ಉಳಿಕೆ ಮೊತ್ತ ರೂ.1.23 ಲಕ್ಷಗಳು 2025–26ನೇ ಸಾಲಿನ ಎಸ್.ಎಫ್.ಸಿ ಟಿ.ಎಸ್.ಪಿ ಅನುದಾನದ ಉಳಿಕೆ ಮೊತ್ತ ರೂ.3.25 ಲಕ್ಷಗಳು 2022–23 ರಿಂದ 2025–26ನೇ ಸಾಲಿನ ವರೆಗೆ ಎಸ್.ಎಫ್.ಸಿ ಕುಡಿಯುವ ನೀರಿನ ಉಳಿಕೆ ಅನುದಾನ ರೂ.0.79 ಮತ್ತು 2026–27ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ ರೂ.9.32 ಲಕ್ಷಗಳು ಒಟ್ಟು ರೂ.10.11 ಅನುದಾನದಲ್ಲಿ ಅನುಮೋದನೆಯಾಗಿರುವ ರೂ.53.69 ಲಕ್ಷಗಳು ಹಾಗೂ ನಗರಸಭೆ ನಿಧಿ ಅನುದಾನದಲ್ಲಿ ರೂ.25.90 ಲಕ್ಷಗಳ ಮರುಟೆಂಡರ್ ಕಾಮಗಾರಿಗಳ ಒಟ್ಟು ಮೊತ್ತ ರೂ.79.59 ಲಕ್ಷಗಳು ಅನುಮೋದನೆಯಾಗಿರುವ 15 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಲೋಕೋಪಯೋಗಿ ಇಲಾಖೆ ನೋಂದಾಯಿಸಿರುವ ಅರ್ಹಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಕರೆಯಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://kppp.karnataka.gov.inಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವಿಕರಿಸಲಾಗುವುದಿಲ್ಲ. ವಿವರ ಈ ಕೆಳಕಂಡಂತೆ ಇರುತ್ತದೆ. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥಾವ ನಗರಭೆಯ ಅಂತರ್‌ಜಾಲ www.chitradurgacity.mrc.gov.in ನಲ್ಲಿ ಸಂಪೂರ್ಣವಾಗಿ ವರ್ಕ್‌ಇಂಡೆಂಟ್ ನಂಬರ್, ಟೆಂಡರ್ ಮೀಸಲಾಯಿತಿ ಮತ್ತು ಟೆಂಡರ್ ನೋಟಿಫಿಕೇಷನ್ ಪಡೆಯಬಹುದಾಗಿದೆ. ಜಿ.ಎಸ್.ಟಿ. ಮೊತ್ತ ಪ್ರತ್ಯೇಕವಾಗಿ ಪಾವತಿಸಲಾಗುವುದು. (ಗರಿಷ್ಠ ಮೊತ್ತ ರೂ.20.96 ಲಕ್ಷಗಳು) 15 ಕಾಮಗಾರಿಗಳು

1 ಖಾಲಿ ಟೆಂಡರ್ ಫಾರಂಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 03–06–2026 ರ 5.00 ಗಂಟೆ ಸಂಜೆವರೆಗೆ
2 ಟೆಂಡರ್‌ನ್ನು ತೆರೆಯುವ ದಿನಾಂಕ (ತಾಂತ್ರಿಕ) 04–06–2026 ರ 5.30 ಗಂಟೆಗೆ
3 ಟೆಂಡರ್‌ನ್ನು ತೆರೆಯುವ ದಿನಾಂಕ (ಆರ್ಥಿಕ) 05–06–2026 ರ 5.30 ಗಂಟೆಗೆ
4 ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) KPPP Portal ನಿಯಮಾನುಸಾರ
5 ಇ.ಎಂ.ಡಿ ಮೊತ್ತ KPPP Portal ನಿಯಮಾನುಸಾರ

DIPR/CTA/KSMCA/104/2026-27

ಸಹಿ/–ಪೌರಾಯುಕ್ತರು, ನಗರಸಭೆ, ಚಿತ್ರದುರ್ಗ

ಸಿಡಿಲಿಗೆ ಒಬ್ಬ ರೈತ, 25 ಮೇಕೆ ಬಲಿ

ಸೇಡಂ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ವಿವಿಧೆಡೆ ಭಾನುವಾರ ರಾತ್ರಿ ಮಳೆಯಾಗಿದ್ದು, ಸಿಡಿಲು ಬಡಿದು ತಾಲ್ಲೂಕಿನ ಕೋನಾಪುರ ಗ್ರಾಮದ ರೈತ ನರಸಪ್ಪ ಪೂಜಾರಿ (40), ಇನ್ನೊಂದೆಡೆ 25 ಮೇಕೆಗಳು ಮೃತಪಟ್ಟಿವೆ.

ತಾಲ್ಲೂಕಿನ ಪಿಲ್ಲಿಗುಂಟಾ ತಾಂಡಾದಲ್ಲಿ ಮೂವರು ಕುರಿಗಾಹಿಗಳಿಗೆ ಸೇರಿದ 25 ಮೇಕೆಗಳು ಸತ್ತಿವೆ ಎಂದು ತಹಶೀಲ್ದಾರ್ ಶ್ರೀಯಾಂಕ ಧನಶ್ರೀ ಮಾಹಿತಿ ನೀಡಿದ್ದಾರೆ.

'ಬಿಜೆಪಿ–ಜೆಡಿಎಸ್ 2028ಕ್ಕೂ ಮೈತ್ರಿ'

ಬೆಂಗಳೂರು: 'ಕರ್ನಾಟಕದಲ್ಲಿ 2028ರ ವಿಧಾನಸಭೆ ಚುನಾವಣೆಯಲ್ಲಿಯೂ ಬಿಜೆಪಿ ಜತೆಗಿನ ಮೈತ್ರಿ ಮುಂದುವರಿಯಲಿದೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ತಮ್ಮ ಮನೆಯಲ್ಲಿ ಸೋಮವಾರ ಜನ್ಮ ದಿನ ಆಚರಿಸಿಕೊಂಡ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಉತ್ತಮ ಸಂಬಂಧವಿದೆ. ಮೈತ್ರಿ ಪಕ್ಷಗಳ ನಡುವೆ ಸಣ್ಣಪುಟ್ಟ ವ್ಯತ್ಯಾಸಗಳಾದರೂ ಕುಳಿತು ಪರಸ್ಪರ ಚರ್ಚಿಸುತ್ತೇವೆ. ಎನ್‌ಡಿಎದಲ್ಲಿ ಜೆಡಿಎಸ್ ಪಕ್ಷ ಸಣ್ಣ ಪಾಲುದಾರ. ಎಂಥ ಸಮಸ್ಯೆಗಳಿದ್ದರೂ ಬಗೆಹರಿಸಿಕೊಳ್ಳುವ ವಿಶ್ವಾಸವಿದೆ' ಎಂದರು.

'93 ವರ್ಷ ಪೂರೈಸಿದೆ ಎಂದು ಮನೆಯಲ್ಲಿ ಕುಳಿತುಕೊಳ್ಳುವುದಿಲ್ಲ. ಜನರ ಪರ ಹೋರಾಟ ಮುಂದುವರಿಸುತ್ತೇನೆ. ವೀಲ್‌ಚೇರ್ ನಲ್ಲಾದರೂ ರಾಜ್ಯಾದ್ಯಂತ ಸಂಚರಿಸುತ್ತೇನೆ. ದಕ್ಷಿಣ ಭಾರತದಲ್ಲಿ ಕಾಂಗ್ರೆಸ್ ಮೂರು ರಾಜ್ಯಗಳಿಗೆ ಸೀಮಿತವಾಗಿದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಶಕ್ತಿ ಇನ್ನಷ್ಟು ಕುಂದಲಿದೆ' ಎಂದು ಹೇಳಿದರು.

ಶಿವಾನಂದ 10 ದಿನ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸಾವಿರಾರು ಕೋಟಿ ರೂಪಾಯಿ ಅನಧಿಕೃತ ಬಡ್ಡಿ ವ್ಯವಹಾರ ಮಾಡಿದ ಆರೋಪ ಎದುರಿಸುತ್ತಿರುವ, ಇಲ್ಲಿನ ಶಿವಂ ಅಸೋಸಿಯೇಟ್ಸ್‌ನ ಮಾಲೀಕ ಶಿವಾನಂದ ನೀಲಣ್ಣವರ ಅವರನ್ನು ನ್ಯಾಯಾಲಯವು 10 ದಿನ ಪೊಲೀಸರ ವಶಕ್ಕೆ ನೀಡಿದೆ.

ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸಿದ್ದು, ಸೋಮವಾರ ಬೆಳಿಗ್ಗೆ ಸಿಐಡಿ ಅಧಿಕಾರಿಗಳು ದಾಖಲೆಗಳ ಸಮೇತ ಆರೋಪಿಯನ್ನು ಸುಪರ್ದಿಗೆ ಪಡೆದರು. ನಂತರ ಇಲ್ಲಿನ 2ನೇ ಪ್ರಧಾನ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ನ್ಯಾಯಾಧೀಶರಾದ ಗಂಗಾಧರ ಕೆ.ಎನ್., ಅವರ ಎದುರು ಹೇಳಿಕೆ ನೀಡಿದ ಆರೋಪಿ, 'ನನ್ನ ಬಳಿ ಠೇವಣಿ ಇಟ್ಟಿರುವ 35 ಸಾವಿರ ಜನ ಹಣ ಕೇಳಿಲ್ಲ. ಆದರೆ, ನಾನು ಚೆನ್ನಾಗಿರಬೇಕು ಎಂದು ಬಯಸುತ್ತಿದ್ದಾರೆ' ಎಂದರು.

ಇದಕ್ಕೆ ನ್ಯಾಯಾಧೀಶರು, 'ನೀವು ಜನರಿಗೆ ಬೇಕಾಗಿರಬಹುದು, ಒಳ್ಳೆಯದೂ ಮಾಡಿರಬಹುದು, ಯಾವುದೂ ನನಗೆ ಗೊತ್ತಿಲ್ಲ. ಹಿಂದೆ ಜನರಿಗೆ ಸಾಕಷ್ಟು ಮೋಸಗಳಾಗಿವೆ. ಈ ಆಧಾರದ ಮೇಲೆ ಸರ್ಕಾರ ಕಾನೂನು ರೂಪಿಸಿದೆ. ಕಾನೂನು ಪ್ರಕಾರ ನಡೆದುಕೊಳ್ಳಿ. ಧರ್ಮೋ ರಕ್ಷತಿ ರಕ್ಷಿತಃ' ಎಂದು ಹೇಳಿದ್ದಾಗಿ ವಕೀಲರು ತಿಳಿಸಿದರು.

ಇನ್ನೊಬ್ಬನ ವಶ: ಶಿವಂ ಅಸೋಸಿಯೇಟ್ಸ್‌ಗೆ ಸಂಬಂಧಿಸಿದ 'ಅಕ್ಯೂಮೆನ್' ಆ್ಯಪ್ ಮೂಲಕ ನಡೆಸಿದ ವ್ಯವಹಾರಗಳ ದಾಖಲೆಯನ್ನು ಡಿಲೀಟ್ ಮಾಡುತ್ತಿದ್ದ ಆರೋಪದಡಿ, ಮಹಾರಾಷ್ಟ್ರದ ಓಂಕಾರ ಎಂಬಾತನನ್ನು ಸಿಐಡಿ ಪೊಲೀಸರು ಸೋಮವಾರ ವಶಕ್ಕೆ ಪಡೆದರು.

ಸಿಐಡಿ ಡಿಜಿಪಿ ಭೀಮಾಶಂಕರ ಗುಳೇದ ನೇತೃತ್ವದಲ್ಲಿ ಅಧಿಕಾರಿಗಳು ಮಂಗಳವಾರ ಸ್ಥಳ ಮಹಜರು ನಡೆಸಲಿದ್ದು, ಬುಧವಾರ ಆರೋಪಿಯನ್ನು ಬೆಂಗಳೂರಿಗೆ ಕರೆದೊಯ್ಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಮೋಸ ಮಾಡಿಲ್ಲ'

'ಶಿವಾನಂದ ನೀಲಣ್ಣವರ ಯಾರಿಗೂ ಮೋಸ ಮಾಡಿಲ್ಲ. ಕೋವಿಡ್ ಕಾರಣ ಲಾಕ್‌ಡೌನ್ ಇದ್ದಾಗಿನಿಂದಲೂ ಎಲ್ಲ ಹೂಡಿಕೆದಾರರಿಗೆ ಅವರು ಸರಿಯಾಗಿ ಹಣ ಮುಟ್ಟಿಸಿದ್ದಾರೆ' ಎಂದು ಮಹಾರಾಷ್ಟ್ರದ ಮಾಜಿ ಸೈನಿಕ ರೋಹಿತ್ ಅಗ್ರವಾಲ್ ಎಂಬವರು ಹೇಳಿದ ಆಡಿಯೊ ಜಾಲತಾಣಗಳಲ್ಲಿ ಹಂಚಿಕೆಯಾಗಿದೆ.

ಬಂಗಾಳದಲ್ಲೂ ಉಚಿತ ಬಸ್ ಸೌಲಭ್ಯ ಇಮಾಮ್, ಅರ್ಚಕರ 'ಧನ'ಕ್ಕೆ ಕೊಕ್

ಒಂದನೇ ಪುಟದಿಂದ...

'ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಅಡಿಯಲ್ಲಿ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಿರುವ ಮತ್ತು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಲು ನ್ಯಾಯಮಂಡಳಿಗೆ ಮನವಿ ಮಾಡಿರುವ ಮಹಿಳೆಯರೂ 'ಅನ್ನಪೂರ್ಣ' ಯೋಜನೆಯ ಅನುಕೂಲವನ್ನು ಪಡೆಯಲಿದ್ದಾರೆ' ಎಂದು ತಿಳಿಸಿದರು.

ರಾಜ್ಯ ಸರ್ಕಾರಿ ಉದ್ಯೋಗಿಗಳಿಗಾಗಿ 7ನೇ ವೇತನ ಆಯೋಗ ರಚನೆ ಮಾಡಲು ಸರ್ಕಾರ ಒಪ್ಪಿಗೆ ನೀಡಿದೆ ಎಂದರು. ಕಲ್ಕತ್ತ ಹೈಕೋರ್ಟ್ ಆದೇಶದ ಅನುಸಾರ ಅಸ್ತಿತ್ವದಲ್ಲಿರುವ ರಾಜ್ಯ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯನ್ನು ರದ್ದು ಮಾಡಲು ಮತ್ತು ಮೀಸಲಾತಿ ಅರ್ಹತೆ ನಿರ್ಧರಿಸುವುದಕ್ಕಾಗಿ ತನಿಖಾ ಸಮಿತಿ ರಚಿಸಲು ಸಂಪುಟ ನಿರ್ಧರಿಸಿದೆ. ಅಸ್ತಿತ್ವದಲ್ಲಿರುವ ವಿದ್ಯಾರ್ಥಿವೇತನ ಯೋಜನೆ ಕೈಬಿಡುವುದಿಲ್ಲ ಎಂದರು.

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–1, ಮೊಬೈಲ್ : 9448999424
ಇ–ಮೇಲ್ :ddpiplanning@gmail.com, ವೆಬ್‌ಸೈಟ್ : (https://wwww.schooleducation.kar.nic.in)

No:DPI-CPI0PLN1/IVA-TENDER/2026-27 Date:18.05.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಕರ್ನಾಟಕದಲ್ಲಿ 500 ರಿಂದ 800 ಕೆ.ಪಿ.ಎಸ್ ಶಾಲೆಗಳನ್ನು ಏಷಿಯನ್ ಡೆವೆಲಪ್‌ಮೆಂಟ್ ಬ್ಯಾಂಕ್ ರವರ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದ್ದು, Independent Verification Agency ಯನ್ನು ಆಯ್ಕೆ ಮಾಡಲು ಅಲ್ಪಾವಧಿಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1	ಟೆಂಡರ್ ಉಲ್ಲೇಖ ಸಂಖ್ಯೆ	DPI/2026-27/SE0441/CALL-2
2	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡಲು ಪ್ರಾರಂಭ ದಿನಾಂಕ	18/05/2026 ರಿಂದ
3	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	20/05/2026 ಸಂಜೆ 5:30 ಗಂಟೆಯವರೆಗೆ
4	ಪೂರ್ವ–ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ	20/05/2026 ಬೆಳಿಗ್ಗೆ 11:00 ಗಂಟೆಗೆ. ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯ ಸಭಾಂಗಣ, ಮೊದಲನೆಯ ಮಹಡಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು – 560001
5	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್‌ನಲ್ಲಿ ಇ–ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	27/05/2026 ಸಂಜೆ 5:00 ಗಂಟೆಯವರೆಗೆ
6	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್‌ನಲ್ಲಿ ಇ–ಟೆಂಡರ್ ಅರ್ಜಿಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	29/05/2026 ಬೆಳಿಗ್ಗೆ 11.00 ಗಂಟೆಗೆ
7	ಇ–ಟೆಂಡರ್ ಅರ್ಜಿಗಳನ್ನು ತೆರೆಯುವ ಸ್ಥಳ	ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್‌ನಲ್ಲಿ
8	ಪ್ರಾಜೆಕ್ಟ್ ವಿಧಾನದ ಪ್ರಸ್ತುತಿಪಡಿಸುವ ದಿನಾಂಕ ಮತ್ತು ಸಮಯ	01/06/2026 ರಂದು ಮಧ್ಯಾಹ್ನ 12:00 ಗಂಟೆಗೆ
9	ಸಂಪರ್ಕ ವಿಳಾಸ	ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಮೊದಲನೆಯ ಮಹಡಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡ, ನೃಪತುಂಗ ರಸ್ತೆ ಬೆಂಗಳೂರು–560001. ಇ–ಮೇಲ್ ವಿಳಾಸ: ddpiplanning@gmail.com, ದೂರವಾಣಿ: 080–22270072, 9448999424.

ಗಮನಿಸಿ 1) ಪೂರ್ಣಗೊಂಡ ಟೆಂಡರ್‌ಗಳನ್ನು ಟೆಂಡರುದಾರರು ತಮ್ಮ ಬಳಕೆದಾರ ಐಡಿ ಬಳಸಿ ಕೊನೆಯ ದಿನಾಂಕ ಮತ್ತು ಸಮಯದ ಒಳಗೆ ಇ–ಟೆಂಡರಿಂಗ್ ವ್ಯವಸ್ಥೆಯ ಮೂಲಕ ಅಪ್‌ಲೋಡ್ ಮಾಡಬೇಕು. 2) ಖರೀದಿದಾರರಿಗೆ RFP ತೆರೆಯುವ ನಿರ್ದಿಷ್ಟ ದಿನಾಂಕವನ್ನು ರಜಾದಿನವೆಂದು ಘೋಷಿಸಿದರೆ ಮುಂದಿನ ಕೆಲಸದ ದಿನದಂದು ಅದೇ ಸಮಯಕ್ಕೆ RFP ತೆರೆಯಲಾಗುತ್ತದೆ.. 3) ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (KPPP) ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಲಾದ ಪ್ರಶ್ನೆಗಳನ್ನು ಸ್ವೀಕರಿಸಲಾಗುತ್ತದೆ. ಪತ್ರಗಳು, ಇಮೇಲ್‌ಗಳು ಅಥವಾ ಯಾವುದೇ ಇತರ ವಿಧಾನಗಳ ಮೂಲಕ ಕಳುಹಿಸಲಾದ ಪ್ರಶ್ನೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಉಪ ನಿರ್ದೇಶಕರು(ಯೋಜನೆ)

ವಾಸಾಸಂಇ/ವಾಪ್ರ/ಜಿಎ/719/2026–27

ಕ್ರೆಸ್ಟ್‌ಗೇಟ್; ಚೈನ್ ಅಳವಡಿಕೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆ 33ನೇ ಕ್ರೆಸ್ಟ್‌ಗೇಟ್‌ಗೆ ಹೊಸ ಚೈನ್‌ಲಿಂಕ್ ಅಳವಡಿಕೆ ಭಾನುವಾರ ನಡೆಯಿತು. ಮತ್ತೆ ಮೂರು ಜತೆ ಚೈನ್‌ಗಳು ಮಂಗಳವಾರ ಬರಲಿವೆ.

'ಹೊಸ ಚೈನ್‌ಲಿಂಕ್ ಅಳವಡಿಸುವಾಗಿನ ಅಡೆತಡೆಗಳನ್ನು ಆಧರಿಸಿ ಕೆಲ ಮಾರ್ಪಾಡು ಮಾಡಿದ್ದೇವೆ' ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

ನಿಧನ ವಾರ್ತೆ

ರಮೇಶ್ ಸರಾಫ್

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಶಿರಾಲಿ ಗ್ರಾಮದ ನಿವಾಸಿ, ಸಾಹಿತಿ ಡಾ.ರಮೇಶ್ ಸರಾಫ್ (74) ಸೋಮವಾರ ಅನಾರೋಗ್ಯದಿಂದ ನಿಧನರಾದರು. ಅವರಿಗೆ ಪುತ್ರ, ಪುತ್ರಿ ಇದ್ದಾರೆ. ಶಿರಾಲಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

'ವೈರಸ ಶಿರಾಲಿ' (ವೈದ್ಯ ರಮೇಶ್ ಸರಾಫ್) ಹೆಸರಿನಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. 'ಗಣಿ ದೂಳಿನಿಂದ ಮೂಡಿಬಂದ ಚುಟುಕುಗಳು', 'ಅಂದ ವ್ಯಕ್ತಿತ್ವಕ್ಕೆ ಚಂದ ಪಂಚಾಂಗ', 'ಶಾಲೆಗೆ ಮೇಷ್ಟ್ರು ಬಂದಿದ್ದಾರೆ' ಮುಂತಾದ ಕೃತಿ ರಚಿಸಿದ್ದರು. 'ಆಚಾರ', 'ಬೆಳಕಿಂಡಿ' ಪತ್ರಿಕೆಗಳನ್ನು ಆರಂಭಿಸಿದ್ದರು.

ಉಲ್ಲಾಸವೋ? ಉನ್ಮಾದವೋ?

ಉನ್ಮಾದದಿಂದ ಹುಟ್ಟುವ ಚಿತ್ತಚಾಂಚಲ್ಯಕ್ಕೂ ಉಲ್ಲಾಸದಿಂದ ದೊರಕುವ ಅನಾಯಾಸ ಏಕಾಗ್ರತೆಗೂ ಇರುವ ವ್ಯತ್ಯಾಸವನ್ನು ಅರಿಯಬೇಕಾದರೆ ಪ್ರತಿಕ್ಷಣವೂ ನಮ್ಮ ಮನದಲ್ಲೇಳುವ ತರಂಗಗಳನ್ನು ಧ್ಯಾನಶೀಲವಾಗಿ ಪರಿಶೀಲಿಸುವ ಮನೋಚೈತನ್ಯವೂ ಬೇಕು, ಅಭ್ಯಾಸವೂ ಬೇಕು.



• ರಮ್ಯಾ ಶ್ರೀಹರಿ

ಜೀವನದಲ್ಲಿ ಪ್ರತಿದಿನ ಬರುವ ಎಲ್ಲವನ್ನೂ ಒಂದು 'ಅನುಭವ' ಎಂದು ಸ್ವೀಕರಿಸುವುದಕ್ಕೂ, ಜೀವನದಲ್ಲಿ ಪ್ರತಿನಿತ್ಯವೂ ವೈವಿಧ್ಯಪೂರ್ಣ ಅನುಭವಗಳನ್ನು ಪಡೆಯಬೇಕು ಎಂದು ಬಯಸುವುದಕ್ಕೂ ಇರುವ ಅಂತರವೇ ಉಲ್ಲಾಸಕ್ಕೂ ಉನ್ಮಾದಕ್ಕೂ ಇರುವ ವ್ಯತ್ಯಾಸ.

ಜೀವನದಲ್ಲಿ ಯಾವ ಅನುಭವಗಳು ಬರುತ್ತವೋ ಬರಲಿ, ಅದನ್ನು ಅನುಭವಿಸುತ್ತಲೇ 'ನಾನು ಯಾರು?' ಎನ್ನುವುದನ್ನು ಕಂಡುಕೊಳ್ಳುತ್ತೇನೆ ಎನ್ನುವುದು; ಜೀವನವಿರುವುದೇ ನನಗೆ ಬೇಕಾದ ಅನುಭವಗಳನ್ನು ಪಡೆಯುವ ಮೂಲಕ 'ನನ್ನತನ'ವನ್ನು ಕಟ್ಟಿಕೊಳ್ಳುವುದಕ್ಕೆ' ಎನ್ನುವುದು- ಎರಡೂ ಬೇರೆ ಬೇರೆ.

ಆರ್ಥಿಕ ಅಭಿವೃದ್ಧಿ, ತಾಂತ್ರಿಕ ಆವಿಷ್ಕಾರಗಳು ನಮ್ಮ ಜೀವನವನ್ನು ನಮ್ಮ ಹಿಂದಿನ ತಲೆಮಾರಿನವರ ಜೀವನಕ್ಕಿಂತ ಹೆಚ್ಚು ಸರಳಗೊಳಿಸಿದೆಯೋ ಸಂಕೀರ್ಣಗೊಳಿಸಿದೆಯೋ ಅರ್ಥವಾಗದ ಅಯೋಮಯ ಸ್ಥಿತಿ ಇಂದು ಉಂಟಾಗಿರುವುದು ಸುಳ್ಳಲ್ಲ. ಆರ್ಥಿಕ, ರಾಜಕೀಯ ಬದಲಾವಣೆಗಳು ಸಹಜವಾಗಿಯೇ ಸಾಂಸ್ಕೃತಿಕ ಬದಲಾವಣೆಗಳನ್ನು ತಂದೊಡ್ಡಿವೆ. ಎಲ್ಲದರಲ್ಲೂ 'ಮಿತಿ' ಮರೆಯಾಗಿ ಎಲ್ಲೆಲ್ಲೂ 'ಅತಿ' ವಿಜೃಂಭಿಸುತ್ತಿರುವ ಹೊತ್ತಲ್ಲಿ ಮನುಷ್ಯನ ಸುಖಜೀವನಕ್ಕೆ ಯಾವುದು, ಎಷ್ಟು ಬೇಕು ಎನ್ನುವ ಪ್ರಶ್ನೆಗೆ ಉತ್ತರ ಸುಲಭವಲ್ಲ.

ವಿದ್ಯೆ, ಉದ್ಯೋಗದಲ್ಲಿನ ಆಯ್ಕೆಗಳನ್ನು ಮೊದಲುಗೊಂಡು ಜೀವನಶೈಲಿಯಲ್ಲಿನ ಆಯ್ಕೆಗಳಾದ ಊಟ, ಉಡುಗೆ, ಗೃಹಾಲಂಕಾರ, ವಾಹನ, ಪ್ರವಾಸ, ಐಷಾರಾಮಿ ವಸ್ತುಗಳು, ದಿನನಿತ್ಯದ ಬಳಕೆಯ ತಾಂತ್ರಿಕ ಉಪಕರಣಗಳು, ಮನೋರಂಜನೆ, ಹವ್ಯಾಸ, ಎಲ್ಲದರಲ್ಲೂ ಯಾವುದನ್ನು ಆಯ್ದುಕೊಳ್ಳಬೇಕು, ಯಾವುದನ್ನು ಬಿಟ್ಟುಬಿಡಬೇಕೆಂದು ಗೊತ್ತೇ ಆಗದಷ್ಟು ಸಹಸ್ರಾರು ಆಯ್ಕೆಗಳು ನಮ್ಮ ಮುಂದಿರುತ್ತವೆ. ಆಯ್ಕೆಗಳು ಅತಿಯಾದಷ್ಟು ಸರಿಯಾದ್ದನ್ನು ಆಯ್ದುಕೊಳ್ಳುತ್ತಿದ್ದೇನೋ ಇಲ್ಲವೋ ಎನ್ನುವ ಎಚ್ಚರಿಕೆಗಿಂತಲೂ 'ನನ್ನ ಆಯ್ಕೆಗಳು ಬೇರೆಯವರ ಆಯ್ಕೆಗಳ ಜೊತೆ ಹೇಗೆ ಸ್ಪರ್ಧಿಸುತ್ತಿವೆ?' ಎನ್ನುವ ಆತಂಕವೇ ಜಾಸ್ತಿ ಎನ್ನಬಹುದು. 'ನನಗೇನು ಸಿಕ್ಕಿದೆ?' ಎನ್ನುವ ಪ್ರಶ್ನೆಗಿಂತ 'ನಾನು ಯಾವುದೇ ವಿಶಿಷ್ಟ, ರೋಚಕ, ಬದುಕು ಬದಲಿಸಿಬಿಡುವ ಅನುಭವವನ್ನು ಕಳೆದುಕೊಳ್ಳುತ್ತಿಲ್ಲ ತಾನೇ?' 'ಬೇರೆಯವರ ಆಯ್ಕೆಗಳಿಗಿಂತ ನನ್ನ ಆಯ್ಕೆಗಳೇ ವೈವಿಧ್ಯಪೂರ್ಣ, ಅತ್ಯುತ್ತಮ ಅನುಭವವನ್ನು ನೀಡುವ ಆಯ್ಕೆಯಾಗಿದೆಯೇ ಇಲ್ಲವೇ?' ಎನ್ನುವ ಪ್ರಶ್ನೆಗಳೇ ಮುಖ್ಯವಾಗಿಬಿಡುತ್ತವೆ.

ಈ ಕ್ಷಣ ಅತಿಹೆಚ್ಚು ಸುಖವನ್ನು ತರುವ, ಕಣ್ಮನಗಳನ್ನು ಸೆಳೆದು ವಿವೇಕವನ್ನು ಮಣ್ಣುಪಾಲು ಮಾಡುವ ಆಯ್ಕೆಗಳೇ ಮುಂದೆ ಅಪ್ರಿಯವಾಗುವುದೂ ಸಾಮಾನ್ಯ.

ಉದಾಹರಣೆಗೆ, ಆಧುನಿಕ ಜೀವನದ 'ಶೋಕಿ'ಗಳಲ್ಲಿ ಒಂದಾದ ಶಾಪಿಂಗ್ ಅನ್ನೇ ತೆಗೆದುಕೊಳ್ಳಿ, ಅದರಲ್ಲೂ ಬೇರೆ ದೇಶಗಳಿಗೆ, ಬೇರೆ ರಾಜ್ಯಗಳಿಗೆ ಭೇಟಿಕೊಟ್ಟಾಗ ಮಾಡುವ ಶಾಪಿಂಗ್ ಕುರಿತು ಹೇಳುವುದಾದರೆ ಅಲ್ಲಿ ಅಗತ್ಯಕ್ಕಿಂತಾ ಹೆಚ್ಚಾಗಿ 'ನೆನಪಿಗಿರಲಿ' ಎಂದು ತೆಗೆದುಕೊಳ್ಳುವ, 'ನಮ್ಮೂರಲ್ಲಿ ಇಂಥದ್ದೆಲ್ಲಾ ಇಷ್ಟು ಚೆನ್ನಾಗಿರುವುದು ಸಿಗುವುದಿಲ್ಲ' ಎಂದು ಖರೀದಿಸುವ, ಆ ದಿನದ ಭೇಟಿ / ಪ್ರವಾಸವನ್ನು ಸ್ಮರಣೀಯವಾಗಿಸುವಂತಹ ವಸ್ತುಗಳನ್ನು ಕೊಂಡುಕೊಳ್ಳುವ ಉನ್ಮಾದ ಹೆಚ್ಚಾಗುತ್ತದೆ. ವಿಶಿಷ್ಟ ಎನಿಸುವ ಹೊಸಬಗೆಯ ಅಂಗಡಿಗಳನ್ನು ಹೊಕ್ಕು ಬಗೆಬಗೆಯ ಬಣ್ಣಬಣ್ಣದ ಸಾಮಗ್ರಿಗಳನ್ನು ಕಂಡಾಗ, 'ಅದೂ ಇರಲಿ, ಇದೂ ಇರಲಿ, ನಾನೇನು ದಿನಾ ಇವನ್ನೆಲ್ಲಾ ಕೊಂಡುಕೊಳ್ಳುತ್ತೇನೆಯೇ?' ಎಂದುಕೊಂಡು ದೊಡ್ಡ ಗಂಟೊಂದನ್ನು ದೊಡ್ಡ ಮೊತ್ತದ ಹಣ ಪಾವತಿಸಿ ತಂದು ಮನೆಯಲ್ಲಿಡುತ್ತೇವೆ. ಒಂದೆರೆಡು ವಾರ ಆ ಶಾಪಿಂಗ್ ಅನುಭವ ಎಷ್ಟು ಚೆಂದವಿತ್ತು ಎನಿಸುತ್ತಿರುತ್ತದೆ, ಕಾಲಕ್ರಮೇಣ ಆ ವಸ್ತುಗಳ ಮೇಲಿನ ಆಕರ್ಷಣೆ ಕಡಿಮೆಯಾಗಿ ಅವುಗಳ ನಿರುಪಯುಕ್ತತೆ ಕಣ್ಣಿಗೆ ರಾಚಲಾರಂಭಿಸುತ್ತದೆ. ಇಷ್ಟೊಂದು ಹಣಕೊಟ್ಟು ಹಠಹಿಡಿದು ತಂದೆನಲ್ಲಾ ಇವುಗಳನ್ನು, ಸುಮ್ಮನೆ ವ್ಯರ್ಥವಾಯಿತು ಎಂದೆನಿಸುತ್ತದೆ. ಉನ್ಮಾದ ಮರೆಯಾಗಿ ವಿವೇಕ ಜಾಗೃತವಾದಾಗ 'ಕೊಳ್ಳುಬಾಕತನವನ್ನು ಸ್ವಲ್ಪ ನಿಗ್ರಹಿಸಿದ್ದಿದ್ದರೆ, ಹಣವೂ, ಮನೆಯಲ್ಲಿನ ಸ್ಥಳಾವಕಾಶವೂ ಉಳಿಯುತ್ತಿತ್ತು' ಎಂದು ಮರುಗುತ್ತೇವೆ.

ಇದಕ್ಕೆಲ್ಲಾ ಕಾರಣ ನಾವು ಪ್ರತಿದಿನವೂ 'ಹೇಳಿಕೊಳ್ಳುವಂತಹ', 'ನೆನಪಿಡುವಂತಹ' 'ಆಸಕ್ತಿಕರ'ವಾಗಿರುವ ಏನನ್ನಾದರೂ ಮಾಡಬೇಕು, ಪ್ರತಿಕ್ಷಣವೂ ವಿಶೇಷ ರೋಮಾಂಚಕ ಅನುಭವಗಳನ್ನು ಪಡೆಯಬೇಕೆನ್ನುವ ಲಾಲಸೆ. ನಾವು ನಿರಂತರ ಮನೋರಂಜನೆ, ನಿರಂತರ ಪ್ರಚೋದನೆಯನ್ನು ಬಯಸುತ್ತೇವೆ. ಅದು ಸಿಗದಿದ್ದಾಗ ಬಲುಬೇಗ ಬೇಸರಕ್ಕೆ ಒಳಗಾಗುತ್ತೇವೆ ಮತ್ತು ಬೇಸರ ಆದಕೂಡಲೇ ಏನಾದರೂ ಹೊಸದೆನಿಸುವ, ಮೈನವಿರೇಳಿಸುವ ಅನುಭವಕ್ಕೆ ಹಾತೊರೆಯುತ್ತೇವೆ.

ರೋಚಕತೆಯನ್ನು ಅರಸುತ್ತಾ...

ಕ್ಷಣಿಕ ಸುಖವನ್ನು, ರೋಚಕತೆಯನ್ನು ಸದಾ ಬಯಸುವುದರಿಂದಲೇ ಸಂಬಂಧಗಳು ಬಲುಬೇಗ ನೀರಸ ಎನಿಸಿಬಿಡುತ್ತವೆ, ಆಗಲೇ 'ನಾನು ಸರಿಯಾದ ಸಂಗಾತಿಯನ್ನು ಆಯ್ಕೆಮಾಡಿಕೊಂಡಿದ್ದೇನೋ ಇಲ್ಲವೋ?; ನಮ್ಮ ಅನುಬಂಧದಲ್ಲಿ ಯಾವುದೋ 'x-factor' ಒಂದರ ಕೊರತೆಯಿದೆಯಲ್ಲವೇ?' ಎಂದು ಅನಿಸಲು ಶುರುವಾಗುವುದು. ಆಧುನಿಕ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಒಂದು ಬಗೆಯ ಉದ್ವೇಗಕ್ಕೆ ಮುಖ್ಯ ಕಾರಣವೇ ಪ್ರತಿ ಯೊಂದರಲ್ಲೂ ರೋಚಕತೆಯನ್ನು ಹುಡುಕುವ ಪರಿಪಾಠ.

ಶಾಪಿಂಗನ್ನು ಉದಾಹರಣೆಗಷ್ಟೇ ಹೇಳಿದ್ದು, ನಿಜದಲ್ಲಿ ಆಧುನಿಕ ಸ್ನೇಹಸಂಬಂಧಗಳಲ್ಲೂ, ನಿತ್ಯದ ಜೀವನದಲ್ಲೂ ಹೀಗೇ ಕ್ಷಣಿಕ ಸುಖಕ್ಕಾಗಿ ಹಂಬಲಿಸಿ, ನವನವೀನ ಅನುಭವಗಳಿಗಾಗಿ ಪರಿತಪಿಸಿ, ಉನ್ಮಾದಕ್ಕೊಳಗಾಗಿ ದಣಿದು ನಮ್ಮನ್ನು ನಾವು ರೂಪಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ನಮ್ಮನ್ನು ನಾವು ಕಳೆದುಕೊಳ್ಳುವುದೇ ಜಾಸ್ತಿ. ಇಂದು ಆಧುನಿಕ ದಾಂಪತ್ಯವು ಕರ್ತವ್ಯ, ಜವಾಬ್ದಾರಿ, ಕುಟುಂಬ ಪಾಲನೆಗಿಂತಲೂ ಹೆಚ್ಚಾಗಿ 'ಅವಿಸ್ಮರಣೀಯ ಅನುಭವ'ಗಳನ್ನು ಹುಟ್ಟುಹಾಕುವುದರತ್ತಲೇ ಕೇಂದ್ರೀಕೃತವಾಗಿದೆ. ಆಧುನಿಕ ದಾಂಪತ್ಯವು ವ್ಯಕ್ತಿಸ್ವಾತಂತ್ರ್ಯ, ಪ್ರವಾಸ, ಸ್ಮರಣೀಯ ಸಮಾರಂಭಗಳು, ವೈಯಕ್ತಿಕ ಕನಸುಗಳನ್ನು ಒಟ್ಟಿಗೆ ಸಾಕಾರಗೊಳಿಸಿಕೊಳ್ಳುವುದು, ವೈಚಾರಿಕ ಸಾಮರಸ್ಯ ಇನ್ನು ಮುಂತಾದವುಗಳ ಸುತ್ತ ಸುತ್ತುತ್ತಿರುತ್ತದೆಯೇ ಹೊರತು ಮೊದಲಿನಂತೆ ದಾಂಪತ್ಯವೂ ಸಮಾಜದ ಒಂದು ಭಾಗ, ಸಮಾಜದ ಜೊತೆಜೊತೆಗೆ ಬೆಳೆಯುವುದು, ಸಾಮಾಜಿಕ ಹಿತವನ್ನು ಸಾಧಿಸುವುದು ದಾಂಪತ್ಯದ ಗುರಿಗಳಲ್ಲಿ ಮುಖ್ಯವಾದುದು ಎಂದು ಅಂಗೀಕರಿಸಿ ಬಾಳುವುದು ಪ್ರಸ್ತುತತೆ ಕಳೆದುಕೊಳ್ಳುತ್ತಿದೆ.

ಇಲ್ಲಿ ಯಾವುದು ಸರಿ, ಯಾವುದು ತಪ್ಪು, ಹಾಗಾದರೆ ಆಧುನಿಕ ಬದುಕನ್ನು ತ್ಯಜಿಸಿ ಮತ್ತೆ ಪ್ರಾಚೀನಕಾಲಕ್ಕೆ ಮರಳಬೇಕೆ ಎನ್ನುವ ಪ್ರಶ್ನೆಯೇ ಇಲ್ಲ; ಆಧುನಿಕ ಬದುಕು ಅನಿವಾರ್ಯವೂ ಹೌದು, ಅಗತ್ಯವೂ ಹೌದು; ಹಾಗೆ ಕಾಲದೊಟ್ಟಿಗೆ ಹೆಜ್ಜೆ ಹಾಕುವಾಗ ಆಗಬಹುದಾದ ಅವಾಂತರಗಳಿಗೆ ಪರಿಹಾರಗಳನ್ನು ಕಂಡುಕೊಂಡಾಗ ಸಾಂಪ್ರದಾಯಿಕ ನೋಟವನ್ನೂ ಆಧುನಿಕ ನೋಟವನ್ನೂ ಮೇಳೈಸಿ ನಿರಾಮಯವಾಗಿ ಬದುಕುವ ಬಗೆಯನ್ನು ಹುಡುಕಿಕೊಳ್ಳಬೇಕು.

ಇಂದಿನ ಪ್ರಪಂಚದಲ್ಲಿ ಅಧ್ಯಾತ್ಮವೂ ಈ ರೋಚಕತೆಯ ತೃಷೆಯಿಂದ ತಪ್ಪಿಸಿಕೊಂಡಿಲ್ಲ; ಆಧ್ಯಾತ್ಮಿಕ ಜೀವನವೆಂದರೆ 'ಅಸಾಧಾರಣ ಅನುಭವಗಳು', 'ನಿಗೂಢತೆ', 'ಪವಾಡಸದೃಶ ಘಟನೆಗಳು', 'ಏಕಾಏಕಿ ಎಲ್ಲವೂ ಬದಲಾಗಿಬಿಡುವುದು' - ಹೀಗೆಲ್ಲಾ ಕಲ್ಪಿಸಿಕೊಳ್ಳುವುದು ಸಾಮಾನ್ಯವಾಗಿಬಿಟ್ಟಿದೆ. ಅಧ್ಯಾತ್ಮವೂ ಸರ್ವವ್ಯಾಪಿಯಾದ ಬೇಸರಕ್ಕೆ ಮದ್ದು ಎಂಬಂತೆ ಬಿಂಬಿತವಾಗುತ್ತಿದೆ.

ಬದುಕಿನಲ್ಲಿ ಬಾಹ್ಯಪ್ರಪಂಚದ ವೈವಿಧ್ಯ, ವಿಸ್ತಾರ, ಆಯ್ಕೆಗಳು ಜಾಸ್ತಿಯಾದಷ್ಟು ಅಂತರಂಗದ ಆಳ, ತೀವ್ರತೆ, ಸ್ಪಷ್ಟತೆ ಕ್ಷೀಣಿಸಿಹೋಗದಂತೆ ಕಾಯ್ದುಕೊಳ್ಳಬೇಕಾಗುತ್ತದೆ. ಒಂದು ಆಯ್ಕೆಯಿಂದ ಮತ್ತೊಂದು ಆಯ್ಕೆಗೆ ಸದಾ ಜಿಗಿಯಲು ತಯಾರಾಗುವ ಮನಸ್ಸಿಗೆ ಬಲುಬೇಗ ಎಲ್ಲ ಆಯ್ಕೆಗಳೂ ನೀರಸ, ನಿರರ್ಥಕ ಎನಿಸತೊಡಗುತ್ತದೆ. ವೈಯಕ್ತಿಕತೆಯ ಸಂಕುಚಿತತೆಯನ್ನು ಮೀರಿ ನಮಗಿಂತ ಬಲು ಹಿರಿದಾದ ಶಾಶ್ವತವಾದ ತತ್ವವೊಂದರಲ್ಲಿ ಮನಸ್ಸು ನೆಲೆನಿಂತಾಗ ನಾವು ಉನ್ಮಾದಕ್ಕಿಂತಲೂ ಉಲ್ಲಾಸವನ್ನೇ ಬದುಕಿನ ಸಾರ್ಥಕತೆಯ ಮಾನದಂಡವಾಗಿಸಿಕೊಳ್ಳುತ್ತೇವೆ. ಉಲ್ಲಾಸ ಚಿತ್ತವಿಕಾರವನ್ನಲ್ಲ, ಚಿತ್ತಶಾಂತಿಯನ್ನು ತಂದುಕೊಡುತ್ತದೆ, ಉಲ್ಲಾಸ ಮನೋದೌರ್ಬಲ್ಯವಲ್ಲ, ಅದು ಮನೋಬಲ. ಉನ್ಮಾದದಿಂದ ಹುಟ್ಟುವ ಚಿತ್ತಚಾಂಚಲ್ಯಕ್ಕೂ ಉಲ್ಲಾಸದಿಂದ ದೊರಕುವ ಅನಾಯಾಸ ಏಕಾಗ್ರತೆಗೂ ಇರುವ ವ್ಯತ್ಯಾಸವನ್ನು ಅರಿಯಬೇಕಾದರೆ ಪ್ರತಿಕ್ಷಣವೂ ನಮ್ಮ ಮನದಲ್ಲೇಳುವ ತರಂಗಗಳನ್ನು ಧ್ಯಾನಶೀಲವಾಗಿ ಪರಿಶೀಲಿಸುವ ಮನೋಚೈತನ್ಯವೂ ಬೇಕು, ಅಭ್ಯಾಸವೂ ಬೇಕು.

ಪ್ರತಿದಿನ ಬೆಳಿಗ್ಗೆ ಸೂರ್ಯೋದಯ ನೋಡುತ್ತೇವಾದರೂ 'ಅಯ್ಯೋ, ಸೂರ್ಯೋದಯ ಬಲು ಬೋರು' ಎನ್ನುವುದಿಲ್ಲ; 'ಆಹಾ, ಸೂರ್ಯೋದಯ ಅದೆಷ್ಟು ಸುಂದರ' ಎನ್ನುತ್ತೇವೆ. ಶ್ರೇಷ್ಠ ಕಾವ್ಯವೂ ಕಲಾಕೃತಿಯೂ ಹಾಗೆಯೇ. ಅದರಿಂದ ನಾವು ಪಡೆಯುವ ಅನುಭವ, ಆನಂದ ನಿತ್ಯನೂತನ, ಆ ಆನಂದ ನಮ್ಮ ಆತ್ಮೋನ್ನತಿಗೆ ಪೂರಕ, ಸತ್ಕರ್ಮಗಳಿಗೆ ಪ್ರೇರಕ. ಅಂತಹ ಉಲ್ಲಾಸವು ಉನ್ಮಾದದಂತೆ ಆಯಾಸಕಾರಕವಲ್ಲ, ಆಯಾಸಪರಿಹಾರಕ. ಪ್ರತಿದಿನವೂ ಹೊಸತು ಎಂಬುದರಂತೆ ಬಾಳಲು ಹೊಸ ಹೊಸ ಬದುಕುಗಳನ್ನು ಹುಡುಕಿ ದಣಿಯಬೇಕಾದ್ದಿಲ್ಲ, ಕಾಣುವ ಕಣ್ಣನ್ನು, ಮನಸ್ಸನ್ನು ಎಚ್ಚರ, ಅರಿವು, ವಿವೇಕಗಳಿಂದ ಬೆಳಗುವಂತೆ ನೋಡಿಕೊಂಡರೆ ಸಾಕು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಬಹುಪದೋಕ್ತಿಗಳು

ಈ ಅಧ್ಯಾಯದಲ್ಲಿ ಬರುವ ಸಮಸ್ಯೆಗಳನ್ನು ಬಿಡಿಸುವ ಮೊದಲು ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಿ

(*) $P(x)$ ಎಂಬುದು x ಎಂಬ ಚರಾಕ್ಷರವುಳ್ಳ ಬಹುಪದೋಕ್ತಿಯಾದರೆ $P(x)$ ದಲ್ಲಿನ x ದ ಗರಿಷ್ಠ ಘಾತಸೂಚಿಯನ್ನು ಆ ಬಹುಪದೋಕ್ತಿಯ $P(x)$ ದ ಮಹತ್ತಮ ಘಾತ ಅಥವಾ ಡಿಗ್ರಿ ಎನ್ನುತ್ತಾರೆ. ಉದಾ:– $4x+2$ ಎಂಬುದು x ಚರಾಕ್ಷರವುಳ್ಳ ಒಂದು ಬಹುಪದೋಕ್ತಿಯಾಗಿದ್ದು ಇದರ ಡಿಗ್ರಿ 1 ಆಗಿದೆ, ಅದೇ ರೀತಿ $2y^2+4y+3$ ಎಂಬುದು y ಚರಾಕ್ಷರವುಳ್ಳ ಒಂದು ಬಹುಪದೋಕ್ತಿಯಾಗಿದ್ದು ಇದರ ಡಿಗ್ರಿ 2 ಆಗಿದೆ.

(*) ಡಿಗ್ರಿ 1 ಆಗಿರುವ ಬಹೋಕ್ತಿಗೆ ರೇಖಾತ್ಮಕ ಪದೋಕ್ತಿ ಎನ್ನುವರು

(*) ಡಿಗ್ರಿ 2 ಆಗಿರುವ ಬಹೋಕ್ತಿಗೆ ವರ್ಗ ಬಹುಪದೋಕ್ತಿ Quadratic Polynomials ಎನ್ನುವರು, Quadratic ಎಂಬ ಪದವು Quadrate ವ್ಯುತ್ಪತ್ತಿಯಾಗಿದೆ Quadrate ಎಂದರೆ ಸ್ಕೇರ್ ಅಥವಾ ವರ್ಗ ಎಂದರ್ಥ

(*) ಎಲ್ಲಾ ವರ್ಗ ಬಹುಪದೋಕ್ತಿಗಳು ರೀತಿ ax^2+bx+c ರೂಪದಲ್ಲಿರುತ್ತವೆ, ಇಲ್ಲಿ $a, b\ c$ ಗಳು ವಾಸ್ತವ ಸಂಖ್ಯೆಗಳಾಗಿದ್ದು $a \# 0$ ಆಗಿದೆ

(*) ಎಲ್ಲಾ ಘನ ಬಹುಪದೋಕ್ತಿಗಳು ರೀತಿ ax^3+bx^2+cx+d ರೂಪದಲ್ಲಿರುತ್ತವೆ, ಇಲ್ಲಿ $a, b\ c\ d$ ಗಳು ವಾಸ್ತವ ಸಂಖ್ಯೆಗಳಾಗಿದ್ದು $a \# 0$ ಆಗಿದೆ

ಬಹುಪದೋಕ್ತಿಯ ವಿಧಗಳು

(*) ಸ್ಥಿರ ಬಹುಪದೋಕ್ತಿ:– ಒಂದು ಸ್ಥಿರಾಂಕ ಮಾತ್ರವುಳ್ಳ ಬಹುಪದೋಕ್ತಿಯನ್ನು ಸ್ಥಿರಬಹುಪದೋಕ್ತಿ ಎನ್ನುತ್ತಾರೆ. ಉದಾ:– $P(x)=8$

(*) ಶೂನ್ಯ ಬಹುಪದೋಕ್ತಿ:– ಬಹುಪದೋಕ್ತಿಯ ಎಲ್ಲಾ ಸಹಗುಣಕಗಳು ಶೂನ್ಯಕ್ಕೆ ಸಮನಾಗಿದ್ದರೆ ಆ ಬಹುಪದೋಕ್ತಿಯನ್ನು ಶೂನ್ಯ ಬಹುಪದೋಕ್ತಿ ಎನ್ನುತ್ತಾರೆ. ಉದಾ:– $f(x)=0$, $P(x)=0$

(*) ವರ್ಗ ಬಹುಪದೋಕ್ತಿ:– ಡಿಗ್ರಿ 2 ಅನ್ನು ಹೊಂದಿರುವ ಬಹುಪದೋಕ್ತಿಯನ್ನು ವರ್ಗ ಬಹುಪದೋಕ್ತಿ ಎನ್ನುವರು. ಉದಾ:– y^2+4y+3

(*) ಘನ ಬಹುಪದೋಕ್ತಿ:– ಡಿಗ್ರಿ 3 ಅನ್ನು ಹೊಂದಿರುವ ಬಹುಪದೋಕ್ತಿಯನ್ನು ಘನ ಬಹುಪದೋಕ್ತಿ ಎನ್ನುವರು. ಉದಾ:– $2y^3+4y^2+3y-2$

ಅಭ್ಯಾಸ 2.1

$y=P(x)$ ದ ನಕ್ಷೆಗಳನ್ನು ಕೆಳಗೆ ಚಿತ್ರ 2.10ರಲ್ಲಿ ನೀಡಿದ್ದು $P(x)$ ಇಲ್ಲಿ ಉಂಬುದು ಬಹುಪದೋಕ್ತಿಯಾಗಿದೆ. ಪ್ರತಿ ಸಂದರ್ಭದಲ್ಲಿಯೂ $P(x)$ ದ ಶೂನ್ಯತೆಗಳ ಸಂಖ್ಯೆಯನ್ನು ಕಂಡುಹಿಡಿಯಿರಿ



ಉತ್ತರ:–(1) ನಕ್ಷೆಯು x –ಅಕ್ಷವನ್ನು ಯಾವುದೇ ಬಿಂದುವಿನಲ್ಲಿ ಭೇದಿಸುವುದಿಲ್ಲ, ಆದ್ದರಿಂದ ಶೂನ್ಯತೆಗಳ ಸಂಖ್ಯೆ 0 ಆಗಿದೆ

2) ನಕ್ಷೆಯು x –ಅಕ್ಷವನ್ನು ಒಂದು ಬಿಂದುವಿನಲ್ಲಿ ಭೇದಿಸುವುದರಿಂದ ಶೂನ್ಯತೆಗಳ ಸಂಖ್ಯೆ 1 ಆಗಿದೆ

3) ನಕ್ಷೆಯು x –ಅಕ್ಷವನ್ನು 3 ಬಿಂದುಗಳಲ್ಲಿ ಭೇದಿಸುವುದು ಆದ್ದರಿಂದ ಶೂನ್ಯತೆಗಳ ಸಂಖ್ಯೆ 3 ಆಗಿದೆ

4) ನಕ್ಷೆಯು x –ಅಕ್ಷವನ್ನು ಎರಡು ಬಿಂದುಗಳಲ್ಲಿ ಭೇದಿಸುವುದು ಆದ್ದರಿಂದ ಶೂನ್ಯತೆಗಳ ಸಂಖ್ಯೆ 2 ಆಗಿದೆ

5) ನಕ್ಷೆಯು x –ಅಕ್ಷವನ್ನು 4 ಬಿಂದುಗಳಲ್ಲಿ ಭೇದಿಸುವುದು ಆದ್ದರಿಂದ ಶೂನ್ಯತೆಗಳ ಸಂಖ್ಯೆ 4 ಆಗಿದೆ

6) ನಕ್ಷೆಯು x –ಅಕ್ಷವನ್ನು 3 ಬಿಂದುಗಳಲ್ಲಿ ಭೇದಿಸುವುದು ಆದ್ದರಿಂದ ಶೂನ್ಯತೆಗಳ ಸಂಖ್ಯೆ 3 ಆಗಿದೆ

ಬಹುಪದೋಕ್ತಿಯ ಶೂನ್ಯತೆಗಳು ಹಾಗೂ ಸಹಗುಣಕಗಳ ನಡುವಿನ ಸಂಬಂಧ

*) α ಮತ್ತು β ಗಳು ax^2+bx+c ಎಂಬ ಒಂದು ವರ್ಗ ಬಹುಪದೋಕ್ತಿಯ ಶೂನ್ಯತೆಗಲಾದರೆ ಆಗ $\alpha+\beta=\frac{-b}{a}$ ಮತ್ತು $\alpha\beta=\frac{c}{a}$ ಆಗಿರುತ್ತದೆ.

*)

ಸಾಮಾನ್ಯವಾಗಿ, α, β, γ ಗಳು ax^3+bx^2+cx+d ಎಂಬ ಘನ ಬಹುಪದೋಕ್ತಿಯ ಶೂನ್ಯತೆಗಳಾದರೆ, ಆಗ,

$$\alpha+\beta+\gamma=\frac{-b}{a},$$
$$\alpha\beta+\beta\gamma+\gamma\alpha=\frac{c}{a},$$
$$\alpha\beta\gamma=\frac{-d}{a}.$$

ಸಮಸ್ಯೆ ಮತ್ತು ಪರಿಹಾರ

1) $x^2+7x+10$ ಎಂಬ ವರ್ಗ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ

ಪರಿಹಾರ: $x^2+7x+10 = x^2+5x+2x+10 = x(x+5)+2(x+5) = (x+2)(x+5)$

$\therefore x+2=0$ ಅಥವಾ $x+5=0$ ಆದಾಗ, ಅಂದರೆ $x=-2$ ಅಥವಾ $x=-5$ ಆದಾಗ $x^2+7x+10$ ರ ಬೆಲೆಯು ಸೊನ್ನೆಯಾಗುತ್ತದೆ. ಆದ್ದರಿಂದ, -2 ಮತ್ತು -5 ಇವು $x^2+7x+10$ ರ ಶೂನ್ಯತೆಗಳಾಗಿವೆ.

ಈಗ, ಶೂನ್ಯತೆಗಳ ಮೊತ್ತ $=(-2)+(-5)=-7=\frac{-(7)}{1}=\frac{-(x \text{ ದ ಸಹಗುಣಕ})}{x^2 \text{ ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $=(-2)\times(-5)=10=\frac{10}{1}=\frac{\text{ಸ್ಥಿರಾಂಕ}}{x^2 \text{ ದ ಸಹಗುಣಕ}}$

2) x^2-3 ಎಂಬ ವರ್ಗ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ

ಉದಾಹರಣೆ 3: x^2-3 ಎಂಬ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ.

ಪರಿಹಾರ: $a^2-b^2=(a-b)(a+b)$ ಎಂಬ ನಿತ್ಯಸಮೀಕರಣವನ್ನು ಸ್ಮರಿಸಿಕೊಳ್ಳಿ.

$\therefore x^2-3=(x-\sqrt{3})(x+\sqrt{3})$

ಆದ್ದರಿಂದ, $x=\sqrt{3}$ ಅಥವಾ $x=-\sqrt{3}$ ಆದಾಗ x^2-3 ರ ಬೆಲೆಯು ಸೊನ್ನೆಯಾಗುತ್ತದೆ.

ಆದ್ದರಿಂದ, $\sqrt{3}$ ಮತ್ತು $-\sqrt{3}$ ಇವು x^2-3 ರ ಶೂನ್ಯತೆಗಳಾಗಿವೆ.

ಈಗ, ಶೂನ್ಯತೆಗಳ ಮೊತ್ತ $=\sqrt{3}-\sqrt{3}=0=\frac{-(x \text{ ದ ಸಹಗುಣಕ})}{x^2 \text{ ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ $=(\sqrt{3})(-\sqrt{3})=-3=\frac{-3}{1}=\frac{\text{ಸ್ಥಿರಾಂಕ}}{x^2 \text{ ದ ಸಹಗುಣಕ}}$

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

MATHS

Inverse trigonometric functions

22. Evaluate $\cos\left[\tan^{-1}\frac{15}{8}-\sin^{-1}\frac{12}{13}\right]$

Soln:- (......Contd)

From the above fig; we find that

$\therefore \cos\alpha=\frac{8}{17}$, $\sin\alpha=\frac{15}{17}$ & $\cos\beta=\frac{15}{13}$

Now consider,

$$\cos\left[\tan^{-1}\frac{15}{8}-\sin^{-1}\frac{12}{13}\right]=\cos(\alpha-\beta)$$
$$\Rightarrow \cos\alpha\cos\beta+\sin\alpha\sin\beta$$
$$\Rightarrow \frac{8}{17}\cdot\frac{15}{13}+\frac{15}{17}\cdot\frac{12}{13}=\frac{220}{221}$$

23. Prove that

$$\sin^{-1}\frac{3}{5}+\cos^{-1}\frac{12}{13}=\cos^{-1}\frac{33}{65}$$

Soln: –Let $\sin^{-1}\frac{3}{5}=\alpha$,

so that $\sin\alpha=\frac{3}{5}$ and $\cos^{-1}\frac{12}{13}=\beta$,

so that $\cos\beta=\frac{12}{13}$



$$\sin^{-1}\frac{3}{5}+\cos^{-1}\frac{12}{13}=\cos^{-1}\frac{33}{65}$$

From the above fig; we find that

$\therefore \cos(\alpha+\beta)=\frac{4}{5}$ and $\sin\beta=\frac{5}{13}$

Now consider,

$$\cos(\alpha+\beta)=\cos\alpha\cos\beta-\sin\alpha\sin\beta$$
$$=\frac{4}{5}\cdot\frac{12}{13}-\frac{3}{5}\cdot\frac{5}{13}$$
$$=\frac{48}{65}-\frac{15}{65}=\frac{33}{65}$$
$$\therefore \alpha+\beta=\cos^{-1}\frac{33}{65}$$
$$\Rightarrow \sin^{-1}\frac{3}{5}+\cos^{-1}\frac{12}{13}=\cos^{-1}\frac{33}{65}$$

24. If $\tan^{-1}x+\tan^{-1}y+\tan^{-1}z=\pi$, **prove that** $x+y+z=xyz$.

Soln:- **We know that**

$$\tan^{-1}x+\tan^{-1}y+\tan^{-1}z=\tan^{-1}\frac{x+y+z-xyz}{1-(xy+yz+zx)}$$

And also, $\tan^{-1}\left\{\frac{x+y+z-xyz}{1-(xy+yz+zx)}\right\}=\pi$

$$\Rightarrow \frac{x+y+z-xyz}{1-(xy+yz+zx)}=\tan\pi=0$$
$$\Rightarrow x+y+z-xyz=0$$
$$\Rightarrow x+y+z=xyz$$

25. Prove that

$$\tan^{-1}\frac{a-b}{1+ab}+\tan^{-1}\frac{b-c}{1+bc}+\tan^{-1}\frac{c-a}{1+ca}=0.$$

Soln: – Consider,

$$\tan^{-1}\frac{a-b}{1+ab}+\tan^{-1}\frac{b-c}{1+bc}+\tan^{-1}\frac{c-a}{1+ca}$$
$$\Rightarrow(\tan^{-1}a-\tan^{-1}b)+(\tan^{-1}b-\tan^{-1}c)+(\tan^{-1}c-\tan^{-1}a)$$
$$\Rightarrow 0=\text{RHS}$$

26. If $\cos^{-1}x+\cos^{-1}y+\cos^{-1}z=\pi$, **prove that** $x^2+y^2+z^2+2xyz=1$

Soln: – Let $\cos^{-1}z=\theta$, so that $\cos\theta=z$

$$\Rightarrow \cos^{-1}x+\cos^{-1}y=\pi-\cos^{-1}z$$

We also know that,

$$\cos^{-1}\left\{xy-\sqrt{1-x^2}\sqrt{1-y^2}\right\}=\pi-\theta$$
$$\therefore xy-\sqrt{1-x^2}\sqrt{1-y^2}=\cos(\pi-\theta)$$
$$\Rightarrow xy-\sqrt{1-x^2}\sqrt{1-y^2}=-\cos\theta=-z$$
$$\therefore xy+z=-\sqrt{1-x^2}\sqrt{1-y^2}$$

Squaring both sides, we get

$$(xy+z)^2=(1-x^2)^2(1-y^2)^2$$
$$x^2y^2+2xyz+z^2=1-x^2-y^2+x^2y^2$$
$$\therefore x^2+y^2+z^2+2xyz=1$$

27. Prove that:

$$\sin^{-1}x=\cos^{-1}\sqrt{1-x^2}=\tan^{-1}\frac{x}{\sqrt{1-x^2}}$$
$$=\sec^{-1}\frac{1}{\sqrt{1-x^2}}=\cot^{-1}\frac{\sqrt{1-x^2}}{x}$$
$$=\text{cosec}^{-1}\frac{1}{x}$$

Proof: (i) Let $\sin^{-1}x=\theta$

$\Rightarrow \sin\theta=x$ where

$\theta\in\left[-\frac{\pi}{2},\frac{\pi}{2}\right]$ and $x\in[-1, 1]$

$\therefore \cos\theta=\sqrt{1-\sin^2\theta}=\sqrt{1-x^2}$;

(Contd....)

ಮಳೆಗಾಲಕ್ಕೆ ಮುನ್ನೆಚ್ಚರಿಕೆ



ಮಳೆಗಾಲದಲ್ಲಿ ವೈರಾಣುಗಳು ಅತಿಯಾಗಿ ಸಕ್ರಿಯಗೊಳ್ಳುವುದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಪದೇ ಪದೇ ಶೀತ, ನೆಗಡಿ, ಕೆಮ್ಮು, ಜ್ವರಕ್ಕೆ ತುತ್ತಾಗುವುದರಿಂದ ರೋಗನಿರೋಧಕ ಶಕ್ತಿ ಹೆಚ್ಚಳಕ್ಕೆ ಅಗತ್ಯವಿರುವ ಆಹಾರವನ್ನು ಸೇವಿಸಿ. ವಿಟಮಿನ್ 'ಸಿ' ಹೆಚ್ಚಿರುವ ಕಿತ್ತಳೆ, ನೆಲ್ಲಿಕಾಯಿ, ಸೀಬೆಹಣ್ಣು, ನಿಂಬೆಹಣ್ಣಿನ ಸೇವನೆಯತ್ತ ಗಮನ ಕೊಡಿ. ಊರಿಯೂತ ನಿವಾರಕ ಪದಾರ್ಥಗಳಾದ ಶುಂಠಿ, ಬೆಳ್ಳುಳ್ಳಿ, ಅರಿಶಿನವನ್ನು ಬಳಸಿ. ಜೀರ್ಣಕ್ರಿಯೆಗೆ ಸಹಕಾರಿಯಾಗುವ ಪ್ರೊಬಯೋಟಿಕ್ ಪದಾರ್ಥಗಳಾದ ಮೊಸರು, ಮಜ್ಜಿಗೆ, ಯೋಗರ್ಟ್‌ಗಳನ್ನು ಮಧ್ಯಾಹ್ನದ ಹೊತ್ತು ಸೇವಿಸಿ. ಮಳೆ ಎಂದು ದೇಹಕ್ಕೆ ಅಗತ್ಯವಿರುವಷ್ಟು ನೀರನ್ನು ಕುಡಿಯದೇ ಇರಬೇಡಿ. ಆಗಾಗ್ಗೆ ಬಿಸಿ ಬಿಸಿ ನೀರು, ತರಕಾರಿ ಹಾಗೂ ಸೊಪ್ಪಿನ ಸೂಪ್‌ಗಳನ್ನು ಸೇವಿಸಿ, ನಿರ್ಜಲೀಕರಣದಿಂದ ದೂರವಿರಿ.

ಮಳೆಗಾಲದಲ್ಲಿ ನೀರಿನಿಂದ ಹರಡುವ ಸೋಂಕುಗಳ ಅಪಾಯ ಹೆಚ್ಚಾಗಿರುತ್ತದೆ. ಹಾಗಾಗಿ ರಸ್ತೆಬದಿ ಆಹಾರ ಸೇವನೆ ಮಾಡಬೇಡಿ. ಕಚ್ಚಾ ಸಲಾಡ್, ಮುಂಚಿತವಾಗಿ ಕತ್ತರಿಸಿದ ಹಣ್ಣುಗಳು ಮತ್ತು ಪಾನಿಪೂರಿಯಂಥ ತಿನಿಸುಗಳ ಸೇವನೆಗೆ ಕಡಿವಾಣ ಹಾಕಿ. ಮಳೆಗಾಲದಲ್ಲಿ ಸೊಳ್ಳೆಗಳ ಕಾಟ ಹೆಚ್ಚುವುದರಿಂದ ಅವುಗಳ ನಿಯಂತ್ರಣದ ಕಡೆಗೆ ಗಮನ ಕೊಡಿ. ಮಳೆಯಲ್ಲಿ ತೋಯದಂತೆ ರೇನ್‌ಕೋಟ್ ಅಥವಾ ಛತ್ರಿ ಬಳಸಿ. ಅಶುದ್ಧ ನೀರಿನಲ್ಲಿ ನಡೆಯಬೇಡಿ. ಸಾಕಷ್ಟು ನಿದ್ರೆ ಮತ್ತು ನಿಯಮಿತ ವ್ಯಾಯಾಮವನ್ನು ಮಾಡಿ. ಜ್ವರ, ಅತಿಸಾರ, ನಿರಂತರ ಕೆಮ್ಮು ಅಥವಾ ಚರ್ಮದ ಸೋಂಕು ಕಂಡುಬಂದರೆ ವೈದ್ಯರನ್ನು ಸಂಪರ್ಕಿಸಿ. ❖

Advertorial

ಅಲಿವಿಯೇಟ್ ಕ್ಲಿನಿಕ್‌ನಲ್ಲಿದೆ ನೋವಿಗೆ ಉಪಾಯ | ಸ್ಟಿರಾಯ್ಡ್ ಎಂಬ ಶಾರ್ಟ್‌ಕಟ್ ಬಳಕೆ ಇಲ್ಲ

ಮಂಡಿನೋವಿನ ಉಪಶಮನಕ್ಕೆ ಸರ್ಜರಿ ಇಲ್ಲದೇ ಸುಲಭ ಚಿಕಿತ್ಸೆ

■ **ವಿಶೇಷ ವರದಿ** ಬೆಂಗಳೂರು

ಮೊಣಕಾಲಿನ ನೋವು ಇತ್ತೀಚಿನ ವರ್ಷಗಳಲ್ಲಿ ಅನೇಕ ಜನರ ಜೀವನ ನಿರ್ವಹಣೆಯನ್ನು ಕಷ್ಟಕರವಾಗಿಸಿದೆ. ಆದರೆ, ಇದರ ಬಗ್ಗೆ ಆತಂಕ ಬೇಡ. ಬೆಂಗಳೂರಿನ ಪ್ರಸಿದ್ಧ 'ಅಲಿವಿಯೇಟ್ ಪೇನ್ ಮ್ಯಾನೇಜ್ಮೆಂಟ್ ಕ್ಲಿನಿಕ್'ನಲ್ಲಿ ಯಾವುದೇ ಅಡ್ಡ ಪರಿಣಾಮಗಳಿಲ್ಲದೆ, ನೈಸರ್ಗಿಕವಾಗಿ ನೋವನ್ನು ಕಡಿಮೆ ಮಾಡುವ 'ಪಿಆರ್‌ಪಿ ಚಿಕಿತ್ಸೆ' ವರದಾನವಾಗಿದೆ.

ವಯಸ್ಸಾದವರು, ಕ್ರೀಡಾಪಟುಗಳಿಂದ ಹಿಡಿದು ಗೃಹಿಣಿಯರವರೆಗೆ ಬಹಳಷ್ಟು ಮಂದಿ ಕೀಲು ಸವೆತ ಮತ್ತು ಸಂಧಿವಾತ ದಂತಹ ನೋವಿನಿಂದ ನರಳುತ್ತಿದ್ದಾರೆ. ಮೆಟ್ಟಿಲು ಹತ್ತಲು ತೊಂದರೆ, ಸರಳ ಕೆಲಸವೂ ಕಷ್ಟವಾಗಿದ್ದು, ಕುಳಿತಿದ್ದ ಜಾಗದಿಂದ ಏಳುವುದು ಕಷ್ಟಕರ. ಇವೆಲ್ಲವೂ ಅಸ್ಥಿ ಸಂಧಿವಾತದ ಲಕ್ಷಣಗಳಾಗಿದ್ದು, ಇದಕ್ಕಾಗಿ ನೋವು ನಿವಾರಕಗಳ ಮೇಲೆ ಅತಿಯಾದ ಅವಲಂಬನೆ ಹೊಂದುತ್ತಿದ್ದಾರೆ.

ಈ ನೋವು ದೇಹದೊಳಗಿನ ಸಮಸ್ಯೆ ಸೂಚಿಸುವ ಒಂದು ಪ್ರಬಲವಾದ ಎಚ್ಚರಿಕೆ ಸಂದೇಶ ಅಷ್ಟೇ. ಅದಕ್ಕೆ

ನೋವು ನಿವಾರಕಗಳ ಮೊರೆ ಹೋಗುವುದು, ಸ್ಟೀರಾಯ್ಡ್ ಚುಚ್ಚುಮದ್ದುಗಳನ್ನು ಹಾಕಿಸಿಕೊಳ್ಳುವುದರಿಂದ ತಾತ್ಕಾಲಿಕವಾಗಿ ಪರಿಹಾರ ಕಂಡುಕೊಳ್ಳಬಹುದು. ಆದರೆ ಪೂರ್ಣ ಗುಣ ಸಾಧ್ಯವಿಲ್ಲ. ಹಾಗಾಗಿ ಸಮಸ್ಯೆಯನ್ನು ಬುಡದಿಂದಲೇ ಪರಿಹರಿಸುವ ಅಗತ್ಯವಿದೆ. ಅದಕ್ಕಾಗಿ ಅಲಿವಿಯೇಟ್ ಪೇನ್ ಮ್ಯಾನೇಜ್ಮೆಂಟ್ ಕ್ಲಿನಿಕ್‌ನಲ್ಲಿ ಪರಿಹಾರ ಲಭ್ಯವಿದೆ.

ಚಿಕಿತ್ಸೆಯ ವಿಶೇಷತೆ ಮತ್ತು ಅನುಕೂಲ

- **ಮೂಲಕ್ಕೆ ಚಿಕಿತ್ಸೆ:** ನೋವಿಗೆ ಕಾರಣವಾದ ಅಂಗಾಂಶದ ಹಾನಿ ಸರಿಪಡಿಸಲಿದೆ. ಇದರಿಂದ ನೋವಿನ ಸಮಸ್ಯೆ ಬುಡದಿಂದಲೇ ಉಪಶಮನ ಸಾಧ್ಯವಾಗುತ್ತದೆ.
- **ನಿಮ್ಮದೇ ದೇಹದ ಶಕ್ತಿ ಬಳಕೆ:** ನಿಮ್ಮ ದೇಹದಿಂದ ತೆಗೆದ ರಕ್ತದಲ್ಲಿರುವ ಪ್ಲೇಟ್‌ಲೆಟ್‌ಗಳು (ಗುಣ ಮಾಡುವ ಶಕ್ತಿಯನ್ನು) ಪ್ರತ್ಯೇಕಿಸಿ, ಚುಚ್ಚುಮದ್ದಿನ ಮೂಲಕ ನೋವಿರುವ ಜಾಗಕ್ಕೆ ನೀಡಲಾಗುತ್ತದೆ.
- **ದೀರ್ಘಕಾಲೀನ ಉಪಶಮನ:** ಕೇವಲ ತಾತ್ಕಾಲಿಕ ಆರಾಮಕ್ಕಷ್ಟೇ ಸೀಮಿತವಾಗದೆ, ದೀರ್ಘಕಾಲದ ನೋವು ಮುಕ್ತ ಜೀವನಕ್ಕಾಗಿ ರೂಪಿಸಲಾದ ಸುರಕ್ಷಿತ ಮಾರ್ಗವಿದು.
- **ಆಪರೇಷನ್‌ಗೆ ಸೂಕ್ತ ಪರ್ಯಾಯ:** ಶಸ್ತ್ರಚಿಕಿತ್ಸೆ (ಆಪರೇಷನ್) ಬೇಡ ಎನ್ನುವವರಿಗೆ ಮತ್ತು ಆಪರೇಷನ್‌ಗೆ ಸೂಕ್ತವಲ್ಲದವರಿಗೆ ಈ ವರದಾನವಾಗಿದೆ.
- **ಡೇ ಕೇರ್ ಕಾರ್ಯವಿಧಾನ:** ಈ ಚಿಕಿತ್ಸೆಯು ಡೇ ಕೇರ್ ಕಾರ್ಯವಿಧಾನ ಹೊಂದಿದ್ದು, ಚಿಕಿತ್ಸೆ ಪಡೆದ ದಿನವೇ ಡಿಸ್ಚಾರ್ಜ್ ಮಾಡಲಾಗುತ್ತದೆ.

ಪಿಆರ್‌ಪಿ ಚಿಕಿತ್ಸೆಯ ಲಾಭಗಳು

- ಆಸ್ಪತ್ರೆ ವಾಸ ಇರುವುದಿಲ್ಲ
- 30-60 ನಿಮಿಷದ ಪ್ರಕ್ರಿಯೆ
- ಸ್ಟೀರಾಯ್ಡ್ ಬಳಕೆ ಇಲ್ಲ
- 48 ಗಂಟೆಯಲ್ಲಿ ಕೆಲಸಕ್ಕೆ ಮರಳಬಹುದು

ಇತರ ಚಿಕಿತ್ಸೆ

ಮೊಣಕಾಲು ಮಾತ್ರವಲ್ಲದೆ ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿದೆ.

ವಿಳಾಸ:
ಅಲಿವಿಯೇಟ್ ನೋವು ನಿವಾರಣಾ ಕೇಂದ್ರ,
ಬೆಂಗಳೂರು ಶಾಖೆಗಳು: ಪೀಣ್ಯ ದಾಸರಹಳ್ಳಿ, ಸದಾಶಿವನಗರ, ಜಯನಗರ, ಇಂದಿರಾನಗರ, ವೈಟ್‌ಫೀಲ್ಡ್, ದೂ: **080 25256878; 080 23614888**

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಬೇರೆ ಬೇರೆ ಧರ್ಮಗಳನ್ನು ಒಳಹೊಕ್ಕಿ ನೋಡಿದರೂ ಎಲ್ಲ ಧರ್ಮಗಳ ತಿರುಳು ಒಳ್ಳೆಯದನ್ನು ಬಯಸುವುದೇ ಆಗಿದೆ.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಬೇಕಿದೆ ಕೋಮುಸೌಹಾರ್ದ ಖಾತರಿ ವಿವಾದಗಳ ಕೆದಕುವಿಕೆ ಕೊನೆಗೊಳ್ಳಲಿ

ಧಾರ್ ಜಿಲ್ಲೆಯ ಭೋಜಶಾಲಾ ದೇವಾಲಯ–ಕಮಾಲ್ ಮೌಲಾ ಮಸೀದಿ ಸಮುಚ್ಚಯವನ್ನು ಸರಸ್ವತಿ ದೇವಾಲಯ ಎಂದು ತೀರ್ಮಾನಿಸಿ ಮಧ್ಯಪ್ರದೇಶ ಹೈಕೋರ್ಟ್‌ನ ಇಂದೋರ್ ಪೀಠ ತೀರ್ಪು ನೀಡಿದೆ. ಈ ತೀರ್ಪು, ಜಾರಿಯಲ್ಲಿರುವ ಕಾನೂನುಗಳು ಹಾಗೂ ನ್ಯಾಯಾಂಗದ ಆದೇಶಗಳು ಬಾಬ್ರಿ ಮಸೀದಿ ಪ್ರಕರಣದ ತೀರ್ಪಿನ ಮಾದರಿಯ ನಿರ್ಧಾರಗಳು ಮರುಕಳಿಸುವುದನ್ನು ತಡೆಯಲಾರವು ಎನ್ನುವುದಕ್ಕೆ ನಿದರ್ಶನದಂತಿದೆ. ಈ ಸಮುಚ್ಚಯದೊಳಗೆ ಹಿಂದೂಗಳು ಪ್ರತಿ ಮಂಗಳವಾರ ಹಾಗೂ ಮುಸ್ಲಿಂ ಸಮುದಾಯದವರು ಶುಕ್ರವಾರಗಳಂದು ಪ್ರಾರ್ಥನೆ ಸಲ್ಲಿಸಲು ಭಾರತೀಯ ಪುರಾತತ್ವ ಸಮೀಕ್ಷೆ (ಎಎಸ್‌ಐ) 2003ರಲ್ಲಿ ಅನುಮತಿ ನೀಡಿ ಆದೇಶ ಹೊರಡಿಸಿತ್ತು. ಆ ಆದೇಶವನ್ನು ರದ್ದುಪಡಿಸಿರುವ ಹೈಕೋರ್ಟ್, ಇಡೀ ಸಮುಚ್ಚಯವನ್ನು ಸರಸ್ವತಿ ಮಂದಿರ ಎಂದು ನಿರ್ಧರಿಸಿ ತೀರ್ಪು ನೀಡಿದೆ. ಬಾಬ್ರಿ ಮಸೀದಿ ಪ್ರಕರಣದಂತೆ, ಮಸೀದಿ ಅಥವಾ ಪ್ರಾರ್ಥನಾ ಸ್ಥಳದ ನಿರ್ಮಾಣಕ್ಕಾಗಿ ಧಾರ್ ಜಿಲ್ಲೆಯಲ್ಲಿಯೇ ಸೂಕ್ತ ಸ್ಥಳವನ್ನು ಹಂಚಿಕೆ ಮಾಡಲು ಕೋರುವ ಅರ್ಜಿಯನ್ನು ರಾಜ್ಯ ಸರ್ಕಾರ ಪರಿಗಣಿಸಬಹುದು ಎಂದೂ ಕೋರ್ಟ್ ಹೇಳಿದೆ. ತೀರ್ಪು ಪ್ರಕಟಗೊಂಡ ತಕ್ಷಣವೇ ದೇಗುಲದಲ್ಲಿ ವಿಗ್ರಹ ಪ್ರತಿಷ್ಠಾಪನೆ ನಡೆದಿದ್ದು, ಪೂಜಾ ಪ್ರಕ್ರಿಯೆ ಆರಂಭವಾಗಿದೆ.

ಐತಿಹಾಸಿಕ ದಾಖಲೆಗಳು ಹಾಗೂ ಪುರಾತತ್ವ ಸಾಕ್ಷ್ಯಗಳ ಆಧಾರದಲ್ಲಿ ನಡೆದ ಊಹೆ ಹಾಗೂ ವಾದಗಳನ್ನು ಎತ್ತಿಹಿಡಿದಿರುವ ಹೈಕೋರ್ಟ್, ವಿವಾದಕ್ಕೆ ಕಾರಣವಾಗಿದ್ದ ಸಮುಚ್ಚಯವು ಹಿಂದೂ ಧಾರ್ಮಿಕ ಸ್ವರೂಪದ್ದಾಗಿತ್ತು ಎನ್ನುವ ತೀರ್ಮಾನಕ್ಕೆ ಬಂದಿದೆ. ಈ ಸಮುಚ್ಚಯದ ಬಗ್ಗೆ ಎಎಸ್‌ಐ ತನ್ನ ನಿಲುವನ್ನು ಕಾಲಕ್ರಮೇಣ ಬದಲಿಸಿದೆ. ಪ್ರಸ್ತುತ, ಇಂದೋರ್ ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಹಿಂದಿನ ಉದಾಹರಣೆಗಳನ್ನು ಗಮನಿಸಿದರೆ, ಅಲ್ಲಿ ಹೀಗೆ ತೀರ್ಪು ಬರುವ ಸಾಧ್ಯತೆ ಕಡಿಮೆ. ಯಾವುದೇ ಪೂಜಾ ಸ್ಥಳದ ಧಾರ್ಮಿಕ ಚಹರೆಗಳನ್ನು ಬದಲಾಯಿಸುವುದನ್ನು 1991ರ ಪೂಜಾಸ್ಥಳಗಳ ಕಾಯ್ದೆ ನಿಷೇಧಿಸುತ್ತದೆ ಹಾಗೂ 1947ರ ಆಗಸ್ಟ್ 15ರಲ್ಲಿ ಇದ್ದಂತೆ ಯಥಾಸ್ಥಿತಿಯಲ್ಲಿ ಧಾರ್ಮಿಕ ಸ್ಥಳಗಳನ್ನು ಉಳಿಸಿಕೊಳ್ಳಲು ಹೇಳುತ್ತದೆ. ಈ ಕಾಯ್ದೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ಬಗ್ಗೆ ಸುಪ್ರೀಂ ಕೋರ್ಟ್ ಇನ್ನೂ ತೀರ್ಪು ನೀಡಿಲ್ಲ. ಈ ಕಾಯ್ದೆಯು ಭೋಜಶಾಲಾ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದು ಮಧ್ಯಪ್ರದೇಶ ಹೈಕೋರ್ಟ್ ಹೇಳಿದೆ. ಧಾರ್ಮಿಕ ಸ್ಥಳಗಳಿಗೆ ಸಂಬಂಧಿಸಿ ಹೊಸ ದಾವೆಗಳನ್ನು 2024ರ ಡಿಸೆಂಬರ್‌ನಲ್ಲಿ ಸ್ಥಗಿತಗೊಳಿಸಿದ್ದ ಸುಪ್ರೀಂ ಕೋರ್ಟ್, ಬಾಕಿ ಇರುವ ಪ್ರಕರಣಗಳಲ್ಲಿ ಕೆಳ ಹಂತದ ನ್ಯಾಯಾಲಯಗಳು ಗಂಭೀರ ಪರಿಣಾಮಗಳಿಗೆ ಕಾರಣವಾಗಬಹುದಾದ ನಿರ್ದೇಶನಗಳನ್ನು ನೀಡದಂತೆ ಅಥವಾ ಸಮೀಕ್ಷೆಗೆ ಅವಕಾಶ ನೀಡದಂತೆಯೂ ನಿರ್ದೇಶಿಸಿತ್ತು. ಆದರೆ, ಆ ವರ್ಷದ ಜನವರಿಯಲ್ಲಿ ವಿವಾದಿತ ಸಮುಚ್ಚಯದ ಸ್ವರೂಪದ ಕುರಿತು ಎಎಸ್‌ಐ ಸಲ್ಲಿಸಿದ್ದ ಮುಚ್ಚಿದ ಲಕೋಟೆಯ ವರದಿಯನ್ನು ಮಧ್ಯಪ್ರದೇಶ ಹೈಕೋರ್ಟ್ ತೆರೆಯಬಹುದೆಂದು ಆದೇಶಿಸಿತು. 'ಅನುಕೂಲಕ್ಕೆ ತಕ್ಕಂತೆ' ತಯಾರಿಸಲಾಗಿದೆ ಎಂದು ಟೀಕೆಗೊಳಗಾಗಿರುವ ಎಎಸ್‌ಐ ವರದಿಯನ್ನೇ ಹೈಕೋರ್ಟ್‌ನ ಇತ್ತೀಚಿನ ತೀರ್ಪು ಆಧರಿಸಿದೆ.

ಭೋಜಶಾಲಾ ಸಮುಚ್ಚಯದ ಬಗ್ಗೆ ಮಧ್ಯಪ್ರದೇಶ ಹೈಕೋರ್ಟ್ ನೀಡಿರುವ ತೀರ್ಪು, ಧಾರ್ಮಿಕ ಸ್ಥಳಗಳಿಗೆ ಸಂಬಂಧಿಸಿದ ವಿವಾದಗಳನ್ನು ಕೆದಕುವ ಪ್ರವೃತ್ತಿಯನ್ನು ಉತ್ತೇಜಿಸುವಂತಿದೆ.

ದೇಶದ ಸಾಮಾಜಿಕ ಸಾಮರಸ್ಯ ಮತ್ತು ಕೋಮುಸೌಹಾರ್ದಕ್ಕೆ ಧಾರ್ಮಿಕ ಸ್ಥಳಗಳಿಗೆ ಸಂಬಂಧಿಸಿದ ವಿವಾದಗಳು ಧಕ್ಕೆ ಉಂಟುಮಾಡಬಾರದು ಎನ್ನುವ ಧ್ಯೇಯ 1991ರ ಕಾಯ್ದೆ ಮತ್ತು 2024ರ ಆದೇಶಗಳದ್ದಾಗಿದೆ. ಆದರೆ, ಈಗ ಇವು ನಿರ್ಜೀವ ಅಕ್ಷರಗಳಂತೆ ಕಾಣಿಸುತ್ತಿವೆ. ಹಳೆಯ ವಿವಾದಗಳನ್ನು ಜೀವಂತಗೊಳಿಸಿ ಮುಂದುವರಿಸಲು ಕಾನೂನಿನಲ್ಲಿ ಇರಬಹುದಾದ ಲೋಪಗಳನ್ನು ಹುಡುಕಲಾಗುತ್ತಿದೆ. ಇತಿಹಾಸದ ಮತ್ತು ಪುರಾತತ್ವದ ವಿಷಯಗಳನ್ನು ವಿವಿಧ ರೀತಿಗಳಲ್ಲಿ ಹಾಗೂ ವಿರೋಧಾಭಾಸ ಇರುವಂತೆಯೂ ವ್ಯಾಖ್ಯಾನಿಸಬಹುದಾಗಿದೆ. ಸಮಕಾಲೀನ ವಿದ್ಯಮಾನಗಳನ್ನು ಗಮನಿಸಿದರೆ, ಈ ವ್ಯಾಖ್ಯಾನಗಳು ಬಲಿಷ್ಠರು ಮತ್ತು ಅಧಿಕಾರದಲ್ಲಿ ಇರುವವರಿಗೆ ಅನುಕೂಲಕರ ಆಗಿರುವಂತೆ ರೂಪುಗೊಳ್ಳುತ್ತಿರುವಂತಿದೆ. ಸಮಾಜದ ಜಾತ್ಯತೀತ ಸ್ವರೂಪ, ಶಾಂತಿ ಮತ್ತು ಕೋಮುಸೌಹಾರ್ದಕ್ಕೆ ಭಂಗ ತರುವ ಯಾವುದೇ ವಿವಾದಗಳನ್ನು ಕೆದಕುವುದಕ್ಕೆ ಅವಕಾಶ ಕೊಡದಿರುವ ಖಾತರಿ ನ್ಯಾಯಾಲಯಗಳಿಂದ ದೊರೆಯಬೇಕಾಗಿದೆ.

ಚಾಟಿ

ಹೆಣ್ಣುದೇವತೆಗಳ ಮೇಲುಗೈ

ಪರೀಕ್ಷೆಯ ಫಲಿತಾಂಶ ಘೋಷಣೆಯಾದಾಗ ಹೆಣ್ಣುಮಕ್ಕಳದೇ ಮೇಲುಗೈ ಎಂದು ವಿಶ್ಲೇಷಣೆ ಓದಿ ನಮಗೆ ಅಭ್ಯಾಸ. ಈಗ ದೇವಸ್ಥಾನಗಳ ಆದಾಯದ ಫಲಿತಾಂಶ ಬಂದಿದೆ; ಅಲ್ಲಿಯೂ 'ಹೆಣ್ಣುದೇವತೆಗಳದೇ ಮೇಲುಗೈ'! ಹೆಣ್ಣುದೇವರುಗಳು ಈ ಪರಿಯ ಪ್ರೀತಿ, ಭಕ್ತಿಯನ್ನು ಪಡೆದ ಮತ್ತೊಂದು ದೇಶ ಇರಲಿಕ್ಕಿಲ್ಲ.

ವಸುಧೇಂದ್ರ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಬೆಲೆ ಏರಿಕೆ ವಿಷಯವನ್ನು ಮರೆಮಾಚಲು ಪ್ರಧಾನಿ ಮೋದಿಯವರು ಚಿನ್ನ ಖರೀದಿ ಮಾಡಬೇಡಿರೆಂದು ಜನರಿಗೆ ಕರೆ ನೀಡುತ್ತಾರೆ. ನೀಟ್ ಅಕ್ರಮದ ಬಗ್ಗೆ ಅವರು ಮಾತನಾಡುವುದಿಲ್ಲ. 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ. ಇದಕ್ಕೆ ಹೊಣೆ ಯಾರು?

ಈಶ್ವರ ಬಿ. ಖಂಡ್ರೆ, ಅರಣ್ಯ ಸಚಿವ

25 ವರ್ಷಗಳ ಹಿಂದೆ

ಶನಿವಾರ, 19-5-2001

● **'ಮಂಗಮಾನವ' ಚೇಷ್ಟೆ: ಡಾಕ್ಟರ್ ಸೇರಿ ಐವರ ಬಂಧನ**

ನವದೆಹಲಿ, ಮೇ 18– (ಪಿಟಿಐ)– ರಾಜಧಾನಿ ದೆಹಲಿಯಲ್ಲಿ ನಿಗೂಢ 'ಮಂಗಮಾನವ'ನ ಬಗ್ಗೆ ವದಂತಿ ಹರಡಿಸಿ ಜನರಲ್ಲಿ ಭೀತಿ ಉಂಟು ಮಾಡುತ್ತಿದ್ದರೆನ್ನಲಾದ ಒಬ್ಬ ಡಾಕ್ಟರ್ ಸೇರಿದಂತೆ ಐದು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಕಳೆದ ಒಂದು ವಾರದಿಂದ ಜನರನ್ನು ತಲ್ಲಣಗೊಳಿಸಿದ್ದ ಪ್ರಕರಣದಿಂದ ಜನರು ಈಗ ಕೊಂಚ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಡಾ. ನಾಗೇಶ್ ಕುಮಾರ್ ಸಾಗರ್ ಎಂಬ ಹೆಸರಿನ ವ್ಯಕ್ತಿಯು ನಿನ್ನೆ ರಾತ್ರಿ ಪೂರ್ವ ದೆಹಲಿ ಪ್ರದೇಶದಲ್ಲಿ ಕೈಗವಸುಗಳನ್ನು ರಸ್ತೆಗೆಸೆದಿದ್ದರು. ಅವರನ್ನು ಮತ್ತು ದಕ್ಷಿಣ ದೆಹಲಿಯಲ್ಲಿ ಹುಸಿ ದೂರವಾಣಿ ಕರೆಗಳನ್ನು ಮಾಡಿ ಜನರಲ್ಲಿ ಭೀತಿ ಹುಟ್ಟಿಸಲು ಯತ್ನಿಸಿದ್ದ ಇಬ್ಬರು ವ್ಯಕ್ತಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮಂಗನ ವೇಷ ಧರಿಸಿ ಪೂರ್ವ ದೆಹಲಿಯ ಅನೇಕ ಪ್ರದೇಶಗಳಲ್ಲಿ ರಾತ್ರಿವೇಳೆ ದಾಳಿ ಮಾಡಿ ಜನರಿಗೆ ಗಾಯ ಉಂಟು ಮಾಡುತ್ತಿರುವ ಬಗ್ಗೆ ವದಂತಿಗಳು ಹರಡಿದ್ದವು.

● **ವಿಮಾನ ನಿಲ್ದಾಣ: ಮೊದಲ ಹಂತದ ನಿರ್ಮಾಣ ಶೀಘ್ರ**

ಬೆಂಗಳೂರು, ಮೇ 18– ಬಹುವರ್ಷಗಳಿಂದ ನನೆಗುದಿಗೆ ಬಿದ್ದಿದ್ದ 1,300 ಕೋಟಿ ರೂಪಾಯಿ ಅಂದಾಜು ವೆಚ್ಚದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೊದಲ ಹಂತ ನಿರ್ಮಾಣ ಕಾರ್ಯ 2002ರ ಡಿಸೆಂಬರ್‌ನಲ್ಲಿ ಆರಂಭವಾಗಿ 2004ರ ಡಿಸೆಂಬರ್‌ಗೆ ಪೂರ್ಣವಾಗುತ್ತದೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ತಿಳಿಸಿದರು.

ದೇವನಹಳ್ಳಿ ಬಳಿಯ 4,300 ಎಕರೆ ಪ್ರದೇಶದಲ್ಲಿ ತಲೆ ಎತ್ತಲಿರುವ ವಿಮಾನ ನಿಲ್ದಾಣ ಪ್ರದೇಶಕ್ಕೆ ಭೇಟಿ ನೀಡಿದ್ದ ಅವರು ಪತ್ರಕರ್ತರಿಗೆ ಮಾಹಿತಿ ನೀಡಿದರು.

75 ವರ್ಷಗಳ ಹಿಂದೆ

ಶನಿವಾರ, 19-5-1951

● **ಶಬರಿಮಲೈ ದೇವಾಲಯಕ್ಕೆ ಸ್ತ್ರೀಯರಿಗೆ ಪ್ರವೇಶವಿಲ್ಲ**

ಕೊಟ್ಟಾಯಂ, ಮೇ 18– ಹತ್ತು ವರ್ಷದಿಂದ 55 ವರ್ಷಗಳ ನಡುವಣ ವಯಸ್ಸಿನ ಸ್ತ್ರೀಯರಿಗೆ ಶಬರಿಮಲೆಯ ಧರ್ಮಶಾಸ್ತ್ರ ದೇವಾಲಯಕ್ಕೆ ಪ್ರವೇಶವಿಲ್ಲವೆಂದು ತಿರುವಾಂಕೂರಿನ ದೇವಸ್ಥಾನಗಳ ಸಮಿತಿ ಕಾರ್ಯದರ್ಶಿ ಪ್ರಕಟಿಸಿದ್ದಾರೆ. ಹಿಂದಿನ ಸಂಪ್ರದಾಯದಂತೆ ಸ್ತ್ರೀಯರು ಶಬರಿಮಲೆಗೆ ಯಾತ್ರೆ ಹೋಗುವಂತಿರಲಿಲ್ಲ. ಆದರೆ, ಈಚೆಗೆ ತಿರುವಾಂಕೂರು ರಾಜಮನೆತನದವರೂ ಸೇರಿದಂತೆ ಕೆಲವು ಸ್ತ್ರೀ ಯಾತ್ರಾರ್ಥಿಗಳು ಶಬರಿಮಲೈ ದೇವಸ್ಥಾನಕ್ಕೆ ಯಾತ್ರೆ ಹೋಗುತ್ತಿದ್ದರು.

ತೈಲದ ಉರಿ; ತೆರಿಗೆಯ ದರಿ



ವಿಶ್ಲೇಷಣೆ

ವಿಕಾಸ್ ಆರ್. ಮೌರ್ಯ

> ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯನ್ನು ದೇಶದ ಹಿತಾಸಕ್ತಿಯ ರೂಪದಲ್ಲಿ ಬಿಂಬಿಸಲಾಗುತ್ತಿದೆ. ದೇಶ ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ಜನಸಾಮಾನ್ಯರನ್ನು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿಸುವುದು ಜನಪರ ನಿರ್ಧಾರವಲ್ಲ. ದೇಶದ ಅತಿಶ್ರೀಮಂತರು, ಉದ್ಯಮಿಗಳು ಹಾಗೂ ರಾಜಕಾರಣಿಗಳು 'ದೇಶಭಕ್ತಿ' ಪ್ರದರ್ಶಿಸಬೇಕಾದ ಸಮಯವಿದು.

ಮನಮೋಹನ್ ಸಿಂಗ್ ಅವರು ಪ್ರಧಾನಿ ಆಗಿದ್ದಾಗ, ಆಗಿನ ಯುಪಿಎ ಸರ್ಕಾರ ರಾಜ್ಯಸಭೆ ಚುನಾವಣೆಯ ನಂತರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಕ್ರಮವಾಗಿ ₹73 ಮತ್ತು ₹64ಕ್ಕೆ ಏರಿಸಿತ್ತು. ಅದಕ್ಕೆ ನೀಡಿದ ಕಾರಣ, ಮುಕ್ತ ಮಾರುಕಟ್ಟೆಯಲ್ಲಿ ಕಚ್ಚಾತೈಲದ ದರ ಬ್ಯಾರಲ್ಲಿಗೆ 113 ಡಾಲರ್ ಆಗಿದೆ ಎನ್ನುವುದಾಗಿತ್ತು. ಆಗ ಬೆಲೆ ಏರಿಕೆ ವಿರುದ್ಧ ಬಿಜೆಪಿ, ಎಡ ಪಕ್ಷಗಳು ಮತ್ತು ಸಾಮಾನ್ಯ ಜನರು ಬೀದಿಗಿಳಿದು ಹೋರಾಡಿದರು. 2012ರಲ್ಲಿ ನಡೆದ ಆ ತೈಲ ಬೆಲೆ ಏರಿಕೆಯನ್ನು ಮಾಧ್ಯಮಗಳು 'ದೇಶವಿರೋಧಿ ಕೃತ್ಯ' ಎಂದು ಕರೆದು ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದವು.

ಕಳೆದ ಶುಕ್ರವಾರದಿಂದ (ಮೇ 15) ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ, ಹಲವು ರಾಜ್ಯಗಳ ಚುನಾವಣೆಯ ನಂತರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರ್‌ಗೆ ತಲಾ 3 ರೂಪಾಯಿ ಏರಿಸಿದೆ. ಇದಕ್ಕೆ ನೀಡಿರುವ ಕಾರಣ, ಯುದ್ಧದ ಪ್ರಭಾವದಿಂದಾಗಿ ಕಚ್ಚಾತೈಲ ಬೆಲೆ ಬ್ಯಾರಲ್ಲಿಗೆ 109 ಡಾಲರ್ ಆಗಿದೆ ಎನ್ನುವುದು. ಈ ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್, ಎಡ ಪಕ್ಷಗಳು ಮತ್ತು ಜನಸಾಮಾನ್ಯರು ಪ್ರತಿಭಟಿಸುತ್ತಿದ್ದಾರೆ. ಆದರೆ ಈಗ ದೇಶವಿರೋಧದ ಸೊಲ್ಲು ಕೇಳಿಸುತ್ತಿಲ್ಲ. ಬದಲಿಗೆ, ಕೆಲವರು 'ದೇಶಭಕ್ತಿ' ಎಂದು ಸರ್ಕಾರದ ಜೊತೆ ನಿಂತಿದ್ದಾರೆ.

ಮೇಲಿನ ಸಂದರ್ಭಗಳಲ್ಲಿ ನಾವು ಗಮನಿಸಬೇಕಿರುವ ಅಂಶಗಳಿವೆ. ಯುಪಿಎ ಸರ್ಕಾರ ಕಚ್ಚಾತೈಲ ದರ 113 ಡಾಲರ್ ಇದ್ದಾಗ ಪೆಟ್ರೋಲನ್ನು ₹73ಕ್ಕೆ ಹೇಗೆ ನೀಡುತ್ತಿತ್ತು ಹಾಗೂ ಕಚ್ಚಾತೈಲ ದರ 109 ಡಾಲರ್ ಇರುವಾಗ ಎನ್‌ಡಿಎ ಸರ್ಕಾರ ಯಾಕೆ ಪೆಟ್ರೋಲನ್ನು ₹103ಕ್ಕೆ ನೀಡುತ್ತಿದೆ ಎನ್ನುವುದರ ಬಗ್ಗೆ ಯೋಚಿಸಬೇಕಾಗಿದೆ. ಈ ವ್ಯತ್ಯಾಸಕ್ಕೆ ಸ್ಪಷ್ಟವಾದ ಉತ್ತರ ತೆರಿಗೆ. ಒಂದು ಸರಳ ಲೆಕ್ಕಾಚಾರದ ಮೂಲಕ ಇದನ್ನು ಅರ್ಥ ಮಾಡಿಕೊಳ್ಳಬಹುದು.

ಫೆಬ್ರುವರಿ 2020ರಂದು ಕಚ್ಚಾತೈಲ ದರ ಬ್ಯಾರಲ್ಲಿಗೆ 67 ಡಾಲರ್ ಇತ್ತು. ಅಂದರೆ ₹6,365. ಒಂದು ಬ್ಯಾರಲ್‌ನಲ್ಲಿ ಸುಮಾರು 159 ಲೀಟರ್ ತೈಲ ಇರುತ್ತದೆ. ಅಲ್ಲಿಗೆ ಒಂದು ಲೀಟರ್ ಕಚ್ಚಾತೈಲದ ಬೆಲೆ ₹40 ಆಗುತ್ತದೆ. ಈ ಕಚ್ಚಾತೈಲದಿಂದ ಪೆಟ್ರೋಲನ್ನು ಸಂಸ್ಕರಿಸಲು ಪ್ರತಿ ಲೀಟರಿಗೆ ₹5.66 ಮತ್ತು ಡೀಸೆಲ್‌ಗೆ ₹6.42 ತಗಲುತ್ತದೆ. ಸರಬರಾಜು ಮತ್ತು ವಿತರಣೆಗಾಗಿ ಪೆಟ್ರೋಲ್ ಮತ್ತು ಡೀಸೆಲ್‌ಗೆ ತಲಾ ₹4 ತಗಲುತ್ತದೆ ಎಂದಿಟ್ಟುಕೊಳ್ಳೋಣ. ಇವೆಲ್ಲವನ್ನೂ ಸೇರಿಸಿದ ನಂತರ ತೆರಿಗೆ ರಹಿತ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕ್ರಮವಾಗಿ ಅಂದಾಜು ₹50 ಮತ್ತು ₹51 ಆಗುತ್ತದೆ. ಈ ಬೆಲೆಗೆ ಒಕ್ಕೂಟ ಸರ್ಕಾರ ಅಬಕಾರಿ ಸುಂಕವನ್ನಾಗಿ ಪ್ರತಿ ಲೀಟರ್ ಪೆಟ್ರೋಲಿಗೆ ₹13 ಮತ್ತು ಡೀಸೆಲ್‌ಗೆ ₹10 ಸೇರಿಸುತ್ತದೆ. ರಾಜ್ಯ ಸರ್ಕಾರಗಳು ವ್ಯಾಟ್ ತೆರಿಗೆಯನ್ನೂ (ಇದು ಪ್ರತಿ ರಾಜ್ಯಕ್ಕೂ ವಿಭಿನ್ನ), ಬಂಕ್‌ಗಳು ಕಮಿಷನ್ ಸೇರಿಸಿ ಫೆಬ್ರುವರಿಯಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಕ್ರಮವಾಗಿ ₹103 ಮತ್ತು ₹91 ಆಗಿತ್ತು. ಇದರರ್ಥ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರತಿ ಲೀಟರ್ ಪೆಟ್ರೋಲ್ ಮೇಲೆ ₹53 ಮತ್ತು ಡೀಸೆಲ್ ಮೇಲೆ ₹52 ರಷ್ಟು ತೆರಿಗೆಯನ್ನು ವಸೂಲಿ ಮಾಡುತ್ತಿವೆ.

ಶೇ 82ರಷ್ಟು ಆಮದು ಮಾಡಿಕೊಳ್ಳುವ ತೈಲದ ಮೇಲೆ ಅವಲಂಬಿತವಾಗಿರುವ ಭಾರತ ಸರ್ಕಾರವು ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಣಾಮ ಮಾರ್ಚ್ ತಿಂಗಳಿಂದ ಇಂಧನಕ್ಕೆ ವಿಧಿಸುವ ಹೆಚ್ಚುವರಿ ಅಬಕಾರಿ ಸುಂಕದಲ್ಲಿ ₹10 ಕಡಿಮೆ ಮಾಡಿತು. ಇದು ಗ್ರಾಹಕರ ಮೇಲಿನ ಹೊರೆಯನ್ನು ಕಡಿಮೆ ಮಾಡಿತಾದರೂ, ಪ್ರಸಕ್ತ ಆಪತ್ಕಾಲದಲ್ಲಿ ಇಂಧನದ ಬೆಲೆಯನ್ನು ₹3 ಏರಿಕೆ ಮಾಡಿದೆ. ಇದಕ್ಕೆ ಕಾರಣ, ತೈಲ ಕಂಪನಿಗಳಿಗೆ ಆಗಿರುವ 1 ಲಕ್ಷ ಕೋಟಿ ರೂಪಾಯಿ ನಷ್ಟವೆಂದು ಹೇಳಿದೆ. ಆದರೆ, ತೈಲ ಕಂಪನಿಗಳ ಲಾಭ–ನಷ್ಟ ಹಾಗೂ ಇಂಧನ ತೆರಿಗೆ ನೀತಿ ಪರಿಶೀಲಿಸಿ ನೋಡಿದಾಗ, ಭಾರತೀಯರನ್ನು ತೈಲ ಮತ್ತು ತೆರಿಗೆಗಳು ಹೇಗೆ ಸುಡುತ್ತಿವೆ ಎಂಬುದು ತಿಳಿಯುತ್ತದೆ.

ಏಪ್ರಿಲ್ 2025ರವರೆಗೆ ಒಕ್ಕೂಟ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸಿದ್ದ ಅಬಕಾರಿ ಸುಂಕ ₹20 ಮತ್ತು ₹16 ಆಗಿತ್ತು. ಇದು ನವೆಂಬರ್ 2021ರಲ್ಲಿ ₹28 ಮತ್ತು ₹22 ಇತ್ತು. ಜೂನ್ 2020ರಲ್ಲಿ ಗರಿಷ್ಠ ₹33 ಮತ್ತು ₹32 ಮುಟ್ಟಿತ್ತು.

ಹೀಗೆ 2014–15ನೇ ಸಾಲಿನಲ್ಲಿ ಒಕ್ಕೂಟ ಸರ್ಕಾರ ಇಂಧನದ ಮೇಲಿನ ಅಬಕಾರಿ ಸುಂಕದಲ್ಲಿ ಸಂಗ್ರಹಿಸಿದ್ದು ₹99,068 ಕೋಟಿ; 2024–25ನೇ ಸಾಲಿನಲ್ಲಿ ಸಂಗ್ರಹಿಸಿದ್ದು ₹2.76 ಲಕ್ಷ ಕೋಟಿ. ದುರಂತವೆಂದರೆ, ಭಾರತೀಯರು ಸಾವು–ಬದುಕಿನ ನಡುವೆ ನರಳುತ್ತಿದ್ದ ಕೋವಿಡ್ ಸಮಯದಲ್ಲಿ ಸಂಗ್ರಹಿಸಿದ್ದು ಬರೋಬ್ಬರಿ ₹3.72 ಲಕ್ಷ ಕೋಟಿ.

ಮತ್ತಷ್ಟು ಅಚ್ಚರಿಯ ಸಂಗತಿಯೆಂದರೆ, ಮಾರುಕಟ್ಟೆ ಕಚ್ಚಾತೈಲ ದರ 2016ರಲ್ಲಿ ಪ್ರತಿ ಲೀಟರ್‌ಗೆ ₹14ಕ್ಕೆ ಕುಸಿದಾಗ ಭಾರತೀಯರಿಗೆ ಪೆಟ್ರೋಲನ್ನು ₹64ಕ್ಕೆ ಮಾರಾಟ ಮಾಡಲಾಗಿತ್ತು. 2020ರಲ್ಲಿ ₹21ಕ್ಕೆ ಕುಸಿದಾಗ ಭಾರತೀಯರಿಗೆ ಪೆಟ್ರೋಲನ್ನು ₹80ಕ್ಕೆ ಮಾರಾಟ ಮಾಡಲಾಗಿತ್ತು. ಅದೇ ವರ್ಷ ಏಪ್ರಿಲ್ ತಿಂಗಳಲ್ಲಿ ಕಚ್ಚಾತೈಲ ದರ ಸಾರ್ವಕಾಲಿಕ ಪ್ರತಿ ಲೀಟರ್‌ಗೆ ₹9ಕ್ಕೆ ಇಳಿದಿತ್ತು. 2025ರಲ್ಲಿ ₹41ಕ್ಕೆ ಕುಸಿದಾಗ, ಭಾರತೀಯರಿಗೆ ₹95ಕ್ಕೆ ಮಾರಾಟ ಮಾಡಲಾಯಿತು. ಹೀಗೆ ಒಕ್ಕೂಟ ಸರ್ಕಾರ 2014–15ರಿಂದ 2024–25ರವರೆಗೆ ಸಂಗ್ರಹಿಸಿರುವ ಅಬಕಾರಿ ಸುಂಕ ₹27.61 ಲಕ್ಷ ಕೋಟಿ. ರಾಜ್ಯಗಳು ಇದಕ್ಕಿಂತ ತುಸು ಕಡಿಮೆ ಸಂಗ್ರಹಿಸಿರಬಹುದು.

ರಾಜ್ಯಸಭೆಯಲ್ಲಿ ಅಶೋಕ್‌ಕುಮಾರ್ ಮಿತ್ತಲ್ ಅವರು ಇಂಧನದಿಂದ ಸಂಗ್ರಹಿಸಿರುವ ತೆರಿಗೆ ಹಣದ ಮಾಹಿತಿಯನ್ನು ತಿಳಿಸಬೇಕೆಂದು ಕೇಳಿರುವ ಚುಕ್ಕೆರಹಿತ ಪ್ರಶ್ನೆಗೆ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಇಲಾಖೆಯ ರಾಜ್ಯ ಸಚಿವರಾದ ಸುರೇಶ್ ಗೋಪಿಯವರು ಲಿಖಿತ ಉತ್ತರ ನೀಡಿದ್ದಾರೆ. ಅವರ ಉತ್ತರದ ಪ್ರಕಾರ, 2024–25ರಲ್ಲಿ ಇಂಧನದ ಮೇಲೆ ತೆರಿಗೆ ವಿಧಿಸಿ ಭಾರತೀಯರಿಂದ ಒಕ್ಕೂಟ ಹಾಗೂ ರಾಜ್ಯ ಸರ್ಕಾರಗಳು ವಸೂಲಿ ಮಾಡಿರುವ ಮೊತ್ತ ₹7.4 ಲಕ್ಷ ಕೋಟಿ.

ಇದು ಇಂಧನ ಬೆಲೆಯ ನೈಜ ಕಥೆ. ಕಳೆದ 12 ವರ್ಷಗಳಿಂದ ಭಾರತೀಯರು ಖರೀದಿಸುವ ಇಂಧನದ ಮೇಲೆ ಇಷ್ಟೊಂದು ತೆರಿಗೆ ವಿಧಿಸಿ, ಈಗ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹುಚ್ಚಾಟದಿಂದ ಆರಂಭವಾದ ಯುದ್ಧದಿಂದಾಗಿ ಕಚ್ಚಾತೈಲ ದರ ಬರೀ ಮೂರು ತಿಂಗಳಿಂದ ಹೆಚ್ಚಾಗಿರುವುದಕ್ಕೆ ತೈಲ ಕಂಪನಿಗಳಿಗೆ ಒಂದು ಲಕ್ಷ ಕೋಟಿ ರೂಪಾಯಿ ನಷ್ಟವಾಯಿತೆಂದು ಮತ್ತೆ ಬೆಲೆಯೇರಿಸುವುದು ಅಮಾನವೀಯವಲ್ಲವೆ? ನಷ್ಟವನ್ನ ಭರಿಸುವುದು ಅನಿವಾರ್ಯವೇ ಆದಲ್ಲಿ, ಅದನ್ನು ಜನಸಾಮಾನ್ಯರ ಮೇಲೆ ಹೇರುವುದರ ಬದಲು ಪರ್ಯಾಯಗಳನ್ನು ಗಮನಿಸಬಹುದು.

2015ರಲ್ಲಿ ರದ್ದುಗೊಳಿಸಿದ ಅತಿಶ್ರೀಮಂತರ ಮೇಲಿನ 'ಸಂಪತ್ತು ತೆರಿಗೆ'ಯನ್ನು ಮತ್ತೆ ಜಾರಿಗೊಳಿಸಬಹುದು. 2019ರಲ್ಲಿ ಕಾರ್ಪೊರೇಟ್ ಕಂಪನಿಗಳ ತೆರಿಗೆಯನ್ನು ಶೇ 30ರಿಂದ ಶೇ 22ಕ್ಕೆ ಹಾಗೂ ನೂತನ ಉತ್ಪಾದನಾ ಕಂಪನಿಗಳ ಕಾರ್ಪೊರೇಟ್ ತೆರಿಗೆಯನ್ನು ಶೇ 25ರಿಂದ ಶೇ 15ಕ್ಕೆ ಇಳಿಸಿದ್ದನ್ನು ಮತ್ತೆ ಏರಿಸಬಹುದು. ನಮ್ಮ ದೇಶದ ಮೊದಲ ಹತ್ತು ಅತಿಶ್ರೀಮಂತರ ಸಂಪತ್ತು ₹34 ಲಕ್ಷ ಕೋಟಿಯಷ್ಟಿದೆ. ಇವರು ಗಳಿಸುವ ಲಾಭದ ಮೇಲೆ ಬರೀ ಶೇ 1ರಷ್ಟು 'ದೇಶಭಕ್ತಿ' ತೆರಿಗೆ ವಿಧಿಸಿದರೂ ದೇಶದ ಆರ್ಥಿಕತೆಗೆ ಅನುಕೂಲವಾಗುತ್ತದೆ. ಪ್ರತಿ ಗಂಟೆಗೆ ಕೋಟಿ ಲೆಕ್ಕದಲ್ಲಿ ಆದಾಯ ಗಳಿಸುವ ಉದ್ಯಮಿಗಳಿಂದ ಸಂಕಷ್ಟ ಕಾಲದಲ್ಲಿ ಹೆಚ್ಚುವರಿ ತೆರಿಗೆ ವಸೂಲಿ ಮಾಡುವುದು ಹಾಗೂ ಅವರು ಹೆಚ್ಚಿನ ತೆರಿಗೆ ನೀಡುವುದು 'ದೇಶಪ್ರೇಮ'ದ ನಡೆಯಾಗುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಜನಸಾಮಾನ್ಯರ ಉಳಿತಾಯದ ಹುಂಡಿಗೆ ಕೈ ಹಾಕಿ 3 ರೂಪಾಯಿ ಚಿಲ್ಲರೆ ಕಾಸು ಎಗರಿಸುವುದು ಅನ್ಯಾಯವಾಗುತ್ತದೆ.

ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆಯನ್ನು ತೈಲ ಮಾರಾಟ ಕಂಪನಿಗಳ ತೀರ್ಮಾನ ಎಂದು ಬಿಂಬಿಸಲಾಗುತ್ತಿದೆ. ಆದರೆ, ಜನಸಮೂಹದ ಮೇಲೆ ಪರಿಣಾಮ ಬೀರುವ ನಿರ್ಧಾರಗಳನ್ನು ಕಂಪನಿಗಳು ತೆಗೆದುಕೊಳ್ಳದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಸರ್ಕಾರದ್ದೇ ಆಗಿದೆ. ಚುನಾವಣೆ ಮುಗಿಯುವವರೆಗೂ ಬೆಲೆ ಏರಿಕೆಯನ್ನು ತಡೆಯುವ ಅಧಿಕಾರ ಸರ್ಕಾರಕ್ಕೆ ಇರುವಾಗ, ಚುನಾವಣಾ ನಂತರವೂ ಆ ಅಧಿಕಾರವನ್ನು ಬಳಸಬೇಕಾಗುತ್ತದೆ. ದೇಶದಲ್ಲಿ ಆರ್ಥಿಕ ತುರ್ತು ಪರಿಸ್ಥಿತಿ ಇರುವುದನ್ನು ಸರ್ಕಾರ ಪರೋಕ್ಷವಾಗಿ ಒಪ್ಪಿಕೊಂಡಿದೆ. ಇಂಥ ಸಂದರ್ಭದಲ್ಲಿ ಜನಸಾಮಾನ್ಯರನ್ನು ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ಸರ್ಕಾರ ಸಿಲುಕಿಸಬಾರದು.

ದೇಶಕ್ಕಿಂತ ದೊಡ್ಡವರು ಯಾರೂ ಇಲ್ಲ. ದೇಶವೆಂದರೆ ಮಣ್ಣಲ್ಲ, ಜನರು ಎನ್ನುತ್ತಾರೆ ತೆಲುಗು ಕವಿ ಗುರುಜಾಡ ಅಪ್ಪಾರಾವ್. ಇಂಧನ ಬೆಲೆ ಹೆಚ್ಚಾದರೆ ಆಹಾರ ಪದಾರ್ಥದಿಂದ ಹಿಡಿದು ಸಾರಿಗೆ, ಔಷಧಿ, ಬಟ್ಟೆ, ಪೆನ್ನು, ಪುಸ್ತಕ ಎಲ್ಲವುದರ ಬೆಲೆ ಹೆಚ್ಚಾಗುತ್ತದೆ. ಬೀದಿಬದಿಯ ವ್ಯಾಪಾರ, ಅಸಂಘಟಿತ ಕಾರ್ಮಿಕರ ಬದುಕು, ಗರ್ಭಿಣಿಯರ ಆಹಾರ, ಹಸುಳೆಗಳಿಗೆ ತಾಯಂದಿರ ಎದೆಹಾಲು ಕೊರತೆಯಾಗುತ್ತದೆ.

ಈ ವರ್ಷ ಎಲ್ ನಿನೊ ವಿದ್ಯಮಾನ ಭಾರತವನ್ನೇ ಬರಡಾಗಿಸಲು ಹವಣಿಸುತ್ತಿರುವ ಸಂದರ್ಭದಲ್ಲಿ, ಬಡ ಹಾಗೂ ಮಧ್ಯಮವರ್ಗದ ಭಾರತೀಯರ ತೂತು ಬಿದ್ದ ಜೇಬಿನಿಂದ ತೆರಿಗೆ ವಸೂಲಿ ಮಾಡುವ ಬದಲು, ಉಳ್ಳವರಿಂದ ಹೆಚ್ಚಿನ ಪಾಲು ಪಡೆಯುವುದು ಜನಪರ ನಿಲುವಾಗುತ್ತದೆ. ಯಾವಾಗಲೂ ಬಡವರು ಹಾಗೂ ಜನಸಾಮಾನ್ಯರೇ ದೇಶಪ್ರೇಮ ಸಾಬೀತುಪಡಿಸಬೇಕೆ? ದೇಶಪ್ರೇಮವನ್ನು ವ್ಯಕ್ತಪಡಿಸುವ ಅವಕಾಶವನ್ನು ಶ್ರೀಮಂತ ಉದ್ಯಮಿಗಳು ಈ ಬಾರಿ ಬಿಟ್ಟುಕೊಡದಿರಲಿ.



ವಾಚಕರ ವಾಣಿ

ಹು–ಧಾ ಅಭಿವೃದ್ಧಿ: ಸಂಸದರು ಕುರುಡು

ಧಾರವಾಡ ಸಂಸದ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಮತೀಯ ವಿಷಯಗಳು ಅಥವಾ ರಾಜ್ಯ ಸರ್ಕಾರದ ಬಗ್ಗೆ ಕೂಡಲೇ ಪ್ರತಿಕ್ರಿಯೆ, ವಿರೋಧ ವ್ಯಕ್ತಪಡಿಸಿ ಹೇಳಿಕೆ ನೀಡುತ್ತಾರೆ. ಆದರೆ, ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳ ಅಭಿವೃದ್ಧಿ ವಿಷಯ ಕುರಿತಂತೆ ಅವರು ಚಕಾರ ಎತ್ತುವುದಿಲ್ಲ. ಎರಡೂ ನಗರಗಳು ಅಭಿವೃದ್ಧಿ ವಿಷಯದಲ್ಲಿ ಬಳಲುತ್ತಿವೆ. ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ಬೇಕೆಂದು ನಾಗರಿಕರು ಕಳೆದ ಮೂರ್ನಾಲ್ಕು ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಈ ಕುರಿತು ರಾಜ್ಯ ಸರ್ಕಾರದಿಂದ ಅನುಮೋದನೆಯಾಗಿ ಕಡತವು ರಾಜ್ಯಪಾಲರ ಬಳಿ ಒಂದು ವರ್ಷದಿಂದ ಬಾಕಿ ಉಳಿದಿದೆ. ಪ್ರತ್ಯೇಕ ಪಾಲಿಕೆಗೆ ಒತ್ತಾಯಿಸಿ ಎರಡನೆಯ ಹಂತದ ಸತ್ಯಾಗ್ರಹವೂ ಆರಂಭವಾಗಿದೆ. ಪ್ರಲ್ಹಾದ ಜೋಶಿ ಅವರು ಈಗಲಾದರೂ ಲೋಕಭವನದಿಂದ ಈ ಕಡತಕ್ಕೆ ಮುಕ್ತಿ ಕೊಡಿಸುವರೆ?

ವೆಂಕಟೇಶ ಮಾಚಕನೂರ, ಧಾರವಾಡ

'ನೀಟ್' ನೊಗ: ರಾಜ್ಯಗಳಿಗೆ ಹಸ್ತಾಂತರಿಸಿ

ಎಂ. ವೀರಪ್ಪ ಮೊಯಿಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕದಲ್ಲಿ ಜಾರಿಗೊಳಿಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯು (ಸಿಇಟಿ) ಇಡೀ ದೇಶಕ್ಕೆ ಮಾದರಿ ಆಗಿದೆ. ದುಬಾರಿ ಡೊನೇಷನ್ ಪಡೆಯುವ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳಿಗೆ ಮೆರಿಟ್ ಆಧಾರದ ಮೇಲೆ ಬಡ, ಹಿಂದುಳಿದ, ಶೋಷಿತ ಸಮುದಾಯದ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಸಿಇಟಿ ಅವಕಾಶ ಕಲ್ಪಿಸಿತ್ತು. ಸಿಇಟಿ ಜಾರಿಯ ಆರಂಭದಲ್ಲಿ ಮೊಯಿಲಿ ಅವರು ಕ್ಯಾಪಿಟೇಷನ್ ಕುಳಗಳ ಒತ್ತಡ, ಬೆದರಿಕೆ ಎದುರಿಸಿದ್ದು ಉಂಟು. ಅವರು ಅದಕ್ಕೆ ಸೊಪ್ಪು ಹಾಕಲಿಲ್ಲ. ಇಂದಿಗೂ ಸಿಇಟಿ ತನ್ನ ಋಜುತ್ವ ಉಳಿಸಿಕೊಂಡಿದೆ. ಆದರೆ, ನೀಟ್ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಪ್ರತಿವರ್ಷ ಒಂದಿಲ್ಲೊಂದು ಅವಾಂತರ ಬಯಲಾಗುತ್ತಿದೆ. ಪ್ರಶ್ನೆಪತ್ರಿಕೆಗಳ ಸೋರಿಕೆ ಹಿಂದೆ ಕೋಚಿಂಗ್ ಸೆಂಟರ್‌ಗಳ ಪಾತ್ರ ಇರುವುದನ್ನು ಅಲ್ಲಗಳೆಯುವಂತಿಲ್ಲ. ಪಾರದರ್ಶಕವಾಗಿ ನೀಟ್ ನಡೆಸುವಲ್ಲಿ ಕೇಂದ್ರ ಸರ್ಕಾರ ಎಡವಿದೆ. ಹಾಗಾಗಿ, ಆಯಾ ರಾಜ್ಯಗಳಿಗೆ ಜವಾಬ್ದಾರಿ ನೀಡುವುದು ಒಳಿತು.

ಎಂ.ಜಿ. ಪಂಪಾಪತಿ, ಬೆಂಗಳೂರು

ಮೇಲ್ಮನೆ: ಹಣವಂತರಿಗಿದು ಸಿರಿಮನೆ

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ನಾಲ್ಕು ಸ್ಥಾನಗಳಿಗೆ ಶೀಘ್ರವೇ ದ್ವೈವಾರ್ಷಿಕ ಚುನಾವಣೆ ನಡೆಯಲಿದೆ. ಎಲ್ಲಿಂದಲೋ ಬಂದ ಹಣವಂತ ವಲಸಿಗರಿಗೆ ಮಣೆ ಹಾಕುವುದು ಎಲ್ಲ ಪಕ್ಷಗಳಲ್ಲಿ ರೂಢಿಗತವಾಗಿದೆ. ಇದು ಕನ್ನಡಿಗರಿಗೆ ಮಾಡುವ ಘೋರ ಅನ್ಯಾಯ. ಕರ್ನಾಟಕಕ್ಕೆ ನಿಗದಿಯಾದ ಸ್ಥಾನಗಳಿಗೆ ಕನ್ನಡಿಗರಿಗೆ ಆದ್ಯತೆ ನೀಡದಿರುವುದು ಸರಿಯಲ್ಲ. ವರಿಷ್ಠರ ಈ ಧೋರಣೆಯಿಂದಾಗಿ ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರ ದುಡಿಮೆಗೆ ಬೆಲೆ ಇಲ್ಲದಂತಾಗುತ್ತದೆ. ರಾಜ್ಯಸಭೆ ಸದಸ್ಯರಾಗಿರುವ ಮಲ್ಲಿಕಾರ್ಜುನ ಖರ್ಗೆ ಹಾಗೂ ಎಚ್.ಡಿ. ದೇವೇಗೌಡ ಅವರು ಇಳಿವಯಸ್ಸಿನಲ್ಲಿದ್ದಾರೆ. ಈ ದೃಷ್ಟಿಯಿಂದ ಅವರು ಸಂಸತ್‌ನ ಮೇಲ್ಮನೆ ಪ್ರವೇಶಿಸುವುದು ಸೂಕ್ತ ಎನಿಸದು. ಇಬ್ಬರೂ ಮತ್ತೆ ಕಣಕ್ಕಿಳಿಯದೆ ಹೊಸಬರಿಗೆ ಅವಕಾಶ ಕೊಡಲಿ.

ವಿ.ಜಿ. ಇನಾಮದಾರ, ಸಾರವಾಡ

ತಂತ್ರಾಂಶ ದೋಷ: ಸ್ಕಾಲರ್‌ಶಿಪ್ ವಿಳಂಬ

ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿರುವ ಸಾವಿರಾರು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ವಿದ್ಯಾರ್ಥಿವೇತನ ದೊರೆಯುತ್ತಿಲ್ಲ. ಇದು ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಬಡ ಮತ್ತು ಮಧ್ಯಮವರ್ಗದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸರ್ಕಾರ ನೀಡುವ ವಿದ್ಯಾರ್ಥಿವೇತನವೇ ಆಧಾರ. ಈ ನೆರವು ನಂಬಿಕೊಂಡೇ ಖಾಸಗಿ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆದು ವಿದ್ಯಾಭ್ಯಾಸ ಮಾಡುತ್ತಾರೆ. ಆದರೆ ತಾಂತ್ರಿಕ ದೋಷ, ಆಡಳಿತಾತ್ಮಕ ಅಸಮರ್ಪಕತೆಯಿಂದ ಹಣ ಬಿಡುಗಡೆಗೆ ವಿಳಂಬವಾಗುತ್ತಿದೆ. ಅರ್ಜಿಗಳ ಪರಿಶೀಲನೆ ನಿಧಾನ ಗತಿಯಲ್ಲಿದೆ. ಇದರಿಂದ ಕಚೇರಿಗಳಿಗೆ ಅಲೆಯುವ ಸ್ಥಿತಿ ನಿರ್ಮಾಣವಾಗಿದೆ.

ದರ್ಶನ್ ಚಂದ್ರ ಎಂ.ಪಿ., ಮುಕ್ಕಡಹಳ್ಳಿ

ಮರುಮೌಲ್ಯಮಾಪನ ನೆಪದಲ್ಲಿ ದರೋಡೆ

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳು ಮರುಮೌಲ್ಯಮಾಪನದ ಬಳಿಕ ಹೆಚ್ಚು ಅಂಕ ಪಡೆಯುತ್ತಿದ್ದಾರೆ. ಇದು ಮೌಲ್ಯಮಾಪಕರ ಬೇಜವಾಬ್ದಾರಿಗೆ ಹಿಡಿದ ಕನ್ನಡಿ. ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಮೊದಲು ಉತ್ತರಪತ್ರಿಕೆಯ ಪ್ರತಿಗಾಗಿ ₹410 ಶುಲ್ಕ ಕಟ್ಟಬೇಕು. ಬಳಿಕ ಒಂದು ವಿಷಯಕ್ಕೆ ₹810 ಶುಲ್ಕ ಪಾವತಿಸಬೇಕು. ಒಟ್ಟಾರೆ ವಿಷಯವೊಂದಕ್ಕೆ ₹1,220 ಶುಲ್ಕ. ಮರುಮೌಲ್ಯಮಾಪನದ ನೆಪದಲ್ಲಿ ಶಿಕ್ಷಣ ಇಲಾಖೆಯು ನಡೆಸುತ್ತಿರುವ ಹಗಲುದರೋಡೆ ಇದಾಗಿದೆ. ಮೌಲ್ಯಮಾಪಕರ ತಪ್ಪಿನಿಂದ ವಿದ್ಯಾರ್ಥಿಗಳು ಖಿನ್ನತೆಗೆ ಒಳಗಾಗುವಂತಾಗಿದೆ. ಅವರ ಸಂಬಳದಿಂದಲೇ ಈ ಶುಲ್ಕವನ್ನು ವಸೂಲಿ ಮಾಡಬೇಕಿದೆ.

ಎಂ.ಎನ್. ಸತ್ಯಾ ನಂದವಿಟ್ಟು, ಮೈಸೂರು

ಜಾಹೀರಾತು ಮೋಹ: ಅಂದಗೆಟ್ಟ ಬಸ್

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಆದಾಯ ಹೆಚ್ಚಿಸಿಕೊಳ್ಳಲು ಬಿಎಂಟಿಸಿ ಬಸ್‌ಗಳ ಮೇಲೆ ಜಾಹೀರಾತಿಗೆ ಅನುಮತಿ ನೀಡಿದೆ. ಬಸ್‌ನ ಶೇ 80ರಷ್ಟು ಭಾಗ ಜಾಹೀರಾತಿನಿಂದಲೇ ತುಂಬಿಹೋದರೆ ಬಸ್‌ನ ಮೂಲ ಬಣ್ಣ ಗೊತ್ತಾಗುವುದಿಲ್ಲ. ಪ್ರಯಾಣಿಕರು, ಹಿರಿಯ ನಾಗರಿಕರಿಗೆ ಇದು ಬಿಎಂಟಿಸಿ ಬಸ್ ಹೌದೋ ಅಲ್ಲವೋ ಎಂಬ ಅನುಮಾನ ಮೂಡುತ್ತದೆ. ವಿದ್ಯುನ್ಮಾನ ನಾಮಫಲಕದಿಂದಷ್ಟೇ ಬಿಎಂಟಿಸಿ ಬಸ್ ಎನ್ನುವುದು ಗೊತ್ತಾಗುತ್ತದೆ. ಆದಾಯ ಹೆಚ್ಚಿಸಿಕೊಳ್ಳಲು ಜಾಹೀರಾತು ಪಡೆ ಯುವುದು ಅಗತ್ಯ. ಇದಕ್ಕೆ ಪ್ರಯಾಣಿಕರ ಆಕ್ಷೇಪವಿಲ್ಲ. ಕನಿಷ್ಠ ಶೇ 20ರಿಂದ 30ರಷ್ಟು ಭಾಗ ಜಾಹೀರಾತು ಹಾಕಿದರೆ ಬಸ್ಸನ್ನು ಗುರ್ತಿಸಬಹುದು.

ಚಂದ್ರಮೌಳಿ ಸ್ವಾಮಿ ಎಸ್.ಎಂ., ಬೆಂಗಳೂರು

ಚುರುಮುರಿ



ಸ್ವಾಮಿ ದೇವನೆ

● ಡಿ.ಎಸ್. ಲಿಂಗರಾಜು

ಮಿತವ್ಯಯ ಅಂದುದ್ದ ಮೋದಿ ಮಾವಾರು ಯಾಕೆ ಯುರೋಪಿಗೋದ್ರು ಅಂತ ಯೋಚ್ನೆ ಮಾಡ್ತಾ ಕುಂತುದ್ದೆ. 'ಭಕ್ತ ನಿನ್ನ ಭಕ್ತಿಗೆ ಮೆಚ್ಚಿದ್ದೇನೆ. ಏನು ಬೇಕು ಕೇಳು?' ಅಂದಂಗಾತು. ಯಾರು ಮಾತಾಡಿದ್ದು ಅಂತ ಅಕ್ಕಡೆ ಇಕ್ಕಡೆ ನೋಡಿರೆ ಟೀವಿಯಲ್ಲಿ ದೇವರು ಕಾಣ್ತಿತ್ತು.

'ಇದೇನು ನಮ್ಮಪ್ಪ ಆಫ್‌ಲೈನಲ್ಲಿ ಕಾಣಿಸದು ಬುಟ್ಟು ಆನ್‌ಲೈನಿಗೆ ಬಂದುದ್ದಯ್?' ಅಂತಂದೆ.

'ಮೋದಿ ವರ್ಕ್ ಫ್ರಂ ಹೋಂ ಮಾಡಿ ಅಂದ್ರಲ್ಲೋ. ನನ್ನ ವೀಸಾ ರದ್ದಾಗಿದ್ಕೆ ಆನ್‌ಲೈನಲ್ಲಿ ಬಂದಿವ್ನಿ. ನೀನ್ಯಾಕೆ ಅಧಿಕಾರ ಸಿಗದಿರೋ ರಾಜಕಾರಣಿಯಂಗೆ ಯದಾರಾಗಿ ಕುಂತುದ್ದಯ್ ಬಡ್ಡೆತ್ತುದೇ' ಅಂತು ದೇವರು.

'ಬಸ್ಸಿಗೆ ಹತ್ತನ ಅಂದ್ರೆ ನನಗೆ 'ಶಕ್ತಿ' ಇಲ್ಲ ತಂದೆ. ನಡಕೋಗನ ಅಂದ್ರೆ ಫುಟ್‌ಪಾತು ಮ್ಯಾಲೆ ಬೈಕು, ರೋಡಲ್ಲಿ ಸ್ಟ್ರೈಕು. ಪೆಟ್ರೋಲು, ಗ್ಯಾಸು, ಡಿಜೆಲ್ಲು ರೇಟು ಜಾಸ್ತಿಯಾಗ್ಯವೆ' ದೇವರ ಮುಂದೆ ಗೋಳಾಡಿದೆ.

'ನಿನ್ನ ಕಾರಿಗೆ ಪೆಡಲು ಹಾಕ್ಸು, ಇಲ್ಲಾ ನಿಲ್ಸಿ ಅದರೊಳಗೆ ಸೌದೆ ತುಂಬಿಕ್ಯಳೋ' ದೇವರು ಸಲಹೆ ಕೊಟ್ಟಿತು.

'ಅಪ್ನೇ ಹೊಟ್ಟೆಗೂ ಎಣ್ಣೆಲ್ಲ, ತಟ್ಟೆಗೂ ಎಣ್ಣೆಲ್ಲ. ಬದುಕು ನೀಟ್ ಪೇಪರ್ ಥರ ಲೀಕಾಯ್ತಾ ಅದೆ. ಅಕ್ಕಿ, ತರಕಾರಿ, ಮಾಂಸ–ಮಡ್ಡಿ ದುಬಾರಿಯಾಗ್ಯವೆ. ಯಾಕೆ ನನಗೇ ಮೂಗೇಟು ಬೀಳ್ತಾ ಅವೆ?' ದೇವರ ಕೇಳಿದೆ.

'ಟ್ರಂಪಣ್ಣನೇ ಚೀನಕ್ಕೋಗಿ ರೇರ್ ಅರ್ತ್ ಮಿನರಲ್ ಕಳುಗಿಸದು ಮಾತ್ರ ನಿಲ್ಲಿಸಬ್ಯಾಡಿ ಅಂತ ಗ್ವಾಗರೆದು ಬಂದವ್ನೆ. ನಿಂದೇನ್ಲಾ ಕ್ಯಾಣ?'

'ತಂದೆ ನನ್ನ ಇ-ಖಾತೆ ತಕ್ಕೋಕೇ ನನಗೆ ಲಕ್ಕಿಲ್ಲ. ತೆರಿಗೆ ಹೊಡೆತ ಜಾಸ್ತಿಯಾಗ್ಯದೆ. ನನ್ನ ಕಷ್ಟ ನೋಡಿ ಏನಾದರೂ ಆರ್ಟ್ ಆಫ್ ಗಿವಿಂಗ್ ಮಾಡು ತಂದೆ' ಅಂತ ಬೇಡಿದೆ.

'ಬಿಪಿಎಲ್ ಇಲ್ಲದ್ಕೆ ನಿನಗೆ ಹೆಸರುಬಲ ಇಲ್ಲ ಕನೋ. ನೀನು ಪ್ರಾರ್ಥನೆ ಮತ್ತು ಪ್ರಯತ್ನ ಬುಡಬ್ಯಾಡ' ದೇವರು ಹೇಳಿ ಹೊಂಟೋತು.

'ಸ್ವಾಮಿ ದೇವನೆ ಲೋಕಪಾಲನೆ...' ಅಂತ ನಾನು ಶುರು ಹಚ್ಕಂದೆ.

ಸಂಗತ

ರೈತರ ಆತ್ಮಹತ್ಯೆ: ವ್ಯವಸ್ಥೆಗಿಲ್ಲವೆ ನೈತಿಕತೆ?

ರೈತರ ಆತ್ಮಹತ್ಯೆಗಳು ವೈಯಕ್ತಿಕ ಸಮಸ್ಯೆ ಅಥವಾ ಕೃಷಿ ಕ್ಷೇತ್ರದ ಬಿಕ್ಕಟ್ಟುಗಳಷ್ಟೇ ಅಲ್ಲ; ಅವು ವ್ಯವಸ್ಥೆಯ ವೈಫಲ್ಯ ಹಾಗೂ ನೈತಿಕ ಕುಸಿತದ ಪ್ರತಿಬಿಂಬಗಳೂ ಹೌದು.

● ರಾಜಕುಮಾರ ಕುಲಕರ್ಣಿ

ರೈತರ ಆತ್ಮಹತ್ಯೆಯ ಅಂಕಿಅಂಶಗಳಿಗೆ ಸಂಬಂಧಿಸಿದ 'ರಾಷ್ಟ್ರೀಯ ಅಪರಾಧಗಳ ದಾಖಲೆಗಳ ಬ್ಯೂರೊ'ದ 2024ರ ವರದಿ ಆತಂಕ ಹುಟ್ಟಿಸುವಂತಿದೆ (ಪ್ರ.ವಾ., ಮೇ 8). 2023ಕ್ಕೆ ಹೋಲಿಸಿದರೆ, 2024ರಲ್ಲಿ ದೇಶದಲ್ಲಿ ರೈತರ ಆತ್ಮಹತ್ಯೆ ಪ್ರಮಾಣ ಶೇ 2.22ರಷ್ಟು ಕಡಿಮೆ ಆಗಿದೆ ಎಂದು ವರದಿ ಹೇಳುತ್ತಿದೆ. ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಯ ಪ್ರಮಾಣದಲ್ಲಿ ಏರಿಕೆ ಆಗಿರುವುದನ್ನು ಗುರ್ತಿಸಲಾಗಿದೆ. ವರದಿಯಲ್ಲಿ ಹೇಳಿರುವಂತೆ, ರಾಜ್ಯದಲ್ಲಿ 2023 ಮತ್ತು 2024ರಲ್ಲಿ ಕ್ರಮವಾಗಿ 2,423 ಹಾಗೂ 2,971 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ (ಶೇ 22.61ರಷ್ಟು ಹೆಚ್ಚಳ).

ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಅನೇಕ ಕಾರಣಗಳಿವೆ. ಕೃಷಿ ಚಟುವಟಿಕೆಯಿಂದ– ಅದರಲ್ಲೂ ಒಣಬೇಸಾಯವನ್ನೇ ಆಶ್ರಯಿಸಿದವರಿಗೆ– ಸಾಕಷ್ಟು ಆದಾಯ ದೊರೆಯುತ್ತಿಲ್ಲ. ಕಳಪೆ ಬೀಜಗಳ ಬಳಕೆ, ಅಧಿಕ ಬೆಲೆಗೆ ಖರೀದಿಸಿದ ರಸಗೊಬ್ಬರ, ಸಕಾಲಕ್ಕೆ ಆಗದ ಮಳೆ, ಕ್ರಿಮಿಕೀಟಗಳಿಂದ ಫಸಲಿಗೆ ಹಾನಿ ಸೇರಿದಂತೆ ಏನೆಲ್ಲ ತೊಂದರೆಗಳನ್ನೆದುರಿಸಿ, ಬೆಳೆ ಕೈಗೆ ಬರುವ ಹೊತ್ತಿಗೆ ರೈತರ ಸ್ಥಿತಿ ಚಿಂತಾಜನಕವಾಗಿರುತ್ತದೆ. ಬೆಳೆಯನ್ನು ಹೊಲದಿಂದಲೇ ನೇರವಾಗಿ ಮಾರುಕಟ್ಟೆಗೆ ಸಾಗಿಸುವ ಅನಿವಾರ್ಯತೆ ರೈತನದು. ಗಗನಕ್ಕೇರಿದ್ದ ಬೆಲೆ, ರೈತನ ಕೈಗೆ ಬೆಳೆ ಬರುವ ವೇಳೆಗೆ ಪಾತಾಳಕ್ಕಿಳಿದಿರುತ್ತದೆ.

ಕೃಷಿ ಉತ್ಪನ್ನಗಳನ್ನು ರೈತರಿಂದಲೇ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವ ವ್ಯವಸ್ಥೆ ನಮ್ಮಲ್ಲಿಲ್ಲ. ರೈತರು ಮತ್ತು ಗ್ರಾಹಕರ ನಡುವೆ ಮಧ್ಯವರ್ತಿಗಳು ಇದ್ದಾರೆ. ರೈತರ ಬೆಳೆಗಳು ಮಾರುಕಟ್ಟೆಗೆ ಬಂದ ಸಂದರ್ಭ ಅಧಿಕ ಆವಕದ ಪರಿಣಾಮ ಧಾರಣೆ ಕುಸಿಯುತ್ತದೆ. ಕಡಿಮೆ ಬೆಲೆಗೆ ರೈತರಿಂದ ಕೃಷಿ ಉತ್ಪನ್ನಗಳನ್ನು ಖರೀದಿಸುವ ಮಧ್ಯವರ್ತಿಗಳು ನಂತರ ಅಧಿಕ ಬೆಲೆಗೆ ಮಾರಾಟ ಮಾಡಿ ಲಾಭಗಳಿಸುತ್ತಾರೆ. ಬಿಸಿಲು, ಮಳೆ, ಚಳಿಗೆ ಮೈಯೊಡ್ಡಿ ದುಡಿದು ಹೈರಾಣಾಗುವ ರೈತರಿಗೆ ತಮ್ಮ ಕೃಷಿ ಉತ್ಪಾದನೆಯಿಂದ ಲಾಭವಾಗುತ್ತಿಲ್ಲ. ನಗರ ಪ್ರದೇಶಗಳ ಹವಾನಿಯಂತ್ರಿತ ಕೋಣೆಗಳಲ್ಲಿ ಕುಳಿತು ರೈತರ ಕೃಷಿ ಉತ್ಪನ್ನಗಳ ವಹಿವಾಟು ನಡೆಸುವ ಮಧ್ಯವರ್ತಿಗಳಿಗೆ ರೈತರ ದುಡಿಮೆಯ ಫಲ ಪ್ರಾಪ್ತವಾಗುತ್ತಿದೆ.

ಅಭಿವೃದ್ಧಿ ಹೆಸರಿನಲ್ಲಿ ರೈತರ ಭೂಮಿ ಕಬಳಿಕೆಯಾಗುತ್ತಿದೆ. ಕಾರ್ಖಾನೆಗಳು, ವಿಶ್ವವಿದ್ಯಾಲಯಗಳು, ಸರ್ಕಾರದ ಆಡಳಿತ ಕಚೇರಿಗಳು, ಇವೆಲ್ಲವುಗಳ ಸ್ಥಾಪನೆಗೆ ಸಾವಿರಾರು ಎಕರೆ ಕೃಷಿಭೂಮಿ ಬಳಕೆಯಾಗುತ್ತಿದೆ. ರಸ್ತೆಗಳ ವಿಸ್ತರಣೆ, ಹೆದ್ದಾರಿಗಳ ನಿರ್ಮಾಣಕ್ಕಾಗಿಯೂ ಕೃಷಿಭೂಮಿ ವಶಪಡಿಸಿಕೊಳ್ಳಲಾಗುತ್ತಿದೆ. ನಗರ ಪ್ರದೇಶಗಳಿಗೆ ಸಮೀಪದಲ್ಲಿರುವ ಹಳ್ಳಿಗಳ ರೈತರಿಂದ ಧನವಂತರು ಕೃಷಿಭೂಮಿಯನ್ನು ಖರೀದಿಸಿ, ವಸತಿ ಸಮುಚ್ಚಯಗಳು ಮತ್ತು ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸುತ್ತಿದ್ದಾರೆ.

ಕೃಷಿ ಕ್ಷೇತ್ರದಲ್ಲಿ ಎದುರಾಗುತ್ತಿರುವ ಸಮಸ್ಯೆಗಳಿಂದಾಗಿ ಅದೆಷ್ಟೋ ರೈತ ಕುಟುಂಬಗಳು ಉದ್ಯಮಿಗಳಿಗೆ ಭೂಮಿಯನ್ನು ಮಾರಾಟ ಮಾಡಿ ನಗರಗಳಿಗೆ ವಲಸೆ ಹೋಗುತ್ತಿವೆ. ರೈತರು ಕೃಷಿ ಉದ್ಯೋಗದಲ್ಲೇ ತೊಡಗಿಸಿಕೊಳ್ಳುವಂತೆ ಒತ್ತಾಯಿಸುವ ನೈತಿಕತೆಯನ್ನು ಸರ್ಕಾರ ಮತ್ತು ಸಮಾಜ ಕಳೆದುಕೊಂಡಿವೆ. ರೈತರು ಕೃಷಿ ಕ್ಷೇತ್ರದಲ್ಲಿನ ದುಡಿಮೆ ಸ್ಥಗಿತಗೊಳಿಸಿದಲ್ಲಿ ಅದರ ನೇರ ಪರಿಣಾಮ ಜನರ ದೈನಂದಿನ ಬದುಕಿನ ಮೇಲಾಗುತ್ತದೆ.

ಟೆಕ್ಕಿಗಳು ಕೃಷಿ ಕ್ಷೇತ್ರಕ್ಕೆ ಕಾಲಿಡುತ್ತಿದ್ದು, ಕೃಷಿಯಲ್ಲಿ ಲಾಭವಿದೆ ಎನ್ನುವ ಅಭಿಪ್ರಾಯ ಕೆಲವರಲ್ಲಿದೆ. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಟೆಕ್ಕಿಗಳಿಗೆ ಕೃಷಿಯಿಂದಲೇ ಬದುಕು ಕಟ್ಟಿಕೊಳ್ಳಬೇಕಾದ ಅನಿವಾರ್ಯತೆ ಇಲ್ಲ. ಕೆಲಸದ ಏಕತಾನತೆಯಿಂದ ಬೇಸತ್ತವರಿಗೆ ಕೃಷಿ ಕೆಲಸ ಒಂದು ಬದಲಾವಣೆ ಅಷ್ಟೇ. ರೈತರ ಸ್ಥಿತಿ ಹಾಗಲ್ಲ. ಕೃಷಿ ಅವರಿಗೆ ಹವ್ಯಾಸವಲ್ಲ, ಜೀವನೋಪಾಯ.

ರಾಜಕಾರಣ ರೈತರ ಸಂಕಷ್ಟಗಳಿಗೆ ಸ್ಪಂದಿಸಿದ್ದು ಕಡಿಮೆ. ರಾಜಕೀಯ ಪಕ್ಷಗಳು ಪಕ್ಷಾತೀತವಾಗಿ ರೈತರನ್ನು ಶೋಷಣೆ ಮಾಡುತ್ತಿವೆ. ಕೈಗಾರಿಕೋದ್ಯಮಿಗಳಿಗೆ ಸಕಲ ಸೌಲಭ್ಯಗಳನ್ನು ಒದಗಿಸಿ ರತ್ನಗಂಬಳಿ ಹಾಸಿ ಸ್ವಾಗತಿಸುವ ಸರ್ಕಾರ, ರೈತರ ಸಮಸ್ಯೆಗಳಿಗೆ ಕಣ್ಣಿದ್ದೂ ಕುರುಡನಂತೆ ವರ್ತಿಸುತ್ತದೆ. ನಗರ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ ನೀಡಿದಷ್ಟು ಗ್ರಾಮೀಣ ಪ್ರದೇಶಗಳಿಗೆ ನೀಡುತ್ತಿಲ್ಲ. ಬೆಳೆಹಾನಿಗೆ ಒದಗಿಸುತ್ತಿರುವ ಪರಿಹಾರಧನ ಕುಂಭಕರ್ಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತಾಗಿದೆ. ಈ ಅಲ್ಪ ಧನಸಹಾಯವನ್ನು ಪಡೆಯಲು ರೈತರು ಹಲವು ದಾಖಲೆಗಳನ್ನು ಒದಗಿಸಬೇಕು. ಸಂಬಂಧಪಟ್ಟ ಇಲಾಖೆಯ ನೌಕರರ 'ಕ್ಷೇಮ' ವಿಚಾರಿಸಿಕೊಳ್ಳಬೇಕು.

ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿರುವ ಮಿತ್ರರೊಬ್ಬರು, ಇಂದಿನ ವಿದ್ಯಾರ್ಥಿಗಳಲ್ಲಿ ರೈತರಾಗುವ ಬಯಕೆಯಿಲ್ಲ ಎಂದು ಕಳವಳ ವ್ಯಕ್ತಪಡಿಸುತ್ತಾರೆ. ವಿದ್ಯಾರ್ಥಿಗಳು ಇರಲಿ, ಸ್ವತಃ ರೈತರಿಗೇ ತಮ್ಮ ಮಕ್ಕಳು ಕೃಷಿ ಉದ್ಯೋಗದಲ್ಲಿ ಮುಂದುವರಿಯಬೇಕೆನ್ನುವ ಇಚ್ಛೆ ಇಲ್ಲ. ಒಕ್ಕಲುತನ ತಮ್ಮೊಂದಿಗೇ ಕೊನೆಗೊಳ್ಳಲೆಂದು ಬಯಸುವ ರೈತಾಪಿ ಜನರ ಸಂಖ್ಯೆ ಅಧಿಕವಾಗಿದೆ. ಅದೆಷ್ಟೋ ರೈತರು ತಮ್ಮ ಮಕ್ಕಳಿಗೆ ನಗರ ಪ್ರದೇಶಗಳ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಕೊಡಿಸುತ್ತಿದ್ದಾರೆ. ಈಗ ಯುವ ರೈತರಿಗೆ ಎದುರಾಗಿರುವ ಮದುವೆ ಸಮಸ್ಯೆ ಭವಿಷ್ಯದಲ್ಲಿ ಕೃಷಿ ಉದ್ಯೋಗಕ್ಕೆ ಶಾಶ್ವತವಾಗಿ ತೆರೆ ಎಳೆದಲ್ಲಿ ಅಚ್ಚರಿಯೇನಿಲ್ಲ.

ಒಂದೆಡೆ ಕೃಷಿಭೂಮಿ ಕ್ಷೀಣಿಸುತ್ತಿದೆ, ಇನ್ನೊಂದೆಡೆ ರೈತರ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿದೆ. ಬಡವರು ಮತ್ತು ಮಧ್ಯಮವರ್ಗದವರು ಗಗನಕ್ಕೇರುತ್ತಿರುವ ಆಹಾರ ಧಾನ್ಯಗಳ ಬೆಲೆಯಿಂದ ತತ್ತರಿಸಿದ್ದಾರೆ. ಜನಸಂಖ್ಯೆ ಮತ್ತು ಆಹಾರ ಉತ್ಪಾದನೆ ಪ್ರಮಾಣದ ನಡುವೆ ಅಸಮತೋಲನವಿದೆ. ಇಂಥ ವಿಷಮ ಸನ್ನಿವೇಶದಲ್ಲಿ ಅನ್ನದಾತರ ಆತ್ಮಹತ್ಯೆ ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸುತ್ತದೆ. ಸಮಸ್ಯೆಗೆ ಪರಿಹಾರವೆಂದರೆ, ಹಸಿದ ಹೊಟ್ಟೆಗಳಿಗೆ ಅನ್ನ ನೀಡುವ ರೈತರ ಬದುಕು ಹಸನಾಗುವುದು. ಅದನ್ನು ಸಾಧ್ಯವಾಗಿಸುವುದು ಸರ್ಕಾರದ ಕರ್ತವ್ಯ, ಸಮಾಜದ ನೈತಿಕ ಹೊಣೆಗಾರಿಕೆ. ಅಭಿವೃದ್ಧಿಯ ಮಾನದಂಡಗಳಲ್ಲಿ ರೈತರ ಯೋಗಕ್ಷೇಮವೂ ಸೇರಬೇಕು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎಬೋಲಾ, ಹಂಟಾ ವೈರಸ್ ತಂದ ಆತಂಕ

ಕೋವಿಡ್–19ರ ದುಃಸ್ವಪ್ನಗಳು ಜನರನ್ನು ಕಾಡುತ್ತಿರುವಾಗಲೇ ಜಾಗತಿಕ ಮಟ್ಟದಲ್ಲಿ ಮತ್ತೊಂದು ವೈರಸ್ ಕಾಣಿಸಿಕೊಂಡಿದೆ. ಅದು ಎಬೋಲಾ. ವಿಶ್ವ ಆರೋಗ್ಯ ಸಂಸ್ಥೆಯು ಮತ್ತೊಮ್ಮೆ ಆರೋಗ್ಯ ತುರ್ತುಪರಿಸ್ಥಿತಿ ಘೋಷಿಸಿದೆ. ಆಫ್ರಿಕಾದ ಕಾಂಗೊ ರಿಪಬ್ಲಿಕ್ ಮತ್ತು ಉಗಾಂಡದಲ್ಲಿ ಪ್ರಸ್ತುತ ಸೋಂಕಿತರು ಪತ್ತೆಯಾಗಿದ್ದಾರೆ. ಸೋಂಕಿತರ ಜೀವಕ್ಕೆ ಅಪಾಯವಿರುವ ಸಾಧ್ಯತೆ ಹೆಚ್ಚಾಗಿರುವ ಎಬೋಲಾ ಪ್ರಕರಣಗಳು ವರದಿಯಾಗಿರುವುದು 'ಅಸಾಮಾನ್ಯ ವಿದ್ಯಮಾನ' ಎಂದು ಸಂಸ್ಥೆ ಹೇಳಿದೆ. ಇದೇ ವೇಳೆ ಹಂಟಾ ವೈರಸ್ ಸೋಂಕು ಕೂಡ ದೃಢಪಟ್ಟಿರುವುದು ಕಳವಳ ಮೂಡಿಸಿದೆ

ಪ್ರಜಾವಾಣಿ ವಾರ್ತೆ

ಜಾಗತಿಕ ಮಟ್ಟದಲ್ಲಿ ಆಗಾಗ ಸದ್ದು ಮಾಡಿ ಮರೆಯಾಗುತ್ತಿದ್ದ ಎಬೋಲಾ ಮತ್ತೊಮ್ಮೆ ಬಂದಿದೆ. ಕಾಂಗೊ ಗಣರಾಜ್ಯ (ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊ) ಮತ್ತು ಉಗಾಂಡದಲ್ಲಿ ಎಬೋಲಾ ಸೋಂಕಿತರು ಪತ್ತೆಯಾಗಿದ್ದಾರೆ. ಅದರ ಕ್ಷಿಪ್ರ ಹರಡುವಿಕೆ ಮತ್ತು ಮಾರಣಾಂತಿಕ ಸ್ವರೂಪದ ಕಾರಣಕ್ಕೆ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಇದು ಸಾಂಕ್ರಾಮಿಕ ಅಲ್ಲದಿದ್ದರೂ, ಜಾಗತಿಕ ಮಟ್ಟದಲ್ಲಿ ಗಮನ ಹರಿಸಬೇಕಾದ ಸಾರ್ವಜನಿಕ ಆರೋಗ್ಯ ತುರ್ತುಪರಿಸ್ಥಿತಿ (ಪಿಎಚ್‌ಇಐಸಿ) ಎಂದು ಘೋಷಿಸಿದೆ.

ಆಫ್ರಿಕನ್ ಸೆಂಟರ್ಸ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್ (ಸಿಡಿಸಿ) ಪ್ರಕಾರ, ಎಬೋಲಾ ಸೋಂಕು ಕಳೆದ ತಿಂಗಳಲ್ಲೇ ಕಾಂಗೊದ ವ್ಯಕ್ತಿಯೊಬ್ಬರಲ್ಲಿ ಕಾಣಿಸಿಕೊಂಡಿದೆ. 59 ವರ್ಷದ ಆ ವ್ಯಕ್ತಿಗೆ ಏ.24ರಂದು ಸೋಂಕು ತಗುಲಿರುವುದು ಖಚಿತವಾಗಿತ್ತು. ಅದಾದ ಮೂರೇ ದಿನಕ್ಕೆ ಆತ ಮೃತಪಟ್ಟಿದ್ದ. ತಕ್ಷಣವೇ ಆರೋಗ್ಯ ಅಧಿಕಾರಿಗಳು ಜಾಗೃತಿ ಮೂಡಿಸುವ ಕೆಲಸ ಆರಂಭಿಸಿದ್ದರು. ಆದರೆ, ಅಷ್ಟು ಹೊತ್ತಿಗೆ ಸೋಂಕು ಹರಡಿತ್ತು. ಮೇ 5ರ ಹೊತ್ತಿಗೆ 50 ಮಂದಿ ಎಬೋಲಾದಿಂದ ಉಸಿರು ಚೆಲ್ಲಿದ್ದರು. ಸೋಂಕಿನಿಂದ ಈವರೆಗೆ 91 ಮಂದಿ ಮರಣ ಹೊಂದಿದ್ದು, 350 ಶಂಕಿತ ಪ್ರಕರಣಗಳು ಪತ್ತೆಯಾಗಿವೆ ಎಂದು ಕಾಂಗೊದ ಆರೋಗ್ಯ ಇಲಾಖೆ ತಿಳಿಸಿದೆ.

ಕಾಂಗೊದೊಂದಿಗೆ ಗಡಿ ಹಂಚಿಕೊಂಡಿರುವ ಉಗಾಂಡಕ್ಕೂ ಸೋಂಕು ಹರಡಿದೆ. ಅಲ್ಲಿ ಇಬ್ಬರು ಸೋಂಕಿತರು ಪತ್ತೆಯಾಗಿದ್ದು, ಒಬ್ಬರು ಸಾವಿಗೀಡಾಗಿದ್ದಾರೆ. ಕಾಂಗೊದ ಪ್ರಮುಖ ನಗರ ಕಿನ್‌ಶಾಸಾ ಮತ್ತು ಉಗಾಂಡ ರಾಜಧಾನಿ ಕಂಪಾಲಾದಲ್ಲಿ ಸೋಂಕಿತರು ಪತ್ತೆಯಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಕಾಂಗೊದಲ್ಲಿರುವ ಆರು ಮಂದಿ ಅಮೆರಿಕ ಪ್ರಜೆಗಳಿಗೆ ಸೋಂಕು ತಗುಲಿದೆ ಎನ್ನಲಾಗುತ್ತಿದ್ದು, ಅವರನ್ನು ಸುರಕ್ಷಿತ ಸ್ಥಳದಲ್ಲಿ ಕ್ವಾರಂಟೈನ್ ಮಾಡಲಾಗಿದೆ ಎಂದು ಅಮೆರಿಕದ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಮತ್ತು ಪ್ರಿವೆನ್ಶನ್ ತಿಳಿಸಿದೆ. ಜತೆಗೆ, ಕಾಂಗೊಗೆ ಪ್ರಯಾಣಿಸದಿರುವಂತೆ ಪ್ರವಾಸಿಗರಿಗೆ ಗಂಭೀರ ಎಚ್ಚರಿಕೆ ನೀಡಿದೆ. ಕಾಂಗೊ ಮತ್ತು ಉಗಾಂಡದ ಗಡಿಗಳಲ್ಲಿ ಪ್ರಯಾಣಿಕರಿಗೆ ಆರೋಗ್ಯ ಪರೀಕ್ಷೆ ನಡೆಸುವಂತೆ ಡಬ್ಲ್ಯುಎಚ್‌ಒ ಸಲಹೆ ನೀಡಿದೆ.

ಏನಿದು ಎಬೋಲಾ?

ಎಬೋಲಾ ಸೋಂಕಿಗೆ ಕಾರಣ, ಆರ್ಥೋಎಬೋಲಾವೈರಸಸ್ ಎನ್ನುವ ವೈರಸ್ ಸಮೂಹ. ದಕ್ಷಿಣ ಸುಡಾನ್ ಮತ್ತು ಕಾಂಗೊದಲ್ಲಿ ಇದು ಮೊದಲಿಗೆ ಪತ್ತೆಯಾಗಿತ್ತು (1976). ಎಬೋಲಾ ನದಿಗೆ ಹೊಂದಿಕೊಂಡ ಪ್ರದೇಶದಲ್ಲಿ ಇದು ಮೊದಲು ಪತ್ತೆಯಾಗಿದ್ದರಿಂದ ಎಬೋಲಾ ವೈರಸ್ ಎಂದೇ ಹೆಸರು ಪಡೆಯಿತು. ಅತ್ಯಂತ ಕ್ಷಿಪ್ರವಾಗಿ ಹರಡುವ ಗುಣವುಳ್ಳ ಎಬೋಲಾ, ಮಾರಣಾಂತಿಕ ಸೋಂಕು. 1976ರಿಂದ 40 ಬಾರಿ ಪ್ರಕರಣಗಳು ಕಾಣಿಸಿಕೊಂಡಿವೆ. ಕಾಂಗೊದಲ್ಲಿ 17ನೇ ಬಾರಿ ಸೋಂಕು ಪತ್ತೆಯಾಗಿದೆ. ಕಳೆದ ವರ್ಷ ಕೂಡ ಎಬೋಲಾ ಸೋಂಕುಗಳು ಕಾಣಿಸಿಕೊಂಡಿದ್ದವು; 53 ಪ್ರಕರಣಗಳು ದೃಢವಾಗಿ, 45 ಮಂದಿ ಸಾವಿಗೀಡಾಗಿದ್ದರು.

ಹೇಗೆ ಹರಡುತ್ತದೆ?

- ಬಾವಲಿಯಂಥ ಪಕ್ಷಿಗಳು, ಪ್ರಾಣಿಗಳಿಂದ ಇದು ಮನುಷ್ಯರಿಗೆ ಹರಡುತ್ತದೆ
- ಸೋಂಕಿತರ ವಾಂತಿ, ರಕ್ತ, ವೀರ್ಯದಂಥ ಸ್ರಾವಗಳ ಮೂಲಕ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ
- ಜ್ವರ, ಮಾಂಸಖಂಡಗಳ ನೋವು, ತಲೆನೋವು, ಆಯಾಸ ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ
- ವಾಂತಿ, ಭೇದಿ, ಚರ್ಮದ ಮೇಲೆ ದದ್ದುಗಳು, ರಕ್ತಸ್ರಾವ ಇತರ ಪ್ರಮುಖ ಲಕ್ಷಣಗಳು

ಆತಂಕ ಏಕೆ?

ಜೈರ್, ಸುಡಾನ್, ಬುಂಡಿಬುಗ್ಯೊ ಎನ್ನುವ ಮೂರು ಪ್ರಮುಖ ವೈರಸ್ ರೂಪಾಂತರಗಳು ಸೋಂಕು ಉಂಟುಮಾಡುತ್ತವೆ. ಇವುಗಳಲ್ಲಿ ಬಂಡಿಬುಗ್ಯೊ ಅಪರೂಪದ ಆದರೆ, ಅತ್ಯಂತ ಅಪಾಯಕಾರಿಯಾದ ತಳಿಯಾಗಿದೆ. 2007 ಮತ್ತು 2012ರಲ್ಲಿ ಇದೇ ತಳಿಯಿಂದ ಎಬೋಲಾ ಸೋಂಕು ಹರಡಿತ್ತು. 2007ರಲ್ಲಿ 149 ಸೋಂಕಿತರ ಪೈಕಿ 37 ಮಂದಿ ಅಸುನೀಗಿದ್ದರು. 2012ರಲ್ಲಿ 57 ಸೋಂಕಿತರ ಪೈಕಿ 29 ಮಂದಿ ಸಾವಿಗೀಡಾಗಿದ್ದರು. ಬಂಡಿಬುಗ್ಯೊ ತಳಿಯಿಂದ ಹರಡುವ ಎಬೋಲಾ ಸೋಂಕಿಗೆ ಲಸಿಕೆ ಇಲ್ಲ. ಎಬೋಲಾಗೆ ಬಳಸುತ್ತಿರುವ ಲಸಿಕೆಯು ಈ ವೈರಸ್ ರೂಪಾಂತರಕ್ಕೆ ಕೆಲಸ ಮಾಡದಿರುವುದೇ ಪ್ರಸ್ತುತ ಹೆಚ್ಚು ಆತಂಕಕ್ಕೆ ಕಾರಣವಾಗಿದೆ. ಹೀಗಾಗಿಯೇ ಇದು ಅಸಾಮಾನ್ಯ ಸಂದರ್ಭ ಎಂದು ಡಬ್ಲ್ಯುಎಚ್‌ಒ ಹೇಳಿರುವುದು.

ಆರ್ಥಿಕ, ಭೌಗೋಳಿಕ ಸಮಸ್ಯೆ ಸೇರಿದಂತೆ ಹಲವು ರೀತಿಯ ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಕಾಂಗೊ ಮತ್ತು ಮಧ್ಯ ಆಫ್ರಿಕಾ–ಪೂರ್ವ ಆಫ್ರಿಕಾದಲ್ಲಿ ಆರೋಗ್ಯ ಸೇವೆಗಳ ಮೂಲಸೌಕರ್ಯವು ಉತ್ತಮ ಸ್ಥಿತಿಯಲ್ಲಿಲ್ಲ. ಇದು ಕೂಡ ಆತಂಕಕ್ಕೆ ಕಾರಣವಾಗಿದೆ.

ಭಾರತಕ್ಕೆ ಅಪಾಯವಿದೆಯೇ?

ಎಬೋಲಾ ಸೋಂಕು ಆಫ್ರಿಕಾದ ಹೊರಗೂ ಸೋಂಕು ಹರಡುವ ಸಾಧ್ಯತೆ ಇದೆ. ಆದರೆ, ಭಾರತೀಯರು ಆತಂಕಗೊಳ್ಳುವ ಅಗತ್ಯವಿಲ್ಲ ಎಂದು ತಜ್ಞರು ಹೇಳಿದ್ದಾರೆ.

ಸೋಂಕು ಕಾಣಿಸಿಕೊಂಡಿರುವ ದೇಶಗಳಿಂದ ಭಾರತಕ್ಕೆ ವಿಮಾನ ಸೇವೆಗಳು ಲಭ್ಯವಿಲ್ಲ. ಜತೆಗೆ, ಭಾರತದಲ್ಲಿ ಎಬೋಲಾ ಸೋಂಕು ಹರಡುವಿಕೆ ತಡೆಯುವ ಸಂಬಂಧದ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದೆ. ಪ್ರಯಾಣಿಕರ ಪರೀಕ್ಷೆ, ಪ್ರತ್ಯೇಕವಾಗಿಡುವಿಕೆ ಚಾಲ್ತಿಯಲ್ಲಿದ್ದು, ಜಾಗತಿಕ ಆರೋಗ್ಯ ಸಂಸ್ಥೆಗಳ ಜತೆ ನಿರಂತರ ಸಂಪರ್ಕ ಹೊಂದಲಾಗಿದೆ.

ಕೋವಿಡ್‌ನಂತೆ ಇದು ಸುಲಭವಾಗಿ ಹರಡುವುದಿಲ್ಲ ಎನ್ನುವುದೂ ಒಂದು ಸಕಾರಾತ್ಮಕ ಅಂಶವಾಗಿದೆ. ಆದರೆ, ಜಗತ್ತೇ ಒಂದು ಗ್ರಾಮದಂತಾಗಿರುವ ಪ್ರಸ್ತುತ ಸನ್ನಿವೇಶದಲ್ಲಿ ಯಾವುದನ್ನೂ ನಿರ್ಲಕ್ಷಿಸುವಂತಿಲ್ಲ ಎನ್ನುವ ಎಚ್ಚರಿಕೆಯನ್ನೂ ತಜ್ಞರು ನೀಡಿದ್ದಾರೆ.

ಹಂಟಾ ವೈರಸ್ ಸೋಂಕು ಹರಡಿದ ವಿಲಾಸಿ ಹಡಗಿನಲ್ಲಿ ಭಾರತೀಯರು ಇದ್ದ ಬಗ್ಗೆ ಈ ವರೆಗೆ ವರದಿಯಾಗಿಲ್ಲ. ಹಾಗಾಗಿ, ಭಾರತಕ್ಕೆ ಇದು ಹರಡುವ ಸಾಧ್ಯತೆ ಕಡಿಮೆ. ವಿದೇಶದಲ್ಲಿ ಈ ಸೋಂಕು ತಗುಲಿದವರ ಸಂಪರ್ಕಕ್ಕೆ ಭಾರತೀಯರು ಬಂದು, ಅವರು ಸ್ವದೇಶಕ್ಕೆ ಮರಳಿದ ನಂತರ ಹರಡುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಹಾಗಾಗಿ, ಎಚ್ಚರಿಕೆ ಅಗತ್ಯ ಎಂಬುದು ತಜ್ಞರ ಅಭಿಪ್ರಾಯ.

ಆಧಾರ: ವಿಶ್ವ ಆರೋಗ್ಯ ಸಂಸ್ಥೆ ವೆಬ್‌ಸೈಟ್, ಎಎಫ್‌ಪಿ, ರಾಯಿಟರ್ಸ್, ಬಿಬಿಸಿ, ಸಿಡಿಸಿ.ಜಿಒವಿ, ಗಾರ್ಡಿಯನ್

ಹಂಟಾ ವೈರಸ್ ಹರಡಿದ್ದು ಹೇಗೆ?

ವಿಶ್ವ ಆರೋಗ್ಯ ಸಂಸ್ಥೆಯು ಜಾಗತಿಕ ಮಟ್ಟದಲ್ಲಿ ಎಚ್ಚರಿಕೆ ನೀಡಲು ಕಾರಣವಾಗಿರುವ ಹಂಟಾ ವೈರಸ್ ಸೋಂಕು ದಿಢೀರ್ ಆಗಿ ಕಂಡುಬಂದಿರುವುದು ಒಂದು ವಿಲಾಸಿ ಹಡಗಿನಲ್ಲಿ.

28 ರಾಷ್ಟ್ರಗಳ 150 ಪ್ರಯಾಣಿಕರು ಮತ್ತು ಇಬ್ಬರು ವೈದ್ಯಕೀಯ ಸಿಬ್ಬಂದಿ ಸೇರಿದಂತೆ 25 ಮಂದಿ ಸಿಬ್ಬಂದಿಯನ್ನೊಳಗೊಂಡ ನೆದರ್ಲೆಂಡ್ಸ್‌ನ ಖಾಸಗಿ ಐಷಾರಾಮಿ ಹಡಗು ಎಂವಿ ಹೋಂಡಿಯಸ್ ಏಪ್ರಿಲ್ 1ರಂದು ಅರ್ಜೆಂಟೀನಾದ ಉಷುವಾಯದಿಂದ ಹೊರಟಿತ್ತು. ಪ್ರಯಾಣದ ಮಧ್ಯೆ, ನೆದರ್ಲೆಂಡ್ಸ್‌ನ ದಂಪತಿ ಮತ್ತು ಜರ್ಮನಿಯ ಮಹಿಳೆಯೊಬ್ಬರು ಮೃತಪಟ್ಟರು. ಅವರ ರಕ್ತದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿದಾಗ ಮೂವರ ಪೈಕಿ ಇಬ್ಬರಿಗೆ ಹಂಟಾ ವೈರಸ್ ಸೋಂಕು ತಗುಲಿದ್ದು ಖಚಿತವಾಗಿತ್ತು. ಇದು ದೃಢಪಡುವಾಗ ಮೇ 2 ಆಗಿತ್ತು. ಇಲ್ಲಿಯವರೆಗೆ ಹಡಗಿನಲ್ಲಿದ್ದ 10 ಮಂದಿಗೆ ಹಂಟಾ ವೈರಸ್ ಸೋಂಕು ತಗುಲಿರುವುದು ದೃಢಪಟ್ಟಿದ್ದು, ಇನ್ನಿಬ್ಬರು ಅದರ ರೋಗಲಕ್ಷಣಗಳಿಂದ ಬಳಲುತ್ತಿದ್ದು, ಶಂಕಿತ ಪ್ರಕರಣಗಳೆಂದು ಗುರುತಿಸಲಾಗಿದೆ.

ಏನಿದು ವೈರಸ್?

ಇದು ಹೊಸ ವೈರಸ್ ಏನಲ್ಲ. ಇಲಿಗಳಲ್ಲಿ ಕಂಡು ಬರುವ ವೈರಸ್‌ಗಳ ಗುಂಪಿದು. ದಕ್ಷಿಣ ಅಮೆರಿಕದ ರಾಷ್ಟ್ರಗಳಲ್ಲಿ ಇದು ಸಾಮಾನ್ಯ. ಸಾಮಾನ್ಯವಾಗಿ ಇಲಿಗಳ ಸಂಪರ್ಕಕ್ಕೆ ಬಂದ (ಇಲಿಯ ಎಂಜಲು, ಮೂತ್ರ, ಮಲದ ಸಂಪರ್ಕಕ್ಕೆ ಬಂದರೆ) ಮನುಷ್ಯರಿಗೆ ಈ ವೈರಸ್ ಹರಡುತ್ತದೆ. ಮನುಷ್ಯರಿಂದ ಮನುಷ್ಯರಿಗೆ ಹರಡುವುದು ಅಪರೂಪ. ಆದರೆ, ಆ್ಯಂಡೀಸ್ ವೈರಸ್ ಎಂಬ ರೂಪಾಂತರ ತಳಿ ಮನುಷ್ಯರಿಂದ ಮನುಷ್ಯರಿಗೆ ಹರಡುವ ಸಾಮರ್ಥ್ಯ ಹೊಂದಿದೆ. ವಿಲಾಸಿ ಹಡಗಿನಲ್ಲಿದ್ದ ಸೋಂಕಿತರಲ್ಲಿ ಈ ವೈರಸ್ ಇರುವುದು ದೃಢಪಟ್ಟಿದೆ.

ಈಗೇಕೆ ಕಳವಳ?

ಹಡಗಿನಲ್ಲಿ 28 ರಾಷ್ಟ್ರಗಳ ಪ್ರಯಾಣಿಕರಿದ್ದರು. ಏಪ್ರಿಲ್ 23ರಂದು ಸೇಂಟ್ ಹಲೇನಾದಲ್ಲಿ ವಿವಿಧ ದೇಶಗಳ 23 ಪ್ರಯಾಣಿಕರು ಹಡಗಿನಿಂದ ಇಳಿದು ತಮ್ಮ ದೇಶಗಳಿಗೆ ವಾಪಸ್ ಆಗಿದ್ದಾರೆ. ಮೇ 2ರಂದು ವೈರಸ್ ಹರಡಿರುವುದು ಖಚಿತವಾದ ನಂತರ ಮೇ 10, 11ರಂದು ಉಳಿದೆಲ್ಲ ಪ್ರಯಾಣಿಕರನ್ನು ಕೇನರಿ ದ್ವೀಪದಲ್ಲಿ ಇಳಿಸಿ, ಅವರವರ ದೇಶಗಳಿಗೆ ಕಳುಹಿಸಲಾಗಿತ್ತು.

20 ಬ್ರಿಟಿಷರು, 18 ಅಮೆರಿಕನ್ನರು, ಸ್ಪೇನಿನ 14 ಜನ, ಕೆನಡಾದ ಆರು, ಜರ್ಮನಿಯ ನಾಲ್ವರು ಸೇರಿದಂತೆ ವಿವಿಧ ದೇಶಗಳ ಪ್ರಯಾಣಿಕರು ಈಗ ಅವರ ದೇಶಗಳಲ್ಲಿ ಕ್ವಾರಂಟೈನ್‌ನಲ್ಲಿದ್ದಾರೆ. ತನ್ನ ಒಬ್ಬ ಪ್ರಜೆಗೆ ಸೋಂಕು ತಗುಲಿರುವುದನ್ನು ಫ್ರಾನ್ಸ್ ದೃಢಪಡಿಸಿದೆ. ಆ್ಯಂಡೀಸ್ ವೈರಸ್ ಮನುಷ್ಯರಿಂದ ಮನುಷ್ಯರಿಗೆ ಹರಡುವುದರಿಂದ ಎಚ್ಚರಿಕೆ ವಹಿಸುವಂತೆ ಆರೋಗ್ಯ ಸಂಸ್ಥೆ ಸಲಹೆ ನೀಡಿದೆ.

ಅರ್ಜೆಂಟೀನಾ ಎಪೂಯೆನ್‌ನಲ್ಲಿ 2018 ಡಿಸೆಂಬರ್ 2019ರ ಮಾರ್ಚ್ ನಡುವೆ 34 ಮಂದಿಗೆ ಈ ಸೋಂಕು ತಗುಲಿತ್ತು. ಈ ಪೈಕಿ 11 ಮಂದಿ ಮೃತಪಟ್ಟಿದ್ದರು.

ರೋಗ ಲಕ್ಷಣಗಳೇನು?

ವೈರಸ್‌ನ ಸೋಂಕಿನಿಂದಾಗಿ ಎರಡು ರೀತಿಯ ಗಂಭೀರ ಕಾಯಿಲೆಗಳು ಕಾಡುತ್ತವೆ. ಅಮೆರಿಕ ಖಂಡದ ರಾಷ್ಟ್ರಗಳಲ್ಲಿ ಹಂಟಾವೈರಸ್ ಕಾರ್ಡಿಯೋಪಲ್ಮನರಿ ಸಿಂಡ್ರೋಮ್ (ಎಚ್‌ಸಿಪಿಎಸ್) ಕಂಡು ಬರುತ್ತದೆ. ಇದು ಶ್ವಾಸಕೋಶಕ್ಕೆ ಸಂಬಂಧಿಸಿದ ಗಂಭೀರ ಆರೋಗ್ಯ ಸಮಸ್ಯೆಯಾಗಿದ್ದು, ಇದರಲ್ಲಿ ಸಾವಿನ ಪ್ರಮಾಣ ಶೇ 50ರಷ್ಟಿದೆ. ಯುರೋಪ್ ಮತ್ತು ಏಷ್ಯಾ ಖಂಡಗಳಲ್ಲಿ ಹಂಟಾವೈರಸ್ ಹೆಮರಾಜಿಕ್ ಫೀವರ್ ವಿದ್ ರೀನಲ್ ಸಿಂಡ್ರೋಮ್ (ಎಚ್‌ಎಫ್‌ಆರ್‌ಎಸ್) ಎಂಬ ಕಾಯಿಲೆ ಕಾಣಿಸಿಕೊಳ್ಳುತ್ತದೆ. ಇದು ಮೂತ್ರಪಿಂಡ ವೈಫಲ್ಯಕ್ಕೂ ಕಾರಣವಾಗಬಹುದು.

ಸೋಂಕು ತಗುಲಿದವರಲ್ಲಿ ಒಂದು ವಾರದಿಂದ ಎಂಟು ವಾರಗಳ ನಡುವೆ ರೋಗ ಲಕ್ಷಣ ಕಾಣಿಸುತ್ತದೆ. ಇದಕ್ಕೆ ಔಷಧಿ ಇಲ್ಲ. ರೋಗ ಲಕ್ಷಣ ಆಧಾರದಲ್ಲಿ ಚಿಕಿತ್ಸೆ ನೀಡಲಾಗುತ್ತದೆ.

ಹಂಟಾವೈರಸ್ ಕಾರ್ಡಿಯೋಪಲ್ಮನರಿ ಸಿಂಡ್ರೋಮ್ (ಎಚ್‌ಸಿಪಿಎಸ್): ಸುಸ್ತು, ಜ್ವರ, ಬೆನ್ನು, ತೊಡೆ, ಪೃಷ್ಠದ ಸ್ನಾಯುಗಳಲ್ಲಿ ನೋವು, ತಲೆನೋವು, ತಲೆ ತಿರುಗುವುದು, ಚಳಿ, ವಾಂತಿ, ಭೇದಿ, ಹೊಟ್ಟೆ ನೋವು, ತೀವ್ರ ಕೆಮ್ಮು, ಉಸಿರಾಟದ ತೊಂದರೆ ಕಾಣಿಸುತ್ತದೆ.

ಹಂಟಾವೈರಸ್ ಹೆಮರಾಜಿಕ್ ಫೀವರ್ ವಿದ್ ರೀನಲ್ ಸಿಂಡ್ರೋಮ್: ಸಾಮಾನ್ಯ ರೋಗ ಲಕ್ಷಣಗಳು ಒಂದರಿಂದ ಎರಡು ವಾರಗಳಲ್ಲಿ ಗೋಚರಿಸುತ್ತವೆ. ಕೆಲವು ಬಾರಿ ಎರಡು ತಿಂಗಳಾದರೂ ಆಗಬಹುದು.

ತೀವ್ರ ತಲೆನೋವು, ಬೆನ್ನು ಮತ್ತು ಹೊಟ್ಟೆನೋವು, ಜ್ವರ/ತೀವ್ರ ಚಳಿ, ದೃಷ್ಟಿ ಮಂಜಾಗುವುದು, ವಾಕರಿಕೆ ಬರುವುದು, ಕಣ್ಣು ಕೆಂಪಾಗುವುದು ಅಥವಾ ಚರ್ಮದಲ್ಲಿ ಕೆಂಪು ಗುಳ್ಳೆಗಳು ಕಾಣಿಸಿಕೊಳ್ಳಬಹುದು. ನಂತರದಲ್ಲಿ ರಕ್ತದೊತ್ತಡದ ಕುಸಿತ, ರಕ್ತದ ಹರಿವಿನ ಕೊರತೆ, ಆಂತರಿಕ ರಕ್ತಸ್ರಾವ, ಕಿಡ್ನಿ ವೈಫಲ್ಯ ಸಂಭವಿಸಬಹುದು.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಕೋಚಿಂಗ್ ಶುಲ್ಕ ಕಟ್ಟಿದೆ

'ಪ್ರಜಾವಾಣಿ' ಪತ್ರಿಕೆಯು ನೀಡಿದ್ದ ವಿದ್ಯಾರ್ಥಿವೇತನದ ಹಣವನ್ನು ನೀಟ್ ಮತ್ತು ಸಿಇಟಿ ಕೋಚಿಂಗ್ ಹಾಗೂ ಅಗತ್ಯವಾಗಿ ಬೇಕಾಗಿದ್ದ ಪುಸ್ತಕಗಳ ಖರೀದಿಗೆ ಬಳಸಿಕೊಂಡೆ. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಈ ರೀತಿಯ ನೆರವು ನೀಡುವುದರಿಂದ ಅವರಲ್ಲಿ ಕಲಿಯುವ ಉತ್ಸಾಹ ಮೂಡುತ್ತದೆ. ಇಂತಹ ಕಾರ್ಯಗಳು ಇನ್ನಷ್ಟು ನಡೆಯಲಿ, ಇನ್ನಷ್ಟು ವಿದ್ಯಾರ್ಥಿಗಳಿಗೆ ಪತ್ರಿಕೆಯ ಸಹಾಯ ಸಿಗಲಿ.

ಫಾತಿಮಾತ್ ಶೈಮಾ ಎಸ್.ಎಂ, ಸುಳ್ಯ, ದಕ್ಷಿಣ ಕನ್ನಡ

ಶುಲ್ಕ ತುಂಬಲು ನೆರವಾಯಿತು

ಸ್ವಲ್ಪ ಸ್ವಲ್ಪ ಹಣ ಸೇರಿಸಿಕೊಂಡಿದ್ದ ನನಗೆ ಕಾಲೇಜಿನ ಶುಲ್ಕವನ್ನು ತುಂಬಲು ಕಷ್ಟವಾಗಿತ್ತು. ಆರ್ಥಿಕ ತೊಂದರೆಯಲ್ಲಿದ್ದ ವೇಳೆಯಲ್ಲಿ ದೊರೆತ 'ಪ್ರಜಾವಾಣಿ'ಯ ಸ್ಕಾಲರ್‌ಶಿಪ್ ಹಣವು ಕಾಲೇಜಿನ ಶುಲ್ಕ ತುಂಬಲು ಸಹಾಯವಾಯಿತು. ಬಡವಿದ್ಯಾರ್ಥಿಗಳ ಶಿಕ್ಷಣಕ್ಕೆ ಹಣಕಾಸಿನ ನೆರವು ನೀಡಿದ 'ಪ್ರಜಾವಾಣಿ'ಗೆ ಥ್ಯಾಂಕ್ಸ್.

ಸಂಜನಾ ಅಶೋಕ ಮೇಗುಂಡಿ, ತಡಸ, ಹಾವೇರಿ

ತಂದೆ ನಿಧನ: ಸಂಸದ ರಶೀದ್‌ಗೆ ಜಾಮೀನು

ರಶೀದ್

ನವದೆಹಲಿ (ಪಿಟಿಐ): ಭಯೋತ್ಪಾದನೆಗೆ ಹಣಕಾಸು ನೆರವು ನೀಡಿದ ಆರೋಪದಲ್ಲಿ ಜೈಲಿನಲ್ಲಿರುವ ಬಾರಾಮುಲ್ಲಾದ ಸಂಸದ ಶೇಖ್ ಅಬ್ದುಲ್ ರಶೀದ್ ಅಲಿಯಾಸ್ ಎಂಜಿನಿಯರ್ ರಶೀದ್ ಅವರಿಗೆ ದೆಹಲಿ ಹೈಕೋರ್ಟ್ ಸೋಮವಾರ ಮಧ್ಯಂತರ ಜಾಮೀನು ನೀಡಿದೆ.

ನ್ಯಾಯಮೂರ್ತಿಗಳಾದ ಪ್ರತಿಭಾ ಎಂ. ಸಿಂಗ್ ಮತ್ತು ಮಧು ಜೈನ್ ಅವರ ಪೀಠವು ರಶೀದ್ ಅವರ ತಂದೆಯ ಅಂತ್ಯಕ್ರಿಯೆಗಾಗಿ ಜೂನ್ 2ರವರೆಗೆ ಜಾಮೀನು ನೀಡಿದೆ.

ಜಾಮೀನು ಅವಧಿಯಲ್ಲಿ, ರಶೀದ್ ಅವರೊಂದಿಗೆ ನಾಗರಿಕ ದಿರಿಸಿನಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳು ಇರುತ್ತಾರೆ. ಅವರು ತಿಹಾರ್ ಜೈಲಿನಿಂದ ಹೊರಟು ಶ್ರೀನಗರದಿಂದ ಹಿಂದಿರುಗುವವರೆಗೆ ಅವರೊಂದಿಗೆ ಇರುತ್ತಾರೆ ಎಂದು ನ್ಯಾಯಪೀಠ ಹೇಳಿದೆ.

ರಶೀದ್ ಅವರು ಸ್ಮಶಾನ ಅಥವಾ ಇತರ ಯಾವುದೇ ಪ್ರಾರ್ಥನಾ ಸ್ಥಳಕ್ಕೆ ಭೇಟಿ ನೀಡಲು ಅನುಮತಿ ಇದೆ. ಆದರೆ, ಶ್ರೀನಗರ ಮತ್ತು ಲ್ಯಾಂಗೇಟ್‌ನಲ್ಲಿರುವ ಅವರ ನಿವಾಸದಿಂದ ಬೇರೆಡೆಗೆ ಹೋಗುವಂತಿಲ್ಲ ಎಂದು ಪೀಠ ಆದೇಶಿಸಿದೆ.

ಏಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತನ್ನ ತಂದೆ ಭಾನುವಾರ ಮತ್ತು ಸೋಮವಾರ ಮಧ್ಯರಾತ್ರಿ ನಿಧನರಾದರು ಎಂಬ ಆಧಾರದ ಮೇಲೆ ರಶೀದ್ ಅವರು ಮಧ್ಯಂತರ ಜಾಮೀನು ಕೋರಿದ್ದರು.

ಏಪ್ರಿಲ್ 28ರಂದು ಶ್ರೀನಗರದಲ್ಲಿರುವ ತನ್ನ ಅನಾರೋಗ್ಯಪೀಡಿತ ತಂದೆಯನ್ನು ಭೇಟಿ ಮಾಡಲು ನ್ಯಾಯಾಲಯವು ಅವರಿಗೆ ಒಂದು ವಾರದ ಮಧ್ಯಂತರ ಜಾಮೀನು ನೀಡಿತ್ತು. ನಂತರ ರಶೀದ್ ತಮ್ಮ ತಂದೆಯನ್ನು ಚಿಕಿತ್ಸೆಗಾಗಿ ಇಲ್ಲಿನ ಏಮ್ಸ್‌ಗೆ ಸ್ಥಳಾಂತರಿಸಿದ ನಂತರ ಈ ಅವಧಿಯನ್ನು ಮೇ 10ರವರೆಗೆ ವಿಸ್ತರಿಸಲಾಗಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷ ಗೆಲುವು ಸಾಧಿಸಿದ ಬೆನ್ನಲ್ಲೇ, ಸಾಮಾಜಿಕ ಜಾಲತಾಣಗಳಲ್ಲಿ ವಿಜಯ್‌ಗೆ ಸಂಬಂಧಿಸಿದ ನಾಲ್ಕು ಚಿತ್ರಗಳನ್ನು ಹಂಚಿಕೊಳ್ಳಲಾಗುತ್ತಿದೆ. ಅವು ವಿಜಯ್ ಅವರ ದೊಡ್ಡ ಕಟ್‌ಔಟ್‌ಗಳಿಗೆ ಹಾಲಿನ ಅಭಿಷೇಕ ಮಾಡುವ ಚಿತ್ರಗಳು. ಚುನಾವಣೆಯಲ್ಲಿ ಗೆದ್ದಿದ್ದಕ್ಕೆ ಅವರ ಅಭಿಮಾನಿಗಳು 2 ಲಕ್ಷ ಲೀಟರ್‌ಗಳಷ್ಟು ಹಾಲನ್ನು ಕಟ್‌ಔಟ್‌ಗಳಿಗೆ ಅಭಿಷೇಕ ಮಾಡುವ ಮೂಲಕ ಸಂಭ್ರಮಾಚರಣೆ ಮಾಡಿದ್ದಾರೆ ಎಂದು ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಪೋಸ್ಟ್‌ನಲ್ಲಿ ಪ್ರತಿಪಾದಿಸಿದಂತೆ ಸಂಭ್ರಮಾಚರಣೆ ಮಾಡಲಾಗಿದೆಯೇ ಎಂಬುದನ್ನು ತಿಳಿಯುವುದಕ್ಕಾಗಿ ಗೂಗಲ್‌ನಲ್ಲಿ ಹುಡುಕಾಡಿದಾಗ, ವಿಶ್ವಾಸಾರ್ಹ ಮಾಹಿತಿ ಎಲ್ಲೂ ಸಿಗಲಿಲ್ಲ. ಅನುಮಾನ ಬಂದು, ಚಿತ್ರಗಳನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿದಾಗ, ಚಿತ್ರಗಳ ಅಸಲಿತನದ ಬಗ್ಗೆ ಅನುಮಾನ ಬಂತು. ಒಂದು ಚಿತ್ರದಲ್ಲಿ ಹಿನ್ನೆಲೆಯಲ್ಲಿರುವ ಜನರ ಮುಖಗಳು ಬ್ಲರ್ ಆಗಿದ್ದವು. ಇನ್ನೊಂದು ಚಿತ್ರದಲ್ಲಿ ಕಟ್‌ಔಟ್‌ಗೆ ಹಾಲನ್ನು ಹಾಕಿದ ನಂತರ ವಿಜಯ್ ಅವರ ತಲೆಯ ಚಿತ್ರ ಬಿಳಿಯಾಗಿರುವುದು ಕಂಡುಬಂತು. ಹೈವ್, ಎಐ ಆರ್ ನಾಟ್, ಟ್ರುತ್ ಸ್ಕ್ಯಾನ್ ಸೇರಿದಂತೆ ವಿವಿಧ ಎಐ ಪತ್ತೆ ಟೂಲ್‌ಗಳನ್ನು ಬಳಸಿ ಚಿತ್ರಗಳನ್ನು ಪರಿಶೀಲಿಸಿದಾಗ, ಅದು ಡೀಪ್‌ಫೇಕ್ ಚಿತ್ರ ಎಂಬುದು ದೃಢಪಟ್ಟಿತು. ಎಐ ಮೂಲಕ ಸೃಷ್ಟಿಸಿದ ಚಿತ್ರಗಳನ್ನು ನಿಜ ಎಂಬಂತೆ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನಿಸ್ವಾರ್ಥ ಸೇವೆ

ನುಡಿ ಬೆಳಗು



ದೀಪಾ ಹಿರೇಗುತ್ತಿ

ಇತ್ತೀಚೆಗೆ ನಡೆದ ಪಶ್ಚಿಮ ಬಂಗಾಳದ ವಿಧಾನಸಭೆಯ ಚುನಾವಣೆಯಲ್ಲಿ ಗೆದ್ದ ಶಾಸಕರ ಪೈಕಿ ಒಬ್ಬರು ಬಾಬರ್ ಅಲಿ. ಜಗತ್ತಿನ ಅತಿ ಕಿರಿಯ ಹೆಡ್ ಮಾಸ್ಟರ್ ಎಂದು ತಮ್ಮ 16ನೇ ವಯಸ್ಸಿಗೇ ಬಿಬಿಸಿಯಿಂದ ಮನ್ನಣೆ ಪಡೆದಿರುವ ಬಾಬರ್ ಅಲಿಯವರ ಯಶೋಗಾಥೆ ಅಚ್ಚರಿ ಹುಟ್ಟಿಸುವಂಥದ್ದು. ಸಮಾಜದಲ್ಲಿ ಬದಲಾವಣೆ ತರಲು ಯಾರಿಂದಲೂ ಸಾಧ್ಯ; ಆದರೆ, ಅದಕ್ಕೆ ಮನಸ್ಸಿರಬೇಕಷ್ಟೇ ಎಂಬ ಸತ್ಯವನ್ನು ಸಾಬೀತುಪಡಿಸಿದ ವಿಶಿಷ್ಟ ವ್ಯಕ್ತಿ ಇವರು.

ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನ ಸಾಧಾರಣ ಕುಟುಂಬವೊಂದರ ಹುಡುಗ ಬಾಬರ್. ತಂದೆ ನಾಸಿರುದ್ದೀನ್ ನಿಜವಾದ ಧರ್ಮ ಎಂದರೆ ಶಿಕ್ಷಣ ಅನ್ನುವವರು. ಬಾಬರ್ ಒಂಬತ್ತು ವರ್ಷದ ಹುಡುಗನಾಗಿದ್ದಾಗ ಐದನೇ ತರಗತಿಗೆ ಹತ್ತು ಕಿಲೋಮೀಟರ್ ದೂರದ ಶಾಲೆಗೆ ಸೇರಿಸಿದರು ತಂದೆ. ಉಳಿದ ಮಕ್ಕಳಿಗೆ ಆ ಅನುಕೂಲ ಇರಲಿಲ್ಲ. ಹೀಗಾಗಿ ಶಿಕ್ಷಣದ ಮಹತ್ವ ಗೊತ್ತಿದ್ದ ಬಾಬರ್‌ಗೆ ತನ್ನ ಸ್ನೇಹಿತರು ಶಾಲೆಗೆ ಹೋಗುವುದನ್ನು ಬಿಟ್ಟು ಕೆಲಸಕ್ಕೆ ಹೋಗುವುದನ್ನು ನೋಡಲು ಬೇಸರವಾಗುತ್ತಿತ್ತು. ತಾನು ಶಾಲೆಯಲ್ಲಿ ಕಲಿತಿದ್ದನ್ನೇ ಇವರಿಗೇಕೆ ಕಲಿಸಬಾರದು ಎಂದೆನಿಸಿತು. ತಡ ಮಾಡದೇ ಶಾಲೆಯ ಆಟ ಆರಂಭಿಸಿದರು. ತಾವು ಹೋಗುತ್ತಿದ್ದ ಶಾಲೆಯ ಕೊಠಡಿಗಳಲ್ಲಿ ಬಿದ್ದಿದ್ದ ಮುರಿದ ಸೀಮೆ ಸುಣ್ಣವನ್ನು ಕೇಳಿ ತೆಗೆದುಕೊಂಡು ಬರುತ್ತಿದ್ದರು. ಬಾಬರ್ ಆರನೇ ತರಗತಿ ಓದುವಾಗ ಒಬ್ಬ ಶಿಕ್ಷಕ, ಬಾಬರ್ ಬೇರೆ ಮಕ್ಕಳಿಗೆ ಕಲಿಸಲು ಮುರಿದ ಸೀಮೆ ಸುಣ್ಣ ತೆಗೆದುಕೊಂಡು ಹೋಗುತ್ತಿರುವುದು ಎಂಬುದು ಗೊತ್ತಾಗಿ ಸೀಮೆಸುಣ್ಣದ ಡಬ್ಬಿಯನ್ನೇ ಕೊಟ್ಟಿದ್ದರು.

ಆಟವಾಗಿ ಆರಂಭವಾಗಿದ್ದು ಸಂಸ್ಥೆಯ ರೂಪ ತಾಳಿದ್ದು ಬಾಬರ್ ಅವರ ಹದಿನಾರನೇ ವಯಸ್ಸಿನಲ್ಲಿ. ಶಾಲೆಯ ಹೆಸರು ಆನಂದ್ ಶಿಕ್ಷಾ ನಿಕೇತನ್. ಮನೆಯ ಹಿತ್ತಿಲೇ ಶಾಲೆಯ ಕೋಣೆ. ಅಮ್ಮನ ಹಳೆಯ ಸೀರೆಯೇ ಮೇಲ್ಛಾವಣಿ. ಆದರೆ, ಮಕ್ಕಳನ್ನು ಶಾಲೆಗೆ ಕಳಿಸುವಂತೆ ಪಾಲಕರನ್ನು ಒಪ್ಪಿಸಲು ಬಹಳ ಕಷ್ಟಪಡಬೇಕಾಯಿತು ಬಾಬರ್. ಕಡುಬಡವರಾದ ಜನರಿಗೆ ಶಿಕ್ಷಣದ ಮಹತ್ವವೇ ಗೊತ್ತಿರಲಿಲ್ಲ. ಮಕ್ಕಳು ಶಾಲೆಗೆ ಹೋದರೆ ಅವರು ತರುವ ಕೂಲಿ ಹೋಗುತ್ತದಲ್ಲ ಅನ್ನುವ ಮನೋಭಾವ. ಹುಡುಗಿಯರು ಜಾಸ್ತಿ ಓದಿದರೆ ಗಂಡು ಸಿಗುವುದಿಲ್ಲ ಅನ್ನುವ ಭಯ. ಅವರನ್ನೆಲ್ಲ ಮನವೊಲಿಸಿ ಶಾಲೆಗೆ ಕರೆತಂದರು. ಈ ಮಕ್ಕಳು ತಮ್ಮ ಕೆಲಸ ಮುಗಿಸಿ ಸಂಜೆ ಶಾಲೆಗೆ ಬರಬಹುದಿತ್ತು.

ಒಮ್ಮೆ ಅಲ್ಲಿನ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಲು ಹೋದಾಗ ಹೆಡ್ ಮಾಸ್ಟರ್ ಎಂದು ಹಿರಿಯ ವ್ಯಕ್ತಿಯನ್ನು ನಿರೀಕ್ಷಿಸುತ್ತಿದ್ದ ಅವರು ಬಾಬರ್‌ರನ್ನು ನೋಡಿ ಅಚ್ಚರಿಪಟ್ಟರು. ಆಗ ಬಾಬರ್, 'ಸರ್ ಅದು ನಾನೇ, ಬೆಳಿಗ್ಗೆ ನಾನು ವಿದ್ಯಾರ್ಥಿ, ಸಂಜೆ ಶಿಕ್ಷಕ' ಅಂದರು. ಖುಷಿಪಟ್ಟ ಜಿಲ್ಲಾಧಿಕಾರಿ ಶಾಲೆಗೆ ಬಹಳಷ್ಟು ಸಹಾಯ ಮಾಡಿದರು. ಜತೆಗೆ ರಾಮಕೃಷ್ಣ ಮಿಶನ್, ಶಿಕ್ಷಕರು, ಐಎಎಸ್ ಅಧಿಕಾರಿಗಳು ಬೇರೆ ಬೇರೆ ರೀತಿಯ ಸಹಾಯ ಮಾಡಿದರು. ಬಾಬರ್ ಸಹಪಾಠಿಗಳು ಬಂದು ಪಾಠ ಮಾಡಿದರು. ಹತ್ತನೇ ತರಗತಿ ಮುಗಿಸಿದ ಬಾಬರ್‌ರನ್ನು ಸ್ವತಃ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳೇ ಸನ್ಮಾನಿಸಿದರು. ದೃಢ ನಿರ್ಧಾರವಿದ್ದರೆ ನಮ್ಮ ಸುತ್ತಲಿನ ವಾತಾವರಣವನ್ನು ನಾವೇ ಬದಲಾಯಿಸಬಹುದು ಎಂಬುದಕ್ಕೆ ಉದಾಹರಣೆಯಾದರು ಬಾಬರ್. ಇವತ್ತಿಗೂ ಅವರ ಶಾಲೆ ಉಚಿತವಾಗಿ ಬಡ ಮಕ್ಕಳಿಗೆ ಶಿಕ್ಷಣ ನೀಡುತ್ತಿದೆ.

ಬಾಲ್ಯದಿಂದಲೇ ಸಾವಿರಾರು ಮಕ್ಕಳಿಗೆ ಭರವಸೆಯ ಕಿರಣವಾಗಿದ್ದ ಪುಟ್ಟ ಹಳ್ಳಿಯ ಬಡ ಹುಡುಗ ಬಾಬರ್ ಅಲಿ ಇದೀಗ ಜನಪ್ರತಿನಿಧಿಯಾಗಿದ್ದಾರೆ. ಪ್ರತಿ ಮಗುವಿಗೂ ಶಿಕ್ಷಣ ನೀಡಬೇಕೆಂಬ ಅವರ ಕನಸು ನನಸಾಗಲಿ.

ಗುಂಡಣ್ಣ

ಪದಬಂಧ 6407

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಒಳ್ಳೆಯ ಮಾತಿದು (3)
3.ಹಾವಿನ ವಾಸಸ್ಥಾನ (2)
4.ಮೇಣವಿಟ್ಟುಕೊಂಡು ಹಂತಹಂತವಾಗಿ ಎನ್ನಿ! (3)
5.ತೆಳುವಾಗಿರುವ ಲೋಹದ ಹಾಳೆ (3)
6.ಅನೇಕ ಜನರ ಭೀಕರ ಕೊಲೆ (4)
8.ಸೆಟೆದು ಹೇಳಿರುವ ಸುಳ್ಳು ಉಲ್ಟಾ ಆಗಿದೆ (2)
10.ಹಿಸ್ಸೆಯು ಇಲ್ಲಿ ತಿರುವುಮುರುವಾಗಿದೆ (2)
13.ದ್ರವದಿಂದ ತುಂಬಿರುವುದು (4)
14.ಪಾಯಸವನ್ನು ನೆಕ್ಕುತ್ತಿರುವ ಕಾಗೆ (3)
15.ಹಳ್ಳಿಯವನ ಬಾಯಲ್ಲಿ ಗ್ರಹಚಾರ (3)
16.ದಿಟ್ಟತನದಿಂದ ನುಡಿದಿರುವ ಸತ್ಯ (2)
17.ಈತ ಚರ್ಮದ ಕೆಲಸಗಾರ (3)

ಮೇಲಿಂದ ಕೆಳಕ್ಕೆ
1.ಎಲ್ಲೆ ಮೀರಿ ಪ್ರವೇಶಿಸುವುದು (6)
2.ಕೆಲಸಕ್ಕೆ ಬಾರದ ಮಾತು (5)
3.ಎಳೆಯ ವಯಸ್ಸಿನವಳು (3)
5.ತಡವಾಗಿ ಕಾಣಿಸಿದ ಅಬ್ಬಿ (4)
7.ಸರಿಯಾದ ಕಾಲಕ್ಕಿಂತ ಮುಂಚೆ ಉಂಟಾಗುವ ಸಾವು (6)
9.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
11.ಈತ ಸಣ್ಣ ಪ್ರಾಂತ್ಯದ ಮುಖಂಡ (5)
12.ಕಟ ಕಟ ಶಬ್ದ ಮಾಡುವ ಬಾಗಿಲು (3)

6406ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರವಾಹ 4.ಸಮಾಚಾರ
6.ಜಾಗತಿಕ 8.ಖನಿಜ
10.ಹಣ್ಣು 11.ಭವ್ಯ
12.ಮಥಿಸು 14.ವಿರೇಚಕ
18.ಕಾಡತೂಸು 19.ರಹಸ್ಯ

ಮೇಲಿಂದ ಕೆಳಕ್ಕೆ:
1.ಪ್ರತಿಜ್ಞೆ 2.ಹಸನ್ಮುಖ
3.ಸಂಗತಿ 5.ರಜಾ
7.ಕರ್ತವ್ಯ 9.ಜನುಮ
10.ಹರವಿ 13.ಸುರಾಸುರ
15.ರೇಖಾಂಶ 16.ಕಕಾ
17.ಆಲಸ್ಯ

ಸುಡೊಕು 6790

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		1		7		6		2
		5	2		9			
2	8			1			9	1
	5		7		4	8		
				8		5		9
8	3	6						4
6				5		9		7
	7	8	1	3				
5		3		6		1		8

6789 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

19 ಮೇ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ತೃತೀಯ ಗಂ. 14-19 ನಕ್ಷತ್ರ: ಮೃಗಶಿರ ಗಂ. 8-42 ಯೋಗ: ಧೃತಿ ಗಂ. 17-49 ಕರಣ: ಗರ ಗಂ. 14-19, ವೃಷಭ ಮಾಸದ 04 ನೇ ದಿನ. ಮಳೆ ನಕ್ಷತ್ರ : ಕೃತ್ತಿಕ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-07 ಸೂರ್ಯಾಸ್ತ : 06-47 ,ಮುಸ್ಲಿಂ ದಿನಾಂಕ : 02 ದುಲ್ ಹಿಜ್ಜಾ ,ಅದೃಷ್ಟ ಸಂಖ್ಯೆ : 7, 1

ಮೇಷ: ಕೆಲವು ವಿಚಾರಗಳನ್ನು ತೀರ್ಮಾನಿಸುವ ಸಂದರ್ಭದಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ. ಪದವಿ ವಿದ್ಯಾರ್ಥಿಗಳಿಗೆ ಯಶಸ್ಸು ದೊರೆತು ಆನಂದವಿರುವುದು. ಹಣ್ಣು ಹೂ ವ್ಯಾಪಾರಸ್ಥರಿಗೆ ಲಾಭ ಇರುವುದು.

ವೃಷಭ: ಸಹೋದ್ಯೋಗಿಗಳಿಂದ ಉತ್ತಮ ಸಹಕಾರ ಪಡೆದುಕೊಳ್ಳು-ವಲ್ಲಿ ಯಶಸ್ವಿಯಾಗುವಿರಿ. ನೂತನ ವಾಹನ ಖರೀದಿಸಬೇಕೆಂಬ ಕನಸು ನನಸಾಗುವುದು. ಮನರಂಜನೆಗಿಂತ ಕೆಲಸದ ಬಗ್ಗೆ ಗಮನವಿರಲಿ.

ಮಿಥುನ: ಕೌಟುಂಬಿಕ ವಿಷಯಗಳತ್ತ, ಅದರಲ್ಲೂ ಮಡದಿಯ ಆರೋಗ್ಯದ ವಿಚಾರದಲ್ಲಿ ಗಮನಹರಿಸಬೇಕಾಗುವುದು. ಸಂಬಂಧಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದಲ್ಲಿ ಹೊಸ ಬದಲಾವಣೆಯ ಸೂಚನೆಯು ಸಿಗಲಿದೆ.

ಕರ್ಕಾಟಕ: ಧಾರ್ಮಿಕ ಮಾರ್ಗದರ್ಶಕರ ಸಹಾಯದಿಂದ ಬದುಕನ್ನು ಅರ್ಥ-ಪೂರ್ಣವಾಗಿಸುವ ಬಗ್ಗೆ ತಿಳಿದುಕೊಳ್ಳುವಿರಿ. ಸಂಬಂಧ ಮತ್ತು ಒಪ್ಪಂದಗಳತ್ತ ಗಮನ ನಿಶ್ಚಿತವಾಗಿ ತೆಗೆದುಕೊಳ್ಳಬೇಕಾಗಲಿದೆ.

ಸಿಂಹ: ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವವರಿಗೆ ಅವಕಾಶಗಳ ಜತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಚೈತನ್ಯವು ಮತ್ತು ಯೋಚನೆಗಳು ಮೂಡಿ ಬರಲಿವೆ. ವಿದ್ಯಾ ಕ್ಷೇತ್ರದವರಿಗೆ ಹೆಚ್ಚಿನ ಮನ್ನಣೆ, ಗೌರವ ದೊರಕಲಿದೆ.

ಕನ್ಯಾ: ಪರಿಶ್ರಮವಿಲ್ಲದೇ ಕೆಲಸ ದೊರೆತಿದ್ದಕ್ಕೆ ಸಂತಸವಿದ್ದು, ಹೊಸ ಸಂಸ್ಥೆಯಲ್ಲಿನ ಕೆಲಸಗಳು ಸುಲಭ ಮತ್ತು ಸಂತೋಷಮಯ ಎನಿಸುವುದು. ವ್ಯಾಪಾರ ವ್ಯವಹಾರಗಳಲ್ಲಿ ಆರೋಗ್ಯಕರ ಪೈಪೋಟಿ ನಡೆಸಲು ತೀರ್ಮಾನಿಸಿ.

ತುಲಾ: ಆಸ್ತಿಗೆ ಸಂಬಂಧಪಟ್ಟ ನಿರ್ಧಾರಗಳನ್ನು ಮನೆಯವರೊಂದಿಗೆ ಚರ್ಚಿಸಿ ಕೈಗೊಳ್ಳುವುದು ಉತ್ತಮ. ಲೆಕ್ಕಪತ್ರಗಳ ವ್ಯವಹಾರ ನೋಡುವವರಿಗೆ ಸಂದಿಗ್ಧ ಪರಿಸ್ಥಿತಿಗಳು ಎದುರಾಗಲಿವೆ. ಸಾಲ ಮಾಡಬೇಡಿ.

ವೃಶ್ಚಿಕ: ಹಣಕಾಸು ಪರಿಸ್ಥಿತಿ ಉತ್ತಮವಿರುವುದರಿಂದ ಆಸ್ತಿಕೊಳ್ಳುವ ಬಗ್ಗೆ ಹಿರಿಯರೊಂದಿಗೆ ಚರ್ಚಿಸುವಿರಿ. ಧೈರ್ಯಮಾಡಿ ಕಾರ್ಯೋನ್ಮುಖರಾದರೆ ಅಭಿವೃದ್ಧಿ ಹೊಂದುವಿರಿ. ಗೌರವಯುತ ಸ್ಥಾನಮಾನಗಳು ಸಿಗಲಿವೆ.

ಧನು: ಗುರು-ಹಿರಿಯರ ಮಾತುಗಳನ್ನು ಅಲ್ಲಗಳೆಯುವುದು ಅಥವಾ ಅವರಲ್ಲಿ ವಾದ-ವಿವಾದವನ್ನು ಬೆಳೆಸುವುದು ಸರಿಯಲ್ಲ. ಕಬ್ಬಿಣದ ವ್ಯವಹಾರದ ನಿರ್ವಹಣೆಗೆ ಸಾಲ ಮಾಡಬೇಕಾಗುವುದು. ಆರೋಗ್ಯವನ್ನು ನಿರ್ಲಕ್ಷಿಸದಿರಿ.

ಮಕರ: ಮಿತ್ರರೊಂದಿಗಿನ ಕಲಹ ಸಹನೆಯ ಪರೀಕ್ಷೆಯಾಗಿರುತ್ತದೆ. ವೃತ್ತಿಗೆ ಹೊರತಾದ ಕೆಲಸ ಮಾಡುವುದರಲ್ಲಿ ಆಸಕ್ತಿ ಹೆಚ್ಚಲಿದೆ. ಜವಾಬ್ದಾರಿ ಸ್ವೀಕರಿಸುವ ಮೊದಲು ನಿಭಾಯಿಸುವ ಬಗ್ಗೆ ಯೋಚಿಸಿಕೊಳ್ಳುವುದು ಉತ್ತಮ.

ಕುಂಭ: ಯೋಜನೆಯ ಬೆಳವಣಿಗೆಗೆ ಸಂಬಂಧಿಸಿದವರ ಜತೆ ಚರ್ಚೆ ನಡೆಸಿ ಬಾಕಿ ಇದ್ದ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ ಗಮನಹರಿಸಿ. ಬಿಡುವಿಲ್ಲದ ಕೆಲಸದಲ್ಲೂ ಮನಸ್ಸಿಗೆ ನೆಮ್ಮದಿ ಇರುವುದು ಆಶ್ಚರ್ಯವೆನಿಸಲಿದೆ.

ಮೀನ: ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳ ಲಕ್ಷಣಗಳು ಗಮನಕ್ಕೆ ಬಂದರೇ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದುಕೊಳ್ಳಿ. ಧಾರ್ಮಿಕತೆಯ ಫಲವಾಗಿ ಮನಸ್ಸು ನಕಾರಾತ್ಮಕ ಭಾವನೆಯಿಂದ ಹೊರ ಬರಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	23,643
ಇಂದಿನ ಅಂತ್ಯ:	23,649
ದಿನದ ಗರಿಷ್ಠ:	23,695
▲	6

ಮೊಟ್ಟೆ ಧಾರಣೆ (ಎನ್‌ಇಸಿಸಿ)	
ಬೆಂಗಳೂರು	
100 ಕ್ಕೆ	₹600
12 ಕ್ಕೆ	₹86
ಮೈಸೂರು: 100 ಕ್ಕೆ	₹610

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹256.50
ಆರ್‌ಎಸ್‌ಎಸ್-5	₹250
ಗುಡ್ ಲಾಟ್	₹217

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹388-689
ದ್ವಿತಳಿ (ಬಿ.ವಿ)	₹400-840

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1490 (1485)
ಸೂರ್ಯಕಾಂತಿ (ರಿಫೈನ್ಡ್)	₹1630 (1635)
ಪಾಮೋಲಿನ್	₹1480 (1475)

ಮುದ್ರಮನೆ ಕಾಫಿ (50 ಕೆಜಿಗೆ)	
ಎಪಿ	₹23000
ಎಸಿ	₹14000
ಆರ್‌ಪಿ	₹18050
ಆರ್‌ಸಿ	₹9650

ಬೆಂಗಳೂರಿನಲ್ಲಿ ಹಟ್ಟಿ ಚಿನ್ನದ ಗಣಿ ಕಂಪನಿ ಅಧ್ಯಕ್ಷ ಜೆ.ಟಿ.ಪಾಟೀಲ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಗೌರವಿಸಿದರು. ಈ ವೇಳೆ ಗೃಹ ಸಚಿವ ಜಿ.ಪರಮೇಶ್ವರ, ಕಂಪನಿಯ ವ್ಯವಸ್ಥಾಪಕ ನಿರ್ದೇಶಕಿ ಶಿಲ್ಪಾ ಹಾಜರಿದ್ದರು

ತೈಲ ದರ ಹೆಚ್ಚಳ, ತಗ್ಗಿದ ನಷ್ಟ

ಪೆಟ್ರೋಲ್, ಡೀಸೆಲ್ ಬೆಲೆಯನ್ನು ಹೆಚ್ಚಿಸಿದ ನಂತರ ಕಂಪನಿಗಳ ನಷ್ಟ ಇಳಿಕೆ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಲೀಟರಿಗೆ ತಲಾ ₹3ರಷ್ಟು ಹೆಚ್ಚಿಸಿದ ನಂತರ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳ ನಿತ್ಯದ ನಷ್ಟದ ಮೊತ್ತವು ₹750 ಕೋಟಿಗೆ ಇಳಿಕೆ ಆಗಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ತಿಳಿಸಿದ್ದಾರೆ.

ಕಚ್ಚಾ ತೈಲದ ಬೆಲೆಯು ಹೆಚ್ಚಿನ ಮಟ್ಟದಲ್ಲಿ ಇರುವುದು ಹಾಗೂ ರೂಪಾಯಿ ಮೌಲ್ಯವು ಕುಸಿಯುತ್ತಿರುವುದು ಪೆಟ್ರೋಲ್, ಡೀಸೆಲ್ ಮಾರಾಟವನ್ನು ನಷ್ಟದ ವಹಿವಾಟನ್ನಾಗಿ ಮಾಡಿವೆ. ದರ ಏರಿಕೆಗೂ ಮೊದಲು ಕಂಪನಿಗಳು ನಿತ್ಯ ₹1,000 ಕೋಟಿ ನಷ್ಟ ಅನುಭವಿಸುತ್ತಿದ್ದವು.

ಮುಖ್ಯಾಂಶಗಳು

- ದಿನವೊಂದಕ್ಕೆ ಈಗ ಕಂಪನಿಗಳಿಗೆ ₹750 ಕೋಟಿ ನಷ್ಟ
- ಬೆಲೆ ಏರಿಕೆಯಿಂದ ಹಣದುಬ್ಬರ ಹೆಚ್ಚಳ ಸಾಧ್ಯತೆ
- ರಷ್ಯಾದಿಂದ ಕಚ್ಚಾ ತೈಲ ಖರೀದಿ ಮುಂದುವರಿಕೆ

ತೈಲೋತ್ಪನ್ನಗಳ ಕಂಪನಿಗಳಿಗೆ ಆಗಿರುವ ನಷ್ಟವನ್ನು ಸರಿದೂಗಿಸಲು ಸರ್ಕಾರದ ಕಡೆಯಿಂದ ಹಣಕಾಸಿನ ನೆರವು ಒದಗಿಸುವ ಪ್ರಸ್ತಾವ ಈಗಿನ ಹಂತದಲ್ಲಿ ಇಲ್ಲ ಎಂದು ಸುಜಾತಾ ಅವರು ಸ್ಪಷ್ಟಪಡಿಸಿದ್ದಾರೆ.

> **ಭಾರತವು ಹಿಂದೆಯೂ ರಷ್ಯಾದಿಂದ ಕಚ್ಚಾ ತೈಲ ಖರೀದಿಸಿದೆ, ವಾಣಿಜ್ಯಕ ಅಂಶಗಳನ್ನು ಪರಿಗಣಿಸಿ ಮುಂದೆಯೂ ಖರೀದಿ ಮಾಡಲಿದೆ**
> **ಸುಜಾತಾ ಶರ್ಮಾ,** ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ

ಇಂಧನ ಬೆಲೆಯನ್ನು ಹೆಚ್ಚಿಸಿರುವ ಕ್ರಮವು ಬೇಡಿಕೆಯನ್ನು ತುಸು ತಗ್ಗಿಸಲಿದೆ, ಅದರಿಂದಾಗಿ ಆಮದು ಹೊರೆ ಒಂದಿಷ್ಟು ಕಡಿಮೆ ಆಗಲಿದೆ ಎಂದು ಡಿಬಿಎಸ್ ಬ್ಯಾಂಕ್‌ನ ಹಿರಿಯ ಅರ್ಥಶಾಸ್ತ್ರಜ್ಞೆ ರಾಧಿಕಾ ರಾವ್ ಹೇಳಿದ್ದಾರೆ. ಆದರೆ ಇಂಧನ ಬೆಲೆ ಏರಿಕೆಯ ಪರಿಣಾಮವಾಗಿ ಹಣದುಬ್ಬರ ಪ್ರಮಾಣವು ಶೇ 0.25ರವರೆಗೆ ಹೆಚ್ಚಬಹುದು ಎಂದು ಅಂದಾಜಿಸಿದ್ದಾರೆ.

ರಷ್ಯಾದಿಂದ ಖರೀದಿ ಅಬಾಧಿತ: ಅಮೆರಿಕದ ನಿರ್ಬಂಧಗಳು ಏನೇ ಇದ್ದರೂ ಭಾರತವು ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದು ಮುಂದುವರಿಯಲಿದೆ ಎಂದು ಸುಜಾತಾ ಅವರು ಹೇಳಿದ್ದಾರೆ.

ದೇಶದಲ್ಲಿ ಇಂಧನ ಪೂರೈಕೆ ಕೊರತೆ ಇಲ್ಲ. ದೀರ್ಘಾವಧಿ ಒಪ್ಪಂದಗಳ ಮೂಲಕ ಸಾಕಷ್ಟು ಕಚ್ಚಾ ತೈಲ ಆಮದಿಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ರಷ್ಯಾದಿಂದ ಕಚ್ಚಾ ತೈಲ ಖರೀದಿಗೆ ಅಮೆರಿಕವು ನಿರ್ಬಂಧಗಳನ್ನು ಸಡಿಲಗೊಳಿಸಿತ್ತು. ಅದು ಮೇ 16ಕ್ಕೆ ಕೊನೆಗೊಂಡಿದೆ. ನಿರ್ಬಂಧ ಸಡಿಲಿಕೆಯು ಮತ್ತೆ ವಿಸ್ತರಣೆ ಆಗಲಿದೆಯೇ ಎಂಬ ಬಗ್ಗೆ ಖಚಿತತೆ ಇಲ್ಲ.

ಮೇ ತಿಂಗಳಲ್ಲಿ ಭಾರತವು ರಷ್ಯಾದಿಂದ ಪ್ರತಿನಿತ್ಯ ಸರಾಸರಿ 19 ಲಕ್ಷ ಬ್ಯಾರಲ್ ಕಚ್ಚಾ ತೈಲವನ್ನು ಖರೀದಿಸುವ ಸಾಧ್ಯತೆ ಇದೆ ಎಂದು ದತ್ತಾಂಶ ನಿರ್ವಹಣಾ ಸಂಸ್ಥೆ ಕೆಪ್ಲರ್ ಅಂದಾಜು ಮಾಡಿದೆ. ಭಾರತವು ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ನಿಲ್ಲಿಸುವ ಸಾಧ್ಯತೆ ಸದ್ಯಕ್ಕೆ ಇಲ್ಲ ಎಂದು ಪರಿಣತರು ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿ 2 ನಿಮಿಷ

ಷೇರುಪೇಟೆಗೆ ಆಘಾತ ತಾಳಿಕೊಳ್ಳುವ ಶಕ್ತಿ ಇದೆ: ಪಾಂಡೆ

ಭುವನೇಶ್ವರ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ಕಾರಣದಿಂದಾಗಿ ದೇಶದ ಷೇರು ಮಾರುಕಟ್ಟೆಗಳಲ್ಲಿ ಅನಿಶ್ಚಿತತೆಯು ಬಹಳ ಹೆಚ್ಚಾಗಿದ್ದರೂ, 'ಭಿನ್ನ ಬಗೆಯ ಆಘಾತಗಳನ್ನು ತಾಳಿಕೊಳ್ಳುವ ಶಕ್ತಿಯು ಭಾರತದ ಮಾರುಕಟ್ಟೆಗಳಿಗೆ ಇದೆ' ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷ ತುಹಿನ್ ಕಾಂತ ಪಾಂಡೆ ಹೇಳಿದ್ದಾರೆ.

ಜಗತ್ತಿನ ಒಂದು ಕಡೆ ಬಿಕ್ಕಟ್ಟು ಸೃಷ್ಟಿಯಾದಾಗ ಅದು ಇತರ ಕಡೆಗಳಲ್ಲಿಯೂ ಪರಿಣಾಮ ಬೀರುತ್ತದೆ ಎಂದು ಅವರು ಸುದ್ದಿಗಾರರ ಬಳಿ ಹೇಳಿದ್ದಾರೆ. ಇಲ್ಲಿ ನಡೆದ, ಹೂಡಿಕೆದಾರರಲ್ಲಿ ಜಾಗೃತಿ ಮೂಡಿಸುವ ಉದ್ದೇಶದ ಪ್ರಾದೇಶಿಕ ಕಾರ್ಯಕ್ರಮದಲ್ಲಿ ಅವರು ಭಾಗಿಯಾಗಿದ್ದರು.

'ಯುದ್ಧದ ಕಾರಣದಿಂದಾಗಿ ಇಂಧನ ಪೂರೈಕೆಯ ಮೇಲೆ ಪರಿಣಾಮ ಉಂಟಾಗಿದೆ... ಭಾರತದ ಮಾರುಕಟ್ಟೆಗಳ ಅನುಕೂಲವೆಂದರೆ, ಬೇರೆ ಬೇರೆ ಬಗೆಯ ಆಘಾತಗಳನ್ನು ಇವು ತಾಳಿಕೊಳ್ಳಬಲ್ಲವು. ಬಿಕ್ಕಟ್ಟುಗಳು ಕೊನೆಗೊಂಡ ನಂತರದಲ್ಲಿ ಮಾರುಕಟ್ಟೆಗಳು ತಮ್ಮ ಎಂದಿನ ಚಲನೆಯನ್ನು ಮತ್ತೆ ಪಡೆಯಲಿವೆ' ಎಂದು ಪಾಂಡೆ ವಿವರಿಸಿದ್ದಾರೆ.

ಹಣಕಾಸು ಹಾಗೂ ಷೇರುಗಳಿಗೆ ಸಂಬಂಧಿಸಿದ ಸಲಹೆಗಳನ್ನು ನೀಡುವ 'ಫಿನ್‌ಫ್ಲುಯೆನ್ಸರ್'ಗಳು ಮೊದಲು ಸೆಬಿ ಬಳಿ ನೋಂದಾಯಿಸಿಕೊಳ್ಳಬೇಕು ಎಂದು ಸೂಚಿಸಿದ್ದಾರೆ.

'ಅಮೆಜಾನ್ ನೌ'ನಿಂದ 1 ಸಾವಿರ ಇ.ವಿ ಟ್ರಕ್ ನಿಯೋಜನೆ

ಬೆಂಗಳೂರು: 'ಅಮೆಜಾನ್ ನೌ' ಕಾರ್ಯಾಚರಣೆಗೆ ನೆರವಾಗಲು ದೇಶದಾದ್ಯಂತ 2028ರ ವೇಳೆಗೆ 1 ಸಾವಿರ ವೋಲ್ವೊ ಐಷರ್ ವಿದ್ಯುತ್ ಚಾಲಿತ (ಇ.ವಿ) ಟ್ರಕ್‌ಗಳನ್ನು ನಿಯೋಜಿಸಲು ನಿರ್ಧರಿಸಲಾಗಿದೆ. ಈ ಪೈಕಿ ಈಗಾಗಲೇ 50 ವಾಹನಗಳು ಕಾರ್ಯಾಚರಿಸುತ್ತಿವೆ ಎಂದು ಅಮೆಜಾನ್ ಇಂಡಿಯಾ ತಿಳಿಸಿದೆ.

ಈ ಟ್ರಕ್‌ಗಳು ಕಂಪನಿಯ ಸರಕುಗಳ ದಾಸ್ತಾನು ಮಳಿಗೆಗಳ (ಡಾರ್ಕ್‌ಸ್ಟೋರ್) ನಡುವೆ ಸಂಚರಿಸಲಿದ್ದು, ತ್ವರಿತವಾಗಿ ಗ್ರಾಹಕರಿಗೆ ಸರಕುಗಳನ್ನು ಪೂರೈಸಲು ನೆರವಾಗಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ಸೋಮವಾರ ತಿಳಿಸಿದೆ.

ದೆಹಲಿ-ಎನ್‌ಸಿಆರ್, ಬೆಂಗಳೂರು ಮತ್ತು ಮುಂಬೈನಲ್ಲಿ ಆರಂಭಿಕವಾಗಿ ಈ ಯೋಜನೆಯನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿದೆ. ದೇಶದ 100 ನಗರಗಳಲ್ಲಿ ಕ್ವಿಕ್ ಕಾಮರ್ಸ್ ಸೇವೆಯನ್ನು ವಿಸ್ತರಿಸಲಾಗುವುದು ಎಂದು ಕಂಪನಿ ಇತ್ತೀಚೆಗೆ ತಿಳಿಸಿತ್ತು. ಇದರ ಭಾಗವಾಗಿ ಈ ಘೋಷಣೆಯನ್ನು ಕಂಪನಿ ಮಾಡಿದೆ.

ಹಟ್ಟಿ: 1,700 ಕೆ.ಜಿ. ಚಿನ್ನ ಉತ್ಪಾದನೆ

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದ ಗಣಿ (ರಾಯಚೂರು ಜಿಲ್ಲೆ): ಇಲ್ಲಿನ ಚಿನ್ನದ ಗಣಿ ಕಂಪನಿಯು 2025-26ನೇ ಸಾಲಿನಲ್ಲಿ ಒಟ್ಟು 1,700 ಕೆ.ಜಿ ಚಿನ್ನ ಉತ್ಪಾದಿಸಿ, ₹1,910 ಕೋಟಿ ದಾಖಲೆಯ ವ್ಯವಹಾರ ನಡೆಸಿದೆ.

ಕಂಪನಿ ₹844 ಕೋಟಿ ನಿವ್ವಳ ಲಾಭ ಗಳಿಸಿದೆ. ಲಾಭದಲ್ಲಿ ₹436 ಕೋಟಿ ಏರಿಕೆಯಾಗಿದೆ.

ಕಂಪನಿಗೆ ಹೆಚ್ಚಿನ ಲಾಭ ಬಂದಿರುವ ಹಿನ್ನೆಲೆಯಲ್ಲಿ ಗಣಿ ಕಂಪನಿ ಅಧ್ಯಕ್ಷ ಜೆ.ಟಿ. ಪಾಟೀಲ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಚರ್ಚಿಸಿದ್ದಾರೆ.

ಈ ಸಂದರ್ಭದಲ್ಲಿ ಗೃಹ ಸಚಿವ ಜಿ. ಪರಮೇಶ್ವರ, ಗಣಿ ಕಂಪನಿ ವ್ಯವಸ್ಥಾಪಕ ನಿರ್ದೇಶಕಿ ಆರ್.ಶಿಲ್ಪಾ ಉಪಸ್ಥಿತರಿದ್ದರು.

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	30569-34029
ಕೋಕ	17099-33999
ಫ್ಯಾಕ್ಟರಿ	14509-28929
ಹಳೆಚಾಲಿ	46099-48399
ಹೊಸಚಾಲಿ	41089-46799
ಪುತ್ತೂರು	
ಕೋಕ	20000-34500
ಹೊಸತು	30000-47500
ಹಳತು	49000-55000
ಸಾಗರ	
ಬಿಳಿಗೋಟು	21919-35300
ಚಾಲಿ	32999-42899
ಕೋಕ	16969-34299
ಕೆಂಪುಗೋಟು	29919-40299
ರಾಶಿ	35989-55710
ಸಿಪ್ಪೆಗೋಟು	10259-22399
ಶಿವಮೊಗ್ಗ	
ಸರಕು	53109-97429
ಬೆಟ್ಟೆ	51009-65200
ರಾಶಿ	44199-54069
ಗೊರಬಲು	19030-40319
ಸಿದ್ದಾಪುರ	
ಬಿಳಿಗೋಟು	25089-36199
ಚಾಲಿ	39099-46500
ಕೋಕ	22699-32869
ಕೆಂಪುಗೋಟು	28689-36500
ರಾಶಿ	46469-52199
ತಟ್ಟಿಬೆಟ್ಟೆ	36300-44869
ಶಿರಸಿ	
ಬೆಟ್ಟೆ	34565-52909
ಬಿಳಿಗೋಟು	26219-37699
ಚಾಲಿ	44199-47981
ಕೆಂಪುಗೋಟು	15099-36299
ರಾಶಿ	51399-53199
ಯಲ್ಲಾಪುರ	
ಬಿಳಿಗೋಟು	17780-37316
ಚಾಲಿ	38066-47509
ಕೋಕ	16909-34899
ಕೆಂಪುಗೋಟು	16899-37800
ರಾಶಿ	49910-55709
ತಟ್ಟಿಬೆಟ್ಟೆ	38506-49699

ರೂಪಾಯಿ ಮೌಲ್ಯ 96.20ಕ್ಕೆ ಕುಸಿತ

ಮುಂಬೈ (ಪಿಟಿಐ): ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಸೋಮವಾರ ದಾಖಲೆಯ ಮಟ್ಟಕ್ಕೆ ಕುಸಿದಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ದಿನದ ವಹಿವಾಟಿನ ಅಂತ್ಯಕ್ಕೆ ರೂಪಾಯಿ ಮೌಲ್ಯವು 96.20ಕ್ಕೆ ಇಳಿಕೆ ಕಂಡಿದೆ.

ಕಚ್ಚಾ ತೈಲದ ಬೆಲೆ ಏರಿಕೆ ಹಾಗೂ ಡಾಲರ್ ಬಲವರ್ಧನೆಯು ರೂಪಾಯಿಯ ಕುಸಿತಕ್ಕೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ. ಸೋಮವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 39 ಪೈಸೆಯಷ್ಟು ಕುಸಿತ ಕಂಡಿದೆ.

ಡಿಶ್ ಟಿ.ವಿ: ಹೊಸ ಪ್ಯಾಕ್‌ಗಳ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಭಾರತದ ಗ್ರಾಹಕರಿಗಾಗಿ ಡಿಶ್ ಟಿವಿ ಇಂಡಿಯಾ ಹೊಸದಾಗಿ ಭಾಷೆ ಆಧರಿತ ಮನರಂಜನೆಯ ಪ್ಯಾಕ್‌ಗಳನ್ನು ಘೋಷಿಸಿದೆ. ಪ್ರಾದೇಶಿಕ ಭಾಷೆಗಳಿಗೆ ಆದ್ಯತೆ ನೀಡಿದ್ದು, ಹೊಸ ಕೊಡುಗೆಯು ಕೈಗೆಟುಕುವ ದರ, ನಿರಂತರ ಮನರಂಜನೆ ಹಾಗೂ ಸುಲಭ ವೀಕ್ಷಣೆಯ ಅನುಭವ ನೀಡಲಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿಶ್ ಟಿವಿ ಇಂಡಿಯಾದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಮನೋಜ್ ದೋಭಾಲ್, 'ತಿಂಗಳಿಗೆ ₹149ಕ್ಕೆ ಹೊಸ ಪ್ಯಾಕ್‌ಗಳು ಆರಂಭವಾಗಲಿದ್ದು, ಇದರಲ್ಲಿ ಮನರಂಜನೆ, ಸಿನಿಮಾ, ಪ್ರಾದೇಶಿಕ ಕಾರ್ಯಕ್ರಮಗಳು ಹಾಗೂ ಕ್ರೀಡಾ ಚಾನೆಲ್‌ಗಳು ಒಳಗೊಂಡಿವೆ. ಕನ್ನಡ, ತಮಿಳು, ತೆಲುಗು ಹಾಗೂ ಮಲೆಯಾಳ ಭಾಷೆಯ ಗ್ರಾಹಕರ ಅಭಿರುಚಿಯನ್ನು ಗಮನದಲ್ಲಿಟ್ಟುಕೊಂಡು ಈ ಪ್ಯಾಕ್ ಗಳನ್ನು ವಿನ್ಯಾಸಗೊಳಿಸಲಾಗಿದೆ' ಎಂದು ಮಾಹಿತಿ ನೀಡಿದರು.

> **ದಕ್ಷಿಣ ಭಾರತವು ನಮ್ಮ ಪ್ರಮುಖ ಮಾರುಕಟ್ಟೆಗಳಲ್ಲಿ ಒಂದಾಗಿದೆ. ಗ್ರಾಹಕರ ಭಾಷೆ ಹಾಗೂ ಮನರಂಜನೆಯ ಅಭಿರುಚಿಗೆ ತಕ್ಕಂತೆ ಗುಣಮಟ್ಟದ ಸೇವೆಯನ್ನು ಕಡಿಮೆ ದರದಲ್ಲಿ ನೀಡುವುದು ನಮ್ಮ ಉದ್ದೇಶ**
> **ಮನೋಜ್ ದೋಭಾಲ್,** ಸಿಇಒ, ಕಾರ್ಯನಿರ್ವಾಹಕ ನಿರ್ದೇಶಕ, ಡಿಶ್ ಟಿವಿ ಇಂಡಿಯಾ

'ಡಿಶ್ ಟಿವಿಯ ಮೂಲ ಪ್ಯಾಕ್‌ನಲ್ಲಿ 225ಕ್ಕೂ ಹೆಚ್ಚು ಚಾನೆಲ್‌ಗಳಿವೆ. ಕನ್ನಡ, ತೆಲುಗು ಮತ್ತು ಮಲೆಯಾಳ ಪ್ಯಾಕ್‌ಗಳಲ್ಲಿ ಪ್ರತಿ ಭಾಷೆಗೆ 30ಕ್ಕೂ ಹೆಚ್ಚು ಚಾನೆಲ್‌ಗಳನ್ನು ಸೇರಿಸಲಾಗಿದೆ. 36ಕ್ಕೂ ಹೆಚ್ಚು ತಮಿಳು ಚಾನೆಲ್‌ಗಳಿವೆ. ದೈನಂದಿನ ಧಾರಾವಾಹಿಗಳು, ಸಿನಿಮಾಗಳು, ಮನರಂಜನಾ ಕಾರ್ಯಕ್ರಮಗಳು ಹಾಗೂ ಕ್ರೀಡಾ ಚಾನೆಲ್‌ಗಳಿವೆ. ಗ್ರಾಹಕರಿಗೆ ತಮ್ಮ ಅಗತ್ಯಕ್ಕೆ ಅನುಗುಣವಾಗಿ ಪ್ಯಾಕ್‌ಗಳನ್ನು ಹೊಂದಾಣಿಕೆ ಮಾಡಿಕೊಳ್ಳುವ ಅವಕಾಶವಿದೆ' ಎಂದರು.

'ದಕ್ಷಿಣ ಭಾರತವು ದೇಶದ ಪ್ರಮುಖ ಟಿವಿ ಮಾರುಕಟ್ಟೆಗಳಲ್ಲಿ ಒಂದಾಗಿದೆ. ಇಲ್ಲಿ ಪ್ರಾದೇಶಿಕ ಭಾಷೆ, ಸಿನಿಮಾ ಮತ್ತು ಕುಟುಂಬ ವೀಕ್ಷಣೆಗೆ ಹೆಚ್ಚಿನ ಮಹತ್ವವಿದೆ. ಗ್ರಾಹಕರ ಬದಲಾಗುತ್ತಿರುವ ಅಗತ್ಯಗಳನ್ನು ಗಮನಿಸಿ ಡಿಶ್ ಟಿವಿ ತನ್ನ ಹೊಸ ಸೇವೆಯನ್ನು ಪರಿಚಯಿಸಿದೆ. ಜತೆಗೆ 'ಸ್ಪೋರ್ಟ್ಸ್ ಆಲ್ವೇಸ್ ಆನ್' ಎಂಬ ಕೊಡುಗೆ ಆರಂಭಿಸಿದೆ. ರಿಚಾರ್ಜ್ ವಿಳಂಬ ಅಥವಾ ತಾತ್ಕಾಲಿಕವಾಗಿ ಸೇವೆಯಲ್ಲಿ ವ್ಯತ್ಯಯವಾಗಿದ್ದರೂ ಪ್ರಮುಖ ಕ್ರೀಡಾ ಚಾನೆಲ್‌ಗಳನ್ನು ಮೂರು ತಿಂಗಳವರೆಗೆ ವೀಕ್ಷಿಸಬಹುದು' ಎಂದು ಮಾಹಿತಿ ನೀಡಿದರು.

ಡಿಶ್ ಟಿವಿಯ ಮುಖ್ಯ ಹಣಕಾಸು ಅಧಿಕಾರಿ ಸುಖ್‌ಪ್ರೀತ್ ಸಿಂಗ್ ಸುದ್ದಿಗೋಷ್ಠಿಯಲ್ಲಿದ್ದರು.

'ಜೂನ್ 1ರಿಂದ ಬೀದರ್-ಬೆಂಗಳೂರು ಮಧ್ಯೆ ವಿಮಾನ ಸೇವೆ'

ಪ್ರಜಾವಾಣಿ ವಾರ್ತೆ

ಬೀದರ್: ಬೀದರ್-ಬೆಂಗಳೂರು ನಡುವೆ ಸ್ಟಾರ್ ಏರ್ ಸಂಸ್ಥೆಯು ಜೂನ್ 1ರಿಂದ ವಿಮಾನ ಸೇವೆ ಆರಂಭಿಸಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ವಿಮಾನ ವೇಳಾಪಟ್ಟಿ ಪ್ರಕಾರ, ಬೆಂಗಳೂರಿನಿಂದ ಬೆಳಿಗ್ಗೆ 6.30ಕ್ಕೆ ಹೊರಡುವ ವಿಮಾನ 7.45ಕ್ಕೆ ಬೀದರ್ ತಲುಪಲಿದೆ. ಅದೇ ರೀತಿ ಬೀದರ್‌ನಿಂದ ಬೆಳಿಗ್ಗೆ 8.15ಕ್ಕೆ ಹೊರಡುವ ವಿಮಾನ 9.30ಕ್ಕೆ ಬೆಂಗಳೂರು ತಲುಪಲಿದೆ.

ಈ ಕಾರ್ಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಸಂಪುಟದ ಎಲ್ಲಾ ಸಹೋದ್ಯೋಗಿಗಳು, ಕೆಕೆಆರ್‌ಡಿಬಿ, ಸಂಬಂಧಿತ ಇಲಾಖೆಗಳ ಅಧಿಕಾರಿಗಳು ಸಹಕರಿಸಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

18-05-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಪಾಮ್ ವಾರದ ಡೆಲಿವರಿ	1478 (1473)
ಸೂರ್ಯಕಾಂತಿ ಎಣ್ಣೆ ಕಚ್ಚಾ	1530 (1530)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,58,100 (1,56,500)
ಬೆಳ್ಳಿ ಕೆ.ಜಿಗೆ	2,72,000 (2,64,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸಾಕಾನೆಗಳ ಕಾಳಗ: ಪ್ರವಾಸಿ ಮಹಿಳೆ ಸಾವು

ಒಂದನೇ ಪುಟದಿಂದ...

'ಆಗ ಆನೆಗಳ ಕಾದಾಟ ಶುರುವಾಯಿತು. ಆನೆಯು ನನ್ನ ಮತ್ತು ಪತ್ನಿಯ ಮೇಲೆ ಬಿದ್ದಿತ್ತು. ಮಗು ನನ್ನ ಕೈಯಲ್ಲಿತ್ತು. ನಾನು ಪಾರಾಗಿ ಹೊರಬಂದೆ. ಪತ್ನಿಗೆ ಬರಲಾಗಲಿಲ್ಲ. ನಾನೇ ಅವಳನ್ನು ಹೊರಗೆ ಎಳೆದೆ. ರಕ್ಷಣೆಗೆ ಯಾರೂ ಇರಲಿಲ್ಲ' ಎಂದರು.

ಪೋಸ್ ಕೊಡುವಾಗಲೇ ದಾಳಿ: 'ಕಾಡಾನೆಗಳ ಮಧ್ಯೆ ಜಗಳ ಉಂಟಾಗಿದೆ ಎಂಬುದು ನಮಗೆ ತಿಳಿದಿರಲಿಲ್ಲ. ನಾವು ಫೋಟೊಕ್ಕಾಗಿ ಪೋಸ್ ಕೊಡುತ್ತಿದ್ದೆವು. ಬೇರೆಯವರು ನಮ್ಮ ಫೋಟೊ ತೆಗೆಯುತ್ತಿದ್ದರು. ಆಗ ಏಕಾಏಕಿ ಬಂದ ಆನೆ ನಮ್ಮ ಪಕ್ಕದಲ್ಲಿದ್ದ ಆನೆಯ ಮೇಲೆ ದಾಳಿ ನಡೆಸಿತು' ಎಂದು ಅವರು ಕಣ್ಣೀರಿಟ್ಟರು.

ಮೃತರ ಕಣ್ಣುಗಳನ್ನು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ದಾನ ಮಾಡಲಾಯಿತು.

> **ಇದು ಯಾರೂ ಊಹಿಸದಂತಹ ಘಟನೆಯಾಗಿದ್ದು, ಈ ಬಗ್ಗೆ ಸಮಗ್ರ ತನಿಖೆ ನಡೆಸಿ, ಇಂತಹ ಅಚಾತುರ್ಯಗಳು ಆಗದಂತೆ ಕ್ರಮವಹಿಸಲು ಸೂಚಿಸಿರುವೆ**
> **ಈಶ್ವರ ಬಿ.ಖಂಡ್ರೆ,** ಅರಣ್ಯ ಸಚಿವ

ದಸರೆಯಲ್ಲಿ ಭಾಗಿಯಾಗಿದ್ದ ಕಂಜನ್

ದಾಳಿ ಎಸಗಿದ ಕಂಜನ್ ಆನೆಯು 2023ರಿಂದಲೂ ಮೈಸೂರು ದಸರೆಯಲ್ಲಿ ಭಾಗಿಯಾಗಿದ್ದ. 27 ವರ್ಷ ವಯಸ್ಸಿನ ಈ ಆನೆಯು ಈ ಹಿಂದೆ ಸಹ ಕೆಲವು ಆನೆಗಳ ಮೇಲೆ ದಾಳಿ ನಡೆಸಿ ಗಾಯಗೊಳಿಸಿದೆ. 2024ರಲ್ಲಿ ದಸರಾ ಮಹೋತ್ಸವಕ್ಕೆಂದು ಮೈಸೂರಿನ ಅರಮನೆ ಆವರಣದಲ್ಲಿದ್ದಾಗ ಧನಂಜಯ ಆನೆಯನ್ನು ಕಂಜನ್ ದಂತದಿಂದ ದೂಡಿಕೊಂಡು ಓಡಿಸಿಕೊಂಡು ಹೋಗಿದ್ದ. ಕಂಜನ್ ಓಡುವ ರಭಸಕ್ಕೆ ಮಾವುತ ಕೆಳಗೆ ಜಿಗಿದಿದ್ದರು. ನಂತರ, ಕಂಜನ್ ಅರಮನೆ ಗೇಟ್ ದೂಡಿ ರಸ್ತೆಗೂ ನುಗ್ಗಿ ಆತಂಕ ಸೃಷ್ಟಿಸಿತ್ತು. ನಂತರ ಮಾವುತ, ಕಾವಡಿಗಳು ನಿಯಂತ್ರಣಕ್ಕೆ ತಂದಿದ್ದರು. ದುಬಾರೆ ಶಿಬಿರಕ್ಕೆ ಬಂದ ನಂತರವೂ ಕಂಜನ್ ಆನೆ ಧನಂಜಯ ಆನೆಗೆ ದಂತದಿಂದ ತಿವಿದಿತ್ತು ಎಂದು ಮೂಲಗಳು ತಿಳಿಸಿವೆ.

'ಸೊಸೆ ಡ್ರಗ್ಸ್ ವ್ಯಸನಿಯಾಗಿದ್ದಳು'

ಭೋಪಾಲ್ ವರದಕ್ಷಿಣೆ ಪ್ರಕರಣ

ಭೂಪಾಲ್ (ಪಿಟಿಐ): 'ಸೊಸೆಯು ಮಾದಕ ವಸ್ತುವಿನ ವ್ಯಸನಿಯಾಗಿದ್ದಳು ಮತ್ತು ಆಕೆ ಮನೋವೈದ್ಯಕೀಯ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಳು' ಎಂದು ನಿವೃತ್ತ ನ್ಯಾಯಾಧೀಶರಾದ ಗಿರಿಬಾಲಾ ಸಿಂಗ್ ಅವರು ತಮ್ಮ ಮಗನ ಜಾಮೀನು ಅರ್ಜಿಯಲ್ಲಿ ಹೇಳಿದ್ದಾರೆ. ಈ ಜಾಮೀನು ಅರ್ಜಿಯನ್ನು ನ್ಯಾಯಾಲಯವೊಂದು ಸೋಮವಾರ ತಿರಸ್ಕರಿಸಿದೆ.

ತ್ವಿಶಾ ಎಂಬುವರು ತನ್ನ ಗಂಡನ ಮನೆಯಲ್ಲಿ ಮೇ 12ರಂದು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಈಕೆಯ ಕುಟುಂಬಸ್ಥರು, 'ನಮ್ಮ ಮಗಳ ಮೇಲೆ ವರದಕ್ಷಿಣೆ ಕಿರುಕುಳ ನೀಡಲಾಗುತ್ತಿತ್ತು. ಇದಕ್ಕಾಗಿಯೇ ಆಕೆಯನ್ನು ಕೊಲೆ ಮಾಡಲಾಗಿದೆ' ಎಂದು ಆರೋಪಿಸಿದ್ದಾರೆ. ತ್ವಿಶಾ ಅವರು 'ಮಿಸ್ ಪುಣೆ' ಕಿರೀಟ ಗಳಿಸಿದ್ದರು. ಜೊತೆಗೆ, ತೆಲುಗಿನ ಸಿನಿಮಾವೊಂದರಲ್ಲಿಯೂ ನಟಿಸಿದ್ದರು.

ತ್ವಿಶಾ ಅವರ ಪತಿ, ವಕೀಲ ಸಮರ್ಥ ಸಿಂಗ್ ಅವರು ತಲೆಮರೆಸಿಕೊಂಡಿದ್ದಾರೆ. ಗಿರಿಬಾಲಾ ಅವರಿಗೆ ಸ್ಥಳೀಯ ನ್ಯಾಯಾಲಯವು ಈಗಾಗಲೇ ನಿರೀಕ್ಷಣಾ ಜಾಮೀನು ನೀಡಿದೆ. ಈ ಪ್ರಕರಣದ ಸಂಬಂಧ ಮಧ್ಯ ಪ್ರದೇಶ ಸರ್ಕಾರವು ಎಸ್‌ಐಟಿ ರಚಿಸಿದ್ದು, ಸಮರ್ಥ್‌ಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಅರ್ಜಿಯಲ್ಲೇನಿದೆ?: 'ಆಕೆ ಮಾದಕ ವಸ್ತುವಿನ ವ್ಯಸನಿಯಾಗಿದ್ದಳು. ಮಾದಕ ವಸ್ತು ಸಿಗದಿದ್ದಾಗಲೆಲ್ಲ ಆಕೆಯ ಕೈಗಳು ನಡುಗುತ್ತಿದ್ದವು ಮತ್ತು ಕೆರಳುತ್ತಿದ್ದಳು. ಇದಕ್ಕಾಗಿ ಆಕೆ ಮನೋವೈದ್ಯಕೀಯ ಚಿಕಿತ್ಸೆ ಮತ್ತು ಆಪ್ತ ಸಮಾಲೋಚನೆ ಪಡೆದುಕೊಳ್ಳುತ್ತಿದ್ದಳು' ಎಂದು ಗಿರಿಬಾಲಾ ಅವರು ತಮ್ಮ ಮಗನಿಗೆ ಜಾಮೀನು ಕೋರಿರುವ ಅರ್ಜಿಯಲ್ಲಿ ಹೇಳಿದ್ದಾರೆ.

'ಏಪ್ರಿಲ್ 17ರಂದು ಆಕೆ ದೆಹಲಿಗೆ ತೆರಳಿದ್ದಳು. ಆ ಬಳಿಕ 12 ತಾಸುಗಳವರೆಗೆ ನಮಗೆ ಸಂಪರ್ಕಕ್ಕೆ ಸಿಗಲಿಲ್ಲ. ಮಾರನೇ ದಿನ ಆಕೆ ತನ್ನ ಪೋಷಕರ ಮನೆ ತಲುಪಿದ್ದಳು. ಆಕೆ ಗರ್ಭಿಣಿಯಾದ ಬಳಿಕ, ಅತ್ತೆ-ಮಾವನ ವಿಷಯದಲ್ಲಿ ವರ್ತನೆ ಬದಲಾಗಿತ್ತು. ಆಕೆ ಸಾಯುವ ದಿನ ಪತಿ ಆಕೆಯನ್ನು ಬ್ಯೂಟಿ ಪಾರ್ಲರ್‌ಗೆ ಕರೆದುಕೊಂಡು ಹೋಗಿದ್ದ' ಎಂದು ಹೇಳಲಾಗಿದೆ.

'ನಾವು ವರದಕ್ಷಿಣೆ ಕಿರುಕುಳ ನೀಡಿದ್ದೇವೆ ಎಂಬುದೆಲ್ಲಾ ಸುಳ್ಳು. ಆಕೆಗೆ ಅಗತ್ಯವಿದ್ದಾಗಲೆಲ್ಲ ಹಣ ನೀಡಿದ್ದೇವೆ. ₹5 ಸಾವಿರದಿಂದ ₹50 ಸಾವಿರದವರೆಗೂ ಹಣ ನೀಡಿದ್ದೇವೆ' ಎಂದು ಹೇಳಲಾಗಿದೆ. 2024ರಲ್ಲಿ ಡೇಟಿಂಗ್ ಆ್ಯಪ್ ಮೂಲಕ ಇಬ್ಬರ ಪರಿಚಯವಾಗಿತ್ತು. 2025ರ ಡಿಸೆಂಬರ್‌ನಲ್ಲಿ ಇಬ್ಬರು ಮದುವೆಯಾಗಿದ್ದರು.

ಇರಾನ್‌ನ ಪರಿಷ್ಕೃತ ಪ್ರಸ್ತಾವ ಸಲ್ಲಿಕೆ

ಕರಾಚಿ/ ದುಬೈ (ಎಎಫ್‌ಪಿ): ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗಾಗಿ ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನವು, ಯುದ್ಧದ ಅಂತ್ಯಕ್ಕೆ ಸಂಬಂಧಿಸಿದ ಇರಾನ್‌ನ ಪರಿಷ್ಕೃತ ಪ್ರಸ್ತಾವಗಳನ್ನು ಅಮೆರಿಕದ ಮುಂದಿಟ್ಟಿದೆ ಎಂದು ಪಾಕಿಸ್ತಾನದ ಮೂಲಗಳು ತಿಳಿಸಿವೆ.

ಬಳಿಕ ಇರಾನ್‌ನ ವಿದೇಶಾಂಗ ವ್ಯವಹಾರಗಳ ವಕ್ತಾರ ಇಸ್ಮಾಯಿಲ್ ಬಾಘೈ ಅವರು, 'ಇರಾನ್‌ನ ನಿಲುವುಗಳನ್ನು ಪಾಕಿಸ್ತಾನದ ಮೂಲಕ ಅಮೆರಿಕಕ್ಕೆ ತಲುಪಿಸಲಾಗಿದೆ' ಎಂದು ಖಚಿತಪಡಿಸಿದ್ದಾರೆ. ಆದರೆ ಹೆಚ್ಚಿನ ಮಾಹಿತಿಯನ್ನು ಅವರು ನೀಡಿಲ್ಲ. ಆರು ವಾರಗಳ ಯುದ್ಧದ ಬಳಿಕ ಇರಾನ್ ಮತ್ತು ಅಮೆರಿಕ ಮಧ್ಯೆ ಕದನ ವಿರಾಮ ಘೋಷಣೆಯಾಗಿದೆ. ಪಾಕಿಸ್ತಾನ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿರುವ ಮಾತುಕತೆಯು ಅರ್ಧಕ್ಕೆ ಮೊಟಕುಗೊಂಡಿದೆ.

ಸಾರಿಗೆ ಮುಷ್ಕರ ಸಂಭವ

ಒಂದನೇ ಪುಟದಿಂದ...

'ಮೇ 20ರಿಂದ ಮುಷ್ಕರ ನಡೆಸಲಾಗುವುದು ಎಂದು ಏಪ್ರಿಲ್ 29ಕ್ಕೆ ನೋಟಿಸ್ ನೀಡಿದ್ದೆವು. ಇಷ್ಟು ದಿನ ಮಾತುಕತೆಗೆ ಕರೆಯದೇ ಕೊನೇ ಕ್ಷಣದಲ್ಲಿ ಮುಷ್ಕರ ಕೈಬಿಡಿ ಎಂದರೆ ಕಷ್ಟ. ನಮಗೆ ಒಪ್ಪಿಗೆಯಾಗುವಂತೆ ಪರಿಷ್ಕರಣೆ ಮತ್ತು ಅನ್ವಯವಾಗುವ ದಿನಾಂಕ ನಿಗದಿ ಮಾಡಿದರೆ ಮುಷ್ಕರ ಕೈಬಿಡಲು ಸಿದ್ಧ' ಎಂದು ಕಾರ್ಮಿಕ ಮುಖಂಡರು ಹೇಳಿದರು.

'ಮುಖ್ಯಮಂತ್ರಿಯವರೊಂದಿಗೆ ಮಾತುಕತೆ ಏರ್ಪಡಿಸಿ. ಅವರು ಸಿಗದೇ ಇದ್ದರೆ ಸಾರಿಗೆ ಸಚಿವರು ದ್ವಿಪಕ್ಷೀಯ ಮಾತುಕತೆ ನಡೆಸಲಿ. ಮಂಗಳವಾರ ಮಧ್ಯರಾತ್ರಿವರೆಗೆ ಅವಕಾಶವಿದೆ. ಅದರ ಒಳಗೆ ಸರ್ಕಾರ ಮಾತುಕತೆ ಮೂಲಕ ಇತ್ಯರ್ಥ ಮಾಡಬಹುದು ಎಂದು ಕಾಯುತ್ತೇವೆ' ಎಂದು ಕಾರ್ಮಿಕ ಮುಖಂಡರು ತಿಳಿಸಿದ್ದಾರೆ.

'ಸಭೆ ಅಪೂರ್ಣಗೊಂಡಿದ್ದು, ಮೇ 25ಕ್ಕೆ ಮುಂದೂಡಲಾಗಿದೆ' ಎಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಮಿಕ ಇಲಾಖೆಯ ಹೆಚ್ಚುವರಿ ಆಯುಕ್ತ ಮಂಜುನಾಥ್ ಜಿ., ಜಂಟಿ ಆಯುಕ್ತ ರವಿಕುಮಾರ್, ನಾಲ್ಕು ನಿಗಮಗಳ ಅಧಿಕಾರಿಗಳು ಭಾಗವಹಿಸಿದ್ದರು. ಜಂಟಿ ಕ್ರಿಯಾ ಸಮಿತಿ ಪರವಾಗಿ ವಿಜಯ ಭಾಸ್ಕರ್ ಡಿ.ಎ., ಬಿ. ಜಯದೇವರಾಜೇ ಅರಸ್, ಎಚ್.ಡಿ. ರೇವಪ್ಪ, ಜಗದೀಶ್ ಎಚ್.ಆರ್. ಪಾಲ್ಗೊಂಡಿದ್ದರು.

ಮುಂಜಾಗರೂಕತಾ ಕ್ರಮ

ಮುಷ್ಕರ ಅವಧಿಯಲ್ಲಿ ಬಸ್ ಕಾರ್ಯಾಚರಣೆಯಲ್ಲಿ ವ್ಯತ್ಯಯವಾಗದಂತೆ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಅವರು ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕಾರ್ಯ ವ್ಯವಸ್ಥಾಪಕರು, ತರಬೇತಿ ಕೇಂದ್ರದ ಪ್ರಾಂಶುಪಾಲರಿಗೆ ಸೂಚನೆ ನೀಡಿದ್ದಾರೆ.

ಪೊಲೀಸ್ ಇಲಾಖೆ, ಸಾರಿಗೆ ಇಲಾಖೆ ಸಹಿತ ಸಂಬಂಧಪಟ್ಟ ಎಲ್ಲ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ. ಅಗತ್ಯ ಬಿದ್ದರೆ ಖಾಸಗಿ ಬಸ್‌ಗಳನ್ನೂ ಬಳಸಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಎಸ್‌ಸಿ-ಎಸ್‌ಟಿ ನೌಕರರ ಬೆಂಬಲವಿಲ್ಲ: ಕೆಎಸ್‌ಆರ್‌ಟಿಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ನೌಕರರ ಸಂಘವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯಿಂದ ಹೊರಬಂದಿದೆ. ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಫ್. ಎಚ್. ಜಕ್ಕಪ್ಪನವರ್ ಆದೇಶದ ಮೇರೆಗೆ ಮುಷ್ಕರದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಸಂಘದ ರಾಜ್ಯ ಕಾರ್ಯಾಧ್ಯಕ್ಷ ರವಿಪ್ರಕಾಶ್, ಪ್ರಧಾನ ಕಾರ್ಯದರ್ಶಿ ವೆಂಕಟರೇವಣಪ್ಪ ತಿಳಿಸಿದ್ದಾರೆ.

'ಅದಾನಿ' ಪ್ರಕರಣ ಇತ್ಯರ್ಥ

ನವದೆಹಲಿ/ನ್ಯೂಯಾರ್ಕ್ (ಪಿಟಿಐ): ಅದಾನಿ ಸಮೂಹವು ನಿರ್ಬಂಧಗಳನ್ನು ಉಲ್ಲಂಘಿಸಿದ್ದಕ್ಕೆ ಸಂಬಂಧಿಸಿದ ಪ್ರಕರಣವೊಂದನ್ನು ಅಮೆರಿಕದ ಖಜಾನೆ ಇಲಾಖೆಯ ವಿದೇಶಿ ಆಸ್ತಿಗಳ ನಿಯಂತ್ರಣ ಕಚೇರಿಯ (ಒಎಫ್‌ಎಸಿ) ಜೊತೆ ಇತ್ಯರ್ಥಪಡಿಸಿಕೊಂಡಿದೆ.

ನಿರ್ಬಂಧಗಳಿಗೆ ಗುರಿಯಾಗಿರುವ ಇರಾನ್‌ನ ಎಲ್‌ಪಿಜಿಯನ್ನು ಗುಜರಾತ್‌ನ ಮುಂದ್ರಾ ಬಂದರಿನ ಮೂಲಕ ಆಮದು ಮಾಡಿಕೊಂಡಿದ್ದು ಎನ್ನಲಾದ ಪ್ರಕರಣ ಇದಾಗಿದೆ.

ಒಎಫ್‌ಎಸಿ ಇರಾನ್ ಮೇಲೆ ವಿಧಿಸಿದ್ದ ನಿರ್ಬಂಧವನ್ನು ಉಲ್ಲಂಘಿಸಿದ್ದಕ್ಕಾಗಿ ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಕಂಪನಿಯು ಅಮೆರಿಕದ ಒಎಫ್‌ಎಸಿಗೆ 275 ಮಿಲಿಯನ್ ಡಾಲರ್ (₹2,648 ಕೋಟಿ) ಪಾವತಿಸಿ, ತನ್ನ ಮೇಲಿನ ಸಿವಿಲ್ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಿಕೊಂಡಿದೆ.

ಈ ಮೊತ್ತ ಪಾವತಿಸಿ ಪ್ರಕರಣ ಇತ್ಯರ್ಥಪಡಿಸಿಕೊಂಡಿರುವುದು ಕಂಪನಿಯು ತಪ್ಪು ಮಾಡಿದೆ ಎಂಬ ಅರ್ಥವನ್ನು ನೀಡುವುದಿಲ್ಲ ಎಂದು ಕಂಪನಿಯು ಷೇರುಪೇಟೆಗೆ ನೀಡಿರುವ ಮಾಹಿತಿಯಲ್ಲಿ ತಿಳಿಸಿದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹21500-29300
ಬೆಂಗಳೂರು	₹40000-46000
ತಿಪಟೂರು	₹30500-33200
ತುರುವೇಕೆರೆ	₹32200-32200

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸದಾ ನಿಮ್ಮನ್ನು ಸ್ಮರಿಸುವ
5ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಪಿ.ಎಂ.ಭದ್ರೇಗೌಡ್ರು
ಪರಪ್ಪನ ಅಗ್ರಹಾರ
ಜನನ: 15.05.1945 ನಿಧನ: 19.05.2021
ಸದಾ ನಿಮ್ಮನ್ನು ಸ್ಮರಿಸುವ ಹಾಗೂ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ.
ಪತ್ನಿ, ಮಕ್ಕಳು, ಸೊಸೆಯಂದಿರು, ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು ಮತ್ತು ಸ್ನೇಹಿತರು ಹಾಗೂ ಗ್ರಾಮಸ್ಥರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ಪ್ರವಾಸ
Travel

ಕೃಷ್ಣ ಹೆರಿಟೇಜ್ ಟೂರ್ಸ್ 13.06.2026 ಗೋವಾ ಗೋಕರ್ಣ ಮುರುಡೇಶ್ವರ ಕೊಲ್ಲೂರು ಊಟ, ಎಸಿ ಬಸ್ಸು, ಎಸಿ ರೂಮಿನೊಂದಿಗೆ 4 ದಿನಗಳು 8500/-. 08.07.2026 ರಾಮೇಶ್ವರ ಕನ್ಯಾಕುಮಾರಿ ಇತ್ಯಾದಿ 6ದಿನಗಳು 10000/-. 9448390735, 9449721678.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮುಂಗಾರು: ರಸಗೊಬ್ಬರ ಅಭಾವ

ಒಂದನೇ ಪುಟದಿಂದ...

ಲಕ್ಷಾಂತರ ರೈತರಿಗೆ ರಿಯಾಯಿತಿ ದರದಲ್ಲಿ ಬೀಜ, ಯಾಂತ್ರೀಕರಣ ಹಾಗೂ ಸೂಕ್ಷ್ಮ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಮುಂದಿನ ದಿನಗಳಲ್ಲಿ 'ಡಿಜಿಟಲ್ ಕೃಷಿ' ಮೂಲಕ ರೈತರ ಉತ್ಪಾದನಾ ವೆಚ್ಚ ತಗ್ಗಿಸಿ ಆದಾಯ ದುಪ್ಪಟ್ಟುಗೊಳಿಸಲು ಶ್ರಮಿಸಲಾಗುವುದು. ರೈತರ ಆತ್ಮಹತ್ಯೆ ತಡೆಗೂ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

'ವೈಜ್ಞಾನಿಕ ಮತ್ತು ಸಾವಯವ ಕೃಷಿ ಮಾಡುತ್ತಿರುವ ಯಾವ ರೈತರೂ ಆರ್ಥಿಕ ತೊಂದರೆಗೆ ಸಿಲುಕಿಲ್ಲ. ಇಂತಹ ಪ್ರಗತಿಪರ ರೈತರು ಪ್ರತಿ ಹಳ್ಳಿಯಲ್ಲೂ ಹೆಚ್ಚಾಗಬೇಕಿದೆ. ಕೃಷಿಯಲ್ಲಿನ ಇಂತಹ ಪದ್ಧತಿಗಳನ್ನು ಪ್ರತಿ ರೈತ ಕಲಿತು ಅಳವಡಿಸಿಕೊಳ್ಳುವ ಅಗತ್ಯವಿದೆ' ಎಂದು ಅಭಿಪ್ರಾಯಪಟ್ಟರು.

ಕೃಷಿ ಇಲಾಖೆ ನಿರ್ದೇಶಕ ಜಿ.ಟಿ.ಪುತ್ರ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ್, ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ ಉಪಸ್ಥಿತರಿದ್ದರು.

ಪರ್ಯಾಯ, ಪರಿಹಾರವೇನು?

'ನೀರಿನಲ್ಲಿ ಶೇಕಡ 100ರಷ್ಟು ಕರಗುವ ಗೊಬ್ಬರ, ಲಘು ಪೋಷಕಾಂಶಗಳು, ನ್ಯಾನೊ ಯೂರಿಯಾ, ನ್ಯಾನೊ ಡಿಪಿಎ ಹಾಗೂ ಸಾವಯವ ಗೊಬ್ಬರ ಬಳಸುವಂತೆ ಜಾಗೃತಿ ಮೂಡಿಸಲಾಗುತ್ತಿದೆ. ಮಣ್ಣು ಪರೀಕ್ಷೆ ಆಧಾರದ ಮೇರೆಗೆ ಅಗತ್ಯವಿರುವ ಹಾಗೂ ಶಿಫಾರಸು ಮಾಡಿದ ಪ್ರಮಾಣದಲ್ಲಿ ಮಾತ್ರ ಬಳಕೆ ಮಾಡುವಂತೆ ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ' ಎಂದು ಚಲುವರಾಯಸ್ವಾಮಿ ವಿವರಿಸಿದರು.

'ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಕೃಷಿ ಇಲಾಖೆ ಅಧಿಕಾರಿಗಳ ಸಭೆ ನಡೆಸಿ, ಪರ್ಯಾಯ ಗೊಬ್ಬರ ಬಳಸುವಂತೆ ರೈತರನ್ನು ಪ್ರೋತ್ಸಾಹಿಸುವಂತೆ ಸೂಚಿಸಲಾಗಿದೆ ಎಂದರು.

'ರಸಗೊಬ್ಬರಗಳ ಕೃತಕ ಅಭಾವ ಸೃಷ್ಟಿ, ಕಾಳಸಂತೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟ, ಅವಶ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಾರಾಟ, ಕೃಷಿಯೇತರ ಚಟುವಟಿಕೆಗಳಿಗೆ ಯೂರಿಯಾ ರಸಗೊಬ್ಬರ ಮಾರಾಟ ಮಾಡದಂತೆ ಮಾರಾಟಗಾರರಿಗೆ ಮನವರಿಕೆ ಮಾಡಲಾಗಿದೆ. ರೈತರಲ್ಲದವರು ಯೂರಿಯಾ ರಸಗೊಬ್ಬರ ಖರೀದಿ ನಿಯಂತ್ರಿಸಲು 'ಯೂರಿಯಾ ಡಿಸ್ಟ್ರಿಬ್ಯೂಷನ್ ಆ್ಯಪ್' ಅಭಿವೃದ್ಧಿಪಡಿಸಿ ವಿತರಣೆಗೆ ಕ್ರಮ ವಹಿಸಲಾಗಿದೆ. ಕೊರತೆ ನೀಗಿಸಲು ಪ್ರಸ್ತುತ ವಿವಿಧ ಗ್ರೇಡ್‌ನ 56,199 ಮೆಟ್ರಿಕ್ ಟನ್ ರಸಗೊಬ್ಬರ ಕಾಪು ದಾಸ್ತಾನು ಇದೆ' ಎಂದು ಮಾಹಿತಿ ನೀಡಿದರು.

₹70,000 ಕೋಟಿ ಸಬ್ಸಿಡಿ ಹೆಚ್ಚಳ?

ಒಂದನೇ ಪುಟದಿಂದ...

ಪ್ರಸಕ್ತ ಮುಂಗಾರು ಅವಧಿಗೆ ದೇಶಕ್ಕೆ 390 ಲಕ್ಷ ಟನ್ ರಸಗೊಬ್ಬರ ಅಗತ್ಯವಿದೆ. ಈ ಪೈಕಿ 200.9 ಲಕ್ಷ ಟನ್ ದಾಸ್ತಾನು ಇದೆ. ಉಳಿದ ಪ್ರಮಾಣವನ್ನು ಆಮದು ಮಾಡಿಕೊಳ್ಳಲಾಗುವುದು.

ದೇಶದಲ್ಲಿ ನಿತ್ಯ ಅಂದಾಜು 80 ಸಾವಿರ ಟನ್ ರಸಗೊಬ್ಬರ ಉತ್ಪಾದನೆ ಆಗುತ್ತಿದೆ. ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾದ ಬಳಿಕ ಇಲ್ಲಿಯವರೆಗೆ 86.2 ಲಕ್ಷ ಟನ್ ಉತ್ಪಾದನೆ ಆಗಿದೆ. ಕಳೆದ ವರ್ಷದ ಇದೇ ವೇಳೆ 93 ಲಕ್ಷ ಟನ್ ಉತ್ಪಾದನೆ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಉತ್ಪಾದನೆ ಇಳಿದಿದೆ. ಮುಂದಿನ ತಿಂಗಳುಗಳಲ್ಲಿ ಇದನ್ನು ಸರಿದೂಗಿಸಲಾಗುವುದು ಎಂದಿದ್ದಾರೆ.

ಯೂರಿಯಾ ತಯಾರಿಕಾ ಘಟಕಗಳಿಗೆ ಸಾಕಾಗುವಷ್ಟು ಅನಿಲ ಪೂರೈಕೆ ಇದೆ. ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಾಗಣೆಗೆ ಅಡ್ಡಿ ಉಂಟಾಗಿರುವುದರಿಂದ ಬೇರೆ ಮಾರ್ಗಗಳ ಮೂಲಕ ಆಮದು ಮಾಡಿಕೊಳ್ಳಲಾಗುತ್ತದೆ. 22 ಲಕ್ಷ ಟನ್‌ಗೂ ಅಧಿಕ ರಸಗೊಬ್ಬರವು ದೇಶದ ಬಂದರುಗಳಿಗೆ ಈಗಾಗಲೇ ಬಂದಿದೆ ಎಂದು ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾ, ಉಕ್ರೇನ್ ಬಿಕ್ಕಟ್ಟು ಇತ್ಯರ್ಥಕ್ಕೆ ಪ್ರಧಾನಿ ಮೋದಿ ಸಲಹೆ

'ಸೇನಾ ಕಾರ್ಯಾಚರಣೆಯಿಂದ ಶಾಂತಿ ಸಾಧ್ಯವಿಲ್ಲ'

ಒಸ್ಲೊ (ಪಿಟಿಐ): 'ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಇರಬಹುದು ಅಥವಾ ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧ ಇರಬಹುದು. ಸೇನಾ ಕಾರ್ಯಾಚರಣೆಗಳಿಂದ ಮಾತ್ರವೇ ಶಾಂತಿ ಪಡೆದುಕೊಳ್ಳುವುದು ಸಾಧ್ಯವಿಲ್ಲ. ಈ ಎರಡೂ ಯುದ್ಧಗಳು ಶೀಘ್ರದಲ್ಲಿಯೇ ಕೊನೆಗೊಳ್ಳಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ನಾರ್ವೆ ಪ್ರಧಾನಿ ಜೋನಸ್ ಗರ್ ಸ್ಟೋರ್ ಅವರೊಂದಿನ ದ್ವಿಪಕ್ಷೀಯ ಮಾತುಕತೆ ಬಳಿಕ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಪ್ರಧಾನಿ ಮೋದಿ ಮಾತನಾಡಿ, 'ಪಶ್ಚಿಮ ಏಷ್ಯಾ ಮತ್ತು ಉಕ್ರೇನ್ ಯುದ್ಧಗಳು ಶೀಘ್ರದಲ್ಲಿಯೇ ಕೊನೆಗೊಂಡು ಶಾಂತಿ ಸ್ಥಾಪಿಸಲು ನಡೆಸಲಾಗುವ ಎಲ್ಲಾ ಪ್ರಯತ್ನವನ್ನು ನಾವು (ಭಾರತ ಮತ್ತು ನಾರ್ವೆ) ಬೆಂಬಲಿಸುತ್ತೇವೆ' ಎಂದರು.

'ರಾಜತಾಂತ್ರಿಕ ವ್ಯವಸ್ಥೆಯಲ್ಲಿ ಭಾರತ ಮತ್ತು ನಾರ್ವೆ ನಂಬಿಕೆ ಇರಿಸಿದೆ. ಯಾವುದೇ ವಿಚಾರಕ್ಕಾದರೂ ಸರಿ, ಸೇನಾ ಕಾರ್ಯಾಚರಣೆಯಿಂದ ಮಾತ್ರವೇ ಪರಿಹಾರ ದೊರಕುವುದಿಲ್ಲ ಎನ್ನುವುದನ್ನು ನಾವು ಒಪ್ಪುತ್ತೇವೆ' ಎಂದರು.

'ಜಗತ್ತು ಈಗ ಅನಿಶ್ಚಿತತೆಯಿಂದ ಕೂಡಿದೆ. ಹೆಚ್ಚುತ್ತಿರುವ ಜಾಗತಿಕ ಸವಾಲುಗಳನ್ನು ಪರಿಹರಿಸಲು ಜಾಗತಿಕ ಸಂಸ್ಥೆಗಳಲ್ಲಿ ಸುಧಾರಣೆಯಾಗಬೇಕು. ಭಯೋತ್ಪಾದನೆಯನ್ನು ಬುಡದಿಂದಲೇ ಕಿತ್ತು ಹಾಕಬೇಕು ಎಂಬುವುದು ನಮ್ಮ (ಭಾರತ ಮತ್ತು ನಾರ್ವೆ) ಬದ್ಧತೆಯಾಗಿದೆ' ಎಂದು ಅಭಿಪ್ರಾಯಪಟ್ಟರು.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾರ್ವೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಗ್ರ್ಯಾಂಡ್ ಕ್ರಾಸ್ ಆಫ್ ದಿ ರಾಯಲ್ ನಾರ್ವೇಜಿಯನ್ ಆರ್ಡರ್ ಆಫ್ ಮೆರಿಟ್' ಅನ್ನು ನೀಡಿ ಗೌರವಿಸಲಾಯಿತು.

ನಾರ್ವೆಯ ಅತ್ಯುನ್ನತ ನಾಗರಿಕ ಗೌರವ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾರ್ವೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಗ್ರ್ಯಾಂಡ್ ಕ್ರಾಸ್ ಆಫ್ ದಿ ರಾಯಲ್ ನಾರ್ವೇಜಿಯನ್ ಆರ್ಡರ್ ಆಫ್ ಮೆರಿಟ್' ಅನ್ನು ನೀಡಿ ಗೌರವಿಸಲಾಗಿದೆ.

ಇದು ಪ್ರಧಾನಿ ಮೋದಿ ಅವರಿಗೆ ದೊರೆತ 32ನೇ ಅಂತರರಾಷ್ಟ್ರೀಯ ಗೌರವವಾಗಿದೆ. ಕಳೆದ 43 ವರ್ಷಗಳಲ್ಲಿ ಭಾರತೀಯ ಪ್ರಧಾನಿಯೊಬ್ಬರು ನಾರ್ವೆಗೆ ಮೊದಲ ಬಾರಿ ಭೇಟಿ ನೀಡಿದ್ದಾರೆ.

ಡ್ರೋನ್ ದಾಳಿಗೆ ಭಾರತ ಆತಂಕ (ನವದೆಹಲಿ ವರದಿ): ಯುಎಇಯ ಬರಕಾ ಪರಮಾಣು ವಿದ್ಯುತ್ ಸ್ಥಾವರವನ್ನು ಗುರಿಯಾಗಿಸಿ ನಡೆದ ದಾಳಿಯನ್ನು ಖಂಡಿಸಿರುವ ಭಾರತ, 'ಈ ದಾಳಿ ಪಶ್ಚಿಮ ಏಷ್ಯಾ ಸಂಘರ್ಷವನ್ನು ಮತ್ತಷ್ಟು ತೀವ್ರಗೊಳಿಸಲಿದೆ' ಎಂದು ಆತಂಕ ವ್ಯಕ್ತಪಡಿಸಿದೆ.

'ಈ ರೀತಿಯ ದಾಳಿಗಳು ಸ್ವೀಕಾರಾರ್ಹವಲ್ಲ. ಅವು ಹಾನಿ ಹೆಚ್ಚಳಕ್ಕೂ ಕಾರಣವಾಗಲಿವೆ' ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಇಲಾಖೆ ಹೇಳಿದೆ.

'ಹೊರ್ಮುಜ್ ನಿರ್ವಹಣೆಗೆ ಹೊಸ ಸಂಸ್ಥೆ'

ಟೆಹರಾನ್ (ಎಎಫ್‌ಪಿ): ಹೊರ್ಮುಜ್ ಜಲಸಂಧಿಯ ನಿರ್ವಹಣೆಗಾಗಿ ಹೊಸ ಸಂಸ್ಥೆ ಸ್ಥಾಪಿಸುವುದಾಗಿ ಇರಾನ್‌ನ ರಾಷ್ಟ್ರೀಯ ಉನ್ನತ ಭದ್ರತಾ ಮಂಡಳಿಯು ಘೋಷಿಸಿದೆ.

ಜಲಸಂಧಿ ಮೂಲಕ ಹಡಗುಗಳು ಸಂಚರಿಸಲು ಶುಲ್ಕ ವಿಧಿಸಲು ಇರಾನ್ ಬಯಸಿದ್ದು, ಏಪ್ರಿಲ್‌ನಿಂದಲೇ ಜಲಮಾರ್ಗದಲ್ಲಿನ ಸಂಚಾರಕ್ಕೆ ಶುಲ್ಕ ಸಂಗ್ರಹಿಸುತ್ತಿದೆ ಎನ್ನಲಾಗಿದೆ. ಹೊರ್ಮುಜ್‌ನಲ್ಲಿನ ಕಾರ್ಯಾಚರಣೆಗೆ ಸಂಬಂಧಿಸಿದ ಹೊಸ ಬೆಳವಣಿಗೆ ಇದು ಎಂದು ಉನ್ನತ ಮಂಡಳಿಯು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಉಲ್ಲೇಖಿಸಿದೆ. ಹೊಸ ಸಂಸ್ಥೆಯು ಯಾವ ರೀತಿ ಕಾರ್ಯಾಚರಿಸಲಿದೆ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ.

‘ಪ್ರಜಾವಾಣಿ ಸಿನಿ ಸಮ್ಮಾನ’ ಜೂನ್ 19ಕ್ಕೆ

4ನೇ ಆವೃತ್ತಿ

ಶೀಘ್ರದಲ್ಲೇ ನಾಮನಿರ್ದೇಶನ ಪ್ರಕಟ

ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಚಂದನವನದ ಪ್ರತಿಭೆಗಳನ್ನು ಗುರುತಿಸುವ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ನಾಲ್ಕನೇ ಆವೃತ್ತಿ ಸಮಾರಂಭ ಜೂನ್ 19ರಂದು ನಡೆಯಲಿದೆ.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕಿಂತಲೂ ಅಧಿಕ ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿದ್ದು, ತೀರ್ಪುಗಾರರು ನಾಮನಿರ್ದೇಶನಗಳನ್ನು ಅಂತಿಮಗೊಳಿಸಿದ್ದಾರೆ. ಇವುಗಳಿಗೆ ‘ಸಿನಿ ಸಮ್ಮಾನ’ದ ಮುಖ್ಯತೀರ್ಪುಗಾರರು ಅಂತಿಮ ಮುದ್ರೆ ಒತ್ತಲಿದ್ದಾರೆ.

ಮಾಸಾಂತ್ಯದೊಳಗೆ ನಾಮನಿರ್ದೇಶನಗಳು ಪ್ರಕಟವಾಗಲಿವೆ.

ನಾಮನಿರ್ದೇಶನಗಳ ಪೈಕಿ ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಜನರಿಂದ ಮತದಾನ ನಡೆಯಲಿದೆ. ಚಿತ್ರರಂಗದ ಪ್ರಮುಖ ಸಂಘ-ಸಂಸ್ಥೆಗಳ ಸದಸ್ಯರು ಮತದಾನದ ಮೂಲಕ ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಆಯ್ಕೆ ಮಾಡಲಿದ್ದಾರೆ.

ಸಿನಿ ಸಮ್ಮಾನದಲ್ಲಿ ‘ಪ್ರತಿಭಾನ್ವಿತ ಕಲಾವಿದರು’ ವಿಭಾಗದಲ್ಲಿ 15 ಪ್ರಶಸ್ತಿಗಳು, ‘ಜನಮೆಚ್ಚಿದ ವಿಭಾಗ’ದಲ್ಲಿ ನಾಲ್ಕು ಪ್ರಶಸ್ತಿಗಳು, ‘ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು’ ವಿಭಾಗದಲ್ಲಿ ನಾಲ್ಕು ಪ್ರಶಸ್ತಿಗಳು ಹಾಗೂ ‘ಜೀವಮಾನ ಸಾಧನೆ’ ಪುರಸ್ಕಾರ ಇರಲಿವೆ. ಜೊತೆಗೆ ಸಂಪಾದಕೀಯ ಆಯ್ಕೆ ವಿಭಾಗದಲ್ಲಿ ‘ಸಿನಿ ಧ್ರುವತಾರೆ’, ‘ನವತಾರೆ (ನಟ-ನಟಿ)’ ಹಾಗೂ ‘ವರ್ಷದ ಅತ್ಯುತ್ತಮ ಸಾಧನೆ’ ಎಂಬ ನಾಲ್ಕು ಪ್ರಶಸ್ತಿಗಳಿವೆ.

‘ಅತ್ಯುತ್ತಮ ನಟಿ’ ಪ್ರಶಸ್ತಿ ಪಡೆದವರು

ಫಹಾದ್

ಫಹಾದ್‌ಗೆ ಪ್ರೇಮ್ ಕುಮಾರ್ ನಿರ್ದೇಶನ

ವಿಜಯ್ ಸೇತುಪತಿ ನಟನೆಯ ಹಿಟ್ ಸಿನಿಮಾ ‘96’ ನಿರ್ದೇಶಿಸಿದ್ದ ಪ್ರೇಮ್ ಕುಮಾರ್ ಹಾಗೂ ಬಹುಭಾಷಾ ನಟ ಫಹಾದ್ ಫಾಸಿಲ್ ಕಾಂಬಿನೇಷನ್‌ನ ಹೊಸ ಸಿನಿಮಾದ ಚಿತ್ರೀಕರಣ ಆರಂಭವಾಗಿದೆ.

‘ಪುಷ್ಪ’ ಸರಣಿ., ‘ಆವೇಶಂ’, ‘ಮಾಮಣ್ಣನ್’, ‘ಮಾಲಿಕ್’, ‘ವಿಕ್ರಂ’, ‘ಧೂಮಂ’, ‘ಕುಂಬಳಂಗಿ ನೈಟ್ಸ್’ ಸೇರಿದಂತೆ ಹತ್ತಾರು ಸಿನಿಮಾಗಳಲ್ಲಿ ನಟಿಸಿರುವ ಫಾಸಿಲ್ ಸದ್ಯ ಮಲಯಾಳದ ಜೊತೆಗೆ ತಮಿಳು ಹಾಗೂ ತೆಲುಗು ಚಿತ್ರರಂಗದಲ್ಲಿ ಸಾಲು ಸಾಲು ಸಿನಿಮಾಗಳನ್ನು ಮಾಡುತ್ತಿದ್ದಾರೆ. ಫಹಾದ್ ಹೊಸ ಸಿನಿಮಾವನ್ನು ಡಾ.ಇಶಾರಿ ಕೆ.ಗಣೇಶ್ ನಿರ್ಮಾಣ ಮಾಡುತ್ತಿದ್ದು, ಗೋವಿಂದ್ ವಸಂತ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಮೋಹನ್ ಲಾಲ್ ಹಾಗೂ ಮಮ್ಮುಟ್ಟಿ ನಟನೆಯ ‘ಪೇಟ್ರಿಯಟ್’ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದ ಫಹಾದ್, ತೆಲುಗಿನಲ್ಲೂ ಹೊಸ ಸಿನಿಮಾವೊಂದನ್ನು ಒಪ್ಪಿಕೊಂಡಿದ್ದಾರೆ.

ನಿರ್ದೇಶನಕ್ಕಿಳಿದ ರಾಮ್ ಪೋತಿನೇನಿ

ತೆಲುಗಿನ ನಟ ರಾಮ್ ಪೋತಿನೇನಿ ನಟನೆಯ ಜೊತೆಗೆ ನಿರ್ದೇಶನಕ್ಕೆ ಇಳಿದಿದ್ದಾರೆ. ಅವರ ಜನ್ಮದಿನದಂದು ಹೊಸ ಸಿನಿಮಾ ಘೋಷಣೆಯಾಗಿದೆ.

ಇತ್ತೀಚೆಗಷ್ಟೇ ಬಿಡುಗಡೆಯಾಗಿದ್ದ ‘ಆಂಧ್ರ ಕಿಂಗ್ ತಾಲೂಕಾ’ ಸಿನಿಮಾಗೆ ಸಾಹಿತ್ಯ ಬರೆದಿದ್ದ ರಾಮ್ ಪೋತಿನೇನಿ, ಒಂದು ಹೆಜ್ಜೆ ಮುಂದಕ್ಕಿಟ್ಟು ನಿರ್ದೇಶನಕ್ಕೆ ಕೈಹಾಕಿದ್ದಾರೆ. ತಮ್ಮದೇ 23ನೇ ಚಿತ್ರಕ್ಕೆ ರಾಮ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ವೀರ ಪಾತ್ರದಲ್ಲಿ ರಾಮ್ ಪೋತಿನೇನಿ ನಟಿಸುತ್ತಿದ್ದು, ಜಾಕೆಟ್ ಧರಿಸಿ ಸ್ಟೈಲಿಷ್ ಆಗಿ ಅವರು ಕಾಣಿಸಿಕೊಂಡಿದ್ದಾರೆ. ಸಿನಿಮಾಗೆ ‘RAMO23’ ಎಂಬ ತಾತ್ಕಾಲಿಕ ಶೀರ್ಷಿಕೆ ಇಡಲಾಗಿದೆ.

ಸಿನಿಮಾದ ಚಿತ್ರೀಕರಣ ಜೂನ್‌ನಲ್ಲಿ ಆರಂಭವಾಗಲಿದ್ದು, ಡಿಸೆಂಬರ್‌ನಲ್ಲಿ ಚಿತ್ರ ಬಿಡುಗಡೆ ಮಾಡಲು ಯೋಜನೆ ಹಾಕಿಕೊಳ್ಳಲಾಗಿದೆ. ಇದೊಂದು ಸೈಕಲಾಜಿಕಲ್ ಥ್ರಿಲ್ಲರ್ ಸಿನಿಮಾವಾಗಿದ್ದು, ತಮ್ಮದೇ ರಾಪೋ ಸಿನಿಮ್ಯಾಟಿಕ್ಸ್‌ನಡಿ ನಿರ್ಮಾಣ ಮಾಡುತ್ತಿದ್ದಾರೆ ರಾಮ್. ತಾರಾಬಳಗ ಹಾಗೂ ತಾಂತ್ರಿಕ ವರ್ಗದ ಬಗ್ಗೆ ಶೀಘ್ರದಲ್ಲೇ ಮಾಹಿತಿ ನೀಡಲಾಗುವುದು ಎಂದು ತಿಳಿಸಿದ್ದಾರೆ.



ರಾಮ್ ಪೋತಿನೇನಿ

ಕೇರಳಂ: ಸತೀಶನ್ ಸಂಪುಟ ಅಸ್ತಿತ್ವಕ್ಕೆ

ಸಂಪುಟ ಸೇರಿದ 20 ಶಾಸಕರು

• ಖರ್ಗೆ, ರಾಹುಲ್, ಪ್ರಿಯಾಂಕಾ ಭಾಗಿ

ತಿರುವನಂತಪುರ (ಪಿಟಿಐ): ಕಾಂಗ್ರೆಸ್ ನಾಯಕ ವಿ.ಡಿ.ಸತೀಶನ್ ಅವರು ಕೇರಳಂ ಮುಖ್ಯಮಂತ್ರಿಯಾಗಿ ಸೋಮವಾರ ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಸೆಂಟ್ರಲ್ ಕ್ರೀಡಾಂಗಣದಲ್ಲಿ ಯುಡಿಎಫ್‌ನ ಸಹಸ್ರಾರು ಕಾರ್ಯಕರ್ತರ ಸಮ್ಮುಖದಲ್ಲಿ ನಡೆದ ಭವ್ಯ ಕಾರ್ಯಕ್ರಮದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ಅಧಿಕಾರದ ಗೋಪ್ಯತೆ ಬೋಧಿಸಿದರು.

ಸತೀಶನ್ ಅವರ ಬಳಿಕ 20 ಶಾಸಕರು ಸಂಪುಟದ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಿದರು.

ಸಂಪುಟ ಸೇರಿದವರಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರಾದ ರಮೇಶ್ ಚೆನ್ನಿತ್ತಲ, ಕೆ. ಮುರಳೀಧರನ್, ಎ.ಪಿ. ಅನಿಲ್ ಕುಮಾರ್, ಕೇರಳಂ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸಣ್ಣಿ ಜೋಸೆಫ್ ಸೇರಿದ್ದಾರೆ. ಅಲ್ಲದೆ ಐಯುಎಂಎಲ್‌ನ ಹಿರಿಯ ನಾಯಕರಾದ ಪಿ.ಕೆ. ಕುಂಞಾಲಿಕುಟ್ಟಿ, ಆರ್‌ಎಸ್‌ಪಿ ನಾಯಕ ಶಿಬು ಬೇಬಿ ಜಾನ್, ಕೇರಳಂ ಕಾಂಗ್ರೆಸ್ ನಾಯಕ ಮೋನ್ಸ್ ಜೋಸೆಫ್, ಅನೂಕ್ ಜೇಕಬ್ ಮತ್ತು ಸಿಎಂಪಿ ನಾಯಕ ಸಿ.ಪಿ. ಜಾನ್ ಅವರೂ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಹೊಸ ಸಚಿವ ಸಂಪುಟವು ಅನುಭವಿ ಮತ್ತು ಹೊಸ ನಾಯಕರ ಸಮ್ಮಿಲನವಾಗಿದೆ. ಪರವೂರು ಕ್ಷೇತ್ರದಿಂದ 2001ರಿಂದ ಆಯ್ಕೆ ಆಗುತ್ತಾ ಬಂದಿರುವ ಸತೀಶನ್ ಅವರು ಇದೇ ಮೊದಲ ಬಾರಿಗೆ ಸರ್ಕಾರಿ ಹುದ್ದೆ ಅಲಂಕರಿಸಿದ್ದಾರೆ. ಅವರೂ ಸೇರಿದಂತೆ ಸಂಪುಟದಲ್ಲಿ 14 ಹೊಸ ಮುಖಗಳಿವೆ. ಇಬ್ಬರು ಮಹಿಳೆಯರು, ಪರಿಶಿಷ್ಟ ಜಾತಿಗೆ ಸೇರಿದ ಇಬ್ಬರು ನಾಯಕರು, ಜೆಎನ್‌ಯು ಹಳೆ ವಿದ್ಯಾರ್ಥಿ ಹಾಗೂ 37 ವರ್ಷದ ಯುವ ಕಾಂಗ್ರೆಸ್ ನಾಯಕ ಸಹ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ.

> **ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅವಧಿಯಲ್ಲಿ ಕೇರಳಂ ನಿಜವಾದ ಪ್ರಗತಿ ಮತ್ತು ಅಭಿವೃದ್ಧಿಗೆ ಸಾಕ್ಷಿಯಾಗುತ್ತದೆ ಎಂಬ ವಿಶ್ವಾಸವಿದೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

> **ಕೇರಳದ ಪ್ರತಿಯೊಬ್ಬರ ಧ್ವನಿಯನ್ನು ವಿ.ಡಿ.ಸತೀಶನ್ ಮತ್ತು ಅವರ ಸಂಪುಟ ಪ್ರತಿನಿಧಿಸಲಿದ್ದು, ದಕ್ಷಿಣ ರಾಜ್ಯದಲ್ಲಿ ಕೆಲಸ ಈಗ ಪ್ರಾರಂಭವಾಗುತ್ತದೆ**
> **ರಾಹುಲ್ ಗಾಂಧಿ,** ಲೋಕಸಭೆಯ ವಿರೋಧ ಪಕ್ಷದ ನಾಯಕ

ಸಿಎಂಪಿ ನಾಯಕ ಜಾನ್, ಐಯುಎಂಎಲ್ ನಾಯಕರಾದ ಎನ್. ಶಂಸುದ್ದೀನ್, ಕೆ.ಎಂ.ಶಾಜಿ, ಪಿ.ಕೆ. ಬಶೀರ್, ಇ.ವಿ. ಅಬ್ದುಲ್ ಗಫೂರ್ ಕೂಡ ಮೊದಲ ಬಾರಿಗೆ ಸಂಪುಟ ಸೇರಿದ್ದಾರೆ. ಅಲ್ಲದೆ ಕಾಂಗ್ರೆಸ್ ನಾಯಕರಾದ ಪಿ.ಸಿ. ವಿಷ್ಣುನಾಥ್, ರೋಜಿ ಎಂ.ಜಾನ್, ಬಿಂದು ಕೃಷ್ಣ, ಟಿ. ಸಿದ್ದಿಕ್, ಕೆ.ಎ.ತುಳಸಿ ಮತ್ತು ಒ.ಜೆ. ಜನೀಶ್ ಕೂಡ ಮೊದಲ ಬಾರಿಗೆ ಸಚಿವರಾಗಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ, ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು, ಕೇರಳದ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಎಡಪಂಥೀಯ ನಾಯಕರು, ಬಿಜೆಪಿ ಪ್ರತಿನಿಧಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.

ಯುಡಿಎಫ್ ಕಾರ್ಯಕರ್ತರು ಮತ್ತು ಬೆಂಬಲಿಗರ ಹರ್ಷೋದ್ಗಾರಗಳ ನಡುವೆ ಪ್ರಮಾಣವಚನ ಸ್ವೀಕಾರ ಸಮಾರಂಭ ಅದ್ಧೂರಿಯಾಗಿ ನಡೆಯಿತು. ಕಾಂಗ್ರೆಸ್‌ನ 11, ಐಯುಎಂಎಲ್‌ನ ಐವರು ಮತ್ತು ಇತರ ಮಿತ್ರಪಕ್ಷಗಳ ತಲಾ ಒಬ್ಬರು ಸಚಿವ ಸ್ಥಾನಗಳನ್ನು ಪಡೆದಿದ್ದಾರೆ.

ಕಾಂಗ್ರೆಸ್ ನೇತೃತ್ವದ ಯುಡಿಎಫ್ 102 ಸ್ಥಾನಗಳನ್ನು ಗೆದ್ದು ಸರ್ಕಾರ ರಚಿಸಿದೆ.

ಕೇರಳಂ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರ ಜತೆ ನೂತನ ಮುಖ್ಯಮಂತ್ರಿ ವಿ.ಡಿ.ಸತೀಶನ್ ಮತ್ತು ಅವರ ಸಂಪುಟದ ಸದಸ್ಯರು – ಪಿಟಿಐ ಚಿತ್ರ

ಸಂಪುಟದಲ್ಲಿ ಎಂ.ಫಿಲ್ ಪದವೀಧರ

ಯುಡಿಎಫ್ ಸಂಪುಟದ ಯುವ ಮುಖಗಳಲ್ಲಿ ಒಬ್ಬರಾದ ರೋಜಿ ಎಂ. ಜಾನ್ (43) ಎಂ.ಫಿಲ್ ಪದವೀಧರರು. ಅವರು 2021ರಿಂದ ಅಂಗಮಾಲಿ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಎನ್‌ಎಸ್‌ಯುಐನ ಮಾಜಿ ಅಧ್ಯಕ್ಷರೂ ಆಗಿರುವ ಅವರು ಜೆಎನ್‌ಯು ಹಳೆ ವಿದ್ಯಾರ್ಥಿ.

ಒ.ಜೆ.ಜನೀಶ್ (37) ಅವರು ಸಂಪುಟ ಸೇರಿದ ಅತಿ ಕಿರಿಯ ಸಚಿವ. ಕಳೆದ ವರ್ಷವಷ್ಟೇ ಅವರು ಯುವ ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ಅವರು ತ್ರಿಶ್ಶೂರ್ ಜಿಲ್ಲೆಯ ಕೊಡುಂಗಲ್ಲೂರು ಕ್ಷೇತ್ರದ ಪ್ರತಿನಿಧಿ.

ಮಲಪ್ಪುರಂ ಜಿಲ್ಲೆಯ ಏರ್ನಾಡ್ ಕ್ಷೇತ್ರದ ಶಾಸಕ ಪಿ.ಕೆ.ಬಶೀರ್ (66) ಸಂಪುಟದಲ್ಲಿರುವ ಹಿರಿಯ ಸಚಿವ. ಅವರು ಐಯುಎಂಎಲ್ ನಾಯಕ ದಿವಂಗತ ಪಿ. ಸೀಥಿ ಹಾಜಿ ಅವರ ಮಗ.

ಬಿಂದು ಕೃಷ್ಣ ಮತ್ತು ಕೆ.ಎ.ತುಳಸಿ ಅವರು ಸಂಪುಟ ಸೇರಿದ ಇಬ್ಬರು ಮಹಿಳೆಯರು. ಬಿಂದು ಕೃಷ್ಣ (53) ಅವರು ಕೊಲ್ಲಂ ಕ್ಷೇತ್ರದಿಂದ ಆಯ್ಕೆಯಾಗಿದ್ದು, ಈಳವ ಸಮುದಾಯಕ್ಕೆ ಸೇರಿದವರು. ಮಹಿಳಾ ಕಾಂಗ್ರೆಸ್, ಎಐಸಿಸಿ, ಕೆಪಿಸಿಸಿಯಲ್ಲಿ ವಿವಿಧ ಹುದ್ದೆಗಳಲ್ಲಿ ಅವರು ಕಾರ್ಯನಿರ್ವಹಿಸಿದ್ದಾರೆ.

ಕೊಂಗಾಡ್ (ಎಸ್.ಸಿ) ಕ್ಷೇತ್ರದ ಪ್ರತಿನಿಧಿ ಕೆ.ಎ.ತುಳಸಿ (52) ಅವರು ಪಾಲಕ್ಕಾಡ್ ಸಂಸದ ವಿ.ಕೆ.ಶ್ರೀಕಂಠನ್ ಅವರ ಪತ್ನಿ. ತುಳಸಿ ಅವರು ಇತಿಹಾಸ ವಿಷಯದ ಮಾಜಿ ಪ್ರಾಧ್ಯಾಪಕಿಯಾಗಿದ್ದು, ಕೆಪಿಸಿಸಿಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದ ಶಾಸಕ ಎ.ಪಿ.ಅನಿಲ್ ಕುಮಾರ್ (61) ಅವರು ಸಂಪುಟ ಸೇರಿದ ಮತ್ತೊಬ್ಬ ದಲಿತ ನಾಯಕರಾಗಿದ್ದಾರೆ. ಅವರು ಮಲಪ್ಪುರಂ ವಂಡೂರಿನ ಶಾಸಕರು. ಅವರು ಉಮ್ಮನ್ ಚಾಂಡಿ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ.

ಹಂಗಾಮಿ ಸ್ಪೀಕರ್‌ಗೆ ಸುಧಾಕರನ್ ಹೆಸರು

ತಿರುವನಂತಪುರ (ಪಿಟಿಐ): ಹಿರಿಯ ಶಾಸಕ ಜಿ. ಸುಧಾಕರನ್ ಅವರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಿಸಲು ಕೇರಳಂನ ನೂತನ ಸಂಪುಟ ಶಿಫಾರಸು ಮಾಡಿದೆ.

ಶಾಸಕರ ಪ್ರಮಾಣವಚನ ಮತ್ತು ಸ್ಪೀಕರ್ ಆಯ್ಕೆಗಾಗಿ ವಿಧಾನಸಭೆ ಅಧಿವೇಶನ ಕರೆಯುವಂತೆ ರಾಜ್ಯಪಾಲರನ್ನು ಕೋರಲು ಸಂಪುಟ ಸಭೆ ನಿರ್ಧರಿಸಿತು ಎಂದು ಮುಖ್ಯಮಂತ್ರಿ ವಿ.ಡಿ.ಸತೀಶನ್ ಸೋಮವಾರ ತಿಳಿಸಿದರು.

ಇದೇ 21ರಂದು ಶಾಸಕರ ಪ್ರಮಾಣವಚನ ಮತ್ತು ಇದೇ 22ರಂದು ಸ್ಪೀಕರ್ ಆಯ್ಕೆ ಮಾಡುವ ಉದ್ದೇಶವನ್ನು ಸರ್ಕಾರ ಹೊಂದಿದೆ.

ಬಂಗಾಳ: ಭ್ರಷ್ಟಾಚಾರ ತನಿಖೆಗೆ ಸಮಿತಿ

ಟಿಎಂಸಿ ಅವಧಿಯ ಪ್ರಕರಣಗಳ ತನಿಖೆ: ಸಿ.ಎಂ ಸುವೇಂದು

ಕೋಲ್ಕತ್ತ (ಪಿಟಿಐ): ಟಿಎಂಸಿ ಅವಧಿಯಲ್ಲಿ ನಡೆದ ಸಾಂಸ್ಥಿಕ ಭ್ರಷ್ಟಾಚಾರ ಮತ್ತು ಮಹಿಳೆಯರು, ಬಾಲಕಿಯರ ವಿರುದ್ಧದ ದೌರ್ಜನ್ಯ ಪ್ರಕರಣಗಳ ತನಿಖೆಗಾಗಿ ಎರಡು ಸಮಿತಿ ರಚನೆಗೆ ಸರ್ಕಾರ ಅನುಮೋದನೆ ನೀಡಿದೆ.

ಸುವೇಂದು ಅಧಿಕಾರಿ

ಕಲ್ಕತ್ತ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳು ಸಮಿತಿಗಳ ನೇತೃತ್ವ ವಹಿಸಲಿದ್ದಾರೆ. ಜೂನ್ 1ರಿಂದ ಅವರು ಕಾರ್ಯಪ್ರವೃತ್ತರಾಗಲಿದ್ದಾರೆ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ತಿಳಿಸಿದರು.

ಚುನಾವಣಾ ಪ್ರಚಾರದ ಸಂದರ್ಭದಲ್ಲಿ ನೀಡಿದ ವಾಗ್ದಾನವನ್ನು ಈಡೇರಿಸುವ ಬದ್ಧತೆ ಹಾಗೂ ಸಾರ್ವಜನಿಕ ಹಿತಾಸಕ್ತಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ನಿವೃತ್ತ ನ್ಯಾಯಮೂರ್ತಿ ವಿಶ್ವಜಿತ್ ಬಸು ಅವರು ಸಾಂಸ್ಥಿಕ ಭ್ರಷ್ಟಾಚಾರ ಪ್ರಕರಣಗಳ ತನಿಖೆಗಾಗಿ ರಚನೆಯಾದ ಸಮಿತಿಯ ನೇತೃತ್ವ ವಹಿಸಲಿದ್ದಾರೆ. ಐಪಿಎಸ್ ಅಧಿಕಾರಿ ಜಯರಾಮನ್ ಅವರು ಸದಸ್ಯರಾಗಿರಲಿದ್ದಾರೆ. ಕೇಂದ್ರ ಮತ್ತು ರಾಜ್ಯ ಕಲ್ಯಾಣ ಕಾರ್ಯಕ್ರಮಗಳು, ಸಾರ್ವಜನಿಕ ಕಾಮಗಾರಿಗಳಲ್ಲಿನ ಅವ್ಯವಹಾರಗಳ ಬಗ್ಗೆ ಸಮಿತಿ ತನಿಖೆ ನಡೆಸಲಿದೆ ಎಂದು ತಿಳಿಸಿದರು.

ನಿವೃತ್ತ ನ್ಯಾಯಮೂರ್ತಿ ಸಮಾಪ್ತಿ ಚಟರ್ಜಿ ಅವರು ಮತ್ತೊಂದು ಸಮಿತಿಯ ನೇತೃತ್ವ ವಹಿಸಲಿದ್ದಾರೆ. ಐಪಿಎಸ್ ಅಧಿಕಾರಿ ದಮಯಂತಿ ಸೇನ್ ಅವರು ಸದಸ್ಯ ಕಾರ್ಯದರ್ಶಿಯಾಗಿ ಇರಲಿದ್ದಾರೆ. ರಾಜ್ಯದಲ್ಲಿ ಹಲವು ವರ್ಷಗಳಿಂದ ಮಹಿಳೆಯರು ಮತ್ತು ಮಕ್ಕಳ ಮೇಲಾಗುತ್ತಿರುವ ದೌರ್ಜನ್ಯದ ಬಗ್ಗೆ ಇದು ತನಿಖೆ ನಡೆಸಲಿದೆ ಎಂದು ಹೇಳಿದರು.

‘ಸಮಿತಿಯ ಸದಸ್ಯರು ಪೊಲೀಸ್ ಠಾಣೆಗಳು, ಜಿಲ್ಲೆಗಳಿಗೆ ಭೇಟಿ ನೀಡಲಿದ್ದಾರೆ, ಹೇಳಿಕೆಗಳನ್ನು ದಾಖಲಿಸಿಕೊಳ್ಳಲಿದ್ದಾರೆ. ಸ್ಥಳೀಯ ಮಟ್ಟದಲ್ಲಿ ಸಾರ್ವಜನಿಕರಿಂದಲೂ ಅಹವಾಲು ಸ್ವೀಕರಿಸಲಿದ್ದಾರೆ’ ಎಂದು ತಿಳಿಸಿದರು.

ಸುವೇಂದು ಆಪ್ತನ ಹತ್ಯೆ: ಆರೋಪಿ ಸೆರೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಆಪ್ತ ಚಂದ್ರಕಾಂತ್ ರಥ್ ಅವರ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಎನ್ನಲಾದ ರಾಜ್‌ಕುಮಾರ್ ಸಿಂಗ್ ಅಲಿಯಾಸ್ ರಾಜ್‌ಸಿಂಗ್ ಅವರನ್ನು ಸಿಬಿಐ ಸೋಮವಾರ ಬಂಧಿಸಿದೆ.

ಉತ್ತರ ಪ್ರದೇಶದ ಮುಜಫರ್‌ನಗರದಲ್ಲಿ ಸಿಬಿಐ ತಂಡ ರಾಜ್ ಸಿಂಗ್ ಅವರನ್ನು ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಧಾನಸಭೆ ಚುನಾವಣಾ ಫಲಿತಾಂಶ ಪ್ರಕಟಗೊಂಡ ಎರಡು ದಿನಗಳ ನಂತರ ಮೇ 6ರಂದು ಮಧ್ಯಮ್‌ಗ್ರಾಮ್‌ನಲ್ಲಿ ರಥ್ ಅವರನ್ನು ಗುಂಡಿಟ್ಟು ಹತ್ಯೆ ಮಾಡಲಾಗಿತ್ತು.

ಟಿಎಂಸಿ ಶಾಸಕನ ಪುತ್ರನ ಬಂಧನ

ಬಂದೂಕುಗಳನ್ನು ಹೊಂದಿದ್ದ ಆರೋಪದ ಮೇಲೆ ಟಿಎಂಸಿ ಶಾಸಕ ದಿಲೀಪ್ ಮಂಡಲ್ ಅವರ ಪುತ್ರ ಮತ್ತು ಇತರ ಐವರನ್ನು ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳ ಮತ್ತು ಡೈಮಂಡ್ ಹಾರ್ಬರ್ ಜಿಲ್ಲಾ ಪೊಲೀಸ್ ಇಲಾಖೆ ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಭಾನುವಾರ ರಾತ್ರಿ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅರ್ಘ್ಯ ಮಂಡಲ್ ಮತ್ತು ಇತರರ ಬಳಿ ಇದ್ದ ಆರು ಪಿಸ್ತೂಲ್ ಮತ್ತು ಆರು ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಶಾಸಕ ದಿಲೀಪ್ ಮಂಡಲ್ ಸದ್ಯ ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ಕಾರ್ಯಾಚರಣೆ ಆರಂಭಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರು ಮತ್ತು ಬೆಂಬಲಿಗರಿಗೆ ಬೆದರಿಕೆ ಹಾಕಿದ ಆರೋಪ ಸಹ ಅರ್ಘ್ಯ ಮೇಲಿದೆ.

ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಲ್ಲೆ: ಮರು ತನಿಖೆಗೆ ಎಸ್‌ಐಟಿ

ತಿರುವನಂತಪುರ (ಪಿಟಿಐ): ಆಲಪ್ಪುಳದಲ್ಲಿ 2023ರಲ್ಲಿ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪಾಲ್ಗೊಂಡಿದ್ದ ಕಾರ್ಯಕ್ರಮದಲ್ಲಿ ನಡೆದ ಪ್ರತಿಭಟನೆ ವೇಳೆ ಇಬ್ಬರು ಯುವ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಲ್ಲೆ ನಡೆದಿತ್ತು. ಈ ಪ್ರಕರಣದ ಮರು ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲು ಕೇರಳಂ ಸಚಿವ ಸಂಪುಟ ಅನುಮೋದನೆ ನೀಡಿದೆ.

ಈ ಪ್ರಕರಣದ ಮರು ತನಿಖೆಗೆ ಆಲಪ್ಪುಳ ಜಿಲ್ಲಾ ನ್ಯಾಯಾಲಯ 2024ರ ನವೆಂಬರ್ 8ರಂದು ಆದೇಶಿಸಿತ್ತು. ಆದರೆ ಹಿಂದಿನ ಸರ್ಕಾರ ಈ ಕುರಿತು ನಿರ್ಲಕ್ಷ್ಯ ತೋರಿತ್ತು ಎಂದು ಮುಖ್ಯಮಂತ್ರಿ ಸತೀಶನ್ ದೂರಿದರು.

ರಾಜಕೀಯ ದ್ವೇಷದ ಆರೋಪಗಳನ್ನು ತಿರಸ್ಕರಿಸಿದ ಅವರು, ‘ಸರ್ಕಾರ ನ್ಯಾಯಾಲಯದ ನಿರ್ದೇಶನವನ್ನು ಪಾಲಿಸುತ್ತಿದೆ. ಆದರೆ, ಹಿಂದೆ ನಡೆದದ್ದನ್ನು ನಾವು ಮರೆತಿಲ್ಲ’ ಎಂದು ಸೂಚ್ಯವಾಗಿ ಹೇಳಿದರು. ಸರ್ಕಾರದ ಖಜಾನೆಯ ಆರ್ಥಿಕ ಪರಿಸ್ಥಿತಿ ಕುರಿತು ಶ್ವೇತಪತ್ರ ಹೊರಡಿಸಲಾಗುವುದು ಎಂದೂ ಅವರು ತಿಳಿಸಿದರು.

ಕೋಚಿಂಗ್ ಸೆಂಟರ್ ಸ್ಥಾಪಕ ಸೆರೆ

ನವದೆಹಲಿ (ಪಿಟಿಐ): ‘ನೀಟ್-ಯುಜಿ’ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ರೇಣುಕೈ ಕರಿಯರ್ ಸೆಂಟರ್‌ನ ಸಂಸ್ಥಾಪಕ ಶಿವರಾಜ್ ರಘುನಾಥ್ ಮೋಟೆಗಾಂವ್ಕರ್ ಎಂಬವರನ್ನು ಬಂಧಿಸಲಾಗಿದೆ.

ಪ್ರಶ್ನೆಪತ್ರಿಕೆ ಸೋರಿಕೆಯಾಗುವಲ್ಲಿ ಶಿವರಾಜ್ ಅವರ ಕೈವಾಡವೂ ಇರುವ ಆರೋಪದ ಮೇರೆಗೆ ಅವರನ್ನು ಭಾನುವಾರ ಬಂಧಿಸಲಾಗಿದೆ ಎಂದು ಕೇಂದ್ರ ತನಿಖಾ ಸಂಸ್ಥೆಯ (ಸಿಬಿಐ) ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ನೀಟ್ ಪ್ರಶ್ನೆಪತ್ರಿಕೆಗಳನ್ನು ಸೋರಿಕೆ ಮಾಡಿದ ಹಾಗೂ ಹಂಚಿದ ತಂಡದಲ್ಲಿ ಶಿವರಾಜ್ ಸಕ್ರಿಯ ಸದಸ್ಯರಾಗಿದ್ದರು. ಪರೀಕ್ಷೆ ನಡೆಯುವ 10 ದಿನಗಳ ಮುಂಚೆಯೇ ಅಂದರೆ ಏಪ್ರಿಲ್ 23ರಂದೇ ಶಿವರಾಜ್ ಅವರಿಗೆ ರಸಾಯನ ವಿಜ್ಞಾನ ವಿಷಯದ ಪ್ರಶ್ನೆಪತ್ರಿಕೆ ತಲುಪಿತ್ತು. ಅದರ ಪ್ರತಿ ಅವರ ಮೊಬೈಲ್‌ನಲ್ಲಿ ಪತ್ತೆಯಾಗಿದೆ ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಅಲ್ಲದೇ, ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಲಿಖಿತರೂಪದ ಪುಸ್ತಕಗಳ ಮಾದರಿಯಲ್ಲಿ ಶಿವರಾಜ್ ಹಲವರಿಗೆ ಹಂಚಿದ್ದರು. ಅವರ ಮೊಬೈಲ್‌ನಿಂದ ಡಿಲೀಟ್ ಮಾಡಲಾಗಿರುವ ಮಾಹಿತಿಗಳನ್ನು ಮರಳಿ ಪಡೆಯಲು ಮೊಬೈಲ್ ಅನ್ನು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗುವುದು ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

9 ದಿನ ಸಿಬಿಐ ವಶಕ್ಕೆ: ಬಂಧಿತನನ್ನು ದೆಹಲಿಯ ಸಿಬಿಐ ನ್ಯಾಯಾಲಯವು 9 ದಿನಗಳ ಅವಧಿಗೆ ಸಿಬಿಐ ವಶಕ್ಕೆ ನೀಡಿದೆ. ಶಿವರಾಜ್ ಅವರನ್ನು 10 ದಿನ ವಶಕ್ಕೆ ನೀಡಬೇಕೆಂದು ಸಿಬಿಐ ಅಧಿಕಾರಿಗಳು ಮನವಿ ಮಾಡಿದ್ದರು.

ಎನ್‌ಟಿಎ ಅಧ್ಯಕ್ಷರಿಗೆ ಸಮನ್ಸ್

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ (ಎನ್‌ಟಿಎ) ಸಂಬಂಧಿಸಿದ ಸುಧಾರಣೆ ಮತ್ತು ನೀಟ್ ಯುಜಿ-2026 ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳನ್ನು ಮರುಪರಿಶೀಲಿಸಲು ಸಂಸದೀಯ ಸಮಿತಿ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಚರ್ಚೆ ನಡೆಸಲು ಹಾಜರಾಗುವಂತೆ ಎನ್‌ಟಿಎ ಅಧ್ಯಕ್ಷ ಪ್ರದೀಪ್ ಕುಮಾರ್ ಜೋಶಿ ಹಾಗೂ ಇತರ ಅಧಿಕಾರಿಗಳಿಗೆ ಸಮಿತಿಯು ಸಮನ್ಸ್ ಜಾರಿಗೊಳಿಸಿದೆ.

ಶಿಕ್ಷಣ, ಮಹಿಳೆ ಮತ್ತು ಮಕ್ಕಳು, ಯುವಜನ ಹಾಗೂ ಕ್ರೀಡೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಯು ಶಿಕ್ಷಣ ಸಚಿವಾಲಯದ ಉನ್ನತ ಅಧಿಕಾರಿಗಳ ಅಭಿಪ್ರಾಯಗಳನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಈ ಸಮನ್ಸ್ ಜಾರಿಗೊಳಿಸಿದೆ. ಮೇ 21ರ ಗುರುವಾರ ಈ ಕುರಿತಾದ ಸಭೆ ನಡೆಯಲಿದೆ ಎಂದೂ ರಾಜ್ಯಸಭಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಪ್ರಧಾನ್ ವಿರುದ್ಧ ಹಕ್ಕುಚ್ಯುತಿ ಕ್ರಮ ಕೈಗೊಳ್ಳಿ’



ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ವಿರುದ್ಧ ಹಕ್ಕುಚ್ಯುತಿ ಕ್ರಮ ಕೈಗೊಳ್ಳುವಂತೆ ಕಾಂಗ್ರೆಸ್‌ನ ರಾಜ್ಯಸಭಾ ಮುಖ್ಯ ಸಚೇತಕ ಜೈರಾಮ್ ರಮೇಶ್ ಸೋಮವಾರ ಆಗ್ರಹಿಸಿದ್ದಾರೆ.

ರಾಜ್ಯಸಭಾ ಅಧ್ಯಕ್ಷರಾದ ಸಿ.ಪಿ ರಾಧಾಕೃಷ್ಣನ್ ಅವರಿಗೆ ಈ ಸಂಬಂಧಿಸಿದಂತೆ ಅವರು ಮನವಿ ಪತ್ರ ಸಲ್ಲಿಸಿದ್ದಾರೆ.

‘ಸಂಸದೀಯ ಸ್ಥಾಯಿ ಸಮಿತಿಯಲ್ಲಿರುವ ವಿರೋಧ ಪಕ್ಷಗಳ ಸದಸ್ಯರ ಕುರಿತು ಸಚಿವ ಪ್ರಧಾನ್ ನೀಡಿರುವ ಹೇಳಿಕೆಯು ಅವಹೇಳನಕಾರಿಯಾಗಿದೆ. ಸಂಸತ್ತು, ಸಂಸದರು, ಸಂಸದೀಯ ಸಮಿತಿಗಳನ್ನು ಕೆಣಕುವಂಥ ಉದ್ದೇಶವನ್ನು ಆ ಹೇಳಿಕೆ ಹೊಂದಿದೆ. ಹೀಗಾಗಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದೂ ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.

ನಿಶ್ಚಿತಾರ್ಥಕ್ಕೆ ತೆರಳುತ್ತಿದ್ದ ಟೆಂಪೊ ಡಿಕ್ಕಿ: 13 ಸಾವು

ಪಾಲ್ಘರ್ (ಪಿಟಿಐ): ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಮುಂಬೈ-ಅಹಮದಾಬಾದ್ ಹೆದ್ದಾರಿಯಲ್ಲಿ ಸೋಮವಾರ ಟೆಂಪೊವೊಂದು ವೇಗವಾಗಿ ಬರುತ್ತಿದ್ದ ಕಂಟೇನರ್ ಟ್ರಕ್‌ಗೆ ಡಿಕ್ಕಿ ಹೊಡೆದು 13 ಜನರು ಮೃತಪಟ್ಟು, 20 ಜನರು ಗಾಯಗೊಂಡಿದ್ದಾರೆ.

ದಹನು ತಾಲ್ಲೂಕಿನ ಧನಿವಾರಿ ಗ್ರಾಮದ ಬಳಿ ಸಂಜೆ 4 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದೆ. 50ಕ್ಕೂ ಹೆಚ್ಚು ಪ್ರಯಾಣಿಕರಿದ್ದ ಟೆಂಪೊ ಮದುವೆ ನಿಶ್ಚಿತಾರ್ಥ ಸಮಾರಂಭಕ್ಕೆ ತೆರಳುತ್ತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಗೆ ತೀವ್ರ ಸಂತಾಪ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಮೃತರ ಕುಟುಂಬಗಳಿಗೆ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಆಟೊಗೆ ಟ್ರಕ್ ಡಿಕ್ಕಿ–7 ಸಾವು: ಬಿಹಾರದ ಖಗಾಡಿಯಾ ಜಿಲ್ಲೆಯಲ್ಲಿ ಸೋಮವಾರ ವೇಗವಾಗಿ ಬಂದ ಟ್ರಕ್ಕೊಂದು ಆಟೊಗೆ ಡಿಕ್ಕಿ ಹೊಡೆದ ಪರಿಣಾಮ ಎರಡು ತಿಂಗಳ ನವಜಾತ ಶಿಶು ಸೇರಿದಂತೆ ಕನಿಷ್ಠ ಏಳು ಜನರು ಮೃತಪಟ್ಟು ನಾಲ್ವರು ಗಾಯಗೊಂಡಿದ್ದಾರೆ.

ವ್ಯಾನ್-ಟ್ರಕ್ ಡಿಕ್ಕಿ - ಹತ್ತು ಸಾವು: ಉತ್ತರ ಪ್ರದೇಶದ ಸಿಸ್ಸೈಯಾ-ಲಖೀಂಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮವಾರ ವ್ಯಾನ್ ಮತ್ತು ಟ್ರಕ್ ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಹತ್ತು ಜನರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಐಟಿ ಕ್ಯಾಂಪಸ್‌ನಲ್ಲಿ ಬಜಾಜ್ ಎಂಜಿನಿಯರಿಂಗ್ ಸ್ಕಿಲ್ಸ್ ಟ್ರೇನಿಂಗ್ ಕೇಂದ್ರ ಸ್ಥಾಪನೆ

ಬೆಂಗಳೂರು: ಶೈಕ್ಷಣಿಕ ವಲಯ ಮತ್ತು ಉದ್ಯಮ ಕ್ಷೇತ್ರದ ನಡುವಿನ ಕೌಶಲ್ಯಗಳ ಅಂತರವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಪುಣೆಯ ಬಜಾಜ್ ಆಟೋ ಫೌಂಡೇಶನ್, ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿಐಟಿ) ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಈ ಸಹಭಾಗಿತ್ವದ ಅಡಿಯಲ್ಲಿ ವಿಐಟಿ ಕ್ಯಾಂಪಸ್‌ನಲ್ಲಿ ₹15 ಕೋಟಿ ಹೂಡಿಕೆಯೊಂದಿಗೆ ಬಜಾಜ್ ಎಂಜಿನಿಯರಿಂಗ್ ಸ್ಕಿಲ್ಸ್ ಟ್ರೇನಿಂಗ್ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ.

ಈ ಹೆಜ್ಜೆ ಎಂಜಿನಿಯರಿಂಗ್ ಮತ್ತು ಡಿಪ್ಲೊಮಾ ಪದವೀಧರರು ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಮತ್ತು ಜಾಗತಿಕ ಔದ್ಯೋಗಿಕ ಕ್ಷೇತ್ರಕ್ಕೆ ಅಗತ್ಯವಿರುವ ಕೌಶಲಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ. ಪ್ರಮುಖವಾಗಿ ಭಾರತದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಎಲೆಕ್ಟ್ರಿಕ್ ವಾಹನ(ಇವಿ) ಮತ್ತು ಎಲೆಕ್ಟ್ರಾನಿಕ್ಸ್ ಉತ್ಪಾದನಾ ಪರಿಸರ ವ್ಯವಸ್ಥೆಗೆ ಪೂರಕವಾಗಿ ಈ ಕೇಂದ್ರವು ಕಾರ್ಯನಿರ್ವಹಿಸಲಿದೆ.

ಒಪ್ಪಂದಕ್ಕೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಮಾತನಾಡಿದ ಬಜಾಜ್ ಆಟೋ ಫೌಂಡೇಶನ್‌ನ ಸಿಎಸ್‌ಆರ್ ವಿಭಾಗದ ಉಪಾಧ್ಯಕ್ಷ ಸುಧಾಕರ್ ಗುಡಿಪಾಟಿ, ಉತ್ಪಾದನಾ ಮತ್ತು ಆಟೋಮೋಟಿವ್ ಉದ್ಯಮಗಳು ಅತ್ಯಂತ ವೇಗವಾಗಿ ಬದಲಾಗುತ್ತಿದ್ದು, ನುರಿತ ಉದ್ಯೋಗಿಗಳಿಗೆ ದೇಶದಲ್ಲಿ ಭಾರಿ ಬೇಡಿಕೆ ಸೃಷ್ಟಿಯಾಗಿದೆ. ಯುವಕರನ್ನು ಸಬಲೀಕರಿಸಲು ಮತ್ತು ಈ ಕೌಶಲದ ಕೊರತೆಯನ್ನು ನೀಗಿಸಲು ಭಾರತದಾದ್ಯಂತ ಇಂತಹ ಇನ್ನಷ್ಟು 'ಬೆಸ್ಟ್' ಕೇಂದ್ರಗಳನ್ನು ಸ್ಥಾಪಿಸಲು ಬಜಾಜ್ ಯೋಜಿಸಿದೆ' ಎಂದರು. ವಿಐಟಿ ಸಂಸ್ಥಾಪಕರಾದ ಡಾ.ಜಿ.ವಿಶ್ವನಾಥನ್ ಮಾತನಾಡಿ, 'ಈ ₹15 ಕೋಟಿ ಹೂಡಿಕೆಯು ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ಮತ್ತು ಪ್ರಾಯೋಗಿಕ ಕಲಿಕಾ ವಾತಾವರಣವನ್ನು ಸೃಷ್ಟಿಸಲಿದೆ. ಇದು ನಮ್ಮ ವಿದ್ಯಾರ್ಥಿಗಳಿಗೆ ಉದ್ಯೋಗ ಮಾರುಕಟ್ಟೆಯಲ್ಲಿ ವಿಶಿಷ್ಟವಾದ ಸ್ಪರ್ಧಾತ್ಮಕ ಶಕ್ತಿಯನ್ನು ನೀಡುತ್ತದೆ' ಎಂದರು. ಬಜಾಜ್ ಆಟೋ ಫೌಂಡೇಶನ್‌ನ ಸಿಎಸ್‌ಆರ್ ಮುಖ್ಯಸ್ಥ ರಮೇಶ್ ವಿ. ಮಾತನಾಡಿದರು. ಸಮಾರಂಭದಲ್ಲಿ ಸ್ಕೂಲ್ ಆಫ್ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನ ಡೀನ್ ಡಾ.ಪಿ.ಕುಪ್ಪನ್, ವಿಐಟಿ ಉಪಾಧ್ಯಕ್ಷ ಡಾ.ಶಂಕರ್ ವಿಶ್ವನಾಥನ್, ಡಾ.ಸೇಕರ್ ವಿಶ್ವನಾಥನ್, ಕಾರ್ಯನಿರ್ವಾಹಕ ನಿರ್ದೇಶಕಿ ಡಾ.ಸಂಧ್ಯಾ ಪೆಂಟಾರೆಡ್ಡಿ, ಸಹಾಯಕ ಉಪಾಧ್ಯಕ್ಷೆ ಕಾದಂಬರಿ ಎಸ್.ವಿಶ್ವನಾಥನ್, ಕುಲಪತಿ ಡಾ.ವಿ.ಎಸ್.ಕಾಂಚನಾ ಭಾಸ್ಕರನ್, ಪ್ರೊ-ವೈಸ್ ಚಾನ್ಸಲರ್ ಡಾ.ಪಾರ್ಥ ಸಾರಥಿ ಮಲ್ಲಿಕ್ ಮತ್ತು ರಿಜಿಸ್ಟ್ರಾರ್ ಡಾ.ಟಿ.ಜಯಭಾರತಿ, ವಿ-ಸ್ಪೇಸ್ ನಿರ್ದೇಶಕ ಡಾ.ಎಸ್.ಶಿವಾನಂದಂ ಇದ್ದರು.

ವಿಐಟಿ ಕ್ಯಾಂಪಸ್‌ನಲ್ಲಿ ಬಜಾಜ್ ಆಟೋ ಫೌಂಡೇಶನ್ ಸಹಭಾಗಿತ್ವದಲ್ಲಿ ₹15 ಕೋಟಿ ವೆಚ್ಚದ ಸುಧಾರಿತ ಎಂಜಿನಿಯರಿಂಗ್ ಕೌಶಲ್ಯ ಕೇಂದ್ರ ಸ್ಥಾಪನೆಯ ಒಪ್ಪಂದ ಮಾಡಿಕೊಳ್ಳಲಾಯಿತು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಗೆಲುವಿನೊಡನೆ ಪ್ಲೇಆಫ್‌ಗೆ ‘ಸನ್’

ಗುಜರಾತ್ ಟೈಟನ್ಸ್ ತಂಡವೂ ಮುಂದಿನ ಹಂತಕ್ಕೆ • ಪ್ಯಾಟ್ ಕಮಿನ್ಸ್‌ಗೆ ಮೂರು ವಿಕೆಟ್ • ಇಶಾನ್, ಕ್ಲಾಸೆನ್ ಮಿಂಚು

ಚೆನ್ನೈ (ಪಿಟಿಐ): ವೇಗ ಮತ್ತು ಲೆಂಗ್ತ್ ಮೇಲೆ ನಿಯಂತ್ರಣ ಸಾಧಿಸಿದ ಪ್ಯಾಟ್ ಕಮಿನ್ಸ್ 28 ರನ್‌ಗಳಿಗೆ 3 ಪ್ರಮುಖ ವಿಕೆಟ್‌ಗಳನ್ನು ಪಡೆದರು. ನಂತರ ಇಶಾನ್ ಕಿಶನ್ ಮತ್ತು ಹೆನ್ರಿಚ್ ಕ್ಲಾಸೆನ್ ಬ್ಯಾಟಿಂಗ್‌ನಲ್ಲಿ ಅಬ್ಬರಿಸಿದರು. ಇದರಿಂದಾಗಿ ಸನ್‌ರೈಸರ್ಸ್ ತಂಡವು ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಐದು ವಿಕೆಟ್‌ಗಳ ಹೋರಾಟದ ಜಯ ಸಾಧಿಸಿ, ಪ್ಲೇ ಆಫ್‌ಗೆ ಲಗ್ಗೆಯಿಟ್ಟಿತು.

ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (18 ಅಂಕ) ತಂಡ ಈ ಮೊದಲೇ ಪ್ಲೇ ಆಫ್‌ಗೆ ಮುನ್ನಡೆದಿದೆ. ತಲಾ 16 ಅಂಕ ಗಳಿಸಿರುವ ಗುಜರಾತ್ ಟೈಟನ್ಸ್ ಮತ್ತು ಸನ್‌ರೈಸರ್ಸ್ ತಂಡಗಳೂ ಮುಂದಿನ ಹಂತಕ್ಕೆ ಅರ್ಹತೆ ಪಡೆದವು. ಉಳಿದ ಒಂದು ಸ್ಥಾನಕ್ಕಾಗಿ ಐದು ತಂಡಗಳ ನಡುವೆ ಪೈಪೋಟಿಯಿದೆ.

ಚೆಪಾಕ್ ಕ್ರೀಡಾಂಗಣದಲ್ಲಿ ‘ದಕ್ಷಿಣ ಡರ್ಬಿ’ ಎಂದೇ ಬಿಂಬಿತವಾಗಿದ್ದ ಪಂದ್ಯದಲ್ಲಿ ಟಾಸ್ ಗೆದ್ದ ಋತುರಾಜ್ ಗಾಯಕವಾಡ್ ಬ್ಯಾಟಿಂಗ್ ಆಯ್ದುಕೊಂಡರು. ನಾಯಕ ಕಮಿನ್ಸ್ ಅವರ ಪರಿಣಾಮಕಾರಿ ದಾಳಿಯ ಹೊರತಾಗಿಯೂ ಆತಿಥೇಯ ತಂಡವು 7 ವಿಕೆಟ್‌ಗೆ 180 ರನ್ ಗಳಿಸಿತು. ಡೆವಾಲ್ಡ್ ಬ್ರೆವಿಸ್ (44, 27 ಎಸೆತ) ಮತ್ತು ಕಾರ್ತಿಕ್ ಶರ್ಮಾ (32;19ಎ) ಉಪಯುಕ್ತ ಕಾಣಿಕೆ ನೀಡಿದರು.

ಗುರಿ ಬೆನ್ನಟ್ಟಿದ ಸನ್‌ರೈಸರ್ಸ್ ತಂಡವು ಇಶಾನ್ (70;47ಎ, 4x7, 6x3) ಮತ್ತು ಕ್ಲಾಸೆನ್ ಅವರ ಆಟದ ಬಲದಿಂದ ಆರು ಎಸೆತಗಳು ಬಾಕಿ ಇರುವಂತೆ 5 ವಿಕೆಟ್‌ಗೆ 181 ರನ್ ಗಳಿಸಿ ಸಂಭ್ರಮಿಸಿತು. ನಿರ್ಣಾಯಕ ಪಂದ್ಯದಲ್ಲಿ ಸೋತ ಐದು ಬಾರಿಯ ಚಾಂಪಿಯನ್ ಚೆನ್ನೈ ತಂಡವು ಒತ್ತಡಕ್ಕೆ ಸಿಲುಕಿತು.

ಸನ್‌ರೈಸರ್ಸ್ ತಂಡದ ಆರಂಭ ಉತ್ತಮವಾಗಿರಲಿಲ್ಲ. ಸ್ಫೋಟಕ ಬ್ಯಾಟರ್ ಟ್ರಾವಿಸ್ ಹೆಡ್ (6) ಮೂರನೇ ಓವರ್‌ನಲ್ಲಿ ಮುಕೇಶ್ ಚೌಧರಿ ಅವರಿಗೆ ವಿಕೆಟ್ ಒಪ್ಪಿಸಿದರು. ಅಭಿಷೇಕ್ ಶರ್ಮಾ (26;21ಎ) ಕೂಡ ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. 56 ರನ್‌ಗೆ ಎರಡು ವಿಕೆಟ್ ಕಳೆದುಕೊಂಡು ತಂಡವು ಒತ್ತಡದಲ್ಲಿದ್ದಾಗ ಇಶಾನ್ ಮತ್ತು ಕ್ಲಾಸೆನ್ ಎಚ್ಚರಿಕೆಯ ಆಟವಾಡಿದರು. ಮೂರನೇ ವಿಕೆಟ್‌ಗೆ ಅಮೂಲ್ಯ 75 (41ಎ) ರನ್ ಸೇರಿಸಿದರು. ಆದರೆ, ಅರ್ಧಶತಕದ ಹೊಸ್ತಿಲಲ್ಲಿ ಕ್ಲಾಸೆನ್ ಎಡವಿದರು.

ಹಾಲಿ ಆವೃತ್ತಿಯಲ್ಲಿ ಐದನೇ ಅರ್ಧಶತಕ ದಾಖಲಿಸಿದ ಇಶಾನ್ ಅವರು ನಿತೀಶ್ ಕುಮಾರ್ ರೆಡ್ಡಿ (11) ಮತ್ತು ಸಲೀಲ್ ಅರೋರಾ (ಔಟಾಗದೇ 10) ಅವರೊಂದಿಗೆ ಉಪಯುಕ್ತ ಜೊತೆಯಾಟದಲ್ಲಿ ಪಾಲ್ಗೊಂಡು, ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಜಯಕ್ಕೆ 6 ರನ್ ಬೇಕಿದ್ದಾಗ ಇಶಾನ್ ಔಟಾದರು. ಕನ್ನಡಿಗ ಆರ್.ಸ್ಮರಣ್ (ಔಟಾಗದೇ 5) ಗೆಲುವಿನ ಬೌಂಡರಿ ಬಾರಿಸಿದರು.

ಇದಕ್ಕೂ ಮೊದಲು ಸಂಜು ಸ್ಯಾಮ್ಸನ್ (27, 13 ಎಸೆತ) ಚೆನ್ನೈ ತಂಡಕ್ಕೆ ಮಿಂಚಿನ ಆರಂಭ ನೀಡಿದರು. ನಿತೀಶ್ ಕುಮಾರ್ ರೆಡ್ಡಿ ಮಾಡಿದ ಮೊದಲ ಓವರಿನಲ್ಲೇ ಒಂದು ಸಿಕ್ಸರ್, ಎರಡು ಬೌಂಡರಿಗಳು ಸೇರಿದಂತೆ 17 ರನ್ ಬಾಚಿದರು. ಪ್ರಫುಲ್ ಹಿಂಗೆ ಮಾಡಿದ ಮುಂದಿನ ಓವರಿನಲ್ಲಿ ಹ್ಯಾಟ್ರಿಕ್ ಬೌಂಡರಿಗಳನ್ನು ಸಿಡಿಸಿದರು.

ಆದರೆ ಮೂರನೇ ಓವರಿನಲ್ಲಿ ದಾಳಿಗಿಳಿದ ಕಮಿನ್ಸ್, ಸಂಜು ವಿಕೆಟ್ ಪಡೆದರು. ಬಿರುಸಿನ ಡ್ರೈವ್ ಯತ್ನದಲ್ಲಿ ಚೆಂಡು ವಿಕೆಟ್ ಕೀಪರ್ ಇಶಾನ್ ಕಿಶನ್ ಕೈಸೇರಿತು. ಉರ್ವಿಲ್ ಪಟೇಲ್ ಬಂದ ಹಾಗೆಯೇ ಕಮಿನ್ಸ್ ಬೌಲಿಂಗ್‌ನಲ್ಲಿ ಎರಡು ಸಿಕ್ಸರ್‌ಗಳನ್ನು ಎತ್ತಿದರು. ಆದರೆ ಸಾಕಿಬ್ ಹುಸೇನ್ ಅವರ ಸ್ಲೋಬಾಲ್ ಒಂದರಲ್ಲಿ ಬೌಲ್ಡ್ ಆದರು.

ಋತುರಾಜ್ ಮತ್ತು ಕಾರ್ತಿಕ್ ಅವರು ಮೂರನೇ ವಿಕೆಟ್‌ಗೆ 42 ರನ್ ಸೇರಿಸಿ ತಂಡವನ್ನು ಮರಳಿ ಹಳಿಗೆ ತರಲು ಪ್ರಯತ್ನಿಸಿದರು. ಆದರೆ ದಾಳಿಗೆ ಮರಳಿದ ಕಮಿನ್ಸ್, ಪ್ರತಿಭಾನ್ವಿತ ಕಾರ್ತಿಕ್ ವಿಕೆಟ್ ಪಡೆದರು. ಅವರ ಮತ್ತೊಂದು ಬೌನ್ಸರ್‌ಗೆ ಋತುರಾಜ್ (15, 21 ಎಸೆತ) ನಿರ್ಗಮಿಸಬೇಕಾಯಿತು.

ಬ್ರೆವಿಸ್ ಮತ್ತು ಶಿವಂ ದುಬೆ (26, 23 ಎಸೆತ) ಜೋಡಿ ಐದನೇ ವಿಕೆಟ್‌ಗೆ 59 ರನ್ ಸೇರಿಸಿದ್ದರಿಂದ ಕುಸಿತ ತಪ್ಪಿತು. ದುಬೆ ಮತ್ತು ಕೊನೆಯ ಕೆಲವು ಬ್ಯಾಟರ್‌ಗಳು ಮೊತ್ತವನ್ನು 200ರ ಸಮೀಪದ ತಲುಪಿಸಲು ನಡೆಸಿದ ಯತ್ನ ಸಫಲವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರುಗಳಲ್ಲಿ 7ಕ್ಕೆ 180 (ಸಂಜು ಸ್ಯಾಮ್ಸನ್ 27, ಕಾರ್ತಿಕ್ ಶರ್ಮಾ 32, ಡೆವಾಲ್ಡ್ ಬ್ರೆವಿಸ್ 44, ಶಿವಂ ದುಬೆ 26; ಪ್ಯಾಟ್ ಕಮಿನ್ಸ್ 28ಕ್ಕೆ3, ಸಾಕಿಬ್ ಹುಸೇನ್ 34ಕ್ಕೆ2). ಸನ್‌ರೈಸರ್ಸ್ ಹೈದರಾಬಾದ್: ಓವರ್‌ಗಳಲ್ಲಿ 5 ವಿಕೆಟ್‌ಗೆ (ಅಭಿಷೇಕ್ ಶರ್ಮಾ 26, ಇಶಾನ್ ಕಿಶನ್ 70, ಹೆನ್ರಿಕ್ ಕ್ಲಾಸೆನ್ 47; ಮುಕೇಶ್ ಚೌಧರಿ 36ಕ್ಕೆ2).
ಪಂದ್ಯದ ಆಟಗಾರ: ಇಶಾನ್ ಕಿಶನ್

ಇಶಾನ್ ಕಿಶನ್ ಹಾಗೂ ಹೆನ್ರಿಚ್ ಕ್ಲಾಸೆನ್ ಜೊತೆಯಾಟ ಪಿಟಿಐ ಚಿತ್ರ

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	13	9	4	0	18	1.065
ಜಿ ಟಿ	13	8	5	0	16	0.400
ಎಸ್‌ಆರ್‌ಎಚ್	13	8	5	0	16	0.350
ಪಿಬಿಕೆಎಸ್	13	6	6	1	13	0.227
ಆರ್ ಆರ್	12	6	6	0	12	0.027
ಸಿಎಸ್‌ಕೆ	13	6	7	0	12	- 0.016
ಡಿ ಸಿ	13	6	7	0	12	- 0.871
ಕೆಕೆಆರ್	12	5	6	1	11	- 0.038
ಎಂ ಐ	12	4	8	0	8	- 0.504
ಎಲ್‌ಎಸ್‌ಜಿ	12	4	8	0	8	- 0.701

ಆರೆಂಜ್ ಕ್ಯಾಪ್: ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (555 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (24 ವಿಕೆಟ್)

ಲಖನೌ ಎದುರು ಆರ್‌ಆರ್‌ಗೆ ಗೆಲ್ಲುವ ಒತ್ತಡ

ರಾಯಲ್ಸ್‌ಗೆ ಮಾಡು–ಮಡಿ ಪಂದ್ಯ

ಜೈಪುರ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡದ ಪ್ಲೇ ಆಫ್ ಅವಕಾಶ ತೂಗುಯ್ಯಾಲೆಯಲ್ಲಿದೆ. ಮಂಗಳವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿರುವ ಈ ತಂಡವು ತನ್ನ ಅವಕಾಶ ಉಜ್ವಲಗೊಳಿಸಬೇಕಾದರೆ ಆಟದ ಮಟ್ಟದಲ್ಲಿ ಸರ್ವಾಂಗೀಣ ಸುಧಾರಣೆ ಕಾಣಬೇಕಾಗಿದೆ.

ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣವು ‘ಹೈಸ್ಕೋರಿಂಗ್’ ಪಂದ್ಯಗಳನ್ನು ಕಂಡಿದೆ. ಆದರೆ ಈ ಕ್ರೀಡಾಂಗಣದಲ್ಲಿ ರಾಯಲ್ಸ್ ಈ ಬಾರಿ ಒಂದೂ ಪಂದ್ಯ ಗೆದ್ದಿಲ್ಲ. ಈಗ ಕೊನೆಯ ಪಂದ್ಯವು ಆತಿಥೇಯರ ಪಾಲಿಗೆ ‘ಮಾಡು–ಇಲ್ಲವೇ ಮಡಿ’ ಎಂಬಂತಾಗಿದೆ.

ಲಖನೌ ವಿರುದ್ಧ ಪಂದ್ಯದ ನಂತರ ರಾಯಲ್ಸ್ ತನ್ನ ಕೊನೆಯ ಪಂದ್ಯದಲ್ಲಿ, ಈಗಾಗಲೇ ಪ್ಲೇಆಫ್ ರೇಸ್‌ನಿಂದ ಹೊರ ಬಿದ್ದಿರುವ ಇನ್ನೊಂದು ತಂಡ ಮುಂಬೈ ಇಂಡಿಯನ್ಸ್ ವಿರುದ್ಧ ಸೆಣಸಲಿದೆ.

ದೆಹಲಿ ವಿರುದ್ಧ ಭಾನುವಾರ ನಡೆದ ಪಂದ್ಯದಲ್ಲಿ ರಿಯಾನ್ ಪರಾಗ್ ಪಡೆ ಉತ್ತಮ ಮೊತ್ತ ಗಳಿಸಬಹುದಿತ್ತು. ಆದರೆ ಕೆಳಕ್ರಮಾಂಕದ ಆಟಗಾರರು ವಿಫಲರಾಗಿ ನಿರೀಕ್ಷಿತ ಮೊತ್ತ ದಾಖಲಿಸಲಾಗಲಿಲ್ಲ. ಇದೂ ಸಾಲದೆಂಬಂತೆ ಫೀಲ್ಡಿಂಗ್ ಮತ್ತು ಬೌಲಿಂಗ್ ಉತ್ತಮ ಮಟ್ಟದಲ್ಲಿರಲಿಲ್ಲ. ತಂಡವು ಉತ್ತಮ ಆರಂಭಕ್ಕೆ ವೈಭವ್ ಸೂರ್ಯವಂಶಿ ಅವರನ್ನು ನೆಚ್ಚಿಕೊಂಡಿದೆ. ಆದರೆ ಅವರಿಗೆ ಅನುಭವಿ ಯಶಸ್ವಿ ಜೈಸ್ವಾಲ್ ಅವರಿಂದ ನಿರೀಕ್ಷಿತ ಬೆಂಬಲ ಸಿಗುತ್ತಿಲ್ಲ.

ಧ್ರುವ್ ಜುರೇಲ್ ಕೊನೆಯ ಪಂದ್ಯದಲ್ಲಿ ಅರ್ಧಶತಕ ಹೊಡೆದರೂ ಸ್ಟ್ರೈಕ್ ರೇಟ್ ಉತ್ತಮವಾಗಿರಲಿಲ್ಲ. ಟೂರ್ನಿಯ ಮೊದಲಾರ್ಧದ ಪಂದ್ಯಗಳಲ್ಲಿ ಪರದಾಡಿದ್ದ ನಾಯಕ ರಿಯಾನ್ ಪರಾಗ್ ಕೊನೆಯ ಹಂತದಲ್ಲಿ ಕೆಲವು ಉತ್ತಮ ಇನಿಂಗ್ಸ್‌ಗಳನ್ನು ಆಡಿದ್ದಾರೆ. ಆದರೆ ಕ್ಯಾಚಿಂಗ್ ಕಳಪೆಯಾಗಿದೆ. ಲೀಗ್ ಮುಕ್ತಾಯದ ಹಂತ ತಲುಪುತ್ತಿರುವಂತೆ ತಂಡ ಕಳಪೆ ನಿರ್ವಹಣೆ ತೋರುತ್ತಿರುವುದಕ್ಕೆ ಪರಾಗ್ ಅಸಮಾಧಾನ ಹೊರ ಹಾಕಿದ್ದಾರೆ. ತಂಡದ ಪ್ಲೇಆಫ್ ಸ್ಥಾನ ಅಲುಗಾಡುತ್ತಿರುವುದು ಅವರನ್ನು ಹತಾಶೆಗೆ ಈಡು ಮಾಡಿದೆ.

‘ಒಂದೊಮ್ಮೆ ನಾವು ಅರ್ಹತೆ ಪಡೆಯಲಾಗದಿದ್ದಲ್ಲಿ ಅದು ನಮ್ಮದೇ ತಪ್ಪು. ಇದಕ್ಕೆ ಬೇರಾರೂ ಕಾರಣರಲ್ಲ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕೊನೆಯ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಅಪರೂಪದ ಗೆಲುವು ಪಡೆದ ಲಖನೌ ಸೂಪರ್ ಜೈಂಟ್ಸ್ ತಂಡವು ತನ್ನದೇ ಆದ ಸಮಸ್ಯೆಗಳನ್ನು ಎದುರಿಸುತ್ತಿದೆ. ಕಳಪೆ ಬ್ಯಾಟಿಂಗ್‌ನಿಂದಾಗಿ ತಂಡ ಹಲವು ಪಂದ್ಯಗಳಲ್ಲಿ ಸೋತಿದೆ. ಆರಂಭ ಆಟಗಾರ ಮಿಚೆಲ್ ಮಾರ್ಷ್ ಒಬ್ಬರೇ ಕೆಲವು ಆಕರ್ಷಕ ಇನಿಂಗ್ಸ್‌ಗಳನ್ನು ಆಡಿದ್ದಾರೆ. ನಾಯಕ ರಿಷಭ್ ಪಂತ್ ಕಾಯಂ ಆಗಿ ಒಂದೇ ಕ್ರಮಾಂಕದಲ್ಲಿ ಆಡಿಲ್ಲ. ಕೊನೆಯ ಪಂದ್ಯದಲ್ಲಿ ಅವರು ಬ್ಯಾಟಿಂಗ್ ಮಾಡಿರಲಿಲ್ಲ. ಬಾಕಿ ಉಳಿದ ಎರಡು ಪಂದ್ಯಗಳನ್ನು ಗೆದ್ದರೆ ತಂಡ ಸ್ವಲ್ಪವಾದರೂ ಸಮಾಧಾನಪಟ್ಟುಕೊಳ್ಳಬಹುದು.

ಪ್ರಿನ್ಸ್ ಯಾದವ್ ಪಿಟಿಐ ಚಿತ್ರಗಳು

ವೈಭವ್ ಸೂರ್ಯವಂಶಿ

ಇಂದಿನ ಪಂದ್ಯ
ರಾಜಸ್ಥಾನ ರಾಯಲ್ಸ್ V/s ಲಖನೌ ಸೂಪರ್ ಜೈಂಟ್ಸ್
ತಾಣ: ಜೈಪುರ,
ಆರಂಭ: ರಾತ್ರಿ 7.30
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಆರ್‌ಟಿಐ ವ್ಯಾಪ್ತಿಗಿಲ್ಲ ಬಿಸಿಸಿಐ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಶ್ವದ ಶ್ರೀಮಂತ ಕ್ರಿಕೆಟ್ ಸಂಸ್ಥೆಯಾಗಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಯಾವುದೇ ಕಾನೂನು ಅಥವಾ ಸರ್ಕಾರದ ಅನುದಾನದಡಿ ಸ್ಥಾಪಿತವಾಗಿರುವ ‘ಸಾರ್ವಜನಿಕ ಪ್ರಾಧಿಕಾರ’ವಲ್ಲದ ಕಾರಣ ಅದು ಮಾಹಿತಿ ಹಕ್ಕು (ಆರ್‌ಟಿಐ) ವ್ಯಾಪ್ತಿಗೆ ಬರುವುದಿಲ್ಲ ಎಂದು ಕೇಂದ್ರ ಮಾಹಿತಿ ಆಯೋಗ (ಸಿಐಸಿ) ಸೋಮವಾರ ಆದೇಶ ನೀಡಿದೆ.

ಕ್ರಿಕೆಟ್ ಮಂಡಳಿ ಕೂಡ ‘ಸಾರ್ವಜನಿಕ ಪ್ರಾಧಿಕಾರ’ವಾಗಿದ್ದು, ಆರ್‌ಟಿಐ ವ್ಯಾಪ್ತಿಗೆ ಬರುತ್ತದೆ ಎಂದು ಸಿಐಸಿ 2018ರ ಅಕ್ಟೋಬರ್‌ನಲ್ಲಿ ನೀಡಿದ್ದ ಆದೇಶ ಪ್ರಶ್ನಿಸಿ ಬಿಸಿಸಿಐ ಮೇಲ್ಮನವಿ ಸಲ್ಲಿಸಿತ್ತು. ಅರ್ಜಿಯ ವಿಚಾರಣೆ ನಡೆಸಿದ್ದ ಮದ್ರಾಸ್ ಹೈಕೋರ್ಟ್ ಪ್ರಕರಣವನ್ನು ಸಿಐಸಿಗೆ ಮರಳಿಸಿತ್ತು. ಈ ನಡುವೆ, ಮಾಹಿತಿ ಆಯುಕ್ತ ಪಿ.ಆರ್. ರಮೇಶ್ ಈ ಆದೇಶ ನೀಡಿದ್ದಾರೆ.

2025ರಲ್ಲಿ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಗೆ ತಿದ್ದುಪಡಿ ತರುವ ಮೂಲಕ ಕೇಂದ್ರ ಸರ್ಕಾರವು ಬಿಸಿಸಿಐ ಅನ್ನು ಆರ್‌ಟಿಐ ವ್ಯಾಪ್ತಿಗೆ ಬರುವ ಪ್ರಸ್ತಾವವನ್ನು ಕೈಬಿಟ್ಟಿತ್ತು. ಸರ್ಕಾರಿ ಅನುದಾನ ಪಡೆಯುವ ಕ್ರೀಡಾ ಮಂಡಳಿ ಮಾತ್ರ ಪಾರದರ್ಶಕತೆಯ ವ್ಯಾಪ್ತಿಗೆ ಬರುತ್ತದೆ ಎಂದು ಕಾನೂನಿಗೆ ತಿದ್ದುಪಡಿ ತಂದಿತ್ತು.

ರಾಜ್ಯ ಸರ್ಕಾರದ ಮೇಲ್ವಿಚಾರಣೆ ಅಥವಾ ನಿಯಂತ್ರಣದ ಆಧಾರದಲ್ಲಿ ಸಂಸ್ಥೆಯನ್ನು ಆರ್‌ಟಿಐ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರ ಎಂದು ಪರಿಗಣಿಸಲು ಸಾಧ್ಯವಿಲ್ಲ. ಸರ್ಕಾರಕ್ಕೆ ಸಂಸ್ಥೆಗೆ ಅಧಿಕಾರಿಗಳನ್ನು ನೇಮಕ ಮಾಡಲು ಅಥವಾ ಅದರ ಆಂತರಿಕ ಕಾರ್ಯನಿರ್ವಹಣೆಯಲ್ಲಿ ಯಾವುದೇ ಅಧಿಕಾರವಿಲ್ಲ ಎಂದು ಆಯುಕ್ತರು ತೀರ್ಪಿನಲ್ಲಿ ಸ್ಪಷ್ಟಪಡಿಸಿದ್ದಾರೆ.

ಬಿಸಿಸಿಐ ತನ್ನ ಮಾಧ್ಯಮ ಹಕ್ಕುಗಳು, ಪ್ರಾಯೋಜಕತ್ವ ಮತ್ತು ಟಿಕೆಟ್ ಮಾರಾಟದಂತಹ ವಾಣಿಜ್ಯ ಚಟುವಟಿಕೆಗಳ ಮೂಲಕ ತನ್ನ ಆದಾಯವನ್ನು ಸ್ವತಂತ್ರವಾಗಿ ಪಡೆದುಕೊಳ್ಳುತ್ತಿದೆ. ಇದು ಆರ್ಥಿಕವಾಗಿ ಸ್ವಾವಲಂಬಿಯಾಗಿದೆ ಮತ್ತು ಸರ್ಕಾರಿ ನಿಧಿಯನ್ನು ಅವಲಂಬಿಸಿಲ್ಲ. ಆದ್ದರಿಂದ, ಸರ್ಕಾರವು ಬಿಸಿಸಿಐಗೆ ಹಣಕಾಸಿನ ನೆರವು ಒದಗಿಸುತ್ತಿದೆ ಎಂದು ಹೇಳಲಾಗುವುದಿಲ್ಲ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ವಿಶ್ವಕಪ್: ಟರ್ಕಿಗೆ ಬಂದಿಳಿದ ಇರಾನ್ ಫುಟ್‌ಬಾಲ್ ತಂಡ

ಅಂಟಾಲ್ಯ (ಎಎಫ್‌ಪಿ): ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಪೂರ್ವಭಾವಿಯಾಗಿ ತರಬೇತಿ ಶಿಬಿರದಲ್ಲಿ ಭಾಗಿಯಾಗಲು ಮತ್ತು ವೀಸಾ ಅರ್ಜಿ ಪ್ರಕ್ರಿಯೆ ಪೂರೈಸಲು ಇರಾನ್ ಫುಟ್‌ಬಾಲ್ ತಂಡ ಸೋಮವಾರ ಇಲ್ಲಿಗೆ ಬಂದಿಳಿಯಿತು. ತಂಡವು 22 ಆಟಗಾರರು ಮತ್ತು ಕೋಚಿಂಗ್ ಸಿಬ್ಬಂದಿಯನ್ನು ಒಳಗೊಂಡಿದೆ.

ನೇವಿ ಬ್ಲೂ ಟ್ರ್ಯಾಕ್‌ಸೂಟ್‌ನಲ್ಲಿ ಕಾಣಿಸಿಕೊಂಡ ಇರಾನ್ ಆಟಗಾರರು ವಿಮಾನ ನಿಲ್ದಾಣದಿಂದ ನೇರವಾಗಿ ಅಂಟಾಲ್ಯದ ರೆಸಾರ್ಟ್‌ಗೆ ತೆರಳಿದರು. ತಂಡವು ಕೆಲವು ವಾರಗಳ ತರಬೇತಿಯ ನಂತರ ಅಮೆರಿಕಕ್ಕೆ ತೆರಳಲಿದೆ. ಅಮೆರಿಕ ವಿಶ್ವಕಪ್‌ನ ಜಂಟಿ ಆತಿಥ್ಯ ವಹಿಸಿದೆ.

ಅರಿಝೋನಾದ ಟಸ್ಕಾನ್ ನಗರವು ಇರಾನ್ ತಂಡಕ್ಕೆ ನೆಲೆಯಾಗಿದೆ. ತಂಡವು ಗುಂಪು ಹಂತದಲ್ಲಿ ಮೂರು ಪಂದ್ಯಗಳನ್ನು ಆಡಬೇಕಾಗಿದೆ.

ಇರಾನ್ ತಂಡವು ಅಂಟಾಲ್ಯದಲ್ಲಿ ಎರಡು ಅಭ್ಯಾಸ ಪಂದ್ಯಗಳನ್ನು ಆಡುವ ವಿಶ್ವಾಸ ಹೊಂದಿದೆ. ಒಂದು ಪಂದ್ಯವು ಗ್ಯಾಂಬಿಯಾ ವಿರುದ್ಧ ಮೇ 29ರಂದು ನಡೆಯಲಿದೆ.

ಮುಖ್ಯ ಸುತ್ತಿಗೆ ಆರಾಧ್ಯ ಕ್ಷಿತಿಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್‌ನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಸೋಮವಾರ ‘ಎಸ್.ಎಂ. ಕೃಷ್ಣ ಸ್ಮರಣಾರ್ಥ ಓಪನ್’ ಎಟಿಪಿ ಚಾಲೆಂಜರ್‌ನ ಮುಖ್ಯಸುತ್ತಿನ ಮೊದಲ ದಿನದ ಪಂದ್ಯಗಳಿಗೆ ಮಳೆಯಿಂದಾಗಿ ಅಡಚಣೆ ಉಂಟಾಯಿತು. ಐದು ಸಿಂಗಲ್ಸ್ ಮತ್ತು ಒಂದು ಡಬಲ್ಸ್ ಪಂದ್ಯಗಳನ್ನು ರದ್ದುಗೊಳಿಸಲಾಯಿತು.

ಪುರುಷರ ಸಿಂಗಲ್ಸ್‌ನ 32ರ ಘಟ್ಟದ ಪಂದ್ಯದಲ್ಲಿ ಭಾರತದ ಕರಣ್ ಸಿಂಗ್ ನಿರ್ಣಾಯಕ ಹೋರಾಟದಲ್ಲಿ ತೊಡಗಿದ್ದರು. ಮಳೆಯಿಂದಾಗಿ ಆಟವನ್ನು ಅರ್ಧದಲ್ಲೇ ಸ್ಥಗಿತಗೊಳಿಸಲಾಯಿತು. ಈ ವೇಳೆಗೆ ಏಳನೇ ಶ್ರೇಯಾಂಕದ ಕರಣ್ 5-5 (30-0) ರಿಂದ ಮಲೇಷ್ಯಾದ ಮಿತ್ಸುಕಿ ವೀ ಕಾಂಗ್ ಲಿಯಾಂಗ್ ವಿರುದ್ಧ ಸಮಬಲದ ಹೋರಾಟ ನಡೆಸಿದ್ದರು.

ಇದಕ್ಕೂ ಮೊದಲು 17 ವರ್ಷದ ಆರಾಧ್ಯ ಕ್ಷಿತಿಜ್ ತಮ್ಮ ಗೆಲುವಿನ ಓಟವನ್ನು ಮುಂದುವರಿಸಿ ಮುಖ್ಯ ಸುತ್ತಿಗೆ ಪ್ರವೇಶಿಸಿದರು. ವೈಲ್ಡ್‌ಕಾರ್ಡ್ ಪ್ರವೇಶ ಪಡೆದ ಬೆಂಗಳೂರಿನ ಈ ಆಟಗಾರ 7-6 (2), 6-4ರಿಂದ ನಿತಿನ್ ಕುಮಾರ್ ಸಿನ್ಹಾ ಅವರನ್ನು ಸೋಲಿಸಿದರು.

ಅಫ್ಗನ್ ವಿರುದ್ಧದ ಸರಣಿಗೆ ತಂಡಗಳ ಆಯ್ಕೆ ಇಂದು; ರೋಹಿತ್ ಮೇಲೆ ಕಣ್ಣು

ಬೂಮ್ರಾ ಕಾರ್ಯಭಾರ ನಿರ್ವಹಣೆ ಚರ್ಚೆಗೆ

ಗುವಾಹಟಿ (ಪಿಟಿಐ): ಅಫ್ಗಾನಿಸ್ತಾನ ವಿರುದ್ಧ ಏಕೈಕ ಟೆಸ್ಟ್ ಮತ್ತು ಮೂರು ಪಂದ್ಯಗಳ ಏಕದಿನ ಸರಣಿಗೆ ಮಂಗಳವಾರ ಭಾರತ ತಂಡಗಳನ್ನು ಪ್ರಕಟಿಸಲಾಗುತ್ತಿದ್ದು, ಅಗ್ರಗಣ್ಯ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಕಾರ್ಯಭಾರ ನಿರ್ವಹಣೆ ಮತ್ತು ರೋಹಿತ್ ಶರ್ಮಾ ಅವರ ಫಿಟ್ನೆಸ್ ಬಗ್ಗೆ ಚರ್ಚೆಯಾಗುವ ಸಾಧ್ಯತೆಯಿದೆ.

ಈ ಅಲ್ಪಾವಧಿಯ ಪ್ರವಾಸ ನವ ಚಂಡೀಗಢದ ಮುಲ್ಲನಪುರದಲ್ಲಿ ಜೂನ್ 6ರಿಂದ ಟೆಸ್ಟ್ ಪಂದ್ಯದೊಡನೆ ಆರಂಭವಾಗಲಿದೆ. ಏಕದಿನ ಪಂದ್ಯಗಳು ಜೂನ್ 14, 17 ಮತ್ತು 20ರಂದು ಕ್ರಮವಾಗಿ ಧರ್ಮಶಾಲಾ, ಲಖನೌ ಮತ್ತು ಚೆನ್ನೈನಲ್ಲಿ ನಿಗದಿಯಾಗಿವೆ.

ಬೂಮ್ರಾ ಅವರು ಎರಡೂ ತಂಡಗಳಲ್ಲಿ ಅವಕಾಶ ಪಡೆಯುವ ಸಾಧ್ಯತೆಯಿಲ್ಲ. ಏಕದಿನ ವಿಶ್ವಕಪ್ ಬಹಳ ದೂರ (2027ರ ಅಕ್ಟೋಬರ್– ನವೆಂಬರ್) ಇರುವ ಕಾರಣ ಅವರಿಗೆ ತಕ್ಷಣಕ್ಕೆ ಈ ಮಾದರಿಯಲ್ಲಿ ಆಡುವ ಜರೂರು ಕಾಣುತ್ತಿಲ್ಲ.

ಹ್ಯಾಮ್‌ಸ್ಟ್ರಿಂಗ್ (ಅಸ್ಥಿ ರಜ್ಜು) ನೋವಿನಿಂದಾಗಿ ರೋಹಿತ್ ಅವರು ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಕೆಲವು ಪಂದ್ಯಗಳನ್ನು ಕಳೆದುಕೊಂಡಿದ್ದರು. ಪಂಜಾಬ್ ಕಿಂಗ್ಸ್ ಪರ ಅವರು ಇಂಪ್ಯಾಕ್ಟ್ ಪ್ಲೇಯರ್ ಆಗಿ ಬ್ಯಾಟಿಂಗ್ ಮಾತ್ರ ಮಾಡಿದ್ದರು. ಅವರು ಶೇ 100ರಷ್ಟು ಫಿಟ್ ಆಗಿದ್ದಲ್ಲಿ ಮಾತ್ರ ಆಯ್ಕೆಗಾರರು ಏಕದಿನ ತಂಡಕ್ಕೆ ಆಯ್ಕೆಗೆ ಪರಿಗಣಿಸಬಹುದು. ಇನ್ನೊಬ್ಬ ಅನುಭವಿ ಆಟಗಾರ ವಿರಾಟ್ ಕೊಹ್ಲಿ ಅಮೋಘ ಲಯದಲ್ಲಿದ್ದು, ಏಕದಿನ ಸರಣಿಯಲ್ಲಿ ಸ್ಥಾನ ಪಡೆಯುವ ನಿರೀಕ್ಷೆಯಿದೆ.

ಏಕೈಕ ಟೆಸ್ಟ್‌ಗೆ ಹೆಚ್ಚಿನ ಮಹತ್ವವಿದೆ. ಏಕೆಂದರೆ ತವರಿನಲ್ಲಿ ಭಾರತ ಈ ಮಾದರಿಯಲ್ಲಿ ಸತತವಾಗಿ ಹಿನ್ನಡೆ ಕಾಣುತ್ತಿದೆ. ಸ್ಪಿನ್‌ಸ್ನೇಹಿ ಅಂಗಣಗಳಲ್ಲಿ ಬ್ಯಾಟರ್‌ಗಳು ಪರದಾಡುತ್ತಿದ್ದಾರೆ. ಹೋದ ನವೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ಹೀನಾಯವಾಗಿ ಸರಣಿ ಸೋತಿತ್ತು.

ಚೇತೇಶ್ವರ ಪೂಜಾರ ಅವರು ತಂಡದಿಂದ ಹೊರಬಿದ್ದ ನಂತರ ಮೂರನೇ ಕ್ರಮಾಂಕದಲ್ಲಿ ಭಾರತ ತಂಡವು ಯೋಗ್ಯ ಆಟಗಾರನನ್ನು ಕಂಡುಕೊಳ್ಳಲು ವಿಫಲವಾಗಿದೆ. ಸಾಯಿ ಸುದರ್ಶನ್ ಅವಕಾಶ ಪಡೆದರೂ ಅದನ್ನು ಸಮರ್ಥವಾಗಿ ಬಳಸಿಕೊಳ್ಳಲಿಲ್ಲ. ದೇಶಿ ಕ್ರಿಕೆಟ್‌ನಲ್ಲಿ ಯಶಸ್ಸು ಕಾಣುತ್ತಿರುವ ದೇವದತ್ತ ಪಡಿಕ್ಕಲ್ ಅವರಿಗೆ ಅವಕಾಶ ಒಲಿಯುವ ಸಾಧ್ಯತೆಯಿದೆ.

ರಣಜಿ ಋತುವಿನಲ್ಲಿ ಅಮೋಘ ಬೌಲಿಂಗ್ ಮಾಡಿ 60 ವಿಕೆಟ್‌ಗಳನ್ನು ಪಡೆದಿದ್ದ ಜಮ್ಮು ಮತ್ತು ಕಾಶ್ಮೀರದ ವೇಗಿ ಅಕಿಬ್ ನಬಿ ಅವರನ್ನು ಆಯ್ಕೆಗಾರರು ಪರಿಗಣಿಸಬಹುದು.

ಏಕದಿನಕ್ಕೆ ಪ್ರಿನ್ಸ್ ಯಾದವ್?: ಹಾಲಿ ಐಪಿಎಲ್‌ನಲ್ಲಿ ತಮ್ಮ ವೇಗ ಮತ್ತು ನಿಖರ ಬೌಲಿಂಗ್‌ನಿಂದಾಗಿ ಗಮನ ಸೆಳೆದಿರುವ ಪ್ರಿನ್ಸ್ ಯಾದವ್ ಅವರನ್ನು ಏಕದಿನ ಸರಣಿಗೆ ಪರಿಗಣಿಸಿದರೆ ಅಚ್ಚರಿಯಿಲ್ಲ. ಬೂಮ್ರಾ ಈ ಸರಣಿಯ ಭಾಗವಾಗದಿದ್ದರೆ ಮೊಹಮ್ಮದ್ ಸಿರಾಜ್ ದಾಳಿಯ ನೇತೃತ್ವ ವಹಿಸಬಹುದು. ಪ್ರಸಿದ್ಧ ಕೃಷ್ಣ ಕೂಡ ಒಳಗೊಳ್ಳಬಹುದು.

ರೋಹಿತ್ ಅವರಂತೆ ಪಾಂಡ್ಯ ಅವರಿಗೂ ಫಿಟ್ನೆಸ್ ಸಮಸ್ಯೆ ಕಾಡಿದೆ. ಬೆನ್ನುನೋವಿನಿಂದಾಗಿ ಕೆಲವು ಪಂದ್ಯ ಕಳೆದುಕೊಂಡಿರುವ ಅವರು ಏಕದಿನ ತಂಡದಲ್ಲಿರುತ್ತಾರೆಯೇ ಎಂಬುದನ್ನು ಕಾದುನೋಡಬೇಕಾಗಿದೆ.


ಜಸ್‌ಪ್ರೀತ್ ಬೂಮ್ರಾ

ರೋಹಿತ್ ಶರ್ಮಾ

ಹಾಕಿ ತಂಡಕ್ಕೆ ಸಲೀಮಾ ಸಾರಥ್ಯ

ಆಸ್ಟ್ರೇಲಿಯಾ ಪ್ರವಾಸ: 26ರಿಂದ ನಾಲ್ಕು ಪಂದ್ಯಗಳ ಸರಣಿ

ನವದೆಹಲಿ (ಪಿಟಿಐ): ಭಾರತ ಸೀನಿಯರ್ ಮಹಿಳಾ ಹಾಕಿ ತಂಡವು ಇದೇ ತಿಂಗಳ ಅಂತ್ಯಕ್ಕೆ ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿದ್ದು, ಅಲ್ಲಿ ನಾಲ್ಕು ಪಂದ್ಯಗಳ ಸರಣಿಯನ್ನು ಆಡಲಿದೆ. ಇದಕ್ಕಾಗಿ ಸಲೀಮಾ ಟೆಟೆ ನಾಯಕತ್ವದ 22 ಆಟಗಾರ್ತಿಯರ ತಂಡವನ್ನು ಸೋಮವಾರ ಹಾಕಿ ಇಂಡಿಯಾ ಪ್ರಕಟಿಸಿದೆ.

ಡಿಫೆಂಡರ್ ಆಟಗಾರ್ತಿಯರಾದ ಲಾಲ್‌ಥಂಟಲುವಾಂಗಿ ಹಾಗೂ ಶಿಲ್ಪಿ ಡಬಾಸ್ ಅವರು ಭಾರತ ತಂಡದಲ್ಲಿ ಮೊದಲ ಬಾರಿ ಸ್ಥಾನ ಪಡೆದಿದ್ದಾರೆ. ಎಲ್ಲ ನಾಲ್ಕು ಪಂದ್ಯಗಳು ಪರ್ತ್‌ನಲ್ಲಿ ಕ್ರಮವಾಗಿ ಮೇ 26, 27, 29 ಹಾಗೂ 30ರಂದು ನಡೆಯಲಿವೆ.

ಸಲೀಮಾ ಅವರು ಅನಾರೋಗ್ಯದಿಂದಾಗಿ ಅರ್ಜೆಂಟೀನಾ ಪ್ರವಾಸಕ್ಕೆ ಗೈರಾಗಿದ್ದರು. ಹಂಗಾಮಿ ನಾಯಕಿ ನವನೀತ್ ಕೌರ್ ಅವರು ತಂಡವನ್ನು ಮುನ್ನಡೆಸಿದ್ದರು. ಭಾರತ ತಂಡವು ನಾಲ್ಕು ಪಂದ್ಯಗಳ ಸರಣಿಯಲ್ಲಿ 2–2 ಸಮಬಲ ಸಾಧಿಸಿತ್ತು.

ಅನುಭವಿ ಗೋಲ್‌ಕೀಪರ್ ಸವಿತಾ ಪೂನಿಯಾ, ಫಾರ್ವರ್ಡ್ ನವನೀತ್ ಕೌರ್, ಉದಯೋನ್ಮುಖ ಆಟಗಾರ್ತಿಯರಾದ ಸುನೆಲಿತಾ ಟೊಪ್ಪೊ, ಸೋನಂ ಹಾಗೂ ಹೀನಾ ಬಾನೊ ಅವರು ತಂಡದಲ್ಲಿದ್ದಾರೆ.

ಎಫ್‌ಐಎಚ್ ಮಹಿಳಾ ನೇಷನ್ಸ್ ಕಪ್ 2025–26ರ ಟೂರ್ನಿಯ ಸಿದ್ಧತೆಯ ಭಾಗವಾಗಿ ಭಾರತ ತಂಡವು ಈ ಪ್ರವಾಸ ಕೈಗೊಳ್ಳುತ್ತಿದೆ. ನೇಷನ್ಸ್ ಕಪ್ ಟೂರ್ನಿಯು ನ್ಯೂಜಿಲೆಂಡ್‌ನ ಆಕ್ಲೆಂಡ್‌ನಲ್ಲಿ ಜೂನ್ 15ರಿಂದ 21ರ ವರೆಗೆ ನಡೆಯಲಿದೆ. ಎಂಟು ತಂಡಗಳಿರುವ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದರೆ, ಭಾರತ ತಂಡಕ್ಕೆ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಆಡುವ ಅವಕಾಶ ಸಿಗಲಿದೆ.

ತಂಡ ಹೀಗಿದೆ: ಗೋಲ್‌ಕೀಪರ್ಸ್: ಸವಿತಾ ಪೂನಿಯಾ, ಬಿಚೂ ದೇವಿ ಖಾರೀಬಾಮ್. ಡಿಫೆಂಡರ್ಸ್: ನಿಕ್ಕಿ ಪ್ರಧಾನ್, ಇಶಿಕಾ ಚೌಧರಿ, ಸುಶೀಲಾ ಚಾನು ಪುಖರಂಬಮ್, ಲಾಲ್‌ಥಂಟಲುವಾಂಗಿ, ಜ್ಯೋತಿ, ಶಿಲ್ಪಿ ಡಬಾಸ್. ಮಿಡ್‌ಫೀಲ್ಡರ್ಸ್: ಸಲೀಮಾ ಟೆಟೆ (ನಾಯಕಿ), ಲಾಲರೆಮ್‌ಸಿಯಾಮಿ, ನೇಹಾ, ಸಾಕ್ಷಿ ರಾಣಾ, ಸುನೆಲಿತಾ ಟೊಪ್ಪೊ, ದೀಪಿಕಾ ಸೊರೆಂಗ್, ಸೋನಂ. ಫಾರ್ವರ್ಡ್ಸ್: ನವನೀತ್ ಕೌರ್, ಬಲಜೀತ್ ಕೌರ್, ದೀಪಿಕಾ, ಅನು, ಇಶಿಕಾ, ಹೀನಾ ಬಾನೊ, ರುತುಜಾ ಪಿಸಾಳ್.

‘ಸರಣಿ ಜಯದತ್ತ ಭಾರತ ತಂಡದ ಚಿತ್ತ’

• ಬಾಲರಾಜ್ ಎಸ್.

ಬೆಂಗಳೂರು: ‘ಬಲಿಷ್ಠ ಅರ್ಜೆಂಟೀನಾ ಎದುರಿನ ಸರಣಿಯಲ್ಲಿ ಸಮಬಲ ಸಾಧಿಸಿರುವುದು ತಂಡದ ಆಟಗಾರ್ತಿಯರ ಆತ್ಮವಿಶ್ವಾಸ ಹೆಚ್ಚಿಸಿದೆ. ಅನುಭವಿಗಳು ಹಾಗೂ ಹೊಸ ಮುಖಗಳ ಮಿಶ್ರಣ ಹೊಂದಿರುವ ತಂಡವು ಆಸ್ಟ್ರೇಲಿಯಾದ ಸವಾಲನ್ನು ಎದುರಿಸಲು ಉತ್ಸುಕವಾಗಿದೆ’ ಎಂದು ಭಾರತ ತಂಡದ ನಾಯಕಿ ಸಲೀಮಾ ಟೆಟೆ ಅವರು ಸೋಮವಾರ ‘ಪ್ರಜಾವಾಣಿ’ ಜೊತೆಗಿನ ಸಂವಾದದಲ್ಲಿ ಅಭಿಪ್ರಾಯಪಟ್ಟರು.

‘ಆಸ್ಟ್ರೇಲಿಯಾ ವಿರುದ್ಧ ಸರಣಿ ಜಯಿಸುವುದು ನಮ್ಮ ಮೊದಲ ಗುರಿ. ಆ ನಂತರ, ನೇಷನ್ಸ್ ಕಪ್ ಗೆದ್ದು ಪ್ರೊ ಲೀಗ್‌ಗೆ ಅರ್ಹತೆ ಪಡೆಯುವ ಸವಾಲು ನಮ್ಮೆದುರಿಗೆ ಇದೆ. ಕೋಚ್ ಸ್ಯೋರ್ಡ್ ಮರಿನ್ ಅವರ ಮಾರ್ಗದರ್ಶನದಲ್ಲಿ ಈ ಹಿಂದೆಯೂ (2017ರಿಂದ 2021) ಆಡಿದ್ದೆ. ಅವರು ಮತ್ತೆ ತಂಡದ ಕೋಚ್ ಆಗಿ ಮರಳಿದ್ದು, ಅವರ ಮಾರ್ಗದರ್ಶನದಲ್ಲಿ ಉನ್ನತ ಸಾಧನೆ ಮಾಡಲು ಎದುರು ನೋಡುತ್ತಿದ್ದೇವೆ’ ಎಂದರು.

‘ಆಸ್ಟ್ರೇಲಿಯಾ ಪ್ರವಾಸದ ಪೂರ್ವಾಭ್ಯಾಸಕ್ಕಾಗಿ ಬೆಂಗಳೂರಿನ ‘ಸಾಯ್’ನಲ್ಲಿ ನಡೆದ ಶಿಬಿರದಲ್ಲಿ ಅನುಭವಿ ಆಟಗಾರ್ತಿಯರು ಹಾಗೂ ಉದಯೋನ್ಮುಖ ಆಟಗಾರ್ತಿಯರು ಜೊತೆಯಾಗಿ ಕಠಿಣ ಅಭ್ಯಾಸ ನಡೆಸಿದ್ದೇವೆ. ಈ ಸರಣಿಯು ನಮ್ಮ ತಂತ್ರಗಳನ್ನು ಪರೀಕ್ಷೆಗೊಡ್ಡಲು ಮತ್ತು ನಾವು ಉತ್ತಮ ತಂಡವಾಗಿ ರೂಪುಗೊಳ್ಳಲು ಅವಕಾಶ ಒದಗಿಸಲಿದೆ’ ಎಂದು ಹೇಳಿದರು.

‘ಅನುಭವಿಗಳೊಂದಿಗೆ ಆಡುವುದು ನಮ್ಮ ಕೌಶಲ ವೃದ್ಧಿಗೆ ಪೂರಕ. ಅವರು ನಮಗೆ ಸ್ಫೂರ್ತಿ ತುಂಬುತ್ತಾರೆ. ಒತ್ತಡದ ಸಂದರ್ಭದಲ್ಲಿ ಹೇಗೆ ಆಡಬೇಕು, ವೈಫಲ್ಯಗಳನ್ನು ಹೇಗೆ ಮೆಟ್ಟಿನಿಲ್ಲಬೇಕೆಂಬುದರ ಬಗ್ಗೆ ಸಲಹೆ ನೀಡುತ್ತಾರೆ’ ಎಂದು ಸುಂದರಗಢದ 19 ವರ್ಷ ವಯಸ್ಸಿನ ಸುನೆಲಿತಾ ಟೊಪ್ಪೊ ತಿಳಿಸಿದರು.

‘ಕಿರಿಯ ವಯಸ್ಸಿನಲ್ಲೇ ಸೀನಿಯರ್ ತಂಡಕ್ಕೆ ಆಯ್ಕೆಯಾಗಲು ಒಡಿಶಾದಲ್ಲಿನ ‘ಹಾಕಿ ಸಂಸ್ಕೃತಿ’ಯೇ ಕಾರಣ. ಅಲ್ಲಿನ ಸರ್ಕಾರವು ಉದಯೋನ್ಮುಖ ಆಟಗಾರ್ತಿಯರನ್ನು ಗುರುತಿಸಿ, ಅವರಿಗೆ ವಸತಿ ಸಹಿತ ತರಬೇತಿ ನೀಡುತ್ತಿದೆ. ರಾಜ್ಯದ ಎಲ್ಲ ಭಾಗಗಳಲ್ಲೂ ಹಾಕಿ ಅಂಕಣಗಳನ್ನು ನಿರ್ಮಿಸುತ್ತಿದ್ದು, ಆಟಗಾರರ ಅಭ್ಯಾಸಕ್ಕೆ ಪೂರಕವಾಗಿದೆ’ ಎಂದು ಅವರು ಅಭಿಪ್ರಾಯಪಟ್ಟರು.

ಸಲೀಮಾ ಟೆಟೆ

ಸುನೆಲಿತಾ

ವಿನೇಶ್ ಅರ್ಜಿ: ಸಿಗದ ತುರ್ತು ಮನ್ನಣೆ

ನವದೆಹಲಿ (ಪಿಟಿಐ): ಇದೇ ತಿಂಗಳ ಕೊನೆಯಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಲ್ಲಿ ಭಾಗವಹಿಸಲು ತಮಗೆ ಅವಕಾಶ ನೀಡುವಂತೆ ನಿರ್ದೇಶನ ನೀಡಬೇಕು ಎಂದು ಒಲಿಂಪಿಯನ್ ಕುಸ್ತಿಪಟು ವಿನೇಶ್ ಫೋಗಟ್ ಅವರು ಸಲ್ಲಿಸಿದ ಅರ್ಜಿಯನ್ನು ತುರ್ತಾಗಿ ಪರಿಗಣಿಸಲು ಡೆಲ್ಲಿ ಹೈಕೋರ್ಟ್ ಸೋಮವಾರ ನಿರಾಕರಿಸಿದೆ.

ಪ್ರತಿವಾದಿಗಳ ವಾದವನ್ನು ಆಲಿಸದೇ ಅರ್ಜಿಯನ್ನು ಪರಿಗಣಿಸಲಾಗದು ಎಂದು ಕೋರ್ಟ್ ಹೇಳಿದೆ. ವಿನೇಶ್ ಅವರು ಜೂನ್ 26ರವರೆಗೆ ಯಾವುದೇ ಟೂರ್ನಿಯಲ್ಲಿ ಭಾಗವಹಿಸಲು ಅನರ್ಹ ಎಂದು ಭಾರತ ಕುಸ್ತಿ ಫೆಡರೇಷನ್ ಘೋಷಿಸಿದೆ.

ಆದರೆ, ಫೆಡರೇಷನ್ ತಮ್ಮ ವಿರುದ್ಧ ಮಾಡಿರುವ ಆಶಿಸ್ತು ಮತ್ತು ಉದ್ದೀಪನ ಮದ್ದುಸೇವನೆ ನಿಯಮ ಉಲ್ಲಂಘನೆ ಆರೋಪಗಳಿಗೆ ಸಂಬಂಧಿಸಿದಂತೆ ನೀಡಿರುವ ಷೋಕಾಸ್ ನೋಟಿಸ್‌ಗೆ ವಿವರವಾದ ಪ್ರತಿಕ್ರಿಯೆ ನೀಡಲು ಫೋಗಟ್ ಅವರಿಗೆ ಕೋರ್ಟ್ ಅವಕಾಶ ನೀಡಿದೆ.

ನೋಟಿಸ್‌ಗೆ ಸಂಬಂಧಿಸಿದ ವಿಷಯಕ್ಕೆ ಜುಲೈ 6ರೊಳಗೆ ತಾರ್ಕಿಕ ಅಂತ್ಯ ಕಾಣಿಸಬೇಕು ಮತ್ತು ತನ್ನ ನಿರ್ಧಾರವನ್ನು ನ್ಯಾಯಾಲಯದ ಮುಂದಿಡಬೇಕು ಎಂದು ನ್ಯಾ.ಪುರುಷೇಂದ್ರ ಕುಮಾರ್ ಕೌರವ್ ಅವರು ಫೆಡರೇಷನ್‌ಗೆ ನಿರ್ದೇಶಿಸಿದರು.

ಅನರ್ಹತೆ ಪ್ರಶ್ನಿಸಿ ಫೋಗಟ್ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿ ಕುಸ್ತಿ ಫೆಡರೇಷನ್, ಕೇಂದ್ರ ಸರ್ಕಾರ ಮತ್ತು ಭಾರತ ಒಲಿಂಪಿಕ್ ಸಂಸ್ಥೆಗೆ ನ್ಯಾ.ಕೌರವ್ ಅವರು ನೋಟಿಸ್ ಜಾರಿಗೊಳಿಸಿದರು.

ಇದೇ 30 ಮತ್ತು 31ರಂದು ನಡೆಯಲಿರುವ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಲ್ಲಿ ಭಾಗವಹಿಸಲು ವಿನೇಶ್ ಅವರಿಗೆ ಅವಕಾಶ ನೀಡಬೇಕು ಎಂದು ಅವರ ಪರ ಹಿರಿಯ ವಕೀಲರು ವಾದಿಸಿದರು.

‘ನಿಮ್ಮನ್ನು ಈಗಾಗಲೇ ಅನರ್ಹಗೊಳಿಸಲಾಗಿದೆ. ಇನ್ನೊಂದು ಕಡೆಯ ಮನವಿಯನ್ನು ಆಲಿಸದೇ ಅರ್ಜಿ ಪುರಸ್ಕರಿಸುವುದು ಹೇಗೆ?. ಡಬ್ಲ್ಯುಎಫ್‌ಐ ನಿಯಮಗಳನ್ನು ಪರಿಶೀಲಿಸಬೇಕಾಗುತ್ತದೆ’ ಎಂದರು.

ವಿನೇಶ್

ಚೆಸ್: ಡ್ರಾ ಪಂದ್ಯದಲ್ಲಿ ಪ್ರಜ್ಞಾನಂದ

ಬುಕಾರೆಸ್ಟ್ (ಪಿಟಿಐ): ಭಾರತದ ಆರ್.ಪ್ರಜ್ಞಾನಂದ ಅವರು ಸೂಪರ್ ಚೆಸ್ ಕ್ಲಾಸಿಕ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ನೆದರ್ಲೆಂಡ್ಸ್‌ನ ಜೋರ್ಡನ್ ವಾನ್ ಫೊರೀಸ್ಟ್ ಜೊತೆ 35 ನಡೆಗಳಲ್ಲಿ ಡ್ರಾ ಮಾಡಿಕೊಂಡರು. ಭಾನುವಾರದ ಪಂದ್ಯಗಳ ನಂತರ ಜರ್ಮನಿಯ ವಿನ್ಸೆಂಟ್ ಕೀಮರ್ (3 ಅಂಕ) ಮುನ್ನಡೆ ಸಾಧಿಸಿದ್ದಾರೆ.

ಕೀಮರ್ ನಾಲ್ಕನೇ ಸುತ್ತಿನಲ್ಲಿ ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ (2) ಅವರನ್ನು 38 ನಡೆಗಳಲ್ಲಿ ಸೋಲಿಸಿದರು. ಪ್ರಜ್ಞಾನಂದ, ವಾನ್ ಫೊರೀಸ್ಟ್, ಅನಿಶ್ ಗಿರಿ ಅವರು ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಅನಿಶ್ ಗಿರಿ ಮತ್ತು ವಿಶ್ವ ಚಾಂಪಿಯನ್‌ಷಿಪ್ಸ್ ಚಾಲೆಂಜರ್ ಜಾವೊಖಿರ್ ಸಿಂದರೋವ್ (1.5 ಅಂಕ) ನಡುವಣ ಪಂದ್ಯ ಡ್ರಾ ಆಯಿತು.

ಅನಾರೋಗ್ಯದ ಕಾರಣ ಅಲಿರೇಜಾ ಫಿರೋಜ್ (0.5) ಅವರು ನಾಲ್ಕನೇ ಸುತ್ತಿನಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನ (1.5) ಜೊತೆ ಪಂದ್ಯ ಆಡಲಿಲ್ಲ. ಈ ಪಂದ್ಯ ಮುಂದೂಡಲಾಯಿತು. ರುಮೇನಿಯಾದ ಡೇನಿಯಲ್ ಬೊಗ್ದಾನ್ ಡೀಕ್ ಮತ್ತು ಅಮೆರಿಕದ ವೆಸ್ಲಿ ಸೊ (2) ನಡುವಣ ಪಂದ್ಯ ಸಹ ಡ್ರಾ ಆಯಿತು.

ಪ್ರಜ್ಞಾನಂದ